ಸಂಪುಟ ೬
ಸಂಚಿಕೆ ೧

# ಕರ್ನಾಟಕ ಭಾರತಿ

ರಾಜ್ಯೋದಯ ಸಂಚಿಕೆ
೧೯೭೩

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

# ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗನಿಸ್ತರಣ ಹಾಗು ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

# ಕರ್ನಾಟಕ ಭಾರತಿ

## ತ್ರೈಮಾಸಿಕ ಪತ್ರಿಕೆ

ಸಂಪುಟ : ೬ ಸಂಚಿಕೆ : ೨

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಕರ್ನಾಟಕ ಭಾರತಿ

## ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೬, ಸಂಚಿಕೆ : ೨
ನವ್ಹಂಬರ ೧೯೭೩

# ರಾಜ್ಯೋದಯ ಸಂಚಿಕೆ





ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಎಂ. ಎಚ್. ಬೆಳಗಾಂವಕರ
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ – ೨೦

# ಪರಿವಿಡಿ

# ಪ್ರಾರ್ಥನೆ

ಸೋಮಶೇಖರ ಇಮ್ರಾಪೂರ

ಹೆಜ್ಜಿ ಕುಂತು ಬಂದೇನ ತಾಯಿ ತಕರಾರು ಬಿಟ್ಟು ತೆರಕೊಂಡು ಬಾಯಿ ನಾ
ಬಿರುಕಿನ್ಯಾಗ ಬಿದ್ದೀನಿ ಬಾರ್ಲ, ಸುಗ್ಗಾಗಿ ನೀರ ಬೇಡಿ.

ಮೂಗ ಇದ್ದ ಮುಪ್ಪಾನ ಮುದುಕಿ, ಮುತ್ತೈದಿ ಬಾರ, ಮತಿವಂತಿ ಬಾರ,
ಕತಿಮಾಡಿದಾಕಿ ಬಾರ,
ಉಕ್ಕ್ಯಾತ ಬಾರ ಉಗಿಯಹಾಗಿ ಬಾರ ಉರಿದಾರಿದಂಥ ನೆಲಕ.

ತಿರಕೀಯ ಮಾತ ತಿರಗಲಿಸಿ ತಂತಿ ಹಿಡಿದೇನಿ ಹಳೆಯ ನಾದಾ,
ನನ ಮಾನ ಕಾಯೆ ದ್ರೌಪತಿಯ ಮಾನ ಶ್ರೀಕೃಷ್ಣ ಹ್ಯಾಂಗ ಕಾದಾ.
ಕೆಸರಿನ್ಯಾಗ ಹಸನಾದ ಹೂವ ಖುಸಿಯಿಂದ ತಂದು, ಕಸಿ ಮಾಡಿದಂಥ
ಹೊಸವಾಸ ಸೋಸಿ ಹಿಡದೇನಿ ಬಾರ, ತಿಳಿದಾಂಗ ನನ್ನ ವಂತಿಗಿ.
ಜಂಗ ತಿಂದ ಹಳೆ ಹತಾರದಾಗ ನೀ ಕೊಯ್ಯಬ್ಯಾಡ ಕುತಗಿ.

ತೆಗ್ಗು ತೆಂಬ ತೆರಪಿಲ್ಲದಾಂಗ ಮುಗ್ಗರಿಸಿ ಬಿದ್ದ ಕರಿ ಕ್ವಾಣ, ಕೆಟ್ಟ
ಕುಣದ್ಯೈತಿ, ಬಾಳೆ ದಣದ್ಯೈತಿ, ದೆವ್ವ ಹಿಡದ್ಯೈತಿ, ಬಿಡಿಸ ಸೆರಿಯ.

ಬಣ್ಣ ಬದುಕು ಮಣ್ಣಾಗ ತುರುಕಿ ಮನಬಾಗಿ ಲಾಗ ಹೊಡಿತೇನಿ, ಮೂಗು
ಮುರದಾಡಿ, ಮೀಸಿ ಮಸದಾಡಿ, ಲೋಡ ತಿರುವ್ಯಾಡಿ ಕುಣಿಯತೇನಿ.
ಚಕಮಕೀ ಮಾತ ಚಮಕೀಸಿ ನನ್ನ ನಿಡುಚಾಪ ಕೆಡವಿ ನಗಿಯಾಡಬ್ಯಾಡ ನೀ,
ಕಳ್ಳಿನಾಗ ಒಳಗೆಳದು ಚಂದ್ರಕಾಳ್ಸೀರಿ ಸೆರಗು ಮರಿ ಮಾಡಿ ನಿನ್ನ
ಎದಿಹಾಲ ತೋರಿಯ ತಾಯಿ.

ಹಿಪ್ಪಿಹಾಂಗ ತಲೆ ತಿಪ್ಪಿ ಹೊತ್ತು ಹಳೆ ಬೂಟ ಮಾರಿ ತೆರಕೊಂಡು ಬಾಯಿ
ಹರಕೊಂಡು, ಬಗಲ ಮುರಕೊಂಡು ಬೆವತು ನಿಂತೇನ ನಾಗ ತರುಬಿ,
ಗುದ್ದ ಮರತು ಒಳಗಟ್ಟಿ ಒಳಗ ಹೊಸದಾವ ಹಗ್ಗ ಹೆಡಿಯೆತ್ತಿ ಹಾವು
ಬುಸುಗುಡುತ ತಳಕಿ ಬಿದ್ದಾವ ಬಿದ್ದು ಆಗ್ಯಾವ ತೊಂಗಲರವಿ.

ಕಂತಿ ಕುಂತ ಕನಸೆಲ್ಲಾ ಸೋರಿ, ಸೂರ್ಯಾನ್ನ ನುಂಗಿ ನಿಂತಂಥ ನೆತ್ತಿ,
ಧಗಧಗಿಸತ್ತೈತಿ ಕರ್ಮಾ.
ಕತ್ತಲಕ ಮಂದ್ರಿ ಒತ್ತೂತ ಗೂಗಿ ಒದರ್ಯಾವ ಇದರ ಮರ್ಮಾ.

ಕಂತ್ತಗಿಯು ತುಂಬ ಕತ್ತೀಯು ನುಂಗಿ, ನಿಕ್ಕಳಿಕಿ ಬಿದ್ದು ನಿಂತಿರುವ ತೇರ,
ನರಸತ್ತ ಹಗ್ಗ ಹುರಿಮಾಡಿ ಹುದುಲು ಕೀಳವ್ವ ತಾಯಿ ತುರತೆ.
ಗಂಡನಿಲ್ದ ಹುಚಮುಂಡಿ ಹಾಂಗ ನಾ. ಕೆಂಡ ತುಂಬಿ ಬಾಗೀನಿ ಮೈಯು
ನೀ ದಿಂಡ ಬಡದು ಹೊಲ ಚಂದಚಾರ ಮಾಡವ್ವ ಎಲ್ಲ ಮರತ.

ಈ ಲೋಕ ಕಂಡು ವಾಕರಿಕಿ ಬಂತ ಒಲಿ ಮ್ಯಾಲ ಕುಂತ ಬದುಕು,
ಬಾಂಬುಗೀಂಬು ತಲಿದಿಂಬ ಮಾಡಿ, ತುರುಮಂದಿಯೊಳಗ ಕಂದನ್ನ ಒಗಿಸಿ, ಮುರಿ
ಕೆಂದ ಗೂಳಿ ಹಂಗಾಮುದಾಗ ಮುಂಗಾರಿ ಜ್ವಾಳ ಮುರಿ ಬಡಿದ ಮ್ಯಾಲ ನಿನ
ಕಾಲ ಮ್ಯಾಲ ಹಣಿ ಊರತ್ತೈತಿ ಬಲ ಹೂವ ಕೆಡುವ ತಾಯಿ.

# ಭೈರಪ್ಪನವರ ಕಾದಂಬರಿಗಳಲ್ಲಿ ಹಿಂದೂಪ್ರಜ್ಞೆ

ಕಣವಿ ಮಹಾದೇವ

"Poetry may also have ulterior value as a means to culture or religion. So much the better let it be valued for these reasons too"

ಈ ದಶಕದಲ್ಲಿ ಹೆಸರಿಸಬೇಕಾದ ಪ್ರಭಾವಶಾಲೀ ಕಾದಂಬರಿಕಾರ ಭೈರಪ್ಪನವರು· ಪ್ರಮುಖವಾಗಿ ಅವರೊಬ್ಬ ವೈಚಾರಿಕ ಬರಹಗಾರರೆಂದರೆ ಸರಿಯಾದೀತು. ಕಲೆ ಧರ್ಮ, ತತ್ವಜ್ಞಾನ ಮುಂತಾದ ವಿಷಯಗಳನ್ನು ಸಾಹಿತ್ಯಮಾಧ್ಯಮದಿಂದ ಸಮರ್ಥ ರೀತಿಯಲ್ಲಿ ಪ್ರತಿಪಾದಿಸಿದುದು ಅವರ ವಿಶಿಷ್ಟ. ಪ್ರೇಮಾಲಾಪದ ಕೌಟುಂಬಿಕ ಕತೆಗಳನ್ನು ಹೊಸೆಯುವ ಮಾರ್ಗವನ್ನು ತೊರೆದುದೇ ಭೈರಪ್ಪನವರನ್ನು ವಿಶಿಷ್ಟ ಕಾದಂಬರಿಕಾರರನ್ನಾಗಿ ಮಾಡಿದೆಯೆಂದರೆ ತಪ್ಪಾಗಲಾರದು. 'ನಿದ್ದೆ ಸಾಹಿತ್ಯ'ದ ಓದುಗರಿಗೆ ಹೆಚ್ಚೆನ್ನಿಸುವ ವೈಚಾರಿಕ ಸತ್ವಪೂರ್ಣ ಬರವಣಿಗೆ ಅವರದು. ಅದರ ಜೊತೆಗೇ ಕಾದಂ–ಬರಿಯು ಕೇವಲ ಮನರಂಜನೆಗೆ ಎಂಬುದನ್ನು ಮೀರಿ ನಮ್ಮ ಓದುಗನ ಅಭಿರುಚಿ ಬೆಳೆದಿದೆ. ಗಂಭೀರವಾಗಿ ಯೋಚಿಸುವುದನ್ನೂ ಆತ ಕಲಿತಿದ್ದಾನೆ.

ಉದ್ದಾಮ ಬರಹಗಾರನ ಮನದಾಳದಲ್ಲಿ ರಾಷ್ಟ್ರಜೀವನದ ಚೇತನ ಮಿಡಿಯುತ್ತಿರುತ್ತದೆ. ಉದ್ದೇಶಪೂರ್ವಕವಾಗಿ ಅಲ್ಲದಿದ್ದರೆ ಆತನಿಗೆ ತನ್ನ ದೇಶದ, ಸಂಸ್ಕೃತಿಯ ಪ್ರಭಾವಲಯದಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ರಾಷ್ಟ್ರ ಜೀವನದ ಮೌಲ್ಯಗಳ ಬಗೆಗೆ ಚಿಂತನೆಯನ್ನಾತ ನಡೆಯಿಸುವುದುಂಟು. ಆ ಚಿಂತನೆಯು ಕಲಾತ್ಮಕ ಅಭಿವ್ಯಕ್ತಿಯೋ ಕೃತಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಭೈರಪ್ಪನವರ ಕಾದಂಬರಿಗಳನ್ನು ಅವಲೋಕಿಸಿದಾಗ ಈ ಅಂಶ ನಮ್ಮ ಗಮನವನ್ನು ಸೆಳೆಯುತ್ತದೆ. 'ಹಿಂದೂಪ್ರಜ್ಞೆಯು' ಅವರ ಬರವಣಿಗೆಯಲ್ಲಿ ಪ್ರತಿಬಿಂಬಿತವಾಗಿದೆ. 'ಹಿಂದೂಪ್ರಜ್ಞೆ' ಎಂದರೆ ಸಂಸ್ಕೃತಿಯ ಅಂಶಗಳಾದ ಧರ್ಮ, ಕಲೆ, ಇತಿಹಾಸ, ಸಾಹಿತ್ಯ, ಸಂಗೀತ ಇವುಗಳ ಸಮಷ್ಟಿಯಲ್ಲಿ ಇರುವ ಆಸ್ಥೆ, ಆಸಕ್ತಿಗಳೆಂದು ಹೇಳಬಹುದು. ಬದಲಾಗುತ್ತಿರುವ ಸಮಾಜದಲ್ಲಿ ಒಳ್ಳೆಯದನ್ನು ಕೊಚ್ಚಿಕೊಂಡು ಹೋಗಲು ಬಿಡದೆ, ನಶಿಸುತ್ತಿರುವ ಮೌಲ್ಯಗಳನ್ನು ಕಾಯ್ದುಕೊಳ್ಳಬೇಕೆಂಬ 'ಕಾಂತಾಸಮ್ಮಿತ'ವನ್ನು ಹೇಳಿದ್ದಾರೆ.

'India is Religion' ಎಂಬ ಹೇಳಿಕೆಯಲ್ಲಿ ಭಾರತೀಯರ ನರನಾಡಿಗಳಲ್ಲಿ ಧರ್ಮ ಬೆರೆತುಕೊಂಡ ಬಗೆ ಅರ್ಥವಾಗುತ್ತದೆ. ಇಹಪರಗಳಿಗಾಗಿ ಅವರು ಧರ್ಮ ಮಾರ್ಗವನ್ನು ಆಶ್ರಯಿಸುತ್ತಾರೆ. ಇಹಲೋಕದ ಕಾಮನೆಗಳಿಂದ ಯಾವುದು ನಮ್ಮನ್ನು ಎತ್ತಿ ಹಿಡಿಯುತ್ತದೆಯೋ ಅದೇ ಧರ್ಮ ಎಂಬುದನ್ನು ನಂಬುತ್ತಾರೆ. ಅರ್ಥ, ಕಾಮಗಳನ್ನು ಅನುಭವಿಸುವಾಗಲೂ ಧಾರ್ಮಿಕ ಪ್ರಜ್ಞೆ ಅವರಲ್ಲಿ ಜಾಗೃತವಾಗಿರುತ್ತದೆ. 'ಧರ್ಮಶ್ರೀ' ಹೆಸರೇ ಸೂಚಿಸುವಂತೆ ಹಿಂದೂಧರ್ಮದ ಹಿರಿಮೆಯನ್ನು ಹೇಳುವ ಕಾದಂಬರಿ. ಹಿಂದೂ, ಕ್ರೈಸ್ತ ಧರ್ಮಗಳ ಚರ್ಚೆಯನ್ನು ಕುರಿತಾದುದು. ಎರಡೂ ಧರ್ಮ ಗಳ ಒಳಿತು–ಕೆಡುಕುಗಳನ್ನು ನಿರ್ವಿಕಾರದೃಷ್ಟಿಯಿಂದ ಲೇಖಕರು ನೋಡಿದ್ದಾರೆ. ನನ್ನದು ಆದುದರಿಂದ ದೊಡ್ಡದು ಎನ್ನುವ ಅಭಿಮಾನವಿಲ್ಲದೆ ಹಿಂದೂ ಧರ್ಮದ ಘನತೆ ಯೊಂದಿಗೆ ಅದರ ಲೋಪ ದೋಷಗಳಿಗೆ ಕನ್ನಡಿ ಹಿಡಿದು ಅದು ಹಾಳಾಗದಂತೆ ತನ್ನ ಪಾತ್ರ ವನ್ನು ವಿಸ್ತರಿಸಿ, ವಿಶಾಲಗೊಳ್ಳಬೇಕು ಎಂಬುದನ್ನು ಸೂಚಿಸಿದ್ದಾರೆ.

'ಧರ್ಮಶ್ರೀ'ಯ ನಾಯಕ–ನಾಯಕಿಯರು ಬೇರೆ ಧರ್ಮದವರು. ಸತ್ಯನಾರಾ ಯಣ ಹಿಂದು, ಲಿಲ್ಲಿ ಕ್ರಿಶ್ಚಿಯನ್. ಎರಡು ಧರ್ಮಗಳ ಕಟ್ಟಾ ನಿಷ್ಠೆಯ ಅಭಿಮಾನಿ ಗಳಾದ ಇವರ ಸ್ನೇಹ ದ್ವೇಷದಿಂದಲೇ ಪ್ರಾರಂಭವಾಗುತ್ತದೆ. ವೇಳೆ ಸವೆದಂತೆ ಅಂದರೆ ಲಿಲ್ಲಿ ಹಿಂದೂಧರ್ಮದ ಬಗೆಗೆ ಆಳವಾಗಿ ಅಭ್ಯಸಿಸಿ ಅರಿವನ್ನು ಮೂಡಿಸಿಕೊಂಡಾಗ ಸತ್ಯನ ಮೇಲಿನ ಪ್ರೇಮದಲ್ಲಿ ಪರ್ಯವಸಾನವಾಗುತ್ತದೆ. ಮುಂಡೆಯ ಮೇಲೆ ಲಂಗ ತೊಟ್ಟು, ಲಿಪ್‌ಸ್ಟಿಕ್ ಬಳಿದುಕೊಂಡು ಬಾಬ್‌ಕಟ್‌ನಲ್ಲಿ ಶೋಭಿಸುವ ಲಿಲ್ಲಿ ಮುಂದೆ ಲೀಲಾ ಆಗಿ ಮಾರ್ಪಡುತ್ತಾಳೆ. ಸತ್ಯನಾರಾಯಣ ಬೇನೆ ಬಿದ್ದಾಗ ಲಿಲ್ಲಿಯ ಸೇವೆಗೆ, ಗುಣಕ್ಕೆ ಮಾರು ಹೋಗಿ ಪ್ರೀತಿಯ ಸೆಳವಿನಲ್ಲಿ ಸಿಲುಕುತ್ತಾನೆ. ನಿಸರ್ಗದ ಒತ್ತಡಕ್ಕೆ ಒಳಗಾಗಿ ಲಿಲ್ಲಿಗಾಗಿ ಮತಾಂತರ ಹೊಂದಿ ಮದುವೆಯಾಗುತ್ತಾನೆ. ಆದರೆ ಆಂತರಿಕ ಹಿಂಸೆಯನ್ನು ತಾಳಿಕೊಳ್ಳಲಾರದೆ ಮಾನಸಿಕ ವೇದನೆಯನ್ನು ಆಳವಾಗಿ ಅನುಭವಿಸಿ ತಿರುಗಿ ಹಿಂದುವಾಗುತ್ತಾನೆ.

ಸತ್ಯನಾರಾಯಣನ ಮನಸ್ಸಿನಲ್ಲಾದ ಹೋರಾಟ ಕೇವಲ ಒಂದು ಮನಸ್ಸಿನ ತುಮು ಲವಲ್ಲ. ಅದು ಎರಡು ತತ್ವಪ್ರಣಾಲಿಗಳ, ಸಂಸ್ಕೃತಿಗಳ ಘರ್ಷಣೆ. ಅದೇ ಆತನನ್ನು ಮತ್ತೆ ಮತ್ತೆ ಅಧೀರನನ್ನಾಗಿ ಮಾಡುತ್ತದೆ. ಹಿಂದೂ ಧರ್ಮದ ಬಗೆಗೆ ಆಳವಾಗಿ ಓದಿ ಅಭಿಮಾನ ತಾಳಿದ ಸತ್ಯ ಪ್ರಾಚೀನ ಕರ್ಮಕ್ಕೆಂಬಂತೆ ಲಿಲ್ಲಿಯನ್ನು ಮದುವೆಯಾಗಲು ಮತಾಂತರ ಹೊಂದುತ್ತಾನೆ. ಆದರೆ ಆತನು ಅತೃಪ್ತ. ಕ್ರೈಸ್ತಪಾದ್ರಿಗಳ ಮಹತ್ವಾ ಕಾಂಕ್ಷೆ, ಧರ್ಮ ಪ್ರಚಾರದಲ್ಲಿ ಅವರು ಅನುಸರಿಸುವ ಅಡ್ಡ ಹಾದಿ, ಕಂಟ್ರಿ ಕ್ರಿಶ್ಚಿಯನ್ ಆಗಿ ನೀತಿಗೆಟ್ಟರೂ ಸರಿ ಸುಖದಲ್ಲಿ ಬಿದ್ದರೆ ಸಾಕು ಎನ್ನುವ ರೆಬೆಲೊ ದಂಪತಿಗಳು, ಶಾಲೆ ಯಲ್ಲಿ ಕ್ರೈಸ್ತ ಪ್ರಾರ್ಥನೆಯನ್ನು ಕಡ್ಡಾಯವಾಗಿಸಿ ಮಕ್ಕಳನ್ನು ಅನಾಗರಿಕರೆಂದು ಕರೆದ ಬಿಷಪ್, ಇಂಥವರ ಪರಿಸರದಲ್ಲಿ ಆತನ ನೆಮ್ಮದಿ ಹಾರಿ ಹೋಗುತ್ತದೆ. ಲಿಲ್ಲಿಗಾಗಿ

ಧರ್ಮ ಬಿಟ್ಟರೂ ಮನಸ್ಸು ಮಾತ್ರ ಪೂರ್ವ ಸಂಸ್ಕಾರದಿಂದ ಅದನ್ನೇ ಯೋಚಿಸುತ್ತಿರುತ್ತದೆ. ಒಡ ಹುಟ್ಟಿದ ತಂಗಿ ಶಕುಂತಲೆಯು ಆತನನ್ನು ಪರಕೀಯನೆಂಬಂತೆ ಕಂಡಳು. ಕಂಡವರ ಮನೆಯಲ್ಲಿ ತಿರಿದು ತಿಂದ ಸನ್ಯಾಸಿಯಾದ ತಂದೆ ಸಾಯುವ ಸಮಯದಲ್ಲಿ ಗಂಗಮಾಟನ ಕೈಯಿಂದ ನೀರು ಬಿಡಿಸಿಕೊಳ್ಳುತ್ತಾನೆ. ಆತನ ನೊಂದ ಮನಸ್ಸಿಗೆ ಇದೊಂದು ಆಘಾತ. ಬೇಲೂರು ಹಳೆಬೀಡುಗಳನ್ನು ಸಂದರ್ಶಿಸಲು ಹೋದಾಗ ಈ ಸ್ಥಳಗಳು ತನ್ನ ಮಕ್ಕಳಿಗೆ ಪುಣ್ಯಕ್ಷೇತ್ರ, ಧಾರ್ಮಿಕ ಕ್ಷೇತ್ರಗಳಾಗದೆ, ವಿಹಾರ ಸ್ಥಳಗಳಾಗುತ್ತವೆ ಎಂಬುದು ಆತನ ಕೊರಗು. ಮಾನಸಿಕ ಒತ್ತಡಕ್ಕೊಳಗಾಗಿ ಮೇಲಿಂದ ಮೇಲೆ ಕಾಯಿಲೆ ಬೀಳುತ್ತಾನೆ. ಈ ಎಲ್ಲ ಕೋಟಲೆಗಳಿಗೆ ಪರಿಹಾರ ಸೂಚಿಸುವವಳು ಲಿಲ್ಲಿಯೇ. ಹಿಂದೂ ಹೆಣ್ಣುಮಗಳಿಗೆ ಪತಿಯೇ ಸೌಭಾಗ್ಯವೆಂದರಿತ ಲಿಲ್ಲಿ ಹಿಂದುವಾಗಿ 'ಧರ್ಮಶ್ರೀ'ಯಾಗಿ ತನ್ನ ಕುಂಕುಮವನ್ನು ಮರಳಿ ಪಡೆಯುತ್ತಾಳೆ.

ಯಾವುದೊಂದು ಧರ್ಮವನ್ನು ಅರ್ಥ ಮಾಡಿಕೊಳ್ಳದಿರುವುದಕ್ಕಿಂತ ಅದನ್ನು ಅಪಾರ್ಥ ಮಾಡಿಕೊಳ್ಳುವುದು ಹೆಚ್ಚು ಹಾನಿಕರವಾದುದು. ಹಿಂದೂಧರ್ಮ ಕ್ರೈಸ್ತ ಮಿಶನರಿಗಳ ಪ್ರಚಾರದ ತುತ್ತಾಗಿ, ಟೀಕೆಯ ವಸ್ತುವಾಗಿ ಆಚಾರ ವಿಚಾರಗಳ ಹಿನ್ನೆಲೆಯಲ್ಲಿಯ ವಿಶಾಲತತ್ವವನ್ನು ಕಳೆದುಕೊಂಡಿದೆ. ಧರ್ಮದ ಮೂಲಭೂತ ತತ್ವಗಳನ್ನು ನಿರ್ಲಕ್ಷಿಸಿ ಎಲ್ಲ ಧರ್ಮಗಳಂತೆಯೇ ಇಲ್ಲಿಯೂ ಇರುವ ಮೂಢನಂಬಿಕೆಗಳನ್ನು ಎತ್ತಿ ಹೇಳಿ ಹಿಂದೂಧರ್ಮದ ಅವಹೇಳನ ಮಾಡುವುದು ಅವರ ಅಜ್ಞಾನವನ್ನು ಸೂಚಿಸುತ್ತದೆ. ಹಿಂದೂಧರ್ಮದಲ್ಲಿ ಮೂರ್ತಿಪೂಜೆಯಷ್ಟು ಟೀಕೆಗೆ ಒಳಗಾದ ವಸ್ತು ಮತ್ತೊಂದಿಲ್ಲವೆಂದೇ ಹೇಳಬೇಕು. ಅದನ್ನೇ ಒಬ್ಬ ಹುಡುಗ ಕಲ್ಲು, ಮರಗಳನ್ನು ಪೂಜೆ ಮಾಡಿ ಕಂಡ ದೇವರಿಗೆಲ್ಲ ಕೈಮುಗಿಯುವವರು ಹಿಂದುಗಳು ಎಂದು ಟೀಕಿಸಿದಾಗ ಶಂಕರನೆಂಬ ವಿದ್ಯಾರ್ಥಿ—

"ವಿಗ್ರಹಾರಾಧನೆ ಮೂಢ ನಂಬಿಕೆಯ ಫಲವಲ್ಲ. ಬುದ್ಧಿಶಕ್ತಿಯ ಮಿತಿಯನ್ನು ಬುದ್ಧಿಶಕ್ತಿಯ ಮಿತಿಯಿಂದಲೇ ಗುರುತಿಸುವ ಬೌದ್ಧಿಕ ವಿಜಯದ ಕುರುಹು. ಹಿಂದೂ ಧರ್ಮದ ತತ್ವಗಳೊಡನೆ ಹಿಂದೂಸಮಾಜದ ಸುಧಾರಣೆಗಳನ್ನು ಕಲಸುಮೇಲೋಗರ ಮಾಡಿ ಚರ್ಚಿಸಿ ಅವಹೇಳನ ಮಾಡುವವರಿಗೆ ಸರಿಯಾದ ಪೆಟ್ಟು ಇದು. ಆಚಾರ ವಿಚಾರಗಳಲ್ಲಿ ನಾಚಿಕೆಯುಂಟಾಗುವುದಕ್ಕೆ ಅವುಗಳ ಮಹತ್ವದ ಅರಿವು ಇಲ್ಲದಿರುವುದೇ ಕಾರಣ" ಎಂದು ಹೇಳುತ್ತಾನೆ.

ಸ್ವಾಮಿ ವಿವೇಕಾನಂದರು ಹೇಳಿದಂತೆ ಒಡ ಹುಟ್ಟಿದ ಅಣ್ಣ ತಮ್ಮಂದಿರಿಗಿಂತ ಒಂದೇ ಧರ್ಮಕ್ಕೆ ಸೇರಿದ ಜನರು ಪ್ರೀತಿಯಿಂದ ಬಾಳುತ್ತಾರೆ. ಹಿಂದುಗಳ ಜನ ಜೀವನದಲ್ಲಿ ಧರ್ಮ ಅನಿವಾರ್ಯವಾದ ಒಂದು ಅಂಗವಾಗಿರುವುದರಿಂದ ಅದರ ರಕ್ಷಣೆಯು ನಮ್ಮ ಕರ್ತವ್ಯ. ಅದೇ ನಶಿಸಲು ಪ್ರಾರಂಭಿಸಿದರೆ ರಾಷ್ಟ್ರಜೀವನದಲ್ಲಿ ಉಳಿಯುವುದಾದರೂ ಏನು? ನಾವು ಅಳಿಸಬೇಕಾದುದು ಜಾತೀಯತೆಯ ಸಂಕುಚಿತ

ಪ್ರವೃತ್ತಿಯನ್ನೇ ಹೊರತು ಧರ್ಮವನ್ನಲ್ಲ. ಮಾನವ ಧರ್ಮವೊಂದೇ ಎನ್ನುವ ಮನೋಭಾವ ವಿಶಾಲತೆಯನ್ನು ಎಲ್ಲರೂ ಬೆಳೆಸಿಕೊಂಡರೆ ಅದರಂತಹ ಒಳ್ಳೆಯದು ಬೇರಿನ್ನಾವುದಿದೆ? ಆದರೆ ಧರ್ಮದ ವಿಷಯ ಬಗೆಗೆ ಪ್ರಶ್ನಿಸಿದಾಗ ಬಹುತೇಕ ಜನ ಬೇತ್ಲೆಹೇಮ್ ಇಲ್ಲ ಮಕ್ಕಾ ಕಡೆಗೇನೇ ಕೈ ಮಾಡುತ್ತದೆ. ನಮ್ಮ ದೇಶ, ಧರ್ಮಗಳು ಉಳಿಯಬೇಕಾದರೆ ನಾವು ವಿಸ್ತಾರಗೊಳ್ಳಬೇಕು. ಅಲ್ಪ ತೃಪ್ತರಾಗದೆಯೆ ಯೋಚಿಸಬೇಕು. ಹಿಂದೂ ಧರ್ಮ ತನ್ನ ಪ್ರಾಚೀನ ಪರಂಪರೆಯನ್ನು ಉಳಿಸಿಕೊಳ್ಳುವುದರ ಜೊತೆಗೆ ಗೊಡ್ಡು ಸಂಪ್ರದಾಯಗಳನ್ನು ಬದಿಗಿರಿಸಿ ತನ್ನ ಪಾತ್ರವನ್ನು ವಿಸ್ತರಿಸಿಕೊಳ್ಳಬೇಕೆಂಬ ಆಶೆ ಲೇಖಕರದು. ಆರ್ಯಸಮಾಜದ ಪ್ರಸ್ತಾಪ, ಮರಳಿ ಹಿಂದೂಗಳಾಗುವವರಿಗೆ ತೆರೆದ ಹೃದಯದ ಸ್ವಾಗತವಿದೆಯೆನ್ನುವುದರ ಸೂಚನೆಯಾಗಿದೆ; ಸಂಕೇತವಾಗಿದೆ.

ಯುಗಯುಗಗಳಿಂದಲೂ ಗೋವು ಹಿಂದೂಗಳಲ್ಲಿ ಮಾತೆ ಎಂದು ಪೂಜಿಸಲ್ಪಟ್ಟವಳು. ಗೋಮಾತೆಯ ಉದರದಲ್ಲಿ ಇಡೀ ಬ್ರಹ್ಮಾಂಡವೇ ಅಡಗಿದೆ ಎನ್ನುವ ನಂಬಿಕೆಯು ನಮ್ಮದು. ಅದೇ ಪವಿತ್ರ ಭಾವನೆಯೇ ನಮ್ಮಲ್ಲಿ ಇಂದೂ ಉಳಿದಿದೆಯೇ ಅಥವ ಅದೊಂದು ಹಾಲುಕೊಡುವ ವಸ್ತುವಾಗಿ ಕಂಡಿದೆಯೆ ಎನ್ನುವ ಪ್ರಶ್ನೆಯೆ 'ತಬ್ಬಲಿ ನೀನಾದೆ ಮಗನೆ' ಕಾದಂಬರಿಯ ಕೇಂದ್ರ ಬಿಂದು.

ಇಲ್ಲಿ ನಡೆಯುದು ಎರಡು ತಲೆಮಾರುಗಳ ಕಥೆ. ಅಜ್ಜ ಮೊಮ್ಮಕ್ಕಳದು. ಅಪಾರ ಪ್ರೀತಿ. ಭಕ್ತಿಗಳನ್ನಿರಿಸಿಕೊಂಡು ಹಸುಗಳನ್ನು ಸಾಕಿ ಅವುಗಳನ್ನು ತಾಯಿಯಂತೆ ರಕ್ಷಿಸಿದವನು ಕಾಳಿಂಗಗೌಡಜ್ಜ. ಆತನ ಮೊಮ್ಮಗ ವಿದ್ಯಾವಂತ. ವಿದೇಶಕ್ಕೆ ಹೋಗಿ ಹೆಚ್ಚಿನ ವಿದ್ಯೆ ಪಡೆದು ಹೆಚ್ಚಿಗೆ ಹಾಲು ಕೊಡದ ಹಸುಗಳನ್ನು ಕಟುಕರಿಗೆ ಮಾರಿ ತಾಯಿಯನ್ನು ಗೋಳಾಡಿಸಿದ ಮಹಾನುಭಾವ. ಧರ್ಮ–ಕರ್ಮಗಳಲ್ಲಿ ನಂಬುಗೆಯನ್ನಿರಿಸಿಕೊಂಡು ಮಗನ ಮರಣವನ್ನು ಮರೆತು ಮಂದಿರವನ್ನು ಕಟ್ಟಿಸಿ ಕೃತಾರ್ಥತೆಯನ್ನು ಪಡೆದ ಅಜ್ಜ ಒಂದು ಧ್ರುವವಾದರೆ, ಪ್ರಜ್ಞಾಪೂರ್ವಕವಾಗಿ ತನ್ನ ವಿಶ್ವಾಸಗಳನ್ನೆಲ್ಲ ಗಾಳಿಗೆ ತೂರಿ ಮನೆಯಲ್ಲಿಯೇ ಗೋವಧೆಯನ್ನು ಕಂಡೂ ಕಣ್ಣುಮುಚ್ಚಿಕೊಂಡ ಮೊಮ್ಮಗ ಕಾಳಿಂಗ ಇನ್ನೊಂದು ಧ್ರುವವೆನಿಸಿದ್ದಾನೆ. ಆತನ ಮನೆಯಲ್ಲಿಯೇ ಗೋಹತ್ಯೆ ನಡೆದದ್ದೊಂದು ದುರ್ವಿಪಾಕ.

ಕಾಳಿಂಗಗೌಡಜ್ಜ ಪುಣ್ಯಕೋಟಿ ಹಸು ಹುಟ್ಟಿ ಬೆಳೆದ ಮನೆಯು ಈಗಲೂ ಅವುಗಳನ್ನು ಸಾಕುತ್ತಿರುವ ಯಜಮಾನ. ಊರವರ ಪ್ರೀತಿಯನ್ನು ಗಳಿಸಿಕೊಂಡ ಪ್ರಭಾವಶಾಲಿ. ಅಕಾಲದಲ್ಲಿ ಮಗ ದುರ್ಮರಣಕ್ಕೆ ತುತ್ತಾದಾಗ ಒಂದು ಕ್ಷಣ ದಿಕ್ಕು ತೋಚದೆ ಮಂಕಾಗಿ ಕುಳಿತಿರುತ್ತಾನೆ. ಆಗ ನರಸಪ್ಪ ಜೋಯಿಸರು ಆತನಿಗೆ "ಗೋವಿನ ಸಂರಕ್ಷಣೆಗಾಗಿ ಬ್ರಾಹ್ಮಣನಾಗಲೀ. ವೈಶ್ಯನಾಗಲೀ ಶಸ್ತ್ರಧಾರಣೆ ಮಾಡಲೇಬೇಕು." ಎಂದೂ 'ಯಾವ ಮನೆಯಲ್ಲಿ ಹಸು ದುಃಖಿಪಡುತ್ತೋ ಅವನು ನರಕಕ್ಕೆ ಹೋಗುತ್ತಾನೆ'

ಎಂಬ ಶಾಸ್ತ್ರದ ಮಾತುಗಳನ್ನು ಹೇಳಿದಾಗ ತನ್ನ ಮಗನು ಅನ್ಯಾಯವಾಗಿ ಸಾಯಲಿಲ್ಲ, ಆತನದು ಬಲಿದಾನ ಎಂದು ಆತನಿಗೆ ಸಮಾಧಾನವೆನಿಸುತ್ತದೆ.

ಇಂತಹ ಅಜ್ಜನ ಮೊಮ್ಮಗ ಪುಟ್ಟ ಕಾಳಿಂಗ. ಪಟ್ಟಣಕ್ಕೆ ಹೋಗಿ ಇಂಗ್ಲಿಷ್ ಓದುತ್ತಾನೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕೆನಡಾಕ್ಕೆ ಹಾರುತ್ತಾನೆ. ಅಲ್ಲಿ ಅಭ್ಯಾಸದ ಜೊತೆಗೆ ಲವ್ ಮಾಡಿ ಮದುವೆ ಮಾಡಿಕೊಳ್ಳುತ್ತಾನೆ. ಅಜ್ಜ ಸತ್ತ ನಂತರ ಅಜ್ಜನ ಪುಣ್ಯತಿಥಿಯ ಸಮಯಕ್ಕೆ ಊರಿಗೆ ತಲುಪುತ್ತಾನೆ. ಕಾಳಿಂಗಗೌಡಜ್ಜನೊಡನೆಯೆ ಆ ಮನೆಯ ಪುಣ್ಯವೂ ಅಸ್ತಮಿತವಾಯಿತೆಂದು ಊರವರೆಲ್ಲ ಅಂದುಕೊಳ್ಳುತ್ತಾರೆ. ಪಶ್ಚಿಮದ ಗಾಳಿಯನ್ನು ಉಸಿರಾಡಿಸಿ ಬಂದ ಕಾಳಿಂಗನಿಗೆ ತನ್ನ ಅಜ್ಜನ ಪುಣ್ಯಕಾರ್ಯ ಹಿಡಿಸದು. ಮನೆಯಲ್ಲಿ ಬಹಳ ದುಡ್ಡಿರಬೇಕೆಂದು ತಿಳಿದ ಆತನಿಗೆ ನಿರಾಶೆ ಕಾಯ್ದಿರುತ್ತದೆ. ಹೆಂಡತಿ ಹಿಲ್ಡಳೊಡನೆ ಸುಧಾರಿಸಿದ ಬೇಸಾಯವನ್ನು ಪ್ರಾರಂಭಿಸುತ್ತಾನೆ. ಪ್ರತಿಯೊಂದನ್ನೂ ಲಾಭದ ದೃಷ್ಟಿಯಿಂದಲೇ ನೋಡುತ್ತಾನೆ. ಅಜ್ಜನು ಸಾಕಿದ ಗೋವುಗಳಲ್ಲಿ ನಿರುಪಯೋಗಿಯೆನಿಸಿದ ಅರ್ಧದಷ್ಟು ಗೋವುಗಳನ್ನು ಹಿಂದೆ ಯಾರೂ ಮಾರಿರದ ಕಟುಕನಿಗೆ ಮಾರಿ ಬಿಡುತ್ತಾನೆ. ಊರವರಿಗೆಲ್ಲ ಅದರಿಂದ ದುಃಖ ದಂಗು ಬಡಿದಂತಾಗುತ್ತದೆ. ದೇವಮಂದಿರದ ಕಲ್ಯಾಣಿಯಲ್ಲಿ ಪಂಪ್ ಹಾಕಿದಾಗ ರೋಷವುಕ್ಕಿದರೂ ಅವರು ನಿಸ್ಸಹಾಯಕರು. ಅಜ್ಜ ಅಮಲ್ದಾರರ ಕಾಲುಹಿಡಿದು ಗೋಮಾಳವನ್ನು ಉಳಿಸಿಕೊಂಡಿದ್ದರೆ ಈತ ಅದನ್ನು ಉತ್ತಿ ತಂಬಾಕು ಬೆಳೆಯುವುದಕ್ಕೆ ಉಪಯೋಗಿಸುತ್ತಾನೆ. ಬಾಲ್ಯದ ಸ್ನೇಹಿತ ವೆಂಕಟರಮಣನೊಡನೆ ಅಷ್ಟೊಂದು ಸ್ನೇಹ ವಿಶ್ವಾಸಗಳಿಂದಿದ್ದವನು ಊರವರ ಅಜಾತುರ್ಯದಿಂದ ಬೆಳೆ ಹಾಳಾದಾಗ ಅಜ್ಜ ಕೊಟ್ಟ ದತ್ತಿಯ ಹೊಲವನ್ನು ಕಳೆದುಕೊಳ್ಳಬೇಕಾದೀತೆಂಬ ಧಮಕಿಯನ್ನೂ ಕೊಡುತ್ತಾನೆ. ಕೊನೆಗಂತೂ ಯಾವ ಮನೆಯಲ್ಲಿ ಗೋವುಗಳು ದೇವತೆಗಳೆಂದು ಪೂಜಿಸಲ್ಪಡುತ್ತಿದ್ದವೋ ಅದೇ ವಂಶದ ಕುಡಿಯಾದ ಕಾಳಿಂಗನ ಮನೆಯಲ್ಲಿಯೇ ಪುಣ್ಯಕೋಟಿ ಹಸುವಿನ ವಧೆ ನಡೆಯುತ್ತದೆ. ಪಾಪದ ಪಾತ್ರೆ ತುಂಬಿ ಹೋಗುತ್ತದೆ. ಕಾಳಿಂಗ ಸುದ್ದಿ ತಿಳಿದೂ ಕಿವುಡನಾಗುತ್ತಾನೆ. ಕೊರಗಿನಲ್ಲಿ ತಾಯಿ ಕೊನೆಯುಸಿರೆಳೆಯುತ್ತಾಳೆ. ಹಿಲ್ಡಳು ಬೆಳೆದ ದೇಶದ ಹಿನ್ನೆಲೆಯನ್ನು ಗಮನಿಸಿದಾಗ ಅವಳ ಅಪರಾಧವನ್ನು ಅಲಕ್ಷಿಸಿದರೂ ಕಾಳಿಂಗನನ್ನು ಕ್ಷಮಿಸಲಿಕ್ಕಾಗದು. ಅವಳ ಮೇಲಿನ ಮೋಹಕ್ಕಾಗಿ ಆತ ಬಾಯಿ ಮುಚ್ಚುತ್ತಾನೆ. ಹುಟ್ಟುತ್ತಲೇ ಮಕ್ಕಳನ್ನು ಮನೆಯಿಂದ ಹೊರಕ್ಕೆ ಕಳುಹಿಸಿ ಪರದೇಶಿಪ್ರಜ್ಞೆಯನ್ನು ಬೆಳೆಸುವ ಪರಿಪಾಠವನ್ನಿಟ್ಟುಕೊಂಡ ಪಾಶ್ಚಾತ್ಯಳು ಮಕ್ಕಳಲ್ಲೇ ಇಲ್ಲದ. ಗಂಡನಲ್ಲೇ ಇಲ್ಲದ ವಾತ್ಸಲ್ಯವನ್ನು ಹಸುವಿನಲ್ಲಿ ತೋರಿಸುವುದಾದರೂ ಹೇಗೆ ?

ಬಂದೂಕನ್ನು ತೋರಿಸಿದ ಕಾಳಿಂಗ ಜನರನ್ನು ಹೆದರಿಸಿ ಗೆದ್ದ ಪೋಲೀಸರನ್ನು ಕರೆತಂದು ದಂಡ ವಸೂಲುಮಾಡಿ ಅವರ ಮೇಲೆ ವಿಜಯ ಸಂಪಾದಿಸಿದ. ಆದರೆ ಆತ ಅನಂತರದಲ್ಲಿ ಅನುಭವಿಸಿದ ಸೋಲು ಬಲು ದೊಡ್ಡದು. ಇದೊಬ್ಬಳೇ ತಾಯಿ ಮರಣ

ಹೊಂದಿದಾಗ ಆತನಿಗೆ ಒಂಟಿತನದ ಅನುಭವವಾಗುತ್ತದೆ. ತಾನು ಬೆಳೆದ ಪರಿಸರ, ಅಂತಹ ವಂಶದಲ್ಲಿ ಹುಟ್ಟಿ ಎಸಗಿದ ಅಪಚಾರಗಳ ನೆನಪಾಗಿ ಆತನಲ್ಲಿ ಅಪರಾಧೀ ಮನೋಭಾವ ತಲೆ ಎತ್ತುತ್ತದೆ. ತನ್ನ ಕರುಳಿನ ಕುಡಿಯು ತಾಯ ಮೊಲೆ ಹಾಲು ಇಲ್ಲದೆ ರಂಪ ಹಿಡಿದು ಮತ್ತೆ ಪುಣ್ಯಕೋಟಿ ಹಸುವನ್ನೇ ಆತ ಆಶ್ರಯಿಸಬೇಕಾದಾಗ. ಚಿಕ್ಕ ಮಗುವಾಗಿದ್ದಾಗ ತಾನು ಕುಡಿದ ಪುಣ್ಯಕೋಟಿಯ ಸ್ಮರಣೆಯಾಗಿ, ಹೆಂಡತಿಯು ಎಸಗಿದ ಗೋಹತ್ಯೆಯನ್ನು ನೆನೆದು ಮನಸ್ಸು ಉದ್ವಿಗ್ನಗೊಳ್ಳುತ್ತದೆ. ತಾಯಿಯನ್ನು ತಾನೇ ಕೊಂದ ಯಾತನೆಯು ನೋವು ಕರುಳನ್ನು ಹಿಂಡುತ್ತದೆ. ಪರಿಣಾಮವಾಗಿ ಪಶ್ಚಾತ್ತಾಪದಿಂದ ಬೆಂದು ತಾನು ಮಾರಿದ ಗೋವುಗಳನ್ನು ಹಿಂದಕ್ಕೆ ಪಡೆಯಲು ವಿಫಲಯತ್ನ ನಡೆಸುತ್ತಾನೆ.

ಬಾಂದ್ರಾದ ಕಸಾಯಿಖಾನೆಯಲ್ಲಿ ನಿಂತ ಅಸಂಖ್ಯ ದೀನದೃಷ್ಟಿಯ ಆಕಳುಗಳನ್ನು ಕಂಡ ಆತ ನಿರ್ವೀರ್ಯನಾಗಿ ತಲೆ ಕೆಳಗೆ ಹಾಕುತ್ತಾನೆ. ಸಮಸ್ಯೆ ಕಾಳಿಂಗನದೊಬ್ಬನದೇ ಅಲ್ಲ. ಕೋಟಿ ಕಾಳಿಂಗರದು. ವ್ಯಾಪಾರೀ ಮನೋಭಾವ ಹಿಂದೂಜನಾಂಗದಲ್ಲಿ ತೀರ ಕಡಿಮೆ. ಪ್ರತಿಯೊಂದನ್ನು ಲಾಭದ ಮಾನದಂಡದಿಂದ ಅಳೆಯುವುದು ವಿರಳ. ಆದರೆ ಕಾಳಿಂಗನ ಮೇಲೆ ಪರಕೀಯ ಪ್ರಭಾವ ಸಾಕಷ್ಟು ಆಗಿದೆ. ನಮ್ಮದು ಬದುಕೇ ಅಲ್ಲ ಎನ್ನುವ ಮಟ್ಟಿಗೆ. ಕಾಳಿಂಗ ಹೊಸದನ್ನು ಸ್ವೀಕರಿಸಲಿ. ಯಾರೂ ವಿರುದ್ಧ ಧ್ವನಿಯೆತ್ತುವುದಿಲ್ಲ. ಆದರೆ ತಾನು ಬೆಳೆಸಿಕೊಂಡ ಹೊಸ ದೃಷ್ಟಿಯ ಆವೇಶದಲ್ಲಿ ತನ್ನ ಧರ್ಮ ಸಂಸ್ಕೃತಿಗಳನ್ನು ಮಣ್ಣುಗೂಡಿಸುವುದು ಮಹಾಪರಾಧ. ಕಾಳಿಂಗನ ದೃಷ್ಟಿಯಲ್ಲಿ ಭಾರತೀಯವಾದ ಕುರುಡಾಗಿ ತೋರಬಹುದು, ಆದರೆ ದೊಡ್ಡ ಹಿನ್ನೆಲೆಯಲ್ಲಿ, ಸಂಸ್ಕೃತಿಯ ಪರಿಧಿಯಲ್ಲಿ ಅದಕ್ಕೊಂದು ಅರ್ಥ ಉಂಟು. ಅದಕ್ಕೆ ಸಾವಿರ ವರ್ಷಗಳ ಸಂಸ್ಕಾರವಿರುತ್ತದೆ. ಇದಾವುದನ್ನೂ ಲಕ್ಷಕ್ಕೆ ತಾರದ ಕಾಳಿಂಗ ಕುರುಡನಂತೆ ವರ್ತಿಸಿದರೂ ಕೊನೆಗೆ ಕತ್ತಲೆಯಿಂದ ಬೆಳಕಿನೆಡೆಗೆ ಸಾಗುತ್ತಾನೆ.

ಗೋಮಾತೆಯ ಬಗೆಗಿನ ಈ ಪೂಜ್ಯ ಭಾವನೆಯನ್ನು ಹೋಟಲುಗಳಲ್ಲಿ ಗೋಮಾಂಸ ತಿಂದು ಭಕ್ಷಣೆಯ ವಿರುದ್ಧ ಘೋಷಣೆಗಳನ್ನು ಕೂಗುವ ನಮ್ಮ ಇಂದಿನ ಪೀಳಿಗೆಯು ಉಳಿಸಿಕೊಳ್ಳುತ್ತದೆಯೆ? ಉಳಿಸಿಕೊಳ್ಳಲು ಸಾಧ್ಯವಿದೆಯೇ ಎನ್ನುವುದೇ ನಮ್ಮೆದುರಿಗಿನ ಸಮಸ್ಯೆ. ತಂದೆ ತಾಯಿಯರು ನಿರುಪಯೋಗಿಯಾದಾಗ ಅವರ ತಲೆಯನ್ನು ಕಡಿದು ಹಾಕುವುದು ಎದೀತೆ? ನಮ್ಮ ಆದರ್ಶಗಳನ್ನೆಲ್ಲ ನಾವು ಗಾಳಿಗೆ ತೂರಿ ಬಿಡಬೇಕೆ ಅಥವಾ ಬೆಲೆ ತೆತ್ತು ಅವುಗಳನ್ನು ಉಳಿಸಿಕೊಳ್ಳಬೇಕೆ? ವಿಚಾರದ ಒರೆಗಲ್ಲಿನಿಂದ ನೋಡುವ ಸ್ವಾತಂತ್ರ್ಯ ಪರಕೀಯರಿಗೆ ಇದ್ದರೆ, ನಮ್ಮ ಪರಂಪರೆಯನ್ನು ಕಾಯ್ದುಕೊಳ್ಳಬೇಕೆಂಬ ಪ್ರಜ್ಞಾನ ನಮಗೆ ಬೇಡವೆ?

ಆಸೆ, ಆಮಿಷ, ರೋಷ, ಅಳು, ನಗುಗಳು ಹುಟ್ಟಿನಿಂದಲೇ ಬಂದವುಗಳು. ಮನುಷ್ಯನಲ್ಲಿ ವಾಸನಾತ್ಮಕವಾಗಿ ಹುದುಗಿದ ಮೂಲ ಪ್ರವೃತ್ತಿಗಳು ಅವುಗಳಲ್ಲಿ ಸುಖವೇ ಬೇಕೆಂದು ಪ್ರತಿಯೊಬ್ಬ ಜೀವಿಯೂ ಪರದಾಡುತ್ತಾನೆ. ಸುಖ ದುಃಖಗಳಾಗಲೀ,

ಜೀವನದ ಆಗು ಹೋಗುಗಳಾಗಲೀ ನಮ್ಮನ್ನು ಕೇಳಿ ಬರುವುದಿಲ್ಲ ; ನಮ್ಮ ಇಚ್ಛೆಯಂತೆಯೂ ನಡೆಯುವುದಿಲ್ಲ. ಬಾಳಿನಲ್ಲಿ ಬರುವ ಎಲ್ಲವನ್ನೂ ಗೊಣಗಾಡದೇ ಸಹಿಸಬೇಕು; ಸಮನಾಗಿ ಸ್ವೀಕರಿಸಬೇಕು. ಸಾಧ್ಯವಾದರೆ ಈ ಕಾಮನೆಗಳನ್ನು ಜಯಿಸಬೇಕು. ಅಂತಹವನು 'ಸ್ಥಿತಪ್ರಜ್ಞ'ನೆಂದು ಗೀತೆ ಹೇಳುತ್ತದೆ. ಜಗತ್ತಿನ ಜನಕೋಟಿಯಲ್ಲಿ ಸ್ಥಿತಪ್ರಜ್ಞರಾಗುವದು ಸಾಧ್ಯವಿಲ್ಲ. ಇದು ಸುಳ್ಳೆಂದೂ ಸಾಧಿಸಲಿಕ್ಕೆ ಆಗದುದು ಎಂದೂ ಹೇಳಲಿಕ್ಕಾಗುವುದಿಲ್ಲ. ನೂರರೊಡನೆ ನೂರಾವೊಂದಾಗದೇ ಸಾಮಾನ್ಯರಿಂದ ಸಿಡಿದು ನಿಂತು ಆದರ್ಶವನ್ನು ಮೆರೆದ ಜನಕರಾಜನಂತಹ ಪುರಾಣದ ವ್ಯಕ್ತಿಗಳನ್ನು ಕಾಣುತ್ತೇವೆ. ವಂಶವೃಕ್ಷದ ಶ್ರೋತ್ರಿಗಳೂ ಅಂತಹ ವಿಶಿಷ್ಟ ಪಾತ್ರ. ಕಾದಂಬರಿ ಸಾಹಿತ್ಯದಲ್ಲಿ ಹೊಸದೆನಿಸುವ ಪಾತ್ರ ಚಿತ್ರಣ.

ಗೀತೆಯಲ್ಲಿ ಹೇಳಿದ ಜೀವನದರ್ಶನ ಅತಿಶ್ರೇಷ್ಠವಾದುದೆಂಬುದಕ್ಕೆ ಎರಡಭಿಪ್ರಾಯವಿಲ್ಲ. ಅದು ನಿಷ್ಕ್ರಿಯತೆಯ ಬೋಧನೆಯಲ್ಲ. ಜೀವನದಿಂದ ಪಲಾಯನ ಸೂತ್ರವೂ ಅಲ್ಲ. ಮನುಷ್ಯ ಜೀವನದಲ್ಲಿ ಸಾಧಿಸಬಹುದಾದ. ಸಾಧಿಸಬೇಕಾದ ಒಂದು ಆದರ್ಶ. ಅದನ್ನೇ ಶ್ರೋತ್ರಿಗಳು ಮಗನನ್ನು ಕಪಿಲೆ ನುಂಗಿದಾಗ. ಸೊಸೆಯು ವಂಶಪ್ರಜ್ಞೆಯನ್ನು ಮರೆತು ಮನೆಯ ಹೊಸ್ತಿಲವನ್ನು ದಾಟಿದಾಗ. ಸುಖದ ಕಲ್ಪನೆಯಲ್ಲಿ ಲಕ್ಷ್ಮಿಯ ಹತ್ತಿರ ಹೋಗಬೇಕೆಂದು ಮನ ಡೋಲಾಯಮಾನವಾಗಿ ಕೊನೆಗೆ ವಿವೇಕವೇ ಗೆದ್ದಾಗ. ಕೊನೆಗೆ ಅವರ ಅತೀ ಹೆಮ್ಮೆಯ ಅಷ್ಟೇ ಏಕೆ ತಮ್ಮ ಜೀವದ ಉಸಿರಾದ ವಂಶಪ್ರಜ್ಞೆಯೂ ಅವರ ಭ್ರಮನಿರಸನಗೊಳಿಸಿದಾಗ ಶಾಂತ ಸಾಗರದಂತೆ ವರ್ತಿಸಿ ದುಃಖಗಳನ್ನೆಲ್ಲ ನುಂಗಿ ನಂಜುಂಡನಾಗಿದ್ದಾರೆ. ಶ್ರೋತ್ರಿಗಳಿಗೆ ದುಃಖವಾಗದೇ ಇಲ್ಲ. ಆದರೆ ಆದರ್ಶವನ್ನುವುದು ಬೇಡಿದೊಡನೆ ಅಂಗೈಯಲ್ಲಿ ಬೀಳುವ ವಸ್ತುವಲ್ಲ. ಶ್ರೋತ್ರಿಗಳು ಅನೇಕ ವರ್ಷಗಳ ಕಾಲ ವೇದ ಉಪನಿಷತ್ತುಗಳನ್ನು ಅಭ್ಯಸಿಸಿ. ವ್ರತ ಆಚರಣೆಗಳನ್ನು ಪಾಲಿಸಿ ಜೀವನವನ್ನು ನಡೆಯಿಸಿದ ಸಂಯಮಿ. ತಾವು ಆ ವಂಶಕ್ಕೆ. ಅಂದರೆ ಪವಿತ್ರವಾದ ಶ್ರೋತ್ರಿಗಳ ವಂಶದ ಕುಡಿಯಲ್ಲವೆಂದು ತಿಳಿದಾಗ. ಅವರಿಗಾದ ದುಃಖ ಅವರನ್ನು ಒಂದು ಕ್ಷಣ ಚಿತ್ತ ಚಲಿತವಾಗುವಂತೆ ಮಾಡಿದರೂ ಕೊನೆಗೆ ಗೆದ್ದದ್ದು ವಿವೇಕವೇ. ತಮ್ಮದಲ್ಲದ ಸಂಪತ್ತನ್ನೆಲ್ಲ ದಾನ ಮಾಡಿ. ಸನ್ಯಾಸವನ್ನು ಸ್ವೀಕರಿಸಿದ ಅವರ ನಿರಾಸಕ್ತ ಮನೋಭಾವನೆ ದಂಗುಬಡಿಸುವಂತಹದು. ಕಾತ್ಯಾಯನಿಯನ್ನು ಮರಣಶಯ್ಯೆಯಲ್ಲಿ ಕಂಡಾಗ ಅವಳು ಮಾಡಿದುದು ತಪ್ಪೆ? ಎಂದು ಒಂದು ಕ್ಷಣ ಯೋಚಿಸಿ. ಚೀನಿಗೆ ಅಂತ್ಯಕ್ರಿಯೆಗಳನ್ನು ಜರುಗಿಸಲು ಹೇಳಿ ಕತ್ತಲಲ್ಲಿ ಕರಗಿ ಹೋಗುತ್ತಾರೆ. ಶ್ರೋತ್ರಿಗಳು ಕಲ್ಲುಗುಂಡಲ್ಲ. ಭಾವನೆಗಳ. ಮಾನವೀಯತೆಯ ಕರುಣೆಗಳ. ಸಂಗಮವಾದ, ಆದರೆ ಬುದ್ಧಿಯ ಸಮತೋಲನವನ್ನು ಕಾಯ್ದುಕೊಳ್ಳುವ ಅಪೂರ್ವ ವ್ಯಕ್ತಿತ್ವ.

ಇತಿಹಾಸ ಸತ್ತವರ ಕಥೆಯಲ್ಲ. ಕೇವಲ ಯುದ್ಧಗಳ ಅಂಕಿ ಸಂಖ್ಯೆಗಳನ್ನು ಕೊಡುವುದಲ್ಲ. ರಕ್ತಪಾತಗಳ ವರ್ಣನೆ ಮಾಡುವುದೂ ಅಲ್ಲ. ಅದು ದೇಶದ ಸಮಗ್ರ

ವಿವೇಚನೆಯನ್ನೊಳಗೊಂಡ ಅವಲೋಕನವೆಂಬರೆ ಸರಿಯಾದೀತು. ಭಾರತದ ಇತಿಹಾಸಕ್ಕೆ ಇರುವ ಭವ್ಯ ಪರಂಪರೆಯನ್ನು ಧರ್ಮದ ಹಿನ್ನೆಲೆಯಲ್ಲಿಯೇ ಕಂಡುಕೊಳ್ಳುವುದು ಅಗತ್ಯವಾಗಿದೆ. ಅಂಥ ಪ್ರಯತ್ನವನ್ನು ಸದಾಶಿವ ರಾಯರ ಪಾತ್ರ ಚಿತ್ರಣದ ಮೂಲಕ ಕಾದಂಬರಿಕಾರರು ಸೂಚಿಸಿದ್ದಾರೆ. ಇತಿಹಾಸವನ್ನು ಹೊಸ ದೃಷ್ಟಿಕೋನದಿಂದ ನೋಡುವ ಪ್ರಯತ್ನವಿದು.

ಕಾಲ ಬದಲಾಗಿದ್ದರೂ ವಿಧವೆಯು ನಮ್ಮ ಸಮಾಜದಲ್ಲಿ ಶಾಪಗ್ರಸ್ತ ಹೆಣ್ಣು. ಬಾಳ ಬಳ್ಳಿಯು ಚಿಗುರಿನಲ್ಲಿಯೇ ಮುರುಟಿದರೂ ಮತ್ತೊಮ್ಮೆ ಬಾಳಲು ಹಕ್ಕನ್ನು ಪಡೆಯದ ದುರ್ದೈವಿ. ವಿಧವಾ ವಿವಾಹ ಸಮಸ್ಯೆಯನ್ನು ಕುರಿತು ಕನ್ನಡದಲ್ಲಿ ಬಂದ ಕಾದಂಬರಿಗಳು ಅನೇಕ. ಬಹುಶಃ ಬಹುಪಾಲು ಸುಖಕರವಾಗಿ ಮುಕ್ತಾಯಗೊಂಡವುಗಳು. ವಂಶವೃಕ್ಷದ ಕಾತ್ಯಾಯಿನಿ ದುರಂತದಲ್ಲಿ ಪರ್ಯವಸಾನಗೊಂಡ ಪಾತ್ರ. ಮರು ಮದುವೆಯಾದ ನಂತರ ಅವಳಲ್ಲಿ ನಡೆದ ಮಾನಸಿಕ ಆಂದೋಳನದ ವಿಶ್ಲೇಷಣೆಯ ರೀತಿಯು ಮಾತ್ರ ತೀರ ಹೊಸತು. ತಾರುಣ್ಯದಲ್ಲಿಯೇ ಗಂಡನನ್ನು ಕಳೆದುಕೊಂಡು, ಮಗುವಿನೊಡನೆ ಮಾವನ ಪ್ರೀತಿಯ ಆಶ್ರಯದಲ್ಲಿ ಬೆಳೆಯುತ್ತಿರುವ ಕಾತ್ಯಾಯಿನಿಯು ಗಂಡನ ಆತ್ಮ ತೃಪ್ತಿಗೆಂದು ಕಾಲೇಜಿಗೆ ಹೋಗುತ್ತಾಳೆ. ಪ್ರಕೃತಿಯ ಕರೆಗೆ ಸೋತು ಪ್ರೊ. ರಾಜಾರಾಯರನ್ನು ಪ್ರೀತಿಸುತ್ತಾಳೆ. ಮಾವ ಶ್ರೋತ್ರಿಯರನ್ನು. ಮಗುವನ್ನು ತೊರೆದು ನೆಚ್ಚಿನ ಪತಿಯೊಡನೆ ಇದ್ದಾಳೆ. ಆದರೆ ಜೀವನದಲ್ಲಿ ಅವಳೆಂದಿಗೂ ಅಸುಖಿ.

ಒಬ್ಬರನ್ನೊಬ್ಬರು ಆಳವಾಗಿ ಪ್ರೀತಿಸಿ ಮದುವೆಯಾದ ಕಾತ್ಯಾಯಿನಿ ಹೊಸತರಲ್ಲಿ ರಾಜಾರಾಯರ ಸಂಗದಲ್ಲಿ ಸುಖಿ. ಪೃಥ್ವಿಯನ್ನು ಕಂಡಾಗ ತನ್ನ ಮಗು ಚೀನಿಯದೆ ನೆನಪು. ಜೊತೆಗೆ ಮಾವನವರ ಭವ್ಯ ವ್ಯಕ್ತಿತ್ವದ ಅರಿವು. ಕಾತ್ಯಾಯಿನಿಗೆ ಮಗುವಿನ ಮೇಲಿದ್ದುದು ಭಾವನಾತ್ಮಕ ಸಂಬಂಧ. ಕರುಳಿನ ಕುಡಿಯನ್ನು ಬಿಟ್ಟಿರಲಾರದ ಕೊರಗು ಅದು. ಮಗುವನ್ನು ಕೊಂಡೊಯ್ಯಲು ಭಾಷಣವನ್ನು ಸಿದ್ಧಪಡಿಸಿಕೊಂಡು ಬಂದ ಕಾತ್ಯಾಯಿನಿಯ ಮಾತುಗಳು ಶ್ರೋತ್ರಿಗಳ ವಿಚಾರಧಾರೆಯನ್ನು ಕೇಳಿ ಗಂಟಲಲ್ಲಿಯೇ ಉಳಿಯುತ್ತದೆ. ಅವಳ ದುರಂತಕ್ಕೆ ನಾಂದಿ ಇಲ್ಲಿಂದಲೇ. ತನ್ನದಾಗಬಹುದಾಗಿದ್ದ ಎರಡೂ ಮಕ್ಕಳೂ ಅವಳ ದುಃಖವನ್ನು ದ್ವಿಗುಣಗೊಳಿಸುತ್ತವೆ. ತಾನು ಮತ್ತೊಂದು ಸಲ ಮದುವೆಯಾಗಿ ಧರ್ಮದಿಂದ ಚ್ಯುತಳಾದೆ ಎನ್ನುವ ಪಾಪದ ಪ್ರಜ್ಞೆಯೇ ಗರ್ಭಪಾತಕ್ಕೆ ಕಾರಣವಾಗುತ್ತದೆ. ಮಗು ತಂದೆಯದೂ ಅಲ್ಲ ತಾಯಿಯದೂ ಅಲ್ಲ ಅದು ವಂಶದ ಆಸ್ತಿ ಎಂದು ಮಾವನವರು ವಿವರಿಸಿದಾಗ ತಾನು ಆ ವಂಶವೃಕ್ಷದಿಂದ ಸಿಡಿದು ನಿಂತುದು ತಪ್ಪು ಎಂದು ಪಶ್ಚಾತ್ತಾಪ ಪಡುತ್ತಾಳೆ. ಚೀನಿಯನ್ನು ಕಾಲೇಜಿನಲ್ಲಿ ಕಂಡು ಅತನು ಅವಳ ಪ್ರೀತಿಯನ್ನು ತಿರಸ್ಕರಿಸಿದಾಗಂತೂ ಅವಳು ಹೃದ್ರೋಗಿಯೇ ಆಗುತ್ತಾಳೆ. ಮರೆಯಲೆತ್ನಿಸಿದಷ್ಟೂ ಹೆಚ್ಚಾಗಿ ಪುಟಿಯುವ ಯೋಚನೆಗಳು ಅವಳನ್ನು ಅಧೀರಳನ್ನಾಗಿ ಮಾಡುತ್ತದೆ. ಅವಳಲ್ಲಿ ಉಂಟಾದ ದ್ವಂದ್ವ ಮರಣದಲ್ಲಿಯೇ ಮುಕ್ತಾಯಗೊಳ್ಳುತ್ತದೆ.

ರಾಜಾರಾಮಮೋಹನರಾಯರಂಥ ಮಹಾನುಭಾವರ ಸುಧಾರಣೆಯ ಫಲವಾಗಿ ವಿಧವಾವಿವಾಹಕ್ಕೆ ಪ್ರೋತ್ಸಾಹ ಸಿಕ್ಕಿದುದೇನೋ ಸರಿ. ಮದುವೆಯಾದ ನಂತರ ತಾನು ಬೆಳೆದ ಧಾರ್ಮಿಕ ಆವರಣದ ಕಕ್ಷೆಯನ್ನು ದಾಟಲು ಭಾವನಾಮಯಿ ಹೆಣ್ಣು ಸಮರ್ಥಳಾಗುತ್ತಾಳೆಯೆ? ಎಂಬುದರ ವಿಶ್ಲೇಷಣೆಯು ಕಾತ್ಯಾಯಿನಿಯ ಪಾತ್ರ ಚಿತ್ರಣದಲ್ಲಿ ಕಂಡು ಬರುತ್ತದೆ. ವಂಶಪ್ರಜ್ಞೆಯು ಭಾರತೀಯ ಸಮಾಜದ ವೈಶಿಷ್ಟ್ಯವಾಗಿದೆ. ಪಾಶ್ಚಾತ್ಯರಲ್ಲಾದರೆ ಅದು ಇಲ್ಲವೇ ಇಲ್ಲ ಎಂದರೂ ನಡೆದೀತು. ಮರು ಮದುವೆ, ವಿವಾಹ ವಿಚ್ಛೇದ ಅವರಿಗೆ ನೀರು ಕುಡಿದಷ್ಟು ಸುಲಭವಾಗಿರುವಾಗ ಒಂದೇ ತಾಯಿಯ ಮೂರು ಜನ ಮಕ್ಕಳು ಬೇರೆ ತಂದೆಯರಿಂದ ಜನಿಸಿದರೆ ಅವರ ವಂಶವನ್ನು ಹೇಳುವುದಾದರೂ ಹೇಗೆ? ಕಾತ್ಯಾಯಿನಿಗೆ ಮಾತ್ರ ಆ ವಂಶವೃಕ್ಷದ ಸಂಬಂಧವನ್ನು ಕಡಿದುಕೊಳ್ಳುವುದು ಸಾಧ್ಯವಾಗಲೇ ಇಲ್ಲ.

ಹಿಂದೂಧರ್ಮವು ಅನೇಕ ನಂಬುಗೆಗಳನ್ನೊಳಗೊಂಡ ಧರ್ಮವಾಗಿದೆ. ಪುನರ್ ಜನ್ಮ ಅವುಗಳಲ್ಲಿ ಒಂದು. ನಮ್ಮ ಈ ಜನ್ಮದ ಕಷ್ಟ ಸುಖಗಳಿಗೆ ಹಿಂದಿನ ಜನ್ಮದ ಪಾಪ ಪುಣ್ಯಗಳೇ ಕಾರಣ ಎಂಬುದನ್ನು ಧರ್ಮಬೀರುಗಳಾದ ಹಿಂದುಗಳು ನಂಬುತ್ತಾರೆ. ಅದು ನಂಬಿಕೆಯ ವಿಷಯವಾದರೂ ಬ್ಯಾನರ್ಜಿ ಮುಂತಾದ ವಿದ್ವಾಂಸರು ಸಂಶೋಧನೆಗಳನ್ನು ನಡೆಯಿಸಿ ಪುನರ್ಜನ್ಮ ಉಂಟು ಎಂದು ಪ್ರಮಾಣಿಸಿದ್ದಾರೆ. ದೇಹ ಬಿಟ್ಟ ಆತ್ಮ ಎಲ್ಲಿ ಹೋಗುತ್ತದೆ ಎಂಬುದನ್ನು ಯಾರೂ ನೋಡಿಲ್ಲ. ಆತ್ಮ ಅಮರ. ಅದಕ್ಕೆ ಸಾವು ಇಲ್ಲ. ನಾಶವಾಗುವುದು ದೇಹವೊಂದೇ. ಜೀರ್ಣವಾದ ಅಂಗಿಯನ್ನು ಕಳಚಿ ಹೊಸ ಅಂಗಿಯನ್ನು ಧರಿಸುವಂತೆ ಆತ್ಮನು ದೇಹ ತೊರೆದು ಹೊಸ ಜನ್ಮವೆಂದು ನಾವು ಹೇಳುವುದನ್ನು ಪಡೆಯುತ್ತಾನೆ. ಈ ನಂಬಿಕೆಯ ಪುಷ್ಟೀಕರಣವೇ 'ನಾಯಿ ನೆರಳು'.

ಮೂರು ತಲೆಮಾರುಗಳಂತೆ ಇಲ್ಲಿ ಮೂರು ಜನ್ಮಗಳ ಕಥೆ ಬರುತ್ತದೆ. ಗಂಗಾಪುರ ಗ್ರಾಮದ ತಿರುಮಲ ಜೋಯಿಸರ ಕಿರಿಯ ಮಗ ಕ್ಷೇತ್ರಪಾಲ. ಚಿಕ್ಕ ಹುಡುಗನಾಗಿದ್ದಾಗಲೇ ತನಗೆ ಮದುವೆಯಾಗಿದೆ. ಹೆಂಡತಿಯ ಹೆಸರು ವೆಂಕಮ್ಮ ಎಂದು ಹೇಳಿದ ಮಾತನ್ನು ಕೇಳಿ ನಕ್ಕು ಇದು ಭೂತ ಪಿಶಾಚಿಗಳ ಕಾಟವೆಂದು ಮನೆಯವರು ಬರೆ ಹಾಕಿಸುತ್ತಾರೆ. ಅದರಿಂದ ಯಾವ ಪ್ರಯೋಜನವಿಲ್ಲ. ನಂತರ ಒಂದು ದಿನ ಅಚ್ಚಣ್ಣಯ್ಯ ನಂಜಕ್ಕಯ್ಯರು ಬಂದು ಆತನು ಗಯೆಯಲ್ಲಿ ಮುಳುಗಿ ಹೋದ ತಮ್ಮ ಮಗ ವಿಶ್ವೇಶ್ವರನೇ ಕ್ಷೇತ್ರಪಾಲನಾಗಿ ಜನಿಸಿದ್ದಾನೆಂಬುದನ್ನು ಖಾತ್ರಿ ಮಾಡಿಕೊಂಡು ಕರೆದೊಯ್ಯುತ್ತಾರೆ. ವಿಧವೆ ವೆಂಕಮ್ಮ ಸಧವೆಯಾಗಿ ಅನಂತನೆಂಬ ಮಗುವಿಗೆ ಜನ್ಮ ಕೊಡುತ್ತಾಳೆ. ಮೊದಲಿನ ಮಗ ಅಚ್ಯುತ ಬೆಂಗಳೂರಿನ ಕಾಲೇಜಿನಲ್ಲಿ ವಿಜ್ಞಾನವನ್ನು ಓದುತ್ತಿದ್ದವನು ಹೆಚ್ಚು ಕಡಿಮೆ ತನ್ನ ವಯಸ್ಸಿನ ಕ್ಷೇತ್ರಪಾಲನನ್ನು ತನ್ನ ತಂದೆಯೆಂದು ಹೇಗೆ ಒಪ್ಪಿಕೊಂಡಾನು? ಕೋರ್ಟಿನಲ್ಲಿ ಕೇಸು ಹಾಕಿ ಮೋಸದ ಆಪಾದನೆಯ ಮೇಲೆ ಏಳು ವರ್ಷ ಕಠಿಣ ಸಜವಾಗುವಂತೆ ಮಾಡುತ್ತಾನೆ. ಮನೆಯಲ್ಲಿ ಎಲ್ಲರಿಗೂ ದುಃಖ. ಅಚ್ಚಣ್ಣಯ್ಯನಿಗೆ

ತನ್ನ ಮಗು ವಿಶ್ವೇಶ್ವರನ ಜನನ ನೆನಪಿನ ಪರದೆಯ ಮೇಲೆ ಮೂಡುತ್ತದೆ. ವಿಶ್ವೇಶ್ವರ ಬನಾರಸಿನ ಕಡೆಯಿಂದ ಬಂದ ಸಾಧುವೊಬ್ಬನ ಕೃಪೆಯಿಂದ ಜನಿಸಿದ ಮಗು. ಆದರೆ ಉಪಕಾರಕ್ಕೆ ಪ್ರತಿಯಾಗಿ ಅಚ್ಚಣ್ಣಯ್ಯ ಸಾಧುವಿನ ಬಂಗಾರದ ನಾಣ್ಯಗಳನ್ನು ಕದಿಯುತ್ತಾನೆ. ಕಾಶಿಯಲ್ಲಿ ಸಾಲ ತೀರಿಸಲು ಹೋದ ಸನ್ಯಾಸಿ ಮೋಸವಾದುದನ್ನು ಕಂಡು ಅಲ್ಲಿಯೇ ಪ್ರಾಣ ತೊರೆಯುತ್ತಾನೆ. ನಂತರ ಅಚ್ಚಣ್ಣಯ್ಯನ ಮನೆಯಲ್ಲಿ ವಿಶ್ವೇಶ್ವರನಾಗಿ ಜನನ. ಸೇಠನ ಋಣ ಸಂದಾಯವಾದ ನಂತರವೇ ಹೊಳೆಯಲ್ಲಿ ಬಿದ್ದು ಮರಣ. ವೈಜ್ಞಾನಿಕ ದೃಷ್ಟಿಯಿಂದ ಇದೆಲ್ಲವನ್ನು ವಿಶ್ಲೇಷಿಸಲು ಪ್ರಯತ್ನಿಸುವ ಅಚ್ಯುತನಿಗೆ ಇದೆಲ್ಲ ಅಚ್ಚರಿ. 'ಉಂಟು' ಎನ್ನುವ ಶ್ರದ್ಧೆಯು ಬಲು ಮುಖ್ಯವಾದುದು. ಹೇಗೇಕೆ, ಇದು ಸಾಧ್ಯವೆ? ಎನ್ನುವ ಪ್ರಶ್ನೆಗಳಿಗೆ ಇಲ್ಲಿ ಉತ್ತರವಿಲ್ಲ. ನಮ್ಮ ತರ್ಕಕ್ಕೆ ನಿಲುಕದುದು ಇಲ್ಲ ಎಂದು ವಾದ ಮಾಡುವುದೂ ಸರಿಯಲ್ಲ.

ಸಾಹಿತ್ಯದ ಉದ್ದೇಶವೇನು? ಎಂಬ ಚರ್ಚೆಯು ಅನಿರ್ಣೀತವಾಗಿಯೇ ಉಳಿದು ಬಂದರೂ ಆನಂದವನ್ನು ಕೊಡುವುದೇ ಅದರ ಪರಮ ಉದ್ದೇಶವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಸಾಹಿತ್ಯವು ಸಮಾಜಕ್ಕಾಗಿ ಅದರ ಓರೆಕೋರೆಗಳನ್ನು ತಿದ್ದುವುದಕ್ಕಾಗಿ ಎಂಬುದನ್ನು ಬರ್ನಾಡ ಶಾ ನಂತಹ ಶ್ರೇಷ್ಠ ಬರೆಹಗಾರರು ಬಹಿರಂಗವಾಗಿ ಸಾರಿದಾಗ ಅದಕ್ಕೆ ಹೊಸ ಸ್ವರೂಪ ಬಂದುದು ನಿಜ. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪರಿಣಾಮವಾಗಿ ಕಾದಂಬರಿ ಸಾಹಿತ್ಯದಲ್ಲಿ ಕ್ರಾಂತಿಕಾರಕ ಬದಲಾವಣೆಯು ತೋರಿ ಬಂದಿತು. ಬಹುರೂಪಿ ಸಮಾಜದ ಚಿತ್ರಣ ಈ ಸಾಹಿತಿಗಳ ಗುರಿಯಾಯಿತು. ನಂತರದ ವಿಶೇಷ ಬರಹಗಾರರು ಕಾರಂತರನ್ನುಳಿದರೆ ಚರ್ವಿತಚರ್ವಣವಾದ ಪ್ರೇಮವನ್ನು ಕುರಿತೇ ಬರೆದರು. ಓದಿನ ಆಳವಾದ ಭಾರತೀಯ ಜೀವನದ ಸತ್ವಯುತ ಅನುಭವದ ಅಭಾವವೇ ಇದಕ್ಕೆ ಕಾರಣವಿದ್ದರೂ ಇರಬಹುದು. ಭೈರಪ್ಪನವರು ಹೊಸ ಹಾದಿಯನ್ನು ತುಳಿದರು. ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಅತ್ಯಂತ ಪ್ರಭಾವಪೂರ್ಣವಾಗಿ ಪ್ರತಿಬಿಂಬಿಸಿದುದೇ ಅವರನ್ನು ಈ ದಶಕದ ಶ್ರೇಷ್ಠ ಕಾದಂಬರಿಕಾರರೆಂದು ಕರೆಯಲು ಕಾರಣ.

# ನೃತ್ತ

ಸುಧಾ ಹಾವನೂರ

ಇಂದು ಅವನಿಗೆ ಹೇಳಲೇಬೇಕು. ನಾನು ಹೋಗುವೆ ಎಂದು. ಆದಷ್ಟು ಬೇಗ ಇಲ್ಲಿಂದ ದೂರ...ದೂರ ಹೋಗಲೇಬೇಕು. ಎನ್ನುತ್ತೇನೆ. ಆದರೆ ಯಾವುದೋ ಎಳೆಯೊಂದನ್ನು ಹೃದಯದಿಂದ ಕಿತ್ತ ಅನುಭವ. ಅವನಿಗಾಗಿ ನನ್ನ ಹೃದಯದಲ್ಲಿ ಇನ್ನೂ ಸ್ಥಾನವಿದೆಯೋ ಎಂದು ಸಂಶಯ ಬಂದಂತಾಗಿ. ನನ್ನ ಮೇಲೆ ನನಗೇ ಜಿಗುಪ್ಸೆ ಯಾಗುವಂತಾಗುತ್ತದೆ. ಅವನು ನನ್ನಿಂದ ಅಷ್ಟೊಂದು ದೂರ ದೂರ ಸರಿಯುವಾಗಲೂ ನನ್ನ ಮನದಲ್ಲಿನ್ನೂ ಅವನ ಬಗ್ಗೆ ಆದರವೇ?

ಅವನಿಗೆ ಹೇಳುತ್ತೇನೆ "ಅಕ್ಕನಿಗೆ ಈಗ ಹುಷಾರಾಗಿದೆ..."

"ಹೌದು. ನನಗೂ ಹಾಗೇ ಎನ್ನಿಸುತ್ತದೆ. ಈ ಸ್ಥಿತಿಗೆ ಬರೋದಕ್ಕೆ ಎಷ್ಟು ಕಷ್ಟ ಆಯಿತಲ್ಲವೇ?"

" ಹೌದು..."

"ನನಗಂತೂ ನಂಬಿಕೆಯೇ ಇರಲಿಲ್ಲ. ಆಕೆ ಬದುಕಿ ಉಳಿಯುತ್ತಾಳೆ ಎಂದು. ಇನ್ನೂ ಪೂರ್ತಿ ಹುಷಾರಾಗಿಲ್ಲ .. ನಿನ್ನ ಆರೈಕೆಯಲ್ಲಿದ್ದರೆ, ಆಕೆ ಚೇತರಿಸಿಕೊಳ್ಳದೆ ಏನು?"

"ಆದರೆ"...

"ಆದರೆ ಏನು?"

"ನಾನು ಊರಿಗೆ ಹೋಗಬೇಕು."

"ಇನ್ನೂ ಅವಳು ಪೂರ್ತಿ ಚೇತರಿಸಿಕೊಂಡಿಲ್ಲ. ಎರಡು ದಿನಗಳ ಹಿಂದೆಯಷ್ಟೇ ಮೈಯಲ್ಲಿ ಮತ್ತೆ ಜ್ವರ ಇತ್ತು...ಈಗಲೇ ನೀನೂ ಹೋಗಿ ಬಿಟ್ಟರೆ? ನಾನೊಬ್ಬನೇ ಹೇಗೆ ನಿಭಾಯಿಸಲಿ?...ನಿನ್ನ ಬಿಟ್ಟು ಇರೋದಕ್ಕೂ ಅವಳು ಒಪ್ಪುವಳೆ?"

ಅವನ ಹಣೆಯ ಮೇಲೆ ಚಿಂತೆಯ ಗೆರೆಗಳು...ನನಗೆ ಆನಂದವಾಗುತ್ತದೆ. ಹೀಗೆ ಕಾಡಿಸಬೇಕು.

"ಆದರೆ, ನನಗೆ ನೌಕರಿ ಆರ್ಡರ್ ಬಂದಿದೆ. ನಾಡಿದ್ದೇ ಕೆಲಸಕ್ಕೆ ಹಾಜರಾಗಬೇಕು."

"ನೌಕರಿ? ಹೇಳೇ ಇರಲಿಲ್ಲ?"

ಅವನಿಗೆ ಆಶ್ಚರ್ಯವಾಗಿರಬಹುದು. ಇಲ್ಲಿಯೇ ಠಿಕಾಣಾ ಊರಬೇಕಿತ್ತೇ? ಇವನ ಹೆಂಡತಿಯ ಸೇವೆ. ಇವನ ಸೇವೆ...ಹೂಂ...

"ಹೌದು ಕಾಲೇಜಿನಲ್ಲಿ ಲೆಕ್ಚರರ್. ಕೈತುಂಬಾ ಸಂಬಳವೂ ಸಿಕ್ಕುತ್ತದೆ."

"ಅದೆಲ್ಲ ಸರಿ…ಆದರೆ ನೌಕರಿ ಯಾಕೆ ಮಾಡಬೇಕು ನೀನು? ಇಲ್ಲಿ ನಿನಗೇನು ತೊಂದರೆಯಾಗಿದೆ? ಬೇಕಿದ್ದರೆ ಇಲ್ಲಿಯೇ ಯಾವುದಾದರೂ ಕಾಲೇಜಿಗೆ ಪ್ರಯತ್ನ ಮಾಡೋಣ…ಸುಮ್ಮನೆ ದೂರದ ಊರಿಗೆ ಏಕೆ ಹೋಗ್ತೀಯಾ?"

"ಈ ಊರು ಬೇಡ…ನನಗೆ ಬೇಜಾರು. ದೂರವಿದ್ದರೇನು. ಬೇಕೆಂದರೆ ಭೇಟಿ ಯಾಗಬಹುದಲ್ಲ?"

"ಯಾಕೆ ಬೇಡ ಈ ಊರು? ನಮ್ಮನೆಯಲ್ಲಿರೋದು ಬೇಜಾರೇ ನಿನಗೆ?… ನಿನ್ನದೇ ಮನೆಯಿದ್ದಂತೆ..ನಿನ್ನನ್ನು ಇಲ್ಲಿ ಯಾರು ತಡೆಯುವವರಿದ್ದಾರೆ?.. ಹೇಗೆ ಬೇಕಾ ದರೂ ಇರಬಹುದು…ಈಗೇನೋ ನಿನ್ನಿಂದ ತೊಂದರೆಯಾಗ್ತಿದೆ ನಿಜ.…ಆದರೆ ನಿನ್ನ ಬಿಟ್ಟು ಯಾರಿದಾರೆ? ನೀನು ನಮ್ಮವಳಲ್ಲವೆ?"

ನನಗೆ ಮನದಲ್ಲಿ ನೂರಾರು ಸೂಜಿಗಳಿಂದ ಚುಚ್ಚಿದಂತಾಗುತ್ತದೆ. ಅವನ ಪ್ರತಿ ಯೊಂದು ಮಾತೂ ಮುಳ್ಳಿನಂತಾಗುತ್ತದೆ.

"ನಿನ್ನದೇ ಮನೆಯಿದ್ದಂತೆ" ಆದರೆ "ನಿನ್ನದೇ ಮನೆಯಲ್ಲ"…ನಿನಗಾಗಿ ಎಲ್ಲವೂ ನಿನ್ನ ಸಂತೋಷಕ್ಕಾಗಿ ನಾನೇಕೆ ಇರಬೇಕು? ನಾನೇಕೆ ಹಗಲು–ರಾತ್ರಿ ಚಿಂತೆಯ ಚಿತೆಯಲ್ಲಿ ಬೇಯಬೇಕು? ಅದರ ಅರಿವೂ ನಿನಗಿಲ್ಲ ಅಲ್ಲವೆ? 'ನೀನು ನಮ್ಮವಳು'! 'ನನ್ನವಳು' ಎಂದು ಹೇಳುವ ಧೈರ್ಯವೂ ನಿನಗಿಲ್ಲ. 'ನಿಮ್ಮವಳು' ನಿಮ್ಮೆಲ್ಲರ ಸಂತೋಷಕ್ಕಾಗಿ ಹುಟ್ಟಿ ಬಂದವಳಲ್ಲವೆ?? ಎಂದು ಕೇಳಬೇಕೆನ್ನಿಸುತ್ತದೆ. ಆದರೂ ನನ್ನ ಮನದಲ್ಲಿ ಕುದಿಯುತ್ತಿರುವ ಭಾವನೆಗಳನ್ನೆಲ್ಲಾ ಎಳೆದು ಒಂದುಗೂಡಿಸಿ ಹಿಡಿದೆ ತರುವುದಕ್ಕೆ ಪ್ರಯ ತ್ನಿಸುತ್ತೇನೆ.

"ಏನು ವಿಚಾರ ಮಾಡ್ತೀಯ? ಬೇರೆ ಊರಿಗೂ ಹೋಗಬೇಡ, ಬೇರೆ ನೌಕರಿ ಯನ್ನೂ ಹುಡುಕುವುದು ಬೇಡ…ನಮ್ಮನೇಲೇ ಇದ್ದುಬಿಡು. ಸಂಬಳ ಎಷ್ಟು ಬೇಕಾ ದರೂ ನಾನೇ ಕೊಡ್ತೀನಿ…ಆಯ್ತೇ?"

ಆತ ನನ್ನ ನಗಿಸಬೇಕೆಂದು ಮಾಡಿದ ಪ್ರಯತ್ನವೆಲ್ಲ ನಿಷ್ಫಲವಾಗುತ್ತದೆ. ನಾನು ನನ್ನ ಗಾಂಭೀರ್ಯಕ್ಕೆ ಅಂಟಿಕೊಳ್ಳುತ್ತೇನೆ. ಆತನ ಮಾತಿಗೆ ನಾನು ನಗದೆ ಹೋದಾ ಗಲೂ ಆತ ಸೋಲೊಪ್ಪದೆ.

ಏನು ವಿಚಾರ ಮಾಡ್ತೀಯ? ಸೀರಿಯಸ್ಸಾಗಿ ವಿಚಾರ ಮಾಡುವಾಗ ತುಂಬಾ Smart ಕಾಣ್ತೀಯ. ನಿಮ್ಮಕ್ಕನಿಗೂ ನಿನಗೂ ಇದೇ ಒಂದು ಅಂತರ. ನೀನು ಪ್ರತಿಯೊಂದನ್ನೂ ತುಂಬಾ ಸೀರಿಯಸ್ ತೆಗೆದುಕೊಳ್ತೀಯ. ಆಕೆ ಪ್ರತಿಯೊಂದನ್ನೂ ತುಂಬ ಹಗುರವಾಗಿ…ಅದೇಕೆ ಇಬ್ಬರಲ್ಲೂ ಅಷ್ಟೊಂದು ಅಂತರ?".

ಮಾತು ಮರೆಯಿಸುವ ಯತ್ನ!…ಹೀಗೆಲ್ಲ ನಿನ್ನ ಬಳಿಗೆ ಬೀಳುವವಳಲ್ಲ ನಾನು. ನಮ್ಮಿಬ್ಬರಲ್ಲೂ ಅಂತರವಿರುವುದು ಕೇವಲ ಒಂದೇ. ನಾನು ನಿನಗೆ ಪರಕೀಯಳು, ಆಕೆ ಮದುವೆಯಾದ ಹೆಂಡತಿ. ಅವಳ ಮೇಲೆ ನಿನಗೆ ಪ್ರೀತಿಯಿದ್ದರೆ. ನನ್ನ ಮೇಲೆ ಅಧಿ

ಕಾರವಿದೆ..."ಇನ್ನೂ ಅವಳ ಆರೋಗ್ಯ ಸರಿ ಹೋಗುವವರೆಗೂ ಇರು" ಎನ್ನುವ ಅಧಿಕಾರ. "ಇದು ನಿನ್ನ ಮಿತಿ ಮೀರಿದ ಸ್ವಾರ್ಥವಲ್ಲವೆ?"

"ಏಯ್ ಹುಡುಗಿ. ಏಕೆ...ನನ್ನ ಮೇಲೆ ಕೋಪವೇ?"

"ಇಲ್ಲಪ್ಪ. ಯಾರ ಮೇಲೂ ಕೋಪವಿಲ್ಲ. ಯಾರ ಮೇಲೆ ಮಾಡಲಿ? ನನಗೆ ಯಾರ ಮೇಲೆ ಅಧಿಕಾರವಿದೆ? ಅವರೆ ನನ್ನ ಮೇಲೆ ನನ್ನ ಅಧಿಕಾರವಿರಲೇಬೇಕಲ್ಲವೆ? ಇನ್ನೆರಡು ದಿನಗಳಿಗೆ ಹೋಗಲೇಬೇಕು."

"ಗೀತಾ. ನೌಕರಿಯ ಅಗತ್ಯವೇನಿದೆ? ಅತ್ತೆ ನೀನು ನೌಕರಿ ಮಾಡುವುದಕ್ಕೆ ಒಪ್ಪುವರೆ? ಸುಮ್ಮನೆ ಇಲ್ಲ ಸಲ್ಲದ ಯೋಚನೆ."

"ಅಮ್ಮನನ್ನು ನಾನು ಎಂದೋ ಒಪ್ಪಿಸಿದ್ದೇನೆ. ನನ್ನ ಮನಸ್ಸಿನ ಸಮಾಧಾನಕ್ಕಾಗಿ ನನಗೆ ನೌಕರಿ ಬೇಕಾಗಿದೆ. ನೀವು ಅರಿಯಲಾರಿರಿ."

ನಾನು ಎಷ್ಟೇ ಪ್ರಯತ್ನ ಮಾಡಿದರೂ "ಅರಿಯಲಾರಿರಿ" ಎಂದು ಹೇಳಿ ದುಡುಕಿದೆನೇನೋ ಎಂದೆನಿಸುತ್ತದೆ.

"ಗೀತಾ. ನಿನಗಿಲ್ಲಿ ಮನಸ್ಸಿಗೆ ಸಮಾಧಾನವಿಲ್ಲವೆ? ನಿನ್ನಕ್ಕ ನಿನ್ನನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸ್ತಾಳೆ. ನಿನ್ನ ಬಿಟ್ಟು ಕ್ಷಣಕಾಲ ಕೂಡ ಇರಲಾರಳು...ಅತ್ತೆಯೂ ಇಲ್ಲಿಗೇ ಬರ್ತಾರೆ. ಇನ್ನೆರಡು ದಿನಗಳಲ್ಲಿ ಕೆಲಸದ ಭಾರವೂ ಕಡಿಮೆಯಾಗುತ್ತದೆ. ಸಮಾಧಾನ ಎಂದರೇನು? ನಿನ್ನ ಮನಸ್ಸನ್ನು ಯಾರಾದರೂ ಕೆಣಕುವಂತಿದ್ದರೆ ಆ ಭಾವನೆ ಬರಬೇಕು ನಿನಗೆ."

ನಿನ್ನ ಹೆಂಡತಿಯ ಮನಸ್ಸಿನ ಸಂತೋಷದಲ್ಲಿ ನನ್ನ ಸಮಾಧಾನ ಕಾಣಲೇ ನಾನು? ಭೇಷ್...ಇದ್ದರೆ ಹೀಗಿರಬೇಕು, ನನ್ನ ಶಾಂತಿ–ಸಮಾಧಾನಗಳನ್ನು ತನ್ನ ಹೆಂಡತಿಯ ಸುಖ–ಸಂತೋಷಗಳಿಂದ ಅಳತೆ ಮಾಡುವ ಭೂಪ! "ನಿನ್ನ ಮುಖ ನೋಡುತ್ತ ಕ್ಷಣ ಕಾಲವೂ ಇಲ್ಲಿರಲಾರೆ."

"ಏಕೆ ಗೀತಾ. ಸುಮ್ಮನಾದೆ? ನಾನು 'ಬೇಡ' ಎಂದುದಕ್ಕೆ ಕೆಡುಕೆನ್ನಿಸಿತೆ? ನನ್ನಿಂದ ಸುಮ್ಮನೆ ತೊಂದರೆ ಯಾಕೆ? ಹೋಗಲೇ ಬೇಕು ಎಂದಿದ್ದರೆ ಹೋಗು."

ಪಾಪ! ನನ್ನ ತೊಂದರೆಯ ಲೆಕ್ಕವೇ ನಿನಗೆ? ನೀನೇನಾದರೂ ನನ್ನ ತೊಂದರೆಯನ್ನು ಲೆಕ್ಕಕ್ಕೆ ತರುವಂತಿದ್ದರೆ. ಎಷ್ಟು ಸುಖಿಯಾಗುತ್ತಿದ್ದೆ ನಾನು. ಒಮ್ಮೆಯಾದರೂ ಯೋಚಿಸಿದೆಯಾ ನನ್ನ ತೊಂದರೆಯ ಬಗೆಗೆ? ನನ್ನ ಮೇಲೆ ನಿನಗೆ ಅಷ್ಟೊಂದು ಸಹಾನುಭೂತಿಯೇ ಇದ್ದುದಾದರೆ. ನನಗೆ ಇಲ್ಲಿ ಪರಕೀಯಳಾಗುವ ಪ್ರಸಂಗವೇ ಬರುತ್ತಿರಲಿಲ್ಲವೇನೋ...ನೀನು ಇಂದು ನನ್ನ ಮುಂದೆ ನಿನ್ನ ಸಾವಿರ ತೊಂದರೆ ಹೇಳು. ನೂರೆಂಟು ಬೂಟಾಟಿಕೆ ಬಡಿದರೂ ನಾನು ನಂಬುವ ಸ್ಥಿತಿಯಲ್ಲಿಲ್ಲ. Please ಸುಮ್ಮನಿರು.

ಅಕ್ಕನಿಗೆ ನಿನ್ನ ಬಗ್ಗೆ ಕಾಲೇಜಿನಿಂದ ಬಂದ ಕೂಡಲೇ ಎಷ್ಟು ಆತುರದಿಂದ ಸುದ್ದಿ ಹೇಳುತ್ತಿದ್ದೆ, ನಿಮ್ಮ ಮದುವೆಗೆ ಮೊದಲು. ಅಂದು ಆಕೆ ನಿನ್ನನ್ನು ನೋಡ ಬಯಸಿದಳು. ನನ್ನ ಕರೆದೊಯ್ದು. ಅದರೆ ನನಗೆಲ್ಲಿಯ ಅರಿವಿತ್ತು. ನೀವು 'ಮೊದಲ ನೋಟ

ದಲ್ಲೇ ಪ್ರೀತಿ ಎಂದು. ಹದಿನೈದೇ ದಿನಗಳಲ್ಲಿ ನಾನು ಎಷ್ಟೋ ದಿನಗಳಿಂದ ಯಾರಿಗೂ ಹೇಳದೆ. ಮನಸಲ್ಲಿ ಕಟ್ಟಿದ ಆ ಸುಂದರವಾದ ಮರಳಮನೆಗೆ ಕಾಲು ತೂರಿಸಿ. ಮುರಿದು ಹಾಕಿ—ಮದುವೆ ಮಾಡಿಕೊಳ್ಳುವಿರಿ ಎಂದು. ಅಂದು ನನ್ನ ಹೃದಯದ ಮೇಲೆ ಉಂಟಾದ ಪರಿಣಾಮ ನೀನರಿಯಲಾರೆ...ನನಗೆ ಈಗ ಎನ್ನಿಸುತ್ತಿದೆ. ನಾನು ಒಂದು ವೇಳೆ ನಿನಗೆ ನನ್ನ ಹೃದಯವನ್ನೆಲ್ಲ ಬಿಚ್ಚಿ ಹೇಳಿದ್ದರೆ. ಏನಾಗುತ್ತಿತ್ತು? ಎಂದು. ನೀನು ನಿರಾಕರಿಸಿದ್ದರೆ? ಹುಚ್ಚಿಯಾಗುತ್ತಿದ್ದೆ...ಅದು ನಿನಗೆ ತಿಳಿದೇ ಇಲ್ಲ. ಅಲ್ಲವೇ?

ಮೋಹನ್. ನೀನು ಮಾನಸಶಾಸ್ತ್ರದ ಪ್ರಾಧ್ಯಾಪಕನಲ್ಲವೆ? ಆದರೂ ನನ್ನ ಮನದ ತುಮುಲ ನಿನಗರ್ಥವಾಗದು! ಅರಿಯುವ ಶಕ್ತಿ ನಿನಗಿಲ್ಲವೆನ್ನಲೆ? ಛೀ! ಹಾಗಿರಲಾರದು, ನಿನಗೆ ಬೇರೆಯವರ ಹೃದಯ ಅರಿಯಲು ಪುರಸತ್ತೆಲ್ಲಿದೆ? ಎಲ್ಲವೂ ನಿನಗೆ—ನಿನ್ನ ಸೀತಳಿಗಾಗಿಯೇ ಇದೆ,—ನಿನ್ನ ಜೀವನ—ಈ ಜಗತ್ತು ಎಲ್ಲವೂ. ಈ ಗೀತ ಎನ್ನುವ ಬಡ ಪ್ರಾಣಿಯೂ ಕೂಡ ಅವಳಿಗಾಗಿಯೇ ಇದೆ...ಅಲ್ಲವೆ?

ನಾನು ಇನ್ನು ಇಲ್ಲಿ ಹೆಚ್ಚು ದಿನ ಇದ್ದರೆ, ನಿನ್ನ ಈ ಸ್ವಾರ್ಥವನ್ನು ನೋಡಿ ನನ್ನೆದೆಯ ತಳಮಳವೆಲ್ಲ ಹೊರಬರುವುದೋ ಎನ್ನುವುದೊಂದೇ ಚಿಂತೆ ನನಗೆ! ಅಕ್ಕ ನನ್ನ ಮನ ಬಿದಕಿದರೆ? ಆಕೆಗೆ ತಿಳಿದರೆ. ನನ್ನ ಮುಖ ಕೂಡ ನೋಡಲಾರಳು ಆಕೆ.

ಹಗಲಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಹೊತ್ತೆಲ್ಲ ಸೀತಕ್ಕನ ಹತ್ತಿರ ಕಳೆಯಬಹುದು, ಆದರೆ ಒಬ್ಬಳೇ ಮಲಗಿದಾಗ, ರಾತ್ರಿಯಿಡೀ ನನ್ನನ್ನೇ ಕಿತ್ತು ತಿಂದಂತೆ ಭಾಸವಾಗುತ್ತದೆ ನನಗೆ.!

ಅವಳಿಗೆ ರಾತ್ರಿ—ಹಗಲು ಜ್ವರವಿದ್ದಾಗ. ಅವಳ ಹತ್ತಿರವೇ ಜಾಗರಣೆ ಮಾಡಿದ ಪ್ರಸಂಗದಲ್ಲಾಗದ ಕಷ್ಟ ನನಗೆ ಈಗ ಆಗುತ್ತಿದೆ. ಇಬ್ಬರೂ ಆಗ ಅವಳ ಮಂಚದ ಅಕ್ಕ ಪಕ್ಕದಲ್ಲಿ ಕುಳಿತು ಕಳೆಯಲಿಲ್ಲವೆ? ಆಗಲೂ ನಿನ್ನ ಮುಖ ಅವಳತ್ತವೇ! ನಿನಗೆ ನನ್ನ ಅಸ್ತಿತ್ವವೇ ಇಲ್ಲವೇನೋ ಎನ್ನುವಷ್ಟು ಜಿಗುಪ್ಸೆಯೇನೋ. ಅಂದು ಔಷಧಿಯ ಬಟ್ಟಲು ಕೊಡುವಾಗ, ನಿನ್ನಕೈ ನನ್ನ ಕೈಯನ್ನು ಸೋಂಕಿದಾಗ ನಾನು ತಟ್ಟನೆ ನಿನ್ನತ್ತ ನೋಡಿದೆ. ನೀನು ಸೀತಳನ್ನೇ ನೋಡುತ್ತಿದ್ದೆ. ವಿಚಾರಮಗ್ನನಾಗಿ. ನಾನೇ ಆ ಭಾಗ್ಯಶಾಲಿಯಾಗಿದ್ದರೆ, ಇಡಿ ಜನ್ಮವೂ ಹೀಗೇ ಕಳೆಯುತ್ತಿದ್ದೆ ರೋಗಿಯಾಗಿ..ಎನ್ನಿಸಿತು ಆ ಕ್ಷಣದಲ್ಲಿ. ನಾನು ನಿನ್ನನ್ನು ಪ್ರೀತಿಸುವೆ ಎಂದರೆ ನನಗೆ ನಂಬಿಕೆಯಾಗದು. ನಿನ್ನನ್ನು ನಾನು ದ್ವೇಷಿಸುವೆ ಮೋಹನ್. ನಿನ್ನ ಬಿಟ್ಟು ದೂರ ದೂರ ಹೋಗಬೇಕು ಎನ್ನಿಸುತ್ತದೆ. ನೀನು Draula ಇದ್ದಂತೆ. ನನ್ನ ನಿನ್ನತ್ತ ಸೆಳೆದು ಸೆಳೆದು ಕೊನೆಗೆ ಸಾಯಿಸ್ತೀಯ. ಸಾಯುವ ನಾನು ಬಡ ಬಡಿಸಿದರೆ. ತಲೆ ತಿರುಗಿ ಕೂಗಾಡಿದರೆ? ನಿನ್ನ ಹಾಲು ಸಂಸಾರದಲ್ಲಿ ಹುಳಿ ಹಿಂಡಲಾರೆ ನಾನು. ದಯವಿಟ್ಟು ನನ್ನ ಪಾಡಿಗೆ ನನ್ನ ಬಿಟ್ಟು ಬಿಡು.

ನನ್ನ ಮನದಲ್ಲಿಯೇ ಏನೇನೋ ಭಾವನೆಗಳು. ತೂಗಾಡುತ್ತವೆ. ಒಂದಕ್ಕೂ ಸರಿಯಾದ ನೆಲೆ ಸಿಕ್ಕದೆ. ನನಗೆ ದಿಕ್ಕು ತೋಚದೆ. ತಲೆಯೆಲ್ಲ ಕೆದರಿ. ಸಿಕ್ಕಾಪಟ್ಟೆ ಕೂಗಾಡಿ ಅಳಬೇಕೆನ್ನಿಸುತ್ತದೆ...ಏನೂ ಮಾಡಲಾರೆ.

ನೀನು ಕಾಲೇಜಿಗೆ ಹೋಗುವೆನೆಂದರೂ ನಿನ್ನ ಬೇಗ ಬಿಡದ ಹಟಮಾರಿ ಸೀತ! ನೀನು ಬರುವುದು ಕ್ಷಣಕಾಲ ತಡವಾದರೂ ಹಣ್ಣು ಅಲ್ಲಿಯೇ ಒಣಗಿ ಹೋದರೂ ಲೆಕ್ಕಿಸದೆ, ಉಪವಾಸ ಇದ್ದು ಸತ್ಯಾಗ್ರಹ ಮಾಡ್ತಾಳೆ! ನೀನು "ಸೀತಾ. ರಜ ಎಲ್ಲವೂ ಮುಗಿದು ಹೋದವು ಕಣೆ. ಬೇಗ ಬರ್ತೀನಿ. ಕಾಲೇಜು ಮುಗಿದ ತಕ್ಷಣ. Please ಅಳೆ ಬೇಡ. ನೀನು ಅಳೋದನ್ನು ನಾನು ಹೇಗೆ ನೋಡಲಿ ಹೇಳು?"

ನಾನು ರಾತ್ರಿಯಿಡೀ ಕಂಬನಿ ಹರಿಸಿದರೂ ಕರಗದ ನೀನು ಅವಳ ಹನಿ ಕಣ್ಣೀರನ್ನೂ ಮುತ್ತಿನಂತೆ ಜೋಪಾನ ಮಾಡುವಿಯಲ್ಲ. ನಾವಿಬ್ಬರೂ ಎಷ್ಟು ಹತ್ತಿರವೋ ಅಷ್ಟು ದೂರ ಅಲ್ಲವೆ?...ನನಗೆ ಈಗ ಅಂದಿನ ನಾನು–ನೀನು ಒಟ್ಟಾಗಿ ಕಳೆದ–ಆ ದಿನಗಳು ಕನಸೋ ಎಂದೆನಿಸುತ್ತದೆ.

ಅವಳಿಗಾಗಿ ಏನು ಮಾಡಲೂ ಸಿದ್ಧನಿರುವ ನೀನು ನಿನ್ನ ಸಂತೋಷಕ್ಕಾಗಿ ಚಿಕ್ಕ ಕೆಲಸ ಮಾಡಲೂ ಹಿಂಜರಿಯುವೆ. ಮೊನ್ನೆ ಜಯಾ ಪಿಕ್ಚರಿಗೆ ಕರೆದರೆ, "ಬೇಡ ಗೀತಾ, ಸೀತನಿಗೆ ಹುಷಾರಾದ ಮೇಲೆ ಒಟ್ಟಿಗೆ ಹೋಗೋಣ. ಅವಳಿಗೂ ಮನೇಲಿ ಒಬ್ಬಳೇ ಬೇಜಾರಲ್ಲವೆ?" ಎಂದೆಯಲ್ಲ. ಕೇವಲ ನಿನ್ನ ಹೆಂಡತಿಯು ಕೇಂದ್ರದಲ್ಲಿ ಸುತ್ತು ಹೊಡೆಯುವ ಪರಿಘ ನೀನು. ನಿನ್ನ ಪರಿಘ ಸೀತನ ಪ್ರಭಾವಲಯ. ಆಕೆಯನ್ನು ಬಿಟ್ಟು ನೀನು ಈಚೆಗೆ ಬಂದು ನೋಡು. ಪ್ರೀತಿಸಿ ನಿರಾಶರಾದವರ ಸ್ಥಿತಿ ಏನಾಗಿದೆ ಎಂದು ಹೂವಿನ ಮೇಲಿನ ಮಂಜು ಹನಿಯಂತೆ ಶೀತಲವಾಗಿರುವ ನಾನು ನಿನಗೆ ಬೇಡವಾದೆ. ಉರಿಯುತ್ತಿರುವ ಜ್ವಾಲೆಯಂತೆ ಚಂಚಲೆಯಾದ ಸೀತಳಿಗೆ ಶರಣಾದೆ.

ನೀನು ಹೀಗಾದರೆ, ಅಮ್ಮ! ಅವಳೂ ಹಾಗೆಯೇ. "ಗೀತ. ನೀನು ಇದ್ದೀಯ ಎಂದು ಸೀತ ಉಳಿದಳು. ಆಕೆಯನ್ನು ಬಿಟ್ಟು ಎಲ್ಲಿಗೂ ಹೋಗಬೇಡ...ನಾನು ಬೇಗ ಬರುವೆ..." ನನಗೆ ಸೀತನ ಮೇಲೆ ಪ್ರೀತಿಯೇನೋ ತುಂಬಾ ಇದೆ... ನಿಜ. ಆದರೆ ಆ ಪ್ರೀತಿಯ ದುರುಪಯೋಗ ತೆಗೆದುಕೊಳ್ಳುತ್ತಿದ್ದೀರಿ. ನೀವೆಲ್ಲ. ಕ್ಷಣಕ್ಷಣಕ್ಕೂ ಜ್ವಾಲೆಯೊಂದು ನನ್ನನ್ನೇ ಕಬಳಿಸುತ್ತಿರುವಂತೆ ಎನ್ನಿಸುತ್ತದೆ...ನಾನೂ ಮನುಷ್ಯಳಲ್ಲವೇ?... ನನ್ನ ಸಹನೆಗೂ ಮಿತಿಯಿಲ್ಲವೆ? ನಾನು ಮೆಚ್ಚಿದವನೇ ನನ್ನೆದುರು ಬೇರೊಬ್ಬಳೊಡನೆ ಸರಸವಾಡುವುದನ್ನು ನೋಡಿಯೂ ಸಹನೆಯಿಂದಿರಲು ಅವರ ಸುಖದಲ್ಲೇ ನನ್ನ ಸುಖ ಕಾಣಲು ನಾನೇನು ದೇವತೆಯೇ?

ನನ್ನ ಮನಸ್ಸು ತುಂಬಾ ದುರ್ಬಲಗೊಂಡಂತೆನಿಸುತ್ತದೆ, ನನಗೆ. ಯಾವ ಆಶೆ. ಇಚ್ಛೆಗಳೂ ಮನದಲ್ಲಿ ಜೀವಂತ ಉಳಿದಿಲ್ಲ. ಜೀವನದ ಎಲ್ಲ ಆಸರೆಗಳೂ ಏಕಕಾಲಕ್ಕೆ ಮುರಿದು ಬಿದ್ದಂತೆನಿಸುತ್ತದೆ. ಯಾರ ಮುಂದೆ ಹೇಳಲಿ. ನಾನು ನನ್ನ ದುಗುಡಗಳನ್ನು?

ಇಂದು ಡಾಕ್ಟರು ಹೇಳಿದರು. 'ಮೋಹನ್. Congratulations. ನೀವು ತಂದೆಯಾಗಲಿದ್ದೀರಿ" ಎಂದು. ನಿನ್ನ ಮುಖದ ಪ್ರತಿಯೊಂದು ಭಾವವೂ ನಿನ್ನ ಸಂತಸವನ್ನು ಪ್ರತಿಬಿಂಬಿಸಿದವು. ನೀವಿಬ್ಬರೂ ನಾನು ಹತ್ತಿರವಿರುವುದನ್ನೂ ಮರೆತಾಗ.

ನನಗನ್ನಿಸಿತು. "ನೀನೇಕೆ ಮಧ್ಯೆ. ತಿಳಿಯುವಾರದೆ ನಿನಗೆ?" ಎಂದು. ನಾನೊಬ್ಬಳೇ ಪರಕೀಯಳು ಎನ್ನಿಸಿತು. ನೀನು. ನಿನ್ನ ಹೆಂಡತಿ, ಬರಲಿರುವ ಮಗು...ನಾನು ಇನ್ನೂ ದಾಯಿಯಾಗಿಯೇ ಉಳಿಯಬೇಕೆ?

ನಾನು ಆ ಕ್ಷಣಕ್ಕೆ ಹೊರಗೋಡಿದೆ. ಮತ್ತೆ ಒಳ ಬಂದಾಗಲೂ ನಿಮ್ಮಿಬ್ಬರ ಭಾವ ಸಮಾಧಿ ಭಂಗವಾಗಿರಲಿಲ್ಲ. ನಾನು ಪರಕೀಯಳಲ್ಲದೆ ಮತ್ತೆ ನಮಗಾಗಿ ಜಗತ್ತೇ ಶೂನ್ಯವೆನಿಸುತ್ತದೆ. ನಿನ್ನ ಪ್ರೀತಿ ಮೃಗಜಲವಾಗಿ ಕಾಡುತ್ತಿದೆ. ನನ್ನನ್ನು. ಮೋಹನ್, ದಯವಿಟ್ಟು ನನ್ನ ಪಾಡಿಗೆ ನನ್ನ ಬಿಟ್ಟುಬಿಡು...ನಾನು ಹೋಗುತ್ತೇನೆ.

"ನಿನ್ನಿಂದಲೇ ಸೀತ ಉಳಿದಳು. ಇಲ್ಲವಾದರೆ ನಾನು ಅವಳನ್ನು ಕಳೆದುಕೊಳ್ಳು ತ್ತಿದ್ದೆ ಗೀತಾ" ಎಂದು ನೀನು ಕೃತಜ್ಞತೆ ಹೇಳಿದಾಗಲೂ ಸೀತಳೇ ಕೇಂದ್ರ ನಿನಗೆ.

ನನಗೆ ಸೀತಳನ್ನು ಕಂಡಾಗ ನಾನು ಅಪರಾಧಿಯೇನೋ ಎನ್ನಿಸುತ್ತದೆ. ಅವಳು ನನ್ನ ಎಷ್ಟು ಸರಳವಾಗಿ ಭಾವಿಸಿದ್ದಾಳಲ್ಲ ಎಂದು. 'ಆಕೆ ನನ್ನ ಮುದ್ದು ತಂಗಿ, ನನ್ನ ಸಲುವಾಗಿ ಎಷ್ಟು ತೊಂದರೆ ನಿನಗೆ' ಎಂದು ಪ್ರೀತಿಯಿಂದ ಹೇಳುವಾಗಲೂ ಅಷ್ಟೇ.

ಆದರೆ, ನೀನು! ನೀನು ನನ್ನನ್ನು ಕಡೆಗಣಿಸುವುದು ನೋಡಿದಾಗೆಲ್ಲ ನನಗೆ ಎಷ್ಟು ಆಂತರಿಕ ಹಿಂಸೆಯಾಗುವುದು ಬಲ್ಲೆಯಾ? ಸೇಡಿನ ನಾಗ ಫೂತ್ಕರಿಸುತ್ತದೆ...ವಿಷ... ಮೈಯೆಲ್ಲ ವಿಷವೇರುತ್ತಿದೆ...ಪ್ರತಿಯೊಂದು ನರ-ನಾಡಿಯೂ ದ್ವೇಷದಿಂದ ತುಂಬು ತ್ತದೆ.

"ಗೀತಾ, ಡಾಕ್ಟರರು ಹೇಳಿದ್ದು ನಿನಗರಿಯಂದೆ?"

"ಗೊತ್ತಿದೆ. ಆದರೆ ಅಮ್ಮ ಬಂದೇ ಬರ್ತಾಳಲ್ಲ. ಅವಳು ಬರುವುದು ಒಂದೆರಡು ದಿನ ತಡವಾದರೆ. ಕಾಲೇಜಿಗೆ ರಜ ಹಾಕಿ. ಆದರೆ ನಾನು ಮಾತ್ರ ಯಾವುದೇ ಪರಿಸ್ಥಿತಿಯಲ್ಲೂ ಊರಿಗೆ ಹೋಗಲೇ ಬೇಕು. ನೌಕರಿ ಸಿಗುವುದು ಎಷ್ಟು ಕಷ್ಟ ಈ ಕಾಲದಲ್ಲಿ. ಸಿಕ್ಕ ನೌಕರಿ ಬಿಡೋದೇ?"

ಇಷ್ಟು ಧೈರ್ಯ ನನಗೆಲ್ಲಿಂದ ಬಂದಿತೆಂದು ಆಶ್ಚರ್ಯಪಡುತ್ತೇನೆ. ನಿಮ್ಮದೇ ವೃತ್ತ...ಬರಲಿರುವ ಅತಿಥಿ! ನಾನು ವೃತ್ತದ ಹೊರಗಿನ ಅಸಂಖ್ಯಾತ ಬಿಂದುಗಳಲ್ಲಿ ಒಂದು. ನನಗೇನು ಬೆಲೆಯಿದೆ? ನಿಮ್ಮ ವೃತ್ತದಲ್ಲಿ ಅವಕಾಶವೂ ಇಲ್ಲ. ಬೇರೊಂದು ವೃತ್ತ ಕಲ್ಪಿಸುವ ತಾಳ್ಮೆಯೂ ನನಗಿಲ್ಲ. ಆದರೆ ನಿಮ್ಮ ಸಂತಸದಲ್ಲಿ ನನ್ನ ಸಂತಸ ಕಾಣುವ ತ್ಯಾಗಿ ನಾನಲ್ಲ.

"ಗೀತಾ, ನೀನು ಹೊರಟು ಹೋದರೆ ಮನೆ ಬಿಕೋ ಎನ್ನಿಸುತ್ತದೆ. ಮಗು ಬರೋವರೆಗಾದ್ರೂ..."

ಸ್ವಾರ್ಥದ ಪರಿಧಿ ದಾಟುತ್ತಿರುವೆ ನೀನು ಎಂದು ಹೇಳಬೇಕೆನ್ನಿಸುತ್ತದೆ. 'ನಾನು ನಿನಗೆ ಬೇಕು ಯಾಕೆ? ನಿನ್ನ ಹೆಂಡತಿಗಾಗಿ, ಬರಲಿರುವ ಮಗುವಿಗಾಗಿ.'

ನನಗೆ ಮುಕ್ತಿ ಬೇಕು ಮೋಹನ್, ನಿನ್ನಿಂದ ನನಗೆ ಮುಕ್ತಿ ಬೇಕು. ನೀನು ಎದುರಿಗೆ ಬಂದಾಗಲೊಮ್ಮೆ ಆಗುವ ಆಂತರಿಕ ಹಿಂಸೆ, ಆಂದೋಳನ...ಎಲ್ಲದಕ್ಕೂ ಮುಕ್ತಿ ಬೇಕು. ನಾನು ನನ್ನ ನಿರಾಶೆಯ ಪರಿಧಿಯಿಂದ ಹೊರಬರಲಾರೆ ನಿಜ. ಆದರೆ ನಿನ್ನಿಂದ ದೂರ ಹೊರಟು ಹೋದರೆ ಶಾಂತಿ ದೊರಕೀತು ಎನ್ನಿಸುತ್ತದೆ...ನನ್ನದೂ ಸ್ವಾರ್ಥ ಅತಿಯಾಯಿತೇನೋ...ಸ್ವಾರ್ಥಕ್ಕೆ ಮಿತಿಯೇ ಇಲ್ಲವೇ ? ...ನಾಯಿ ಹದ್ದುಗಳಂತೆ ಎಲ್ಲರೂ ಬಿದ್ದಿರುವ ಹೆಣವನ್ನೇ ಕುಕ್ಕುವುದಾದರೆ ಸಂಸ್ಕಾರ ಯಾರು ಮಾಡಬೇಕು? ಹುತ್ತ ಗೆದ್ದಲುಗಳ ಕೊರೆತ...ಹಾವುಗಳ ಆಕ್ರಮಣ...ಅಳಲು...ಥೂ ಬದುಕೇ! ನಾನು ಬದುಕಿರಲಾರೆ...ದೂರ ದೂರ ಹೋಗುವೆ...

# ನಮ್ಮೂರ ಗೌಡ

ಲಿಂಗಣ್ಣ ಸತ್ಯಂಪೇಟೆ

ನಮ್ಮೂರ ಗೌಡ್ನೂ ಇತ್ತೊಂದು ಕಾಲ
ಆಗವ್ನೇ ನಮ್ಮೂರ್ಗೆ ರಾಜ್ಯಪಾಲ !

ಚಂದುಳ್ಳ ಹೆಣ್ಣೆಲ್ಲ ಸೆರ್ಗೆಳ್ದು ಮಾಡ್ತಿದ್ದ ದ್ರೌಪದಿಯರ್ನ
ಅಕ್ಷಯಾಂಬರವೆಲ್ಲಿ ? ಅ$\cdots$ಕ್ಷಿ !$\cdots$ಎನ್ನುವರಿಲ್ಲ !
ಬರೆದಿದ್ದ ಹೊಸ ಭಾರತ ಕತೆಯುನ್ನ

ಸೀತೆಯಂತಿರ್ಲಿ; ಊರ್ಮಿಳೆಗೂ ಉಳಿಗಾಲವಿರ್ಲಿಲ್ಲ
ಮಿಡಿಯಂತಿರ್ಲಿ; ಕುಡಿಯನ್ನೂ ಬಿಡ್ತಿರಲಿಲ್ಲ
ಹೀಚಿಗೂ ಉಪ್ಪಚ್ಚಿ ರುಚಿ ನೋಡ್ತಿದ್ದ

ಇತಿಹಾಸ ಕೆಡವಿದ್ದ, ಭೂಗೋಲ ಮಾಡಿದ್ದ
ರುಂಡ ಚೆಂಡಾಡಿದ್ದ, ಮುಂಡ ಈಡಾಡಿದ್ದ
ಸುಮ್ ಸುಮ್ನೇ ಎಲ್ಲರ್ನ ಬಗ್ಗುಬಡಿದಿದ್ದ

ಕಣ್ಣು ತಿರುವೋದೇನ್ ? ಕಾಲು ಕುಣಿಸೋದೇನ್ ?
ಮೀಸೆ ಹುರಿಮಾಡೊದೇನ್ ? ಕಚ್ಚೆ ಸರಿಮಾಡೋದೇನ್ ?

ಹೊರವೊಂಟ್ರೆ ಸಲ್‌ಬೇಕು ನೂರು ಮುಜುರೆ
ನಿಲ್ಬೇಕು ಹರಿದೋಗ್ವ ಹಾವು ಅರರೆ !

ನಮ್ಮೂರ ಗೌಡ್ನೂ ಇತ್ತೊಂದು ಕಾಲ
ಆಗವ್ನೆ ನಮ್ಮೂರ್ಗೆ ರಾಜ್ಯಪಾಲ !

# ಸರ್ವಜ್ಞನ ವೈದ್ಯಕೀಯ ದೃಷ್ಟಿ

ಧನ್ಯಕುಮಾರ ಇಜಾರಿ

"ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲ" ಎಂಬ ನಾಣ್ಣುಡಿಯಂತೆ ಸರ್ವಜ್ಞನು ಈ ವಿಶ್ವದ ವಿಷಯಗಳನ್ನೆಲ್ಲ ಕ್ರೋಢೀಕರಿಸಿ ಹೇಳುವ ಪ್ರಯತ್ನ ಮಾಡಿದ್ದಾನೆ. 'ಸರ್ವಜ್ಞ' ಎಂಬ ಶಬ್ದವೇ ಸೂಚಿಸುವಂತೆ 'ಆವನು ಎಲ್ಲ ಬಲ್ಲವನು.' ಈತನು ವೈದ್ಯಕೀಯ ರಂಗಕ್ಕೆ ಸಂಬಂಧಿಸಿದ ಕೆಲ ವಿಷಯಗಳನ್ನೂ ಹೇಳಿದ್ದಾನೆ. ಅವು ಇಂದಿಗೂ ಅರ್ಥಪೂರ್ಣ ಹಾಗು ಅನುಕರಣಯೋಗ್ಯ ಅಂಶ ಗಳೆನಿಸಿವೆ.

ಸರ್ವಜ್ಞನು ಬದುಕಿದ್ದ ಕಾಲದಲ್ಲಿ ಆಯುರ್ವೇದವು ತುಂಬ ಪ್ರಚಲಿತವಿದ್ದ, ರಾಜಮರ್ಯಾದೆಯನ್ನು ಹೊಂದಿದ್ದ ವೈದ್ಯ ಶಾಸ್ತ್ರವೆನಿಸಿತ್ತು. ಆದ್ದರಿಂದ ಸರ್ವಜ್ಞನು ಹೇಳಿದ ಈ ವಚನಗಳಿಗೆಲ್ಲ ಆಯುರ್ವೇದವೇ ಮೂಲಾಧಾರವೆನಿಸಿದೆ. ಆಯುಷ್ಯದ ಬಗ್ಗೆ ಸಂಪೂರ್ಣವಾದ ವಿವರಣೆಯನ್ನು ಕೊಡುವ ಆಯುರ್ವೇದದ ವಿಷಯಗಳು–ಸಿದ್ಧಾಂತಗಳು ತ್ರಿಕಾಲಸತ್ಯವಿರುವಂತೆ ಅವರಿಂದಲೇ ಸಿಡಿದು ಬಂದ ಸರ್ವಜ್ಞನ ವಚನಗಳೂ ಅಷ್ಟೇ ಅಬಾಧಿತವೆನಿಸಿವೆ. ಅವನು ಹೇಳಿದ ಅನೇಕ ವಚನ ಗಳು ಕಳೆದು ಹೋಗಿರುವಲ್ಲಿ ವೈದ್ಯಕೀಯಕ್ಕೆ ಸಂಬಂಧಿಸಿದವುಗಳು ಅದೆಷ್ಟು ಮರೆ ಯಾಗಿವೆಯೋ ಅದಾರು ಬಲ್ಲರು? ಸರ್ವಜ್ಞನ ವಚನಗಳನ್ನು ಸಹಸ್ರ–ಸಹಸ್ರವಾಗಿ ಸಂಗ್ರಹಿಸುವ–ಸಂಪಾದಿಸುವ ಪ್ರಯತ್ನಗಳು ನಡೆಯುತ್ತಲೇ ಬಂದಿದ್ದರೂ ವೈದ್ಯ ಕೀಯವಾಗಿ ಅವನು ಹೇಳಿದ ವಿಷಯಗಳ ಬಗೆಗೆ ಬೆಳಕನ್ನು ಚೆಲ್ಲುವ ಪ್ರಯತ್ನಗಳಂ ಮಾತ್ರ ಕಂಡು ಬರುವುದಿಲ್ಲ.

## ೧. ಆಹಾರ

ಸರ್ವಜ್ಞನು ಆಹಾರದ ವಿಷಯವಾಗಿ ಅನೇಕ ಸ್ವಾರಸ್ಯ ವಿಷಯಗಳನ್ನು ಹೇಳಿ ದ್ದಾನೆ. ಅವನು ಹೇಳಿದ ವಿಷಯಗಳು ಈಗಿನ ವೈದ್ಯ ವಿಜ್ಞಾನಿಗಳಿಗೂ, ಆಹಾರ ತಜ್ಞರಿಗೂ ಅಚ್ಚರಿಗೊಳಿಸುವಂತಹವೆನಿಸಿವೆ.

ಒಮ್ಮೆಯುಂಡವ ತ್ಯಾಗಿ,
ಇಮ್ಮೆಯುಂಡವ ಭೋಗಿ
ಬಿಮ್ಮನೆ ಉಂಡವನು ನೆರೆ ರೋಗಿ ಸರ್ವಜ್ಞ।

ಈ ವಚನದಲ್ಲಿ ದಿವಸಕ್ಕೆ ಕೇವಲ ಒಂದು ಸಲ ಊಟ ಸೇವಿಸುವ ವಿಷಯವು ಸೂಚಿಸಲ್ಪಟ್ಟಿದೆ. ಆಧ್ಯಾತ್ಮಿಕ ಬಲವನ್ನು ಬೆಳೆಸಿಕೊಂಡು ಬದುಕಿರಲು ಒಂದು ಹೊತ್ತಿನ ಊಟ ಸಾಕು ಎಂದು ಹೇಳುತ್ತ ಅಂಥವನನ್ನು 'ತ್ಯಾಗಿ' ಎಂದು. ಸಂಸಾರದ ಸುಖೋಪಭೋಗಗಳನ್ನು ಅನುಭವಿಸುತ್ತಿರುವವನಿಗೆ ಎರಡು ಹೊತ್ತು ಊಟ ಬೇಕೆಂದು ಹೇಳುತ್ತ ಅಂಥವನನ್ನು 'ಭೋಗಿ' ಎಂದೂ. ಇದಕ್ಕೂ ಹೆಚ್ಚು ಸಲ ಊಟ ಮಾಡುವವನನ್ನು ಸದಾರೋಗಿ ಎಂದು ಈತನು ಸಂಬೋಧಿಸಿದ್ದಾನೆ.

ನಾಲಗೆಯು ಕಟ್ಟಿದನು ಕಾಲನಿಗೆ ದೂರನಹ
ನಾಲಗೆಯು ರುಚಿಯ ಮೇಲಾಡು
ತಿರಲವನ ಕಾಲ ಹತ್ತಿರವು ಸರ್ವಜ್ಞ ।

ನಾವು ತೆಗೆದುಕೊಳ್ಳುವ ಆಹಾರ ಪದಾರ್ಥಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಅದು ನಮ್ಮ ಪ್ರಕೃತಿಗೆ–ಆರೋಗ್ಯಕ್ಕೆ ಚೆನ್ನಾಗಿ ಒಗ್ಗುವುದೋ–ಇಲ್ಲವೋ ಎಂಬುದು. ಅದನ್ನು ಬಿಟ್ಟು ನಮ್ಮ ನಾಲಗೆ ದಾಸರಾಗಿ ತಿನ್ನುತ್ತ ಹೋದರೆ ರೋಗಗಳ ತವರು ಮನೆಯಾಗಬೇಕಾಗುತ್ತದೆ. ಹೀಗೆಯೇ ಅನುಸರಿಸುತ್ತ ಹೋದರೆ ಅಲ್ಪಾವಧಿಯಲ್ಲಿ ತನ್ನ ಆರೋಗ್ಯ–ಪ್ರಕೃತಿಗಳನ್ನು ಕೆಡಿಸಿಕೊಂಡು ಮೃತ್ಯುವನ್ನು ಅಪ್ಪಬೇಕಾಗುತ್ತದೆ. ಇದೇ ವಿಷಯವನ್ನು ಮತ್ತೊಂದೆಡೆಗೆ ಹೀಗೆ ಹೇಳಿದ್ದಾನೆ :

ನಾಲಗೆಯು ಕೀಲವನು ಶೀಲವಲಿ ತಾನರಿದು
ಶೂಲವನು ರುಚಿಯು ಎಂದಿಹನು ಮುದಿಯಲಿ
ಬಾಲನಂತಿಹದು ಸರ್ವಜ್ಞ ।

ಆಹಾರ ಸೇವನೆಯಲ್ಲಿ ಕಟ್ಟು–ನಿಟ್ಟಾಗಿದ್ದು, ನೀತಿ–ನಡೆವಳಿಕೆಯನ್ನರಿತು ಶಿವನಾಮದ ರುಚಿಯನ್ನರಿತವನು ವೃದ್ಧಾಪ್ಯದಲ್ಲಿಯೂ ಹುಡುಗನಂತೆ ಉತ್ಸಾಹಿಯಾಗಿರುತ್ತಾನೆ ಎಂದು ಇದರ ಅರ್ಥ.

ಆಹಾರ ಪದಾರ್ಥಗಳನ್ನು ಸೇವಿಸುವಾಗ ಕೇವಲ ರುಚಿಗೆ ಮಹತ್ವ ಕೊಡದೆ ಶುಚಿತ್ವಕ್ಕೂ ಗಮನ ಕೊಡಬೇಕಾದುದು ಅವಶ್ಯ. ಆದ್ದರಿಂದ ಸರ್ವಜ್ಞನು,

ರುಚಿಗಳನು ನೆರೆಗಳಿದು ಶುಚಿಗಳಲಿ ಮೆರೆವಂಗೆ
ಪಚನವನು ಬೆಳಗಿ ಬಲದಿ ಬಾ
ಳುವನೆಂಬ ವಚನವೊಂದಿಹುದು ಸರ್ವಜ್ಞ ।

ಎಂದಿದ್ದಾನೆ. ಶುಚಿಯಾದ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ಪಚನ ಶಕ್ತಿಯೂ ಬೆಳೆದು ಬಲವೂ ವರ್ಧಿಸುವುದೆಂದು ಈ ವಚನದಲ್ಲಿ ಹೇಳಿದ್ದಾನೆ.

ಹಸಿದಾಗ ಮಾತ್ರ ಊಟವನ್ನು ಮಾಡಬೇಕು. ಹಸಿಯದೆ ಊಟ ಮಾಡಿದರೆ ಜೀರ್ಣ ವಿಕಾರಗಳು ಉತ್ಪನ್ನವಾಗುವವು. ಆದ್ದರಿಂದ ಸರ್ವಜ್ಞನು 'ಹಸಿಯದಿರೆ ಉಣಬೇಡ. ಹಸಿದು ಮತ್ತಿರಬೇಡ' ಎಂದಿದ್ದಾನೆ. ಹೊಟ್ಟೆಯು ಹಸಿಯದಿದ್ದಾಗ

ಊಟವನ್ನು ಮಾಡಬಾರದೆಂಬುದು ಎಷ್ಟು ನಿಷ್ಠುರವೋ ಹಸಿದು ಹಾಗೆಯೇ ಕುಳಿತು ಕೊಳ್ಳುವುದೂ ಅಷ್ಟೇ ನಿಷ್ಠುರವಾಗಿದೆ. ಹಸಿದಾಗ ಊಟಮಾಡದಿದ್ದರೆ ಶರೀರಾಗ್ನಿಗಳು ಪ್ರಬಲಗೊಂಡು ಶರೀರದ ಧಾರಕಶಕ್ತಿಗಳೆನಿಸಿದ ರಸ, ರಕ್ತ, ಮಾಂಸಾದಿ ಸಪ್ತ ಧಾತುಗಳನ್ನೇ ತಿಂದುಬಿಡುತ್ತವೆ. ಇದರಿಂದ ಶರೀರ ಕೃಶವಾಗುತ್ತದೆ, ದುರ್ಬಲ ಗೊಳ್ಳುತ್ತದೆ. 'ಹಸಿವ ಕೊಂದಾತಂಗೆ ಪಶುವಧೆಯು ಮಾಡಿದಗೆ' ಎಂಬ ಈತನ ಮಾತೂ ಇದನ್ನು ಪೋಷಿಸುತ್ತದೆ.

ಅಂದಿನ ಜನಜೀವನದಲ್ಲಿ ವಿವಿಧ ಬಗೆಯ ಆಹಾರವನ್ನು ಸೇವಿಸುವವರನ್ನು ಸರ್ವಜ್ಞನು ಕಂಡಿದ್ದ. ಬ್ರಾಹ್ಮಣರು ಇಂಗನ್ನು, ಜನಸಾಮಾನ್ಯರು ಜೋಳದ ರೊಟ್ಟಿ, ಅಂಬಲಿ, ನುಚ್ಚು, ಸುಟ್ಟ ಜೆಳಸಿಕಾಳುಗಳು, ಕೀರೆಸೊಪ್ಪು, ಸೌತೆಕಾಯಿಗಳನ್ನು ತಿನ್ನು ತ್ತಿದ್ದರೆಂದು ಅವನ ವಚನಗಳಿಂದ ಸ್ಪಷ್ಟವಾಗುತ್ತದೆ. ಉದ್ದಿನ ವಡೆಯ ಉಲ್ಲೇಖವೂ ಒಂದಿದೆ. 'ದೋಸೆ ಇಲ್ಲದ ಊಟ' ಚೆನ್ನಾಗಿರುವುದಿಲ್ಲವೆಂದು ಅವನ ವೈಯಕ್ತಿಕ ಅಭಿಪ್ರಾಯವನ್ನೂ ಕಾಣಬಹುದು. 'ಮೊಸರು ಇಲ್ಲದ ಊಟ ಕೆಸರಿಲ್ಲದ ಗದ್ದೆ ಯಂತೆ' ಎಂದೂ ಹೇಳಿದ್ದಾನೆ. ಆದರೆ ಮೊಸರನ್ನು ನಿತ್ಯವೂ ಊಟದಲ್ಲಿ ಅಧಿಕ ಪ್ರಮಾಣದಲ್ಲಿ ಉಪಯೋಗಿಸಿದರೆ ಅದು ಕೂಡ ಒಳಿತಲ್ಲ ಎಂಬ ಮಾತನ್ನಾಗಲೀ ಹಾಗೂ ಪಿತ್ತ–ಕಫ ಪ್ರಕೃತಿಯವರಿಗೆ ಅದು ಕೇಡನ್ನುಂಟು ಮಾಡುವುದೆಂಬುದನ್ನೂ ಈ ಸಂದರ್ಭದಲ್ಲಿ ನೆನಪಿಟ್ಟುಕೊಳ್ಳಬೇಕು.

i. ಹರಕು ಹೋಳಿಗೆ ಲೇಸು ಮುರುಕು ಹಪ್ಪಳ ಲೇಸು
ಕುರು-ಕುರು ಕಡಲೆ ಬಲು ಲೇಸು ಪಾಯಸದ
ಸುರುಕು ಲೇಸು ಸರ್ವಜ್ಞ ।

ii. ಅಕ್ಕಿಯನು ಉಂಬವನು ಹಕ್ಕಿಯಂತಾಗುವನು
ಸಿಕ್ಕು ರೋಗದಲಿ ರೊಕ್ಕವನು ವೈದ್ಯನಿಗೆ
ಇಕ್ಕುತ್ತಲಿರುವ ಸರ್ವಜ್ಞ ।

iii. ಜೋಳವನು ತಿಂಬವನು ತೋಳದಂತಾಗುವನು
ಬೇಳೆ-ಬೆಲ್ಲಗಳ ಉಂಬವನು ಬಹುಕಾಲ
ಬಾಳನು ಎಂದರಿಗು ಸರ್ವಜ್ಞ ।

iv. ನವಣೆಯನು ತಿಂಬವನು ಹವಣಾಗಿ ಇರುತಿಹನು
ಭವಣೆಗಳಿಗೆ ಅವನು ಒಳ ಬೀಳನ್ ಈ ಮಾತು
ತವಣೆಯಲ್ಲಿಂದ ಸರ್ವಜ್ಞ ।

v. ರಾಗಿಯನು ಉಂಬವ ನಿರೋಗಿ ಎಂದೆನಿಸುವನು
ರಾಗಿಯು ಭೋಗಿಗಳಿಗಲ್ಲ ಬಡವರಂ
ಗಾಗಿ ಬೆಳೆದಿಹುದು ಸರ್ವಜ್ಞ ।

ಈ ತ್ರಿಪದಿಗಳಲ್ಲಿ ಪ್ರತಿಯೊಂದು ಅಂಶಗಳಿಗೂ ಈಗಿನ ವೈದ್ಯಶಾಸ್ತ್ರದ ಮನ್ನಣೆ ಇದೆ.

ಆರೋಗ್ಯಕ್ಕೆ ಹಿತಕರವೆಂದು ಬಗೆಯುವ ಆಹಾರವನ್ನೇ ನಾವು ಅಪೇಕ್ಷಿಸುತ್ತೇವೆ. ಕೆಲವು ಸಲ ತಂಗಳಾಹಾರವನ್ನೂ ರುಚಿ ಎಂದು ಸೇವಿಸುತ್ತೇವೆ. ಆದರೆ ಇವೆರಡೂ ಒಳ್ಳೆಯವಲ್ಲ ಎಂಬ ಮಾತನ್ನು ಸರ್ವಜ್ಞನು 'ಬಿಸಿಬೇಕ ತಂಗಳೂಣಬೇಡ। ವೈದ್ಯರಾ ಬೆಸನವೇ ಬೇಡ' ಎಂದಿದ್ದಾನೆ. ಮತ್ತೊಂದೆಡೆಗೆ ಅರೆಬೆಂದ ಆಹಾರವನ್ನು ಸೇವಿಸಬಾರದೆಂದಿದ್ದಾನೆ.

ನವಣೆಯಿಂದ ತಯಾರಿಸಿದ ಅನ್ನಕ್ಕೆ ಒಳ್ಳೆಯ ತುಪ್ಪ ಜೊತೆಗೆ ಬೆಣ್ಣೆಯೂ ಇದ್ದರೆ ಅದು ಊಟಕ್ಕೆ ಹಿತವೆಂದು ಸರ್ವಜ್ಞನ ಅಭಿಪ್ರಾಯ. ಅದಕ್ಕಾಗಿ,

ಜೋಳದಾ ಬೋನಕ್ಕೆ ಬೇಳೆಯ ತೊಗೆ
ಯಾಗಿ ಕಾಳೆಮ್ಮೆ ಕರೆದ ಹೈನಾಗಿ
ಬೆಳವಲ ಮೇಳ ನೋಡೆಂದ ಸರ್ವಜ್ಞ।

ಎಂದಿದ್ದಾನೆ. ಇಂತಹ ಅನೇಕ ಮಾತುಗಳು ಆರೋಗ್ಯಕ್ಕೆ ಹಿತಕಾರಿಯಾದ ಆಹಾರ ಪದಾರ್ಥಗಳ ಬಗೆಗೆ ತಿಳಿಸಿಕೊಡುತ್ತವೆ.

ಕೆಲವರು ಊಟವಾದ ಕೂಡಲೇ ಮಲಗಿಬಿಡುತ್ತಾರೆ. ಊಟವಾದ ಬಳಿಕ ಮೊದಲನೆ ಹಂತವು ಕಫದ್ದಾಗಿರುವುದರಿಂದ ಆಗ ನಮಗೆ ಜಡತೆಯು ಸಂಜ್ಞೆ ಒಡಮೂಡಿ ಬರುತ್ತದೆ. ಆದ್ದರಿಂದ ಇದನ್ನು ಹೋಗಲಾಡಿಸಲು.

ಉಂಡು ಕೆಂಡವ ಕಾಸಿ ಉಂಡು ಶತಪದ ನಡೆದು
ಉಂಡೆಡದ ಮಗ್ಗುಲಲಿ ಮಲಗಿದರೆ ವೈದ್ಯನ
ಬಂಡಾಟವಿಲ್ಲ ಸರ್ವಜ್ಞ।

ಎಂದಿದ್ದಾನೆ. ಊಟವಾದ ಬಳಿಕ ಸ್ವಲ್ಪ ಹೊತ್ತು ಬೆಂಕಿಯನ್ನು ಕಾಯಿಸಿ. ಕನಿಷ್ಠ ಪಕ್ಷ ನೂರು ಹೆಜ್ಜೆಗಳಷ್ಟಾದರೂ ನಡೆದುಬಂದು ಎಡಮಗ್ಗಲಿಗೆ ಮಲಗಿಕೊಳ್ಳಬೇಕೆಂದು ಸರ್ವಜ್ಞನು ಸಲಹೆಕೊಡುತ್ತಾನೆ. ನಮ್ಮ ದೇಹವು ಬಲಭಾಗಕ್ಕೇನೆ ವಿಶೇಷವಾಗಿ ದಣಿದಿರುವುದು. ಆದ್ದರಿಂದ ಬಲಭಾಗಕ್ಕೆ ಮಲಗಿದರೆ ಮತ್ತೆ ಆ ಅಂಗಗಳಿಗೆ ಶ್ರಮವೆನಿಸಿ ವಿಶ್ರಾಂತಿ ದೊರಕದು. ಎಡಭಾಗಕ್ಕೆ ಮಲಗುವುದರಿಂದ ಯಕೃತ್ತಿನಿಂದ ಪಿತ್ತರಸವು ಸುಲಭವಾಗಿ ಹರಿದು ಬರಲು ಸಹಾಯಕವಾಗುವುದು ಹಾಗೂ ಯಕೃತ್ತಿನ ಮೇಲೆ ಭಾರಬೀಳದು. ಇದಲ್ಲದೆ ದೊಡ್ಡ ಕರುಳಿನಲ್ಲಿ ಸಂಗ್ರಹಿತವಾಗುವ ಮಲವು ಮಲಾಶಯ ಭಾಗಕ್ಕೆ ಬರಲು ಅನುಕೂಲವಾಗುವುದು. ಆದ್ದರಿಂದ ಈ ವಿಷಯದಲ್ಲಿ ಸರ್ವಜ್ಞನು ಹೇಳಿದ ಮಾತು ಶುದ್ಧ ವೈಜ್ಞಾನಿಕವೆನಿಸಿದೆ.

ಜೀವನಧಾರಣೆಗೆ ಆಹಾರವು ಅದೆಷ್ಟು ಮುಖ್ಯ ಎಂಬುದನ್ನು ಸರ್ವಜ್ಞ ತುಂಬ ಚೆನ್ನಾಗಿ ಬಣ್ಣಿಸಿದ್ದಾನೆ. "ಅನ್ನಕ್ಕೆ ಮಿಗಿಲು ಇನ್ನಿಲ್ಲ ಜಗದೊಳಗೆ" ಎಂಬುದು ಅವನ ಮತ. ಅದಕ್ಕಾಗಿ.

ಅನ್ನ ದೇವರ ಮುಂದೆ ಇನ್ನುದೇವರು ಉಂಟೆ?
ಅನ್ನವಿರುವ ತನಕ ಪ್ರಾಣವು; ಜಗದೊಳ
ಗನ್ನವೇ ದೈವ ಸರ್ವಜ್ಞ।

ಎಂದು ಹೇಳಿರುವನು.

ಈ ಅನ್ನವು ಒಂದು ವೇಳೆ ದೊರೆಯದಿದ್ದಾಗ,

ನಿದ್ದೆಗಳು ಬಾರವು ಬುದ್ಧಿಗಳು ತಿಳಿಯವು
ಮುದ್ದಿನ ಮಾತು ಸೊಗಸದು ಬೋನದ
ಮುದ್ದೆತಪ್ಪಿದರೆ ಸರ್ವಜ್ಞ।

ಇನ್ನು ಉಪವಾಸವನ್ನು ಮಾಡಿದರೆ—

ಕಣ್ಣುಗಳು ಇಳಿಯುವವು ಬಣ್ಣಗಳು ಅಳಿಯುವವು
ಹುಣ್ಣಿಮೆಯು ಹೋದ ಶಶಿಯಂತೆ ಅಶನವನು
ಉಣ್ಣದವ ನೋಡಲು ಸರ್ವಜ್ಞ।

ಇದೇ ಮಾತನ್ನು ಇನ್ನೊಂದೆಡೆಯಲ್ಲಿ

ಕೂಳಿಲ್ಲದವ ನೋಡಲು ಹಾಳು ಮನೆಯಂತಕ್ಕು
ಹೇಳವ ಹೊಕ್ಕ ರುಜೆಗಳಿಂ ತನುವೊಡೆದು
ಹಾಳಿಯಂತಕ್ಕು ಸರ್ವಜ್ಞ।

ಆದ್ದರಿಂದ,

ಎತ್ತ ಹೋದರೂ ಒಂದು ತುತ್ತು ಕಟ್ಟಿರಬೇಕು
ತುತ್ತೊಂದು ಗಳಿಗೆ ತಡೆದಿಹರೆ ಕೈಹಿಡಿದು
ಎತ್ತಬೇಕೆಂದ ಸರ್ವಜ್ಞ।

ಮತ್ತೊಂದು ಸಂದರ್ಭದಲ್ಲಿ,

ತಿತ್ತಿ ಹೊಟ್ಟೆಗೆ ಒಂದು ತುತ್ತು ತಾ ಹಾಕುವುದು
ತುತ್ತೆಂಬ ಶಿವನ ತೊರೆದಿಹರೆ ಸುಡುಗಾತಿ
ಗೆತ್ತಬೇಕೆಂದ ಸರ್ವಜ್ಞ।

ಎಂಬ ಮಾತುಗಳಲ್ಲಿ ಈತನು ಅನ್ನದೇವನ ಮಹತ್ವವನ್ನು ಬಣ್ಣಿಸಿದ್ದಾನೆ.

*   *   *   *   *

## ೨. ಚಟಗಳು

ಸುಖದ ತಪ್ಪು ಕಲ್ಪನೆಯಿಂದ ಮಾನವನು ಕೆಲವು ದುಶ್ಚಟಗಳಿಗೆ ದಾಸನಾಗುವನು. ಇಂತಹ ಸನ್ನಿವೇಶಗಳನ್ನು ಸರ್ವಜ್ಞನು ಅಂದಿನ ಜೀವನದಲ್ಲೂ ಕಂಡು, ಕನಿಕರಪಟ್ಟು ಕೆಲ ವಚನಗಳನ್ನು ಹಾಡಿರುದು ಕಂಡುಬರುತ್ತದೆ. ಅಫೀಮು, ಮಡಿಕೆ, ಬಂಗಿ, ತಂಬಾಕು ಸೇವನೆ, ಜೂಜಾಟ, ವೇಶ್ಯಾಗಮನ, ಲಂಚ ಪಡೆಯುವುದು, ದುಡಿಯದೇ ತಿರುಗುವುದು — ಇವೆಲ್ಲ ಸಲ್ಲದ ಗುಣಗಳು.

### i. ಅಫೀಮು ಸೇವನೆ

ಮದ್ದು ಮೆದ್ದವನು ಪ್ರಬುದ್ಧನೆನಬೇಡ
ಮದ್ದು ಸಂಕಟವನೆಬ್ಬಿಸಲು ಅತ್ತ
ಗುದ್ದಿಕೊಳುತಿಹನು ಸರ್ವಜ್ಞ ।

ಎಂದರೆ ಅಫೀಮನ್ನು ಸೇವಿಸುವವನು ಬುದ್ಧಿವಂತನಲ್ಲವೆಂದು ತಿಳಿಯಬೇಕು. ಮದ್ದು ಸಂಕಟವನ್ನೆಬ್ಬಿಸಿದರೆ ಅತ್ತ ಅವನು ತನ್ನ ಮೈಯನ್ನು ಗುದ್ದಿಕೊಳ್ಳುವುದನ್ನೂ ಕಾಣಬಹುದು. ಹೀಗಿದೆ ಅಫೀಮನ್ನು ಸೇವಿಸುವವರಾಟ!

### ii. ಮದಿರಾ ಸೇವನೆ

ಮದಿರಾ ಸೇವನೆಯಿಂದ ಆರ್ಥಿಕ, ನೈತಿಕ ಮಟ್ಟಗಳು ಕೆಳಗಿಳಿಯುವುದರೊಡನೆ ಆರೋಗ್ಯವೂ ಹಾಳಾಗುವುದು. ಆದ್ದರಿಂದಲೇ ಸರ್ವಜ್ಞನು,

i. ಹೆಂಡವನು ಸುರಿಸುರಿದು ಕಂಡವರ ತಾ ಜರಿದು
ಬಂಡು ನುಡಿಗಳನು ಸುರಿಯುತ್ತಲಿರುವವನ
ಕಂಡಿಹರೆ ಸರ್ವಜ್ಞ ।

ii. ಮಧ್ಯಪಾನವ ಮಾಡಿ ಇದ್ದುದೆಲ್ಲವ ನೀಗಿ
ಬಿದ್ದು ಬರುವವನ ಸದ್ದಡಗಿ ಸಂತಾನ
ವೆದ್ದು ಹೋಗುವದು ಸರ್ವಜ್ಞ ।

iii. ಸುರೆಯ ಸೇವಿಸುವಂಗೆ....
ಶಿರವಿಹುದು ಸ್ಥಿರವಲ್ಲ ನೋಡ

ಎಂದು ಹೇಳಿರುವನು.

### iii. ಬಂಗು ಸೇವನೆ

ಅಂಗಿ ಅರಿವೆಯ ಮಾರಿ ಬಂಗಿಯನು ತಾ ಸೇದಿ
ಮಂಗನಂದದಲಿ ಕುಣಿವಾತ ಭವಭವದಿ
ಭಂಗಗೊಳುತಿಹನು ಸರ್ವಜ್ಞ ।

### iv. ಧೂಮ್ರಪಾನ

ಹೊಗೆ ಸೊಪ್ಪು ಸೇವನೆ ತುಂಬ ಅಪಾಯಕಾರಿ ಎಂದು ಕಂಡು ಬಂದಿದೆ. ಕ್ಯಾನ್ಸರ್ ರೋಗಕ್ಕೆ ತಂಬಾಕು ಸೇದುವವರೇ ಅಧಿಕ ಸಂಖ್ಯೆಯಲ್ಲಿರುವರೆಂದು ಸಂಶೋಧಿತ ಅಂಕೆ–ಸಂಖ್ಯೆಗಳಿಂದ ತಿಳಿದು ಬಂದಿದೆ. ಇನ್ನು ಕೆಮ್ಮು, ಎದೆ ಉರಿತ, ಹಸಿವು ಕಡಿಮೆಯಾಗುವುದು, ಉಬ್ಬಸ ಬರುವುದು, ಗೂರಲು, ಕ್ಷಯರೋಗ–ಈ ವಿಕಾರಗಳು ಕೂಡ ಬರದೇ ಇರವು. ಹೀಗಾಗಿ ಸರ್ವಜ್ಞನು "ಹೊಗೆಯ ತಿಂಬುವುದೊಂದು ಸುಗುಣವೆಂದೆನಬೇಡ" ಎಂದು ನಿಂದಿಸಿದ್ದಾನೆ.

## v. ವೇಶ್ಯಾಗಮನ

ದೇಹ ಸುಖಕ್ಕೆ ಹೆಂಡತಿಯನ್ನು ಕಟ್ಟಿಕೊಂಡು ಅದೇ ದೇಹಸುಖಕ್ಕಾಗಿ ವೇಶ್ಯೆಯರ ಸಂಪರ್ಕ ಬೆಳಸಿ ಹಣವನ್ನು ಕಳೆದುಕೊಳ್ಳುವುದಲ್ಲದೆ ರೋಗವನ್ನೂ ಅಂಟಿಸಿಕೊಳ್ಳುವ ಜನರು ನಮ್ಮ ಸಮಾಜದಲ್ಲುಂಟು. ಇವರಿಂದ ಗನೋರಿಯಾ, ಸಿಫಿಲಿಸ್‌ಗಳಂತಹ ಭಯಂಕರವಾದ ಕಾವಿನ ರೋಗಗಳು ಹಬ್ಬುತ್ತವೆ. ವೇಶ್ಯೆಯು ತಾನೆಂತಹ ಕುರೂಪಿ ಇದ್ದರೂ ತನ್ನ ರತಿಕಲೆಯಿಂದ ಜನರನ್ನು ಬಲೆ ಒಡ್ಡಿ ಹಿಡಿಯುವ ಸಾಮರ್ಥ್ಯ ಹೊಂದಿದ್ದಾಳೆ. ಅದಕ್ಕೆ ಸರ್ವಜ್ಞನು,

> ಕೋಡಗನ ಮುಸುಡಾಗಿ ಬೀಡುಗಾಲವಳಾಗಿ
> ನೋಡುವರಿಗೆಲ್ಲ ನಗೆಯಾಗಿ ಇಂಬರಿದು
> ಕೂಡುವಳು ಸತಿ (ರತಿ)ಯು ಸರ್ವಜ್ಞ ।

ಅಂದರೆ ಕೋತಿಯಂತಹವಳಾದರೂ ಕಾಮಶಾಸ್ತ್ರದ ಕಲೆಯನ್ನು ಬಲ್ಲವಳಾದರೆ ರತಿಯಂತೆಯೇ ಪ್ರೀತಿಯನ್ನುಂಟು ಮಾಡುತ್ತಾಳೆ, ಎಂದು ಹೇಳಿದ್ದಾನೆ. ಇಂತಹ ಜಾತಿಯುರನ್ನು ಒಮ್ಮೆ ಹಚ್ಚಿಕೊಂಡರೆ ಎಂದಿಗೂ ಬಿಡರು ಎಂಬ ಮಾತಿನಲ್ಲಿಯೂ ಸತ್ಯಾಂಶವಿದ್ದು ಕಾಣುತ್ತದೆ. ವೇಶ್ಯೆಯರಿಗಾಗಿ ಲೇಸಾದ ಸತಿಯನ್ನು ಬಿಡುವವರನ್ನು,

> ಕಾಡಾಡಿ ಕೆಂಪು ಮಾಣಿಕವ ಕಲ್ಲೆಂದು
> ಈಡಾಡಿದಂತೆ ಸರ್ವಜ್ಞ ।

ಎಂದೂ ವೇಶ್ಯೆಯರನ್ನು ಕುರಿತು,

i. ಕೆಟ್ಟ ಮೈ ಹೆಂಗಸನು ಬಟ್ಟೆಯಲಿ ತುರುಚಿಯನು
   ಅಟ್ಟಿಟ್ಟ ಕಡಿವ ಕಡಜನ ಹುಟ್ಟನ್ನು
   ಮುಟ್ಟಬೇಡೆಂದ ಸರ್ವಜ್ಞ ।

ii. ಹೆಣವಳಿದುಹೋದರೂ ಹೆಣಬೀಳ ಹೊಡೆದರೂ
   ಮೊಣಕಾಲ ಗಣಕೆ ಮುರಿದರೂ ಹಾದರದ
   ಕುಣಿಕೆ ಬೇಡೆಂದ ಸರ್ವಜ್ಞ ।

ಎಂದು ಹೇಳಿದ್ದಾನೆ. 'ತನ್ನ ಸತಿಯಲ್ಲಿಯೇ ರತಿಯನ್ನು ಕಾಣಬೇಕು' ಎಂಬುದು ಸರ್ವಜ್ಞನ ವಾದ. ಅದ್ದರಿಂದಲೇ ಅವನು "ಸೂಳೆಯನು ನೆರೆ ನಂಬಿ ಗಾಳಕ್ಕೆ ಸಿಲುಕದಿರು" ಎಂದು ಎಚ್ಚರಿಸಿದುದು ಕಂಡುಬರುತ್ತದೆ.

## vi. ತಾಂಬೂಲ ಸೇವನೆ

ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ನಿತ್ಯವೂ ತಾಂಬೂಲ ಸೇವಿಸಬೇಕು ಎಂದು ಆಯುರ್ವೇದದಲ್ಲಿ ಹೇಳಿದ್ದಾರೆ. ಈಗಿನ ವೈದ್ಯರು ತಾಂಬೂಲ ಸೇವನೆಯನ್ನು ವಿರೋಧಿಸುವುದಕ್ಕೆ ಅದರಲ್ಲಿ ತಂಬಾಕಿರುವುದೇ ಮುಖ್ಯ ಕಾರಣವಾಗಿದೆ. ಅಲ್ಲದೆ ಮೇಲಿಂದ ಮೇಲೆ ಎಲೆ–ಅಡಿಕೆ ಸುಣ್ಣಗಳನ್ನು ಮಾತ್ರ ಮೆಲ್ಲುತ್ತಾ ಇರುವುದೂ

ಒಳಿತಲ್ಲ. ಹೆಚ್ಚಾಗಿ ಎಲೆ – ಅಡಿಕೆ ತಿನ್ನುವ ಜನ ಹಲ್ಲು – ಒಸಡು ಹಾಗು ಬಾಯಿಯ ಆರೋಗ್ಯದೆಡೆಗೂ ಗಮನಹರಿಸುವುದಿಲ್ಲ. ಶಾಸ್ತ್ರರೀತ್ಯಾ ಊಟವಾದ ಬಳಿಕ ತಾಂಬೂಲ ಸೇವನೆ ಮಾಡಿದರೆ ಬಾಯಿಯ ಆರೋಗ್ಯ, ಜೀರ್ಣಕ್ರಿಯೆ ಹಾಗೂ ಕಫ ವಿಕಾರಗಳು ದೂರವಾಗುವುದಕ್ಕೆ ಸಹಾಯವಾಗುವುದು. ಈ ಸಂದರ್ಭದಲ್ಲಿ ಸರ್ವಜ್ಞನು "ಅಡಿಕೆ ಇಲ್ಲದ ವೀಳ್ಯ ಕಿಟಕಿ ಇಲ್ಲದ ಮನೆಯು" ಎಂದು ಹೇಳಿ' ಎಣ್ಣೆಯ ಕುಡಿಕೆ ಒಡೆದಂತೆ ಸರ್ವಜ್ಞ' ಎಂದು ಹೇಳಿದ್ದಾನೆ. ಇನ್ನೊಂದೆಡೆಗೆ,

ಗಾಳಿ ದೂಳಿಯ ದಿನಕೆ ಮಾಳಿಗೆಯ ಮನೆಲೇಸು
ಹೋಳಿಗೆ ತುಪ್ಪ ಉಣಲೇಸು ಬಾಯಿಗೆ
ವೀಳೆಯವೇ ಲೇಸು ಸರ್ವಜ್ಞ ।

ಮತ್ತೊಂದು ಸಂದರ್ಭದಲ್ಲಿ–

ಎಲೆಯು ಮೆಲ್ಲದ ಬಾಯಿ ತಲೆಯಿಲ್ಲದಾ ಮುಂಡ
ಎಲೆ ಮೆದ್ದು ಬರಲು ಬೀದಿಯಲಿ ಈರಯ್ದು
ತಲೆಯನಂತಕ್ಕು ಸರ್ವಜ್ಞ ।

ಎಂದು ತಾಂಬೂಲ ಸೇವನೆಯ ಅಗತ್ಯವನ್ನು ಎತ್ತಿ ನುಡಿದಿರುವನು.

* * * * * *

## ೩. ಮನಸ್ಸು

ಮನಸ್ಸು ಒಂದು ಮರ್ಕಟವಿದ್ದಂತೆ. ಅದು ಸದಾ ತನ್ನ ಹತೋಟಿಯಲ್ಲಿಯೇ ವ್ಯಕ್ತಿಯನ್ನು ಬಂಧಿಸಿಕೊಳ್ಳಲು ಪ್ರಯತ್ನಿಸುತ್ತದೆ. ಶರೀರದ ಪಂಚ ಜ್ಞಾನೇಂದ್ರಿಯ–ಕರ್ಮೇಂದ್ರಿಯಗಳನ್ನು ತನ್ನ ಅಧೀನದಲ್ಲಿ ತೆಗೆದುಕೊಂಡು ವ್ಯಕ್ತಿಯ ಅಧಃಪತನಕ್ಕೆ ಕಾರಣವೆನಿಸುವುದು. ಆದ್ದರಿಂದ ಸರ್ವಜ್ಞನು,

ಕಣ್ಣು ನಾಲಗೆ ಮನವು ತನ್ನವೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನ ಕೊಲ್ಲುವವು ಸರ್ವಜ್ಞ ।

ಎಂದಿದ್ದಾನೆ.

ಮನಸ್ಸು ಮಾನವನಲ್ಲಿ ಸ್ವಸ್ಥವಾಗಿದ್ದರೇನೆ ಒಳ್ಳೆಯ ಆರೋಗ್ಯವು ಲಭಿಸುವುದು. ಆದ್ದರಿಂದ ಆಯುರ್ವೇದದಲ್ಲಿ "ಪ್ರಸನ್ನಾತ್ಮೇಂದ್ರಿಯ ಮನಾಃ ಸ್ವಸ್ಥ ಇತ್ಯ ಭಧೀಯತೆ" ಎಂದರೆ ಪ್ರಸನ್ನವಾದ ಆತ್ಮ, ಇಂದ್ರಿಯ, (ಪಂಚ ಜ್ಞಾನೇಂದ್ರಿಯ–ಕರ್ಮೇಂದ್ರಿಯಗಳು) ಮನಸ್ಸುಳ್ಳವರಿಗೇ 'ಸ್ವಸ್ಥ'ನೆಂದು ಕರೆದಿದ್ದಾರೆ. ಸರ್ವಜ್ಞನು ಕೂಡ ಈ ಮಾತನ್ನು "ಮನಕೆ ಹರುಷವು ಲೇಸು" ಎಂದು ಪುಷ್ಟೀಕರಿಸಿದ್ದಾನೆ. ಮತ್ತೊಂದೆಡೆಗೆ 'ಚಿತ್ತಕ್ಕೆ ಸ್ಥಿರವಿಲ್ಲ' ಎಂದು ಹೇಳಿ ಈ ಮನಸ್ಸಿನ ಚಂಚಲಗುಣವನ್ನು ಎತ್ತಿ ತೋರಿದ್ದಾನೆ.

* * * * *

## ೪. ಚಿಂತೆ

'ಚಿಂತೆ ಹಾಗು 'ಚಿತೆ'ಗಳಲ್ಲಿ ಕೇವಲ ಒಂದು ಬಿಂದು ಮಾತ್ರ ಅಂತರವಿದೆ. ಅದರಂತೆ ಚಿಂತೆ ಮಾಡುವವನು ತನ್ನ ದೇಹದಲ್ಲಿ ಚಿತೆಯನ್ನು ಅಡಗಿಸಿಕೊಂಡಂತೆಯೇ. ಇತ್ತೀಚಿಗೆ ಇಂತಹ ಚಿಂತೆಗಳಿಂದ ಹುಟ್ಟಿಕೊಂಡ ಮನೋರೋಗಗಳನ್ನು ನಿವಾರಿಸಲು ಮನೋವಿಜ್ಞಾನವು ಸತತವಾಗಿ ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲ. ಚಿಂತೆ ಮಾಡುವ ಮನುಷ್ಯನಿಗೆ ಔಷಧಿಯನ್ನು ಕೊಡುವುದೆಂದರೆ ಒಡೆದ ಮಡಕೆಯಲ್ಲಿ ನೀರನ್ನು ತುಂಬುತ್ತ ಹೋದಂತೆಯೇ. ಆದ್ದರಿಂದ ಸರ್ವಜ್ಞನು,

ಅಂತಿಕ್ಕು ಇಂತಿಕ್ಕು ಎಂತಿಕ್ಕು ಎನಬೇಡ
ಚಿಂತಿಸಿ ದೇಹಬಡವಕ್ಕು ಶಿವ ತೋರಿ
ದಂತಿಹುದೇ ಲೇಸು ಸರ್ವಜ್ಞ ।

ಎಂದಿದ್ದಾನೆ. ಮತ್ತೊಂದೆಡೆಗೆ,

ವ್ಯಸನದಲಿ ದೇಹವು ಮಸಣವನು ಕಾಣುವುದು
ವ್ಯಸನವನು ಬಿಟ್ಟು ಹಸನಾಗಿ ದುಡಿದರೆ
ಅಶನ ವಸನಗಳು ಸರ್ವಜ್ಞ ।

ಹೀಗೆ ಅಭಿಪ್ರಾಯಪಟ್ಟಿದ್ದಾನೆ. 'ಚಿಂತೆ ಮುಪ್ಪಿಗೆ ಕಾರಣ' ಎಂಬ ಮಾತು ಇಲ್ಲಿ ಸ್ಪಷ್ಟವಾಗಿದೆ.

## ೫. ರೋಗಿ

ರೋಗಿಯಾದವನು ಸದಾ ಪಥ್ಯದಿಂದಲೇ ಇರಬೇಕೆಂಬುದು ಸರ್ವಜ್ಞನ ಮತವಾಗಿದೆ. ಪಥ್ಯವು ಕೂಡ ಒಂದು ಚಿಕಿತ್ಸೆಯ ಅಂಗವಾಗಿದೆ. ಆದ್ದರಿಂದ 'ಭೋಗ ರೋಗಿಗೆ ಹೊಲ್ಲ' ಎಂದಿದ್ದಾನೆ ಈತ. ರೋಗವಾದಾಗ್ಗೆ ಸ್ತ್ರೀ ಸಂಪರ್ಕವಾಗಲೀ ಅಥವಾ ರೋಗ ಸಂಬಂಧವಾದ ಆಹಾರ–ವಿಹಾರಗಳನ್ನು ಅನುಸರಿಸುವುದಾಗಲೀ ಒಳಿತಲ್ಲ. ಇನ್ನೊಂದೆಡೆಗೆ 'ಬದನೆ ರೋಗಿಗೆ ಹೊಲ್ಲ' ಎಂದರೆ ಸರ್ವ ದೋಷ ಗಳನ್ನು ಪ್ರಕೋಪಗೊಳಿಸುವ ಬದನೆಕಾಯಿಯನ್ನು ರೋಗ ಬಂದಾಗ ತಿನ್ನಬಾರದೆಂದು ಸೂಚಿಸಿದ್ದಾನೆ. ಮತ್ತೊಂದು ಸಂದರ್ಭದಲ್ಲಿ 'ಜ್ವರ ಬಂದ ಮನುಜಂಗೆ ನೆರೆಹಾಲು ಕಹಿಯಕ್ಕು' ಎಂದು ಜ್ವರದಲ್ಲಿರುವ ಅರುಚಿಯ ಬಗ್ಗೆ ತಿಳಿಸಿದ್ದಾನೆ. ಕೊನೆಗೆ 'ಮರಣಕ್ಕೆ ಮದ್ದಿಲ್ಲ' ಎಂಬ ಸತ್ಯದ ಮಾತನ್ನೂ ಹೇಳಿದ್ದಾನೆ. ಅದ್ದರಿಂದ,

ಇಂದು ನಾಳೆ ಎಂದು ತಂದು ಕೂಡಿಡಬೇಡ
ಬಂದುದನೆ ಉಂಡು ಸುಟಿಸುತ ಬೇನೆಯದು
ಬಂದಾಗ ಸರಳು ಸರ್ವಜ್ಞ।

ಎಂದು ಆರೋಗ್ಯ ಜೀವನದ ತಾತ್ವಿಕ ದೃಷ್ಟಿಯನ್ನು ಅರುಹಿದ್ದಾನೆ.

* * * * *

## ೬. ನಿದ್ರೆ ಹಾಗು ಸ್ನಾನ

ನಿತ್ಯವೂ ಒಳ್ಳೆಯ ಸ್ನಾನ ಹಾಗೂ ಸುಖಕರವಾದ ನಿದ್ರೆಯು ಮಾನವನ ಆರೋಗ್ಯ ಜೀವನಕ್ಕೆ ಅವಶ್ಯವೆನಿಸುತ್ತವೆ. ನಿದ್ರೆಗಾಗಿ ಒಳ್ಳೆಯ ಹಾಸಿಗೆಯು ಅವಶ್ಯವಾದಂತೆ ಸ್ನಾನಕ್ಕೆ ಎಣ್ಣೆಯೂ ಅನಿವಾರ್ಯ ಎಂಬ ಮಾತನ್ನು ಈ ಕೆಳೆಕಂಡಂತೆ ಹಾಡಿದ್ದಾನೆ—

ಹಾಸು ಇಲ್ಲದ ನಿದ್ರೆ ಪೂಸು ಇಲ್ಲದ ಮೀಹ
ಭಾಷೆಯರಿಯದವನ ಗೆಳೆತನ ಮೋಟಗ್ಯೆ
ಬೀಸಿ ಕರೆದಂತೆ ಸರ್ವಜ್ಞ ।

ಮತ್ತೊಂದೆಡೆಗೆ 'ನಿದ್ರೆಗೆ ತುದಿಗಟ್ಟೆ ಹೊಲ್ಲ' ಎಂದಿದ್ದಾನೆ. ತುದಿಗಟ್ಟೆಗೆ ಮಲಗುವುದರಿಂದ 'ಬೀಳುವೆ' ಎಂಬ ಭಯದಿಂದ ಸುಖವಾದ ನಿದ್ರೆಯು ಆಗುವುದು ಸಾಧ್ಯವಿಲ್ಲ. ಈ ಮೊದಲೇ ತಿಳಿದಂತೆ 'ಉಂಡು ಎಡಮಗ್ಗುಲಿಗೆ ಮಲಗಿ' ಎಂಬ ಮಾತನ್ನೂ ಇಲ್ಲಿ ಜ್ಞಾಪಿಸಿಕೊಳ್ಳುವುದು ವಿಹಿತ.

* * * * *

## ೭. ಇಂದ್ರಿಯಂಗಳ ಸ್ವಾಧೀನತೆ

ಪಂಚ ಕರ್ಮೇಂದ್ರಿಯ-ಜ್ಞಾನೇಂದ್ರಿಯಗಳನ್ನು ಮಾನವನು ತನ್ನ ಹಿಡಿತದಲ್ಲಿಟ್ಟುಕೊಂಡು ಬಾಳಬೇಕಾಗುತ್ತದೆ. ಇಲ್ಲದಿದ್ದರೆ ಅವು ಮಾನವನ ಆರೋಗ್ಯ ಹಾಗೂ ಆರ್ಥಿಕ ಜೀವನದ ಅಧಃಪತನಕ್ಕೆ ನಾಂದಿ ಹೇಳುತ್ತದೆ. ಆದ್ದರಿಂದ,

ಇಂದ್ರಿಯದ ಆಸೆಗಳ ಬಂಧಿಸದೆ ಕೊಂದವನು
ಸುಂದರನು ಅಕ್ಕು ಸುಖಿಯಕ್ಕು ಲೋಕಕ್ಕೆ
ಚಂದಿರನು ಅಕ್ಕು ಸರ್ವಜ್ಞ ।

ಎಂದಿದ್ದಾನೆ. ಇನ್ನೊಂದೆಡೆಗೆ 'ಇಂದ್ರಿಯವ ತಿಳಿದವ ಯೋಗಿ' ಎಂಬ ಮಾತನ್ನು ಹೇಳಿದುದೂ ಮೇಲಿನ ಅಂಶವನ್ನು ಪುಷ್ಟೀಕರಿಸುತ್ತದೆ.

## ೮. ರೋಗ ಚಿಕಿತ್ಸೆ

ಚಿಕಿತ್ಸೆಯ ದೃಷ್ಟಿಯಿಂದಲು ಸರ್ವಜ್ಞನು ಕೆಲ ಮಾತುಗಳನ್ನು ಹೇಳಿದ್ದು ಕಂಡು ಬರುತ್ತದೆ.

### i. ಚೇಳಿನ ವಿಷಕ್ಕೆ

ಮಾನವನ ಚೇಳಿಂಗೆ ನೀನಂಜದಿರು
ಬರಿದೆ ಜೇನುತುಪ್ಪವನು ನೆಕ್ಕಿದರೆ ಆ ಬಾಧೆ
ಕ್ಷೀಣವಕ್ಕು ಸರ್ವಜ್ಞ ।

ii. ನೋವು ನಿವಾರಣೆಗೆ

ಸುಣ್ಣೌಡಲ ಎಣ್ಣೆಗಳ ಚೆನ್ನಾಗಿ ಮರ್ದಿಸುತ
ತನ್ನ ನೋವಿದ್ದಲ್ಲಿ ತಿಕ್ಕಿದರೆ ಆ ಬಾಧೆ
ತಣ್ಣಗಿರಲಕ್ಕು ಸರ್ವಜ್ಞ!

iii. ಮೂಲವ್ಯಾಧಿಗೆ

ಮೂಲಂಗಿಯನು ಕೊಚ್ಚಿ ಮೂಲವ್ಯಾಧಿಗೆ ಬೆರಸೆ
ಮೇಲೈಸಿಕೊಂಡು ಉಂಡರ
ಆ ಬಾಧೆ ಹಾಳಾಗಲಕ್ಕು ಸರ್ವಜ್ಞ!

ಅಥವಾ

ಆಲದಾ ಎಲೆಗಳನು ಜ್ವಾಲೆಯಿಂದಲಿ ಸುಟ್ಟು
ಮೇಲಾದ ಎಣ್ಣೆಯೊಳು ಹಚ್ಚಿದರೆ
ಆ ಬಾಧೆ ಹಾಳಾಗಲಕ್ಕು ಸರ್ವಜ್ಞ!

iv. ಕೆಸರಿನಿಂದಾದ ಹುಣ್ಣಿಗೆ

ಕೆಸರಿನಿಂದಾದುಣ್ಣಿಗೆ ಕ್ಷೀರದಾನ ಕೆನೆ ಹಚ್ಚು
ಅರಿ ಮೈಯೆಲ್ಲ ಹಸನಕ್ಕು ಇದನಿಕ್ಕು
ಬೇರೊಂದು ಬೇಡ ಸರ್ವಜ್ಞ!

ಮೇಲಿನವುಗಳೆಲ್ಲ ಆ ಕಾಲದಲ್ಲಿ ರೂಢಿಯಲ್ಲಿದ್ದ ಜಾನಪದ ಚಿಕಿತ್ಸೆ ಎನಿಸಿವೆ. ಇವುಗಳಿಂದ ಸಂಪೂರ್ಣವಾದ ಗುಣ ಪಡೆಯುವೆವು ಎಂದು ಹೇಳಲಾಗದಿದ್ದರೂ ಸಂಪೂರ್ಣವಾಗಿ ಅಲ್ಲಗಳೆಯುವಂತೆಯೂ ಇಲ್ಲ. 'ಸುಲಭ ಚಿಕಿತ್ಸೆ' ಎಂಬ ದೃಷ್ಟಿಯಿಂದ ಇವನ್ನು ಅನುಸರಿಸಲು ಅಡ್ಡಿಯಿಲ್ಲ.

## ೯. ಉಪಸಂಹಾರ

ಸರ್ವಜ್ಞನು ಇನ್ನೂ ಅನೇಕ ವಿಷಯಗಳನ್ನು ತನ್ನ ವಚನಗಳಲ್ಲಿ ಅಲ್ಲಲ್ಲಿ ಉಪಮೆಗಳ ರೂಪದಲ್ಲಿ ಬಳಸಿರುವುದು ಕಂಡುಬರುತ್ತದೆ. ಅವನು ಹೇಳಿದ ಪ್ರತಿಯೊಂದು ಮಾತುಗಳೂ ಪ್ರತಿಶತಃ ಸತ್ಯವೆನ್ನುವಂತಿಲ್ಲ. ಉದಾ–"ನಿತ್ಯಕ್ಕೆ ಕೂಟವೊಂದು" ಎಂಬ ಮಾತಿನಲ್ಲಿ ಸ್ತ್ರೀ ಸಂಪರ್ಕದ ವಿಷಯ ಹೇಳಿದ್ದಾನೆ. ಆದರೆ ಇದು ಆರೋಗ್ಯ ಜೀವನಕ್ಕೆ ಮಾರಕವಾಗಿ ಪರಿಣಮಿಸುವುದು. ವೇಶ್ಯಾ ಜೀವನ ಹಾಗೂ ಲೈಂಗಿಕ ವಿಷಯಗಳ ಬಗೆಗೆ ಈತನು ಹೇಳಿದ ಅನೇಕ ವಿಷಯಗಳು ಅತಿರೇಕವೆನಿಸುತ್ತವೆ. ಆದ್ದರಿಂದ ಈ ಸಂದರ್ಭದಲ್ಲಿ ನಾವು ಹಂಸಕ್ಷೀರನ್ಯಾಯವನ್ನೂ ಅನುಸರಿಸುವುದೊಳಿತು.

ಆರೋಗ್ಯಕ್ಕೆ ಬೆಚ್ಚಗಿರುವ, ಸುಖ–ಹಿತಗಳಿಗೆ ಸಾಧಕವಾದ ಮನೆ, ಆರ್ಥಿಕ ಬಲ ಹಾಗೂ ವ್ಯಕ್ತಿಯ ಇಚ್ಛೆಯನ್ನರಿತು ಅವನೊಡನಾಡಿಯಾಗಿ ಇರುವ ಸತಿ ಇದ್ದರೆ ಈ ಜನ್ಮದಲ್ಲಿಯೇ ಸ್ವರ್ಗಸುಖವನ್ನು ಅನುಭವಿಸಬಹುದು ಎಂದು ಸರ್ವಜ್ಞನ ಅಭಿಪ್ರಾಯವನ್ನೂ ಇಲ್ಲಿ ಕಾಣಬಹುದು.

ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನ್ನರಿವ ಸತಿಯಾಗೆ ಸ್ವರ್ಗಕ್ಕೆ
ಕಿಚ್ಚು ಹೆಚ್ಚೆಂದ ಸರ್ವಜ್ಞ।

ಬಹುಶಃ ಈ ಮೇಲ್ಕಂಡ ಅಂಶಗಳು ಎಲ್ಲರಿಗೂ ದೊರೆತರೆ ದೈಹಿಕ ಹಾಗು ಮನೋಗತ ರೋಗಗಳು ನಿರೋಧಿಸಲ್ಪಡುವುದರಲ್ಲಿ ಸಂಶಯವಿಲ್ಲ. ಇದರೊಡನೆ 'ಮಕ್ಕಳಿರುವ ಮನೆ ಲೇಸು' ಎಂಬ ಮಾತಿನಲ್ಲಿ ಸಂತಾನಭಾಗ್ಯದ ಮಹತ್ವ ತಿಳಿಸಿದ್ದಾನೆ. ಪಾದ ರಕ್ಷೆಗಳನ್ನು ಬಳಸದೆ ಓಡಾಡಬಾರದೆಂಬ ಮಾತನ್ನು 'ಬರಿಗಾಲ ಪಯಣ ಹೊಲ್ಲ' ಎಂಬ ಮಾತು ತಿಳಿಸಿದರೆ ಬಿಸಿಲಲ್ಲಿ ಕೊಡೆ ಹಿಡಿದುಕೊಳ್ಳದೆ ಓಡಾಡಬಾರದೆಂಬ ಮಾತನ್ನು 'ಬಿಸಿಲಲ್ಲಿ ಕೊಡೆ ಲೇಸು' ಪುಷ್ಟೀಕರಿಸುತ್ತದೆ. ಹೀಗೆ ಇಂತಹ ಮಾತುಗಳು ಅನೇಕಾನೇಕವಾಗಿ ಕಂಡುಬರುತ್ತವೆ ಸರ್ವಜ್ಞನ ವಚನಗಳಲ್ಲಿ.

ಕೊನೆಯದಾಗಿ ರೋಗದ ಬಗ್ಗೆ ಹಾಗೂ ಸಾವಿಗೆ ಅಂಜಿ ನಡೆಯುವವರ ಬಗ್ಗೆ ಸರ್ವಜ್ಞನು ತುಂಬ ಮಾರ್ಮಿಕವಾಗಿ ಹೇಳಿದ್ದಾನೆ. ಇಂತಹ ಜನ 'ಇಲ್ಲಿಯೂ ಇರರು–ಅಲ್ಲಿಗೂ ಹೋಗರು' ಎಂಬಂತಿರುತ್ತಾರೆ. ಇಂತಹವರಿಗೆ ಸರ್ವಜ್ಞನ ಈ ಮಾತು ಅಮೂಲ್ಯ ರತ್ನವೇ ಸರಿ.

ಬಂದೀತು ರೋಗವೆನಗೆಂದು ಅಂಜಿಕೆ ಬೇಡ
ಬಂದುದನು ಉಂಡು ಸುಖಿಸುತ್ತ ರೋಗೆ
ಬಂದವಿಗೆದ್ದೇಳು ಸರ್ವಜ್ಞ ।

# ಅನುನಾಸಿಕ - ಯ ವ ಲ

ವಿಷ್ಣು ಸುತ

ಙ, ಞ, ಣ, ನ, ಮ ಈ ಅನುನಾಸಿಕಗಳು ಕ್ರಮವಾಗಿ ಕವರ್ಗ, ಚವರ್ಗ, ಟವರ್ಗ, ತವರ್ಗ ಮತ್ತು ಪವರ್ಗದ ಕೊನೆಯ ವ್ಯಂಜನಗಳು. ಈ ಕ್ರಮ ಎಲ್ಲ ಭಾರತೀಯ ಭಾಷೆಗಳಲ್ಲಿದೆ. ಅವರಂತೆ ದ್ರಾವಿಡ ಭಾಷೆಗಳಲ್ಲಿಯೂ ಈ ಕ್ರಮ ನಡೆದು ಬಂದಿದೆ. ಮಹಾಪ್ರಾಣಗಳಿಲ್ಲವೆಂದು ದ್ರಾವಿಡ ಭಾಷೆಗಳು ಹೇಳಿದರೂ ಎಲ್ಲಿಯೂ ಅನುನಾಸಿಕಗಳಿಲ್ಲವೆಂದು ಮಾತ್ರ ಹೇಳಿಲ್ಲ. ಅದರಂತೆ ಕನ್ನಡದಲ್ಲಿಯೂ ಅದೇ ಕ್ರಮದಿಂದಲೇ ಇಂದಿಗೂ ಅನುನಾಸಿಕಗಳು ನಡೆದು ಬಂದಿವೆ.

ಕನ್ನಡ ವರ್ಣಕ್ರಮಕ್ಕೆ ಆಕರವಾದ ಸಂಸ್ಕೃತ ವ್ಯಾಕರಣವಲ್ಲಿ ಮೇಲೆ ಹೇಳಿದ ಙ, ಞ, ಣ, ನ, ಮ ಈ ಪಂಚಾಕ್ಷರಗಳನ್ನುಳಿದು, ಬೇರೆ ಯಾವುದೇ ವರ್ಣವನ್ನು ಅನುನಾಸಿಕವೆಂದು ಹೇಳಿಲ್ಲ. ಉಳಿದೆಲ್ಲವೂ ಅನನುನಾಸಿಕಗಳೇ. ಆದರೆ ಕನ್ನಡ ವ್ಯಾಕರಣವನ್ನು, ಸಮಗ್ರವಾಗಿ ಶೋಧಿಸಿ, ರೂಪಿಸಿದ ಕೇಶವನು ತನ್ನ 'ಶಬ್ದಮಣಿದರ್ಪಣ'ದಲ್ಲಿ ಈ ಎಲ್ಲ ಅನುನಾಸಿಕಗಳನ್ನು ಹೇಳಿ ಉಳಿದ ಕಡೆಗೆ ಎಲ್ಲಿಯೂ ಉಲ್ಲೇಖವಿರದ ಯ, ವ,ಲ ಅಕ್ಷರಗಳನ್ನು ಅನುನಾಸಿಕ, ನಿರನುನಾಸಿಕ ಎರಡೂ ಕಡೆಗೆ ಹಾಕಿ, ಅವುಗಳ ಮೇಲೆ ಸಂಶೋಧಕ ಬೆಳಕು ಚೆಲ್ಲಿದ್ದಾನೆ. ಸೂತ್ರ ಹದಿನಾರರಲ್ಲಿ "ಅನುನಾಸಿಕಮುಂ ಯವಲಮನನುನಾಸಿಕ ಮುಂದಲೆಂಬರ್" ಎಂದು ಉಲ್ಲೇಖಿಸಿರುತ್ತಾನೆ. ಡಾ. ಕಿಟೆಲ್‌ರು ಇದಕ್ಕೆ "ಯ,ವ,ಲ are Nasals and Non-Nasals" ಎಂದಿಷ್ಟೇ ಹೇಳಿದ್ದಾರೆ. ಎಲ್ಲಿಯೂ ದೊರಕದ ಈ ವಿವರಣೆಗೆ ಆಕರವೇನು? ಕೇಶಿರಾಜನಿಗೆ ಇವುಗಳ ಸೂಚನೆ ತನ್ನ ಹಿಂದಿನ ವೈಯಾಕರಣಿಗಳಿಂದ ದೊರಕಿದೆಯೆ? ಕಾವ್ಯಗ್ರಂಥಗಳಿಂದ ದೊರಕಿದೆಯೆ? ಮತ್ತೆ ಯಾವುದರಿಂದಲಾದರೂ ದೊರಕಿದೆಯೆ? ಇದರ ಮೂಲ ಹೇಳುವುದು ಬಹಳ ಕಷ್ಟ. ಸಂಸ್ಕೃತ ವ್ಯಾಕರಣ ಗ್ರಂಥಗಳಿಂದಂತೂ ಮೂಲ ದೊರೆವುದು ದುರ್ಲಭ. ಇವನಿಗಿಂತಲೂ ಮೊದಲಿದ್ದ ನಾಗವರ್ಮ, ಶ್ರೀವಿಜಯರಿಂದ ಇವನಿಗೆ ಆ ಮೂಲ ದೊರಕಿರಲಾರದೆಂದು ಸ್ಪಷ್ಟವಿದೆ. ಇವರಲ್ಲದೆ ಕೇಶಿರಾಜನ ಕಾಲಕ್ಕೆ ಉಪಲಬ್ಧವಿದ್ದು ಮುಂದೆ ಕಾಣಿಲೆಯಾದ ಮತ್ತಾವುದೋ ಗ್ರಂಥ ಮೂಲ ಇವನಿಗೆ ಆಧಾರವಾಗಿದೆಯೆ? ಎಂಬುದೂ ಹೇಳಲು ಬಾರದು. ಏನೇ ಇದ್ದರೂ ಯ, ವ, ಲ ಅನುನಾಸಿಕದಲ್ಲಿ ಬರುತ್ತವೆಂದು ಮೊದಲು ನಿಮಗೆ ತಿಳಿಸಿದವನೆ ಕೇಶಿರಾಜನೆಂದು ಹೇಳಬಹುದು.

ಕೇಶವನ ಹೇಳಿಕೆಗೆ ಆಕರ ಯಾವುದೆಂದು ತಿಳಿವ ಮೊದಲು ಅಕ್ಷರಗಳು ಹುಟ್ಟುವ ತಾಣಗಳಾವವೆಂಬುದನ್ನು ಪರಿಶೀಲಿಸಬೇಕು. ಸೂತ್ರ ಮೂವತ್ತರಲ್ಲಿ,

"ಕೊರಲುಂ ಜಿಹ್ವಾ ಮೂಲಮು
ಮುರಮುಂ ತಾಲುಗೆಯು ಮೋಷ್ಠಮುಂ ನಾಸಿಕೆಯುಂ
ಶಿರಮುಂ ದಂತಮುಮೆಂದ
ಕ್ಕರಮುದಯಿಪ ತಾಣಮಾದುವೀ ಪೇಳ್ದೆಂಟುಂ"

ಎಂದು ಅಕ್ಷರಗಳು ಹುಟ್ಟುವ ಎಂಟು ತಾಣಗಳನ್ನು ಹೇಳಿರುವನು. ಸಂಸ್ಕೃತ ವ್ಯಾಕರಣ ಗ್ರಂಥಗಳೊಡನೆ ಇದನ್ನು ಹೋಲಿಸಿದಾಗ ಕೇಶವನು ಎಷ್ಟರ ಮಟ್ಟಿಗೆ ಅವುಗಳನ್ನ-ನುಸರಿಸಿದ್ದಾನೆಂಬುದು ತಿಳಿಯುತ್ತದೆ. ಸಂಸ್ಕೃತ ವ್ಯಾಕರಣ ಗ್ರಂಥಗಳಲ್ಲಿ ಅತ್ಯಂತ ಮುಖ್ಯ ಮತ್ತು ಪ್ರಮಾಣ ಗ್ರಂಥ ಪಾಣಿನಿಯ "ಅಷ್ಟಾಧ್ಯಾಯಿ". ಇದಕ್ಕೆ ವಿವರಣೆ ನೀಡಿದ ಈಚಿನ ಗ್ರಂಥಗಳಲ್ಲಿ ಭಟ್ಟೋಜಿ ದೀಕ್ಷಿತನ "ವೈಯಾಕರಣಸಿದ್ಧಾಂತ ಕೌಮುದೀ" ಇಂದಿಗೂ ಪ್ರಮಾಣವಾಗಿ ನಿಂತಿದೆ. ಸಂಜ್ಞಾಪ್ರಕರಣವಲ್ಲಿ ಅಕ್ಷರಗಳು ಹುಟ್ಟುವ ತಾಣಗಳ ವಿವರಣೆ "ತುಲ್ಯಾಸ ಪ್ರಯತ್ನಂ ಸವರ್ಣಂ" ೧–೧–೯ ಎಂಬ ಸೂತ್ರದಲ್ಲಿ ಬರುತ್ತದೆ. ಅದಕ್ಕೆ ಭಟ್ಟೋಜಿ ದೀಕ್ಷಿತನ ವಿವರಣೆ ಹೀಗಿದೆ:

ಕಂಠ—ಅ, ಕವರ್ಗ, ಹ, ವಿಸರ್ಗ
ತಾಲು— ಇ, ಚವರ್ಗ, ಯ, ಶ,
ಮೂರ್ಧಾ— ಋ, ಟವರ್ಗ, ರ, ಷ
ದಂತ— ಌ, ತವರ್ಗ, ಲ, ಸ
ಓಷ್ಠ— ಉ, ಪವರ್ಗ,
ನಾಸಿಕ— ಙ, ಞ, ಣ, ನ, ಮ
ಕಂಠ, ತಾಲು,— ಏ, ಐ
ಕಂಠ, ಓಷ್ಠ— ಓ, ಔ
ದಂತ, ಓಷ್ಠ— ವ

ಇವಲ್ಲದೆ "ಜಿಹ್ವಾ ಮೂಲೀಯಸ್ಯ ಜಿಹ್ವಾಮೂಲಂ" ಮತ್ತು "ನಾಸಿಕಾನುಸ್ವಾರಸ್ಯ" ಎಂದು ಹೇಳುತ್ತಾನೆ. ಇದರಿಂದ ಅನುನಾಸಿಕಗಳು ಮುಖ್ಯವಾಗಿ ನಾಸಿಕಾವಲಸ್ನು ಗಳೆಂದು ಪಾಣಿನಿಯ ಸೂತ್ರಕ್ಕೆ ವ್ಯಾಖ್ಯಾನಿಸುತ್ತಾನೆ. ಅನುನಾಸಿಕದ ವ್ಯಾಖ್ಯೆಯನ್ನು ಪಾಣಿನಿಯ "ಮುಖ ನಾಸಿಕ ವಚನೊ ಅನುನಾಸಿಕಃ" ೧–೧–೮ ಎಂದು ಸೂತ್ರಿಸುತ್ತಾನೆ. ಇದಕ್ಕೆ ಭಟ್ಟೋಜಿಯು "ಮುಖ ಸಹಿತ ನಾಸಿಕಯೋಚ್ಚಾರ್ಯಮಾಣೋ ವರ್ಣೋ ಅನುನಾಸಿಕ ಸಂಜ್ಞಃ ಸ್ಯಾತ್" ಎಂದು ವ್ಯಾಖ್ಯಾನಿಸುತ್ತಾನೆ. ಕೇಶಿರಾಜನು ಹೇಳಿದ "ಅಕ್ಕಮುದಯಿಪ ತಾಣ"ಗಳು ಪಾಣಿನಿಯ "ಅಷ್ಟಾಧ್ಯಾಯಿ" ಮತ್ತು ಭಟ್ಟೋಜಿ ದೀಕ್ಷಿತನ "ವೈಯಾಕರಣ ಸಿದ್ಧಾಂತ ಕೌಮುದಿ" ಇವುಗಳ ವಿವರಣೆಗೆ ಹೊಂದಿಕೊಳ್ಳುತ್ತವೆ.

ಇದರಿಂದ ಈ ವಿಷಯದಲ್ಲಿ ಕೇಶಿರಾಜನು ಪಾಣಿನಿಯನ್ನೇ ಅನುಸರಿಸಿದ್ದಾನೆಂದು ಹೇಳಬಹುದು. ಆದರೆ ಸಂಸ್ಕೃತ ವ್ಯಾಕರಣ ಅನುಸರಿಸುವಾಗ. ಕನ್ನಡ ಜಾನಪದ ಉಚ್ಚಾರಗಳನ್ನೂ ಕೇಶಿರಾಜನು ಮರೆತಿಲ್ಲವೆಂಬುದು ಅವನ ಸಂಶೋಧನ ದೃಷ್ಟಿ ತೋರಿಸಿ ಕೊಡುತ್ತದೆ. ಯ. ವ. ಲ ಈ ಮೂರು ಅಕ್ಷರಗಳನ್ನು. ಅನುನಾಸಿಕ–ಅನನುನಾಸಿಕ–ಎರಡರಲ್ಲಿಯೂ ಸೇರ್ಪಡೆ ಮಾಡಲು ಕೇಶಿರಾಜನಿಗೆ ಆಗಿನ ಜಾನಪದ ರೂಢಿ ಆಕರವಾಗಿರಲೇಬೇಕು. ಅಂದಿನ ಸಮಾಜದ ಆಡುನುಡಿಯ ಉಚ್ಚಾರವನ್ನು ಬಹಳ ಲಕ್ಷ್ಯಪೂರ್ವಕ ಅಭ್ಯಸಿಸಿ. ಸಂಶೋಧಿಸಿ. ಕೇಶಿರಾಜನು ಹಿಂದೆ ಯಾವ ಗ್ರಂಥಗಳಲ್ಲಿಯೂ ಇರದ ಯ. ವ. ಲ ಪ್ರಕರಣವನ್ನು ಸಾಧಾರ ವಿವರಿಸುತ್ತಾನೆ. ಇಂದಿಗೂ ಜನರ ಬಾಯಲ್ಲಿ ಯ, ವ. (ಲ) ಕೆಲವೊಂದು ಸಂದರ್ಭಗಳಲ್ಲಿ ಅನುನಾಸಿಕಗಳಂತೆಯೇ ಬಳಕೆಯಲ್ಲಿವೆ.

ಯ, ವ. ಲ ಅನುನಾಸಿಕ ಮತ್ತು ನಿರನುನಾಸಿಕ ಪ್ರಯೋಗಗಳನ್ನು ಕೇಶಿರಾಜನು ಕೆಳಗಿನಂತೆ ಕೊಡುತ್ತಾನೆ.

೧. ಅನುನಾಸಿಕ ಯಕಾರ—ಮೇಯಿಸಿದಂ, ನೋಯಿಸಿದಂ. ಮಯಣಂ ನಯಣಂ-ಮಾಯಂ,

೨. ಅನುನಾಸಿಕ ವಕಾರ—ಸೇವಂ. ಸೋವೆ. ಸಾವೆ. ಜಾವಂ. ಮಾವಂತಂ, ಕೋವಣಂ, ಕಾವಣಂ, ಸೇವಗೆ.

೩. ಅನುನಾಸಿಕ ಲಕಾರ—ಕೊಲ್ಲಣಗೆ. ಅಲ್ಲಣಗೆ. ಹಲ್ಲಣಂ. ಇಲ್ಲಣಂ

ಇದೇ ರೀತಿ. ನಿರನುನಾಸಿಕಗಳ ಉದಾಹರಣೆಗಳನ್ನು ಕೆಳಗಿನಂತೆ ಕೊಟ್ಟಿದ್ದಾನೆ.

೧. ನಿರನುನಾಸಿಕ ಯಕಾರ–ಬಯಕೆ. ಬಿಯದಂ. ಬಿಯಳಂ. ದಯಕಾಱಂ. ದಾಯಿಗಂ, ವಾಯಂ, ಬಯಲ್

೨. ನಿರನುನಾಸಿಕ ವಕಾರ—ಕವಳಂ. ಹವಳಂ. ತಿವಿಳಿ. ತವಕಂ. (ಅವಕಂ)

೩. ನಿರನುನಾಸಿಕ ಲಕಾರ→ಹಾಲಿಗೆ. ಹಲಸಿಗಂ. ಹಲಗೆ. ನೆಲಕಲನೆಂದು ಲೋಭಿ.

**೧. ಅನುನಾಸಿಕ ಯಕಾರ :** ಕೇಶಿರಾಜನು ಕೊಟ್ಟ ಉದಾಹರಣೆಗಳು–ಮೇಯಿ-ಸಿದಂ, ನೋಯಿಸಿದಂ. ಮಯಣಂ, ನಯಣಂ, ಮಾಯಂ. ಇವುಗಳನ್ನು ಒರೆ ಹಚ್ಚಿ ಲಾಗಿ ಕಂಡು ಬರುವ ಅಂಶ ಸ್ಪಷ್ಟವಿದೆ. ಎಲ್ಲ ಉದಾಹರಣೆಗಳ ಮೊದಲ ಅಕ್ಷರ ಅನುನಾಸಿಕಗಳೇ ಇರುತ್ತವೆ. ಇವುಗಳ ಮುಂದಿನ 'ಯ'ಕಾರ ಹಿಂದಿನ ಅನುನಾಸಿಕದ ನೆರವಿನಿಂದ ಸ್ವಾಭಾವಿಕವಾಗಿಯೇ ಅನುನಾಸಿಕದಂತೆ ಉಚ್ಚಾರವಾಗಲು ಸಾಧ್ಯವಿದೆ. ಇದರಿಂದ ಅನುನಾಸಿಕದ ಮುಂದಿನ ಯಕಾರವಷ್ಟೇ ಸಾಮಾನ್ಯವಾಗಿ ಅನುನಾಸಿಕದಲ್ಲಿ ಬರುತ್ತದೆಂಬ ಕಲ್ಪನೆಯಾಗುತ್ತದೆ. ನಿರನುನಾಸಿಕದ ಮುಂದಿನ ಯಕಾರ ಅನುನಾಸಿಕ ವಿರಬಹುದೆಂಬ ಕಲ್ಪನೆ ಇದರಿಂದ ಬರುವುದಿಲ್ಲ. ಕೇಶಿರಾಜನು ಇಂತಹ ಉದಾಹರಣೆ-

ಗಳನ್ನೇ ಕೊಟ್ಟಿಲ್ಲ. ಸಾಮಾನ್ಯವಾಗಿ ಯಕಾರ ಅನುನಾಸಿಕ ಉದಾಹರಣೆಗಳು ಕಡಿಮೆ. ನಿರನುನಾಸಿಕದ ಮುಂದಿನ ಯಕಾರ ಅನುನಾಸಿಕವಾಗುವುದಕ್ಕೆ "ಬೇಯು" ಉತ್ತಮ ಉದಾಹರಣೆ. ಇಂದಿಗೂ ಜನರ ಬಾಯಲ್ಲಿ "ಬೇಯುಂ" ಇದರಲ್ಲಿಯ 'ಯ'ಕಾರ ಅನನುನಾಸಿಕದಂತೆಯೇ ಉಚ್ಚಾರವಾಗುತ್ತದೆ. ಅದನ್ನು "ಬೇಂಯು" ಎಂದು ಗುರುತಿಸಬಹುದು. ಇನ್ನೊಂದು ಮಾತು ಕೇಶಿರಾಜನ ಬಿಂದುಗಳ ವಿವರಣೆಯಲ್ಲಿ ಬರುತ್ತದೆ. ಕೆಲವು ನಿತ್ಯ ಬಿಂದುಗಳು, ಕೆಲವು ವಿಕಲ್ಪ ಬಿಂದುಗಳು ಎಂಬುದನ್ನು ಸೂತ್ರ ಮೂವತ್ತಾರರಲ್ಲಿ "ಕೆಲವು ನಿಜಬಿಂದುಗಳ್, ಕೆಲ ಕೆಲವು ವಿಕಲ್ಪಾರ್ಥ ಬಿಂದುಗಳ್" ಎಂದು ವಿಶದಪಡಿಸುತ್ತಾನೆ. ಈ ನಿಜ ಬಿಂದುಗಳಲ್ಲಿ'ತೋಂಟ' ಒಂದು. ಅದು ಈಗ ತನ್ನ ಬಿಂದು ಕಳೆದುಕೊಂಡು, ಬರಿಯ 'ತೋಟ'ವೆಂದು ಬರಹದಲ್ಲಿದ್ದರೂ, ಜನರ ಬಾಯಲ್ಲಿ 'ತೋಂಟ'ವೆಂಬ ಉಚ್ಚಾರವಾಗುತ್ತದೆ. ಇಲ್ಲಿ 'ಟ'ಕಾರ ಅನುನಾಸಿಕದಂತೆ ಉಚ್ಚಾರವಾಗುತ್ತದೆ. ಇಂತಹ ಉದಾಹರಣೆಗಳು ಎಷ್ಟೋ ಇವೆ. ಇದರಂತೆ "ಬೇಯು" ಇದರ ಯಕಾರ ಜನರ ಬಾಯಲ್ಲಿ ಅನುನಾಸಿಕವಾಗಿಯೇ ಉಳಿದಿದೆ.

ಕೆಲವು ಅನುಕರಣ ವಾಚಕಗಳು ಜನರ ಬಾಯಲ್ಲಿ ಬರುವಾಗ 'ಯ'ಕಾರ ಅನುನಾಸಿಕದಂತೆಯೇ ಉಚ್ಚಾರವಾಗುತ್ತದೆ. ಉದಾಹರಣೆಗೆ "ಸೊಯ್ ಎಂಬ ಸಪ್ಪಳ ಬರುತ್ತದೆ." ಇದರಲ್ಲಿಯ 'ಯ'ಕಾರ ಅನುನಾಸಿಕ. ಇದನ್ನು 'ಸೊಂಯ್' ಎಂದು ಉಚ್ಚರಿಸುತ್ತಾರೆ. ಇದರಂತೆ "ರೊಯ್–ರೊಂಯ್, ಕುಯ್–ಕುಂಯ್,ಕೊಯ್–ಕೊಂಯ್, ಒಯ್–ಒಂಯ್, ಖೊಯ್–ಖೊಂಯ್, ಉಯ್–ಉಂಯ್" ಹೀಗೆ ಎಲ್ಲ ಅನುಕರಣ ವಾಚಕಗಳಲ್ಲಿ ಬರುವ 'ಯ'ಕಾರ ಅನುನಾಸಿಕವಿದೆ.

ಕೆಲವು ತತ್ಸಮ ಶಬ್ದಗಳು ಜನರ ಬಾಯಲ್ಲಿ ತದ್ಭವಗಳಾದಾಗ 'ಯ'ಕಾರ ಅನುನಾಸಿಕದಂತೆ ಉಚ್ಚಾರವಾಗುತ್ತದೆ. ಉದಾ:–'ಅಸಹ್ಯ' ಇದರ ತದ್ಭವ 'ಅಸಯ್'. ಇಲ್ಲಿ 'ಯ' ಅನುನಾಸಿಕ–'ಅಸಂಯ್',ಎಂದೇ ಧ್ವನಿಸುತ್ತದೆ.

೨. **ಅನುನಾಸಿಕ ವಕಾರ :** ಮೊದಲು ಕೇಶಿರಾಜನು ಕೊಟ್ಟ ಉದಾಹರಣೆಗಳನ್ನೇ ನೋಡಬೇಕು.—ಸೇವಂ, ಸೊವೆ, ಸಾವೆ, ಜಾವಂ. ಮಾವಂತಂ, ಶೋವಣಂ. ಕಾವಣಂ, ಸೇವಗೆ. ಇವುಗಳಲ್ಲಿ ಇಂದಿಗೂ ರೂಢಿಯಲ್ಲಿರುವ ನುಡಿಗಳು–ಸೇವಗೆ ಮತ್ತು ಸಾವೆ. ಜನರ ಬಾಯಲ್ಲಿ ಇವುಗಳಲ್ಲಿಯ ವಕಾರ ಅನುನಾಸಿಕವಾಗಿಯೇ ಉಳಿದಿವೆ. ಉಳಿದವುಗಳ ಬಳಕೆ ಇಲ್ಲ. ಅದರಿಂದ ಅವುಗಳ ಉಚ್ಚಾರ ಹೇಳಲು ಸಾಧ್ಯವಿಲ್ಲ. ಈ ಉದಾಹರಣೆಗಳ ಹಿಂದೆಮುಂದೆ ಯಾವ ಅನುನಾಸಿಕಗಳೂ ಇಲ್ಲ. ಇಲ್ಲಿಯ 'ವ'ಕಾರ ಸ್ವತಂತ್ರವಾಗಿಯೇ ಅನುನಾಸಿಕವಿದೆ. ಯಾವ ನಿಯಮವೂ ಇವಕ್ಕೆ ಹತ್ತುವುದಿಲ್ಲ. ಅನುನಾಸಿಕ 'ಯ'ಕಾರದಂತೆ ಅನುನಾಸಿಕ 'ವ'ಕಾರಕ್ಕೂ ಯಾವ ವಿವರಣೆಯನ್ನೂ 'ಶಬ್ದಮಣಿದರ್ಪಣ'ದಲ್ಲಿ ಕಾಣುವುದಿಲ್ಲ.

ಅನುನಾಸಿಕ 'ವ'ಕಾರವನ್ನು ಹೆಚ್ಚು ಹೆಚ್ಚಾಗಿ ಅಭ್ಯಸಿಸಿದಂತೆ ಅದು ಅನಿಯಮಿತ

ವಿರದೆ, ಸೂತ್ರಬದ್ಧವಾಗಿದೆಯೆಂದು ತಿಳಿದು ಬರುತ್ತದೆ. ಕೇಶಿರಾಜನು ಹೇಳಿದ ಇಂದು ಜನರ ಬಾಯಲ್ಲಿರುವ ಎಷ್ಟೋ ನುಡಿಗಳ 'ವ'ಕಾರ ಅನುನಾಸಿಕವಾಗಿಯೇ ಇದೆ. ಅವುಗಳ ಸೂತ್ರ ಕಂಡು ಹಿಡಿಯುವುದು ಕಷ್ಟಕರವಾದರೂ ಅಸಾಧ್ಯವೇನಲ್ಲ. ಈಗ ಕೆಲವೊಂದು ಶಬ್ದಗಳನ್ನು ಪರಿಶೀಲಿಸಿದರೆ ಸೂತ್ರ ಜಾಡು ದೊರೆಯುತ್ತದೆ.

**೧. ಮೂಲ ಅನುನಾಸಿಕದ 'ವ' ಕಾರಾದೇಶ :**

'ಹಾವು' ಇದರ ವಕಾರ ಅನುನಾಸಿಕವೆಂಬುದು ಸ್ಪಷ್ಟ. ಇದರ ವ್ಯುತ್ಪತ್ತಿಯನ್ನು ವಿಚಾರಿಸಿದರೆ 'ವ' ಅನುನಾಸಿಕವೇಕಾಯಿತೆಂಬುದು ತಿಳಿಯುತ್ತದೆ. 'ಪಾಮ್ಬು' ಮೂಲ ರೂಪ. ಜನರ ಬಾಯಲ್ಲಿ 'ಹಾವು' ಆಯಿತು. (ತೆಲುಗಿನಲ್ಲಿ 'ಪಾಮು') ಆದರೆ ಮೊದಲಿದ್ದ 'ಮ'ಅನುನಾಸಿಕ ತನ್ನ ರೂಪ ಕಳೆದುಕೊಂಡರೂ, ಧ್ವನಿಯಲ್ಲಿ ಜೀವಂತವಾಗಿದೆ. ಆದ್ದರಿಂದ 'ವ' ಅನುನಾಸಿಕವಾಗಲು ಅನುವು ದೊರೆಯಿತು. ಇಂತಹ ಉದಾಹರಣೆಗಳು ಎಷ್ಟೋ ಇವೆ. ತೇಮು–ತೇವ, ಸಮು–ಸವೆ, ಬೆಮರು–ಬೆವರು, ಮಾಮ–ಮಾವ ಮುಂತಾದವುಗಳಲ್ಲಿಯ 'ವ'ಕಾರ ಇಂದಿಗೂ ಜನರ ಬಾಯಲ್ಲಿ ಅನುನಾಸಿಕ ಧ್ವನಿಯನ್ನೇ ಹೊರಡಿಸುತ್ತದೆ.

**೨. ತದ್ಭವಗಳ ಅನುನಾಸಿಕ ವಕಾರ :** ಸಂಸ್ಕೃತ ತತ್ಸಮ ಶಬ್ದಗಳನ್ನು ಕನ್ನಡದಲ್ಲಿ ತೆಗೆದುಕೊಂಡಾಗ ಉಚ್ಚಾರದಲ್ಲಿ ಬದಲಾವಣೆಯಾದದ್ದನ್ನು ನೋಡಬಹುದು. ಕೆಲವು ತದ್ಭವಗಳು ಕನ್ನಡ ಧ್ವನಿಯನ್ನೇ ಅಳವಡಿಸಿಕೊಂಡಿರುತ್ತವೆ. ಇಂತಹ ತದ್ಭವಗಳ 'ವ'ಕಾರ ಅನುನಾಸಿಕ ಧ್ವನಿಯನ್ನು ಹೊರಡಿಸುತ್ತದೆ. ಇದಕ್ಕೆ ಉದಾಹರಣೆ, ಗಳು ಹೇರಳವಾಗಿವೆ. ವಾಪೆ–ಬಾವಿ (ಭಾವಿ) ಈ ತದ್ಭವದ 'ವ'ಕಾರ ಜನರ ಬಾಯಲ್ಲಿ ಅನುನಾಸಿಕವಾಗಿಯೇ ಇದೆ. ಇವನ್ನು ಸರಿಯಾಗಿ 'ಬಾಂವಿ' ಎಂದು ಬರೆಯಬಹುದು. ಇವರಂತೆ ಗ್ರಾಮ–ಗಾವ ಮಾಮ–ಮಾವ, ಸಪತ್ನೀ–ಸವತಿ, ಜೀವ–ಜೀಂವ ಪಾದುಕಾ–ಹಾವುಗೆ, ಸ್ಥಾನ–ಠಾಣ, ಠಾವು–ಠಾವು. ಈ ಎಲ್ಲ ತದ್ಭವಗಳಲ್ಲಿ ಬರುವ 'ವ'ಕಾರ ಧ್ವನಿ ಅನುನಾಸಿಕವಿದೆ.

**೩. ಮುಂದಿನ ಅನುನಾಸಿಕ ಲೋಪ:** 'ವ'ಕಾರದ ಮುಂದೆ ಅನುನಾಸಿಕವಿದ್ದರೆ ಅದು ಲೋಪವಾಗಿ ಹಿಂದಿನ 'ವ'ಕಾರ ಅನುನಾಸಿಕ ಧ್ವನಿ ಹೊರಡಿಸುತ್ತದೆ. ಉದಾ:– ಅವನು–ಅವ, ಇವನು–ಇವ, ಯಾವನು–ಯಾವ. ಇವುಗಳಲ್ಲಿಯ 'ವ' 'ಅಂವ. ಇಂವ. ಯಾಂವ,' ಎಂದು ಅನುನಾಸಿಕ ಧ್ವನಿ ಕೊಡುತ್ತದೆ. ಇಂತಹ ಶಬ್ದಗಳು ಹೆಚ್ಚಾಗಿ ಸರ್ವನಾಮಗಳಿವೆಯೆಂಬುದು ಕಂಡರೂ, ಉಳಿದವುಗಳಲ್ಲಿಯೂ ಈ ತರದ ಶಬ್ದಗಳು ದೊರಡಬಹುದು.

**೪. ಅರ್ಥ ಮಾರ್ಪಾಡು :** ಕೆಲವೊಂದು 'ವ'ಕಾರ ಅನುನಾಸಿಕಕ್ಕೆ ತಿರುಗಿದಾಗ, ಬೇರೆ ಅರ್ಥ ಕೊಡುವ ಸಂಭವವೂ ಉಂಟು. ಇದಕ್ಕೆ ಉತ್ತಮ ಉದಾಹರಣೆ ಕಾವು'. ಸಾಮಾನ್ಯವಾಗಿ ಈ ಶಬ್ದ 'ಕಾವು' ಇದರಿಂದಲೇ ಬಂದಿದೆಯೆಂಬುದು ಸ್ಪಷ್ಟ.

'ಪ'ಕಾರಕ್ಕೆ ವ'ವ'ಕಾರಾದೇಶವಾಗಿದೆ. 'ಕಾಪು–ಕಾಹು–ಕಾವ್' ಇವೆಲ್ಲ 'ಸಂರಕ್ಷಣೆ' ಎಂಬರ್ಥದಲ್ಲಿ ಬಳಕೆಯಾಗುತ್ತವೆ. ಬರಿಯ 'ಕಾವ್' 'ಉಷ್ಣತೆ' ಎಂಬ ಅರ್ಥವನ್ನು ಅನುನಾಸಿಕ–ನಿರನುನಾಸಿಕ ಎರಡರಲ್ಲಿಯೂ ಕೊಡುತ್ತದೆ. ಉದಾ–ಕಾವು–ಅರೆಗಾ(ಂ)ವು ಆದರೆ 'ಕಾವು' ಇದರ 'ವ'ಕಾರ ಅನುನಾಸಿಕವಾದಾಗ ಅರ್ಥ ವಿಪರ್ಯಾಸವೂ ಉಂಟು. ಅನುನಾಸಿಕ ಧ್ವನಿ ಇದ್ದಾಗ. 'ಬಡಿಗೆ' ಎಂಬ ಅರ್ಥ ಬರುತ್ತದೆ. 'ಕೊಡಲಿ ಕಾವು' ಇಲ್ಲಿ 'ವ'ಕಾರ ಅನುನಾಸಿಕವಿದೆ. ಮತ್ತು 'ಕಾವು' (ಕೊಡಲಿಗೆ ಬಲ ಬರಬೇಕೆಂದು ಹಾಕಿದ) 'ಬಡಿಗೆ' ಎಂಬ ಅರ್ಥವನ್ನೇ ಹೊರಡಿಸುತ್ತದೆ. ಇಂತಹ ಉದಾಹರಣೆಗಳನ್ನು ಇನ್ನೂ ಹುಡುಕಿ ತೆಗೆದರೆ ಬಹಳ ಒಳ್ಳೆಯದು.

**೫. ಅನುಕರಣ ವಾಚಕ ವಕಾರ:** ಕೆಲವೊಂದು ಅನುಕರಣ ವಾಚಕಗಳಲ್ಲಿಯ 'ವ'ಕಾರ, 'ಯ'ಕಾರದಂತೆ ಅನುನಾಸಿಕ ಧ್ವನಿ ಸೂಚಿಸುತ್ತದೆ. ಉದಾ:–ರೆವ್, ಭವ್, ಚಿವ್, ಮೆವ್ ಇವುಗಳ 'ವ'ಕಾರ ಜನರ ಬಾಯಲ್ಲಿ ಅನುನಾಸಿಕವಾಗಿಯೇ ಧ್ವನಿಸುತ್ತದೆ.

**೬. ನಿಸ್ಸೂತ್ರ ಅನುನಾಸಿಕ ವಕಾರ:** ಕೆಲವೊಂದು ಅನುನಾಸಿಕ 'ವ'ಕಾರ ಧ್ವನಿ ಯಾವ ಸೂತ್ರಕ್ಕೂ ಪೋಣಿಸಲು ಸಾಧ್ಯವಿಲ್ಲವೆಂಬುದು ಕಂಡು ಬರುತ್ತದೆ. ಇವು ಜನರ ಬಾಯಲ್ಲಿ ಮಾತ್ರ ಇಂದಿಗೂ ಅನುನಾಸಿಕವಾಗಿಯೇ ಉಳಿದಿವೆ. ಸೇವಗೆ. ಸಾವೆ (ಸಾವಿ), ಕಿವಿ (ಕಿಮಿ?), ತೆವೆ. ತಿವಿ. ಸವಿ, ಸವತಿಕಾಯಿ. ಕರಿಬೇವು. ಬೇವು ಮುಂತಾದವುಗಳು ಈ ವರ್ಗದಲ್ಲಿ ಬರುತ್ತವೆ. ಯಾರಾದರೂ ಇವುಗಳ ನೆಲೆ ಶೋಧಿಸಿದರೆ ಚೆನ್ನಾಗುತ್ತದೆ.

ಈ ರೀತಿಯಾಗಿ ಕನ್ನಡದಲ್ಲಿ 'ವ'ಕಾರ ಅನುನಾಸಿಕವಾಗಿ ಬಳಕೆಯಲ್ಲಿದೆ. ಸಾಮಾನ್ಯವಾಗಿ ಜನರ ಬಾಯಲ್ಲಿಯ ನುಡಿಗಳನ್ನೇ ವಿಂಗಡಿಸಿ 'ವ'ಕಾರ ಅನುನಾಸಿಕವಾಗುವ ಸೂತ್ರಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದ್ದೇನೆ. ಈ ಸೂತ್ರಗಳು ಶಾಸ್ತ್ರಬದ್ಧವೆಂದು ನಾನು ಹೇಳಲಾರೆ. ತಜ್ಞರು ಇವುಗಳನ್ನು ಇನ್ನೂ ಆಳವಾಗಿ ಅಭ್ಯಸಿಸಿ. ಕನ್ನಡ ಭಾಷಾ ಶಾಸ್ತ್ರಕ್ಕೆ ಇನ್ನೊಂದು ಹೊಸ ತಿರುವು ಕೊಡಲೆಂದು ಆಶಿಸುತ್ತೇನೆ.

**೩. ಅನುನಾಸಿಕ ಲಕಾರ:** ಕೇಶಿರಾಜನು ತನ್ನ 'ಶಬ್ದಮಣಿದರ್ಪಣ'ದಲ್ಲಿ ಹೇಳಿದ ಅನುನಾಸಿಕ 'ಲ'ಕಾರ ಇಂದು ಜನರ ಬಾಯಲ್ಲಿ ಇಲ್ಲವೆಂದು ನನ್ನ ಅನುಭವ. ಅವನು ಹೇಳಿದ ಉದಾಹರಣೆಗಳು–ಕೊಲ್ಲಣಿಗೆ. ಅಲ್ಲಣಿಗೆ. ಹಲ್ಲಣಂ. ಇಲ್ಲಣಂ. ಇವುಗಳಲ್ಲಿ 'ಲ'ಕಾರದ ಮುಂದೆ ಅನುನಾಸಿಕ 'ಣ'ಕಾರವಿದೆ. 'ಯ'ಕಾರದಂತೆ ಈ 'ಲ'ಕಾರವೂ ಮುಂದಿನ ಅನುನಾಸಿಕದ ನೆರವಿನಿಂದ ಅನುನಾಸಿಕ ಧ್ವನಿ ಕೊಡುವಂತೆ ತೋರುತ್ತದೆ. ಈ ಉದಾಹರಣೆಗಳಲ್ಲಿ 'ಇಲ್ಲಾಣ' ಎಂಬುದೊಂದೇ ಶಬ್ದ ರೂಢಿಯಲ್ಲಿದೆ. ಕೆಲವು ಕಡೆಗೆ ಇದನ್ನು 'ಇಲ್ಲಾಣ'ಎಂದೂ ಉಚ್ಚರಿಸುತ್ತಾರೆ. ಆದರೆ 'ಇಲ್ಲಣ' ಇಲ್ಲವೆ 'ಇಲ್ಲಾಣ'ದ 'ಲ'ಕಾರ ಅನುನಾಸಿಕ ಧ್ವನಿಯನ್ನು ಕೊಡುವುದಿಲ್ಲ. ನಿರನುನಾಸಿಕವಾಗಿಯೇ ಬಳಕೆ

ಯಲ್ಲಿದೆ. ಕೇಶಿರಾಜನಿಗೆ ಅನುನಾಸಿಕ ‘ಲ’ಕಾರ ಸೂಚನೆ ಪಾಣಿನಿಯ "ಲಣ್–೬" ಮತ್ತು "ಉಪದೇಶೇ ಅಜನುನಾಸಿಕ ಇತ್" ೧–೩–೨. ಈ ಸೂತ್ರಗಳಿಂದ ಹೊಳೆದಿರಬಹುದೇ? ಎಂಬ ಸಂದೇಹ ಬರುತ್ತದೆ. ಸ್ವರ ಅನುನಾಸಿಕ ಧ್ವನಿ ಹೊರಡಿಸಿದರೆ ‘ಇತ್’ ಆಗುತ್ತದೆ. ‘ಲ’ಕಾರದ ‘ಅ’ ಅನುನಾಸಿಕವಾಗಿ ಮೊದಲು ಧ್ವನಿಸುತ್ತಿತ್ತು. ಸ್ವಾಭಾವಿಕವಾಗಿ ‘ಲ’ಕಾರವೂ ಅದರೊಡನೆ ಕೂಡಿಕೊಳ್ಳುತ್ತದೆ. ಕೇಶಿರಾಜನು ಈ ಜಾಡನ್ನೇ ಹಿಡಿದು ಕನ್ನಡ ಅನುನಾಸಿಕ ‘ಲ’ಕಾರ ಸಂಶೋಧಿಸಿದ್ದಾನೆಂಬ ಅನುಮಾನ ತಲೆದೋರುತ್ತದೆ.

**೪. ಅನುನಾಸಿಕಹಕಾರ:** ಯ, ವ, ಲ, ಗಳಂತೆ ‘ಹ’ಕಾರವೂ ಕೆಲವೆಡೆ ಅನುನಾಸಿಕ ಧ್ವನಿ ಕೊಡುತ್ತದೆಂದು ನನ್ನ ವಿಚಾರ. ‘ಸಿಹಿ’ ಇದರ ‘ಹಿ’ಕಾರ ‘ಸಿಂಹ’ ಇಲ್ಲವೆ ‘ಸೀಂ’ ಎಂದು ಅನುನಾಸಿಕದಂತೆ ಉಚ್ಚರಿಸಲ್ಪಡುತ್ತದೆ. ಇದರಂತೆ ‘ಕಹಿ’ಯ ‘ಹ’ಕಾರವೂ ಅನುನಾಸಿಕ ಧ್ವನಿಸುತ್ತದೆ. ಇದನ್ನು ಇನ್ನೂ ಪರಿಶೋಧಿಸಿ ತಜ್ಞರು ಇತ್ಯರ್ಥಪಡಿಸಬೇಕು.

ಅನುನಾಸಿಕ ಧ್ವನಿಸುವ ಅಕ್ಷರಗಳನ್ನು ಗುರುತಿಸುವುದಕ್ಕೆ ಹಿಂದಿಯಲ್ಲಿ ‘ँ’ ಈ ಗುರುತು ಹಾಕುವ ಸಂಪ್ರದಾಯವಿದೆ. ಕನ್ನಡ ಅನುನಾಸಿಕ ಅಕ್ಷರಗಳಾದ, ಯ, ವ, ಲ, ಹ ಇವುಗಳ ಧ್ವನಿ ಈಗ ಅಳಿವ ಸೂಚನೆಗಳು ತೋರುತ್ತಲಿವೆ. ಇದಕ್ಕೆ ಮುಖ್ಯವಾಗಿ ಅವುಗಳ ಅನುನಾಸಿಕ ಧ್ವನಿ ಗುರುತಿಸುವ ಸಂಕೇತ ನಮ್ಮಲ್ಲಿ ಇಲ್ಲದಿರುವುದೇ ಕಾರಣ. ಹಿಂದಿಯಂತೆ, ಕನ್ನಡದಲ್ಲಿಯೂ ಅನುನಾಸಿಕ ಯ, ವ, ಲ, ಹ ಧ್ವನಿ ಗುರುತಿಸುವ ಸಂಕೇತ–ಸಂಪ್ರದಾಯ ಪ್ರಾರಂಭಿಸಿದರೆ ಬಹಳ ಒಳ್ಳೆಯದು.

# ಚೇಂಜ್ ಆಫ್ ನೇಮ್

ಬಿ. ವ್ಹಿ. ಜಿ

ಮೊನ್ನೆ ಮೊನ್ನೆನ ಪೇಪರದಾಗ
ನಡುವಿನ ಪುಟದ ಒಂದು ಮೂಲ್ಯಾಗ
ಚೌಕಾಗಿ ಎಳೆದ ಕರೀ ಗೆರ್ರ್ಯಾಗ
'CHANGE OF NAME' ಎಂದು
ನಮ್ಮಪ್ಪ ಇಟ್ಟ ಹೆಸರ್ನ ನಾ ಬದಲಾಯಿಸಿಕೊಂಡಿದ್ದೆ,
ಎಲ್ಲಾರಿಗೂ ತಿಳೀಲಿ ಅಂತ ಪೇಪರದಾಗೂ ಹಾಕ್ಸಿದ್ದೆ.
ಆದ್ರೂನು ಎಲ್ಲಾ ಜನಾ ನನ್ನ ಮೊದಲ ಹೆಸರಗೊಂಡ ಕರೀತಾರ
ಆಗದವರು ಈಗಿನ 'ಮಿನಿ' ಹೆಸರ್ನ ಹೇಳಿ, ನನ್ನ ಕಡೆ ಒಮ್ಮೆ ನೋಡಿ
ಕಿಸಕ್ಕನ ನಗತಾರ.
ಆಗ ಮನಸ್ಸು ಕಾದ ಇಸ್ತ್ರೀ ಕಲ್ಲಿಗೆ ನೀರ ಸಿಡದಾಂಗ ಚುರ್ರ ಅನ್ನುದ
ಕುದ್ಯೂ ನೀರಾಗ ಟೀ ಪಾವ್ಡರ್ ಹಾಕಿದಂಗ ಮಕಾ ಕೆಂಪಗಾಗ್ತದ
ಬಾಯಿ ವಿಷಾ ಆಗ್ತದ.
ಆಗನ ಸ್ವಲ್ಪ, ನಾ ಮಾಡಿದ ಹುಚ್ಚು ಮನವರಿಕೆಯಾಗ್ತದ.
ಮನಸಿನ್ಯಾಗ ನಕ್ಕ
ಹತ್ತೆಂಟು ಸಾರಿ ವಿಚಾರಲಾಳಿ ಓಡಿ
ಒಂದೊಂದ ಎಳೀ ಬಂದು
ಏನೇನೋ ನೇದುಕೊಂಡು ಮುಂದ ನಿಲ್ಲತದ.

ನಮ್ಮಪ್ಪ...ಅವರಪ್ಪ...ಅವರಪ್ಪನ ಅಪ್ಪ
ಹೀಗನ ನಮ್ದು ಭಾಳ ದೊಡ್ಡ ಬೊಡ್ಡಿ
ಅದರೊಳಗ ಒಬ್ಬರಾದರೂ ತಮ್ಮ ಹೆಸರ್ನ
ಬದಲೀಸಿಕೊಂಡದ್ದ ನನಗೇನ ನೆಪ್ಪಯಿಲ್ಲ.
ನಮ್ಮಪ್ಪ ನನ್ನ ಮುಂದ ಕುಂಡ್ರಿಸಿಕೊಂಡ
ಮನೀ ಇತಿಹಾಸ ಹೇಳಿದಾಂವ
ಆದರ.

ಆದರ ಬಗ್ಗೇನ ನನಮುಂದ ಚಕಾರನ ಎತ್ತಿಲ್ಲ.
ವರ್ಷಕ್ಕೊಮ್ಮೆ ಬಂದು ನಮ್ಮ ಮನೀ ಬೊಡ್ಡಿ ಚಿತ್ರಾ
ಬಣ್ಣದ ಮಾತಿನ್ಯಾಗ ಬರದ ನಮ್ನ ಮೆಲಕ ಹಾಕಾಕ ಹಚ್ಚೊ
ಹೆಳುವನೂ ಆ ವಿಷಯ ತಗದಿಲ್ಲ.

ನನಗ ತಿಳಿದಾಂಗ ನಮ್ಮಜ್ಜ
ಅವರಪ್ಪ ಇಟ್ಟ ಹೆಸರ್ನೇನ ಬದಲಾಯಿಸಿಕೊಂಡಿದ್ನ,
ಮತ್ತ ತಿರಗಿ, ಇಟ್ಟ ಹೆಸರ ಸಾರ್ಥಕಮಾಡಿ
ಮನೆತನಕ್ಕ ಕೀರ್ತಿ ತಂದಿದ್ದ
ನಮ್ಮಪ್ಪಗ ಅವರಪ್ಪ ಇಟ್ಟ ಹೆಸರಮ್ಯಾಲ
ಎಷ್ಟ ಅಭಿಮಾನ ಅಂತೀ,
ನಾಕ ಮಂದ್ಯಾಗ ನಮ್ಮಪ್ಪ ಇಟ್ಟ ಹೆಸರಂತ
ಎದೀ ತಟ್ಟಿ ಅಭಿಮಾನದಿಂದ ಬಾಜೀ ಬಾರಿಸಿದ್ನ
ನೂರೆಂಟು ಸಾರೇನಾದ್ರೂ ಕೇಳಿದಿನಿ
ಅಂಥಾ ಅಪ್ಪನ ಮಗಾ ಅಂತ ಅಭಿಮಾನಾನೂಪಟ್ಟಿನಿ.

ನಮ್ಮಪ್ಪ
ಈಗಿನಂಗ ಕುಟುಂಬಯೋಜನಾ ಪ್ರಚಾರ
ಇರಲಿಲ್ಲಾಂತ ಹಡೆದದ್ದಽ ಹಡೆದದ್ದು,
ಒಂದ.... ಎರಡ....!
ಹುಟ್ಟಿದ ಮಕ್ಕಳ ಭಾಳ ಆಗಿ
ದುರ್ಬಲರಾಗಿ ದುರವಸ್ಥೆ ಪಡ್ಯಾದ್ನ ಕಂಡು
ಹೌಹಾರಿ ಕಂಗಾಲಾಗಿ
ಜಡ್ಡಾಗಿ ಹಾಸಿಗಿ ಹಿಡಿದ ಮಕ್ಕೊಂಡಾಗ
ಹಿಂದಕ ನಮಗಿನ್ನೂ ತಿಳೀದಿದ್ದಾಗ
ಹದಿನೇಳ ವರ್ಷದ ಕೆಳಗ ಒಬ್ಬ ಆಯಾ ಬಂದ್ಳು
ನನ್ನ ಹತ್ರನ ನಿಂತ್ಲು
ನನ್ನ ಎತ್ತಿದಳು ಆಡಿಸಿದಳು ಸಂತೋಷದಿಂದ ಬೆಳಸಿದಳು.
ಆಗ ನಾ ನಮ್ಮಪ್ಪನ ಬಿಟ್ಟ ಆಯಾಳ ಬೆನ್ನ ಹತ್ತಿದೆ
ನಿಮ್ಮಪ್ಪನ ಹೆಸರೇನ್ಲೆ? ಎಂದು ಕೇಳಿದವರಿಗೆಲ್ಲಾ
ಆಯಾಳ ಹೆಸರನ ಹೇಳ್ತ ಬಂದೆ.
ಆಗ ಬಲ್ಲಂಥಾ ಜನಾ ಮುಂದ ಬಂದ
ನಮ್ಮಪ್ಪನ ಮಗಲ ಮುಟ್ಟಿದ ಪ್ರಸಿದ್ಧೀನ

ಅವಳಿಂದ ಮನೀಗ ಬಂದ ಮರ್ಯಾದೆನ
ನನ್ನ ಕಿವೀ ಕುಂಭದಾಗ ಅಳದ ತುಂಬಿದಾಗಟ
ನನಗ ಅಕಲ ಬಂತು.

ಹದಿನೇಳು ವರ್ಷಾತು
ಮಕದ ಮ್ಯಾಗ ಮೀಸಿ ಮೂಡಿತು
ಮನಸ್ಸ ಹರೇಕ ತಿರುಗಿತು.
ಆದರೂ ನಮ್ಮವ್ವನ ನಾ 'ಅಪ್ಪಾ' ಅಂತ
ಕರೆಯಂಲ್ಲಿಲ್ಲಂತ ಮನಕ್ಕ ಕಸಿವಿಸಿಯಾಯ್ತು
ನನಗಲ್ಲದ ಜನ ಆಯಾಳೆ ನಮ್ಮವ್ವಂತ ಹೇಳೂದರಾಗ
ಏನೋ ಸ್ವಾರ್ಥ ತುಂಬೇತ್ಯಂತ ಈಗ ನನಗ ಹೊಳೀತು.
ಇನ್ನ ಮ್ಯಾಲ ಯಾರ ಏನ ಅಂದರೂ
ನಮ್ಮ ಅವ್ವನ 'ಅಪ್ಪಾ' ಅಂತ ಕರ್ಯಾಂವ.
ಅವಳ ಹೆಸರ ನಾ ಅಭಿಮಾನ ಪಟ್ಟ ಹೇಳಾಂವ
ಆ ಹೆಸರಿನ್ಯಾಗ ಇರೂ ಸಡಗರಾನ ಮತ್ತ ಕಾಣಾಂವ.

ಸಂಭ್ರಮದಿಂದ ಹೇಲಗುಗ್ರಿ ತಿಂದು, ಹಂಚಿ
ನಮ್ಮವ್ವ ಅಪ್ಪಾ ಇಟ್ಟ ಹೆಸರ ನಾ ಕರಕೊಳಾಂವ
ಇನ್ನ ಮುಂದ.
'CHANGE ಆದ NAME 'ದ ಪ್ಲೇಟ್
ತಿರುವಿ ಹಾಕಾಂವ.

# ತದಾದ್ಯಕಾವ್ಯ

ಯು. ಕೃಷ್ಣಶರ್ಮಾ

ಕವಿರಾಜಮಾರ್ಗದಲ್ಲಿನ ಕಂದವೊಂದು ಇಂತಿದೆ.

ಪರಮ ಶ್ರೀವಿಜಯ ಕವೀ–
ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ
ನಿರತಿಶಯ ವಸ್ತು ವಿಸ್ತರ
ವಿರಚನೆ ಲಕ್ಷಂ ತದಾದ್ಯಕಾವ್ಯಕ್ಕೆಂದುಂ ||

ಕ.ರಾ. ಮಾರ್ಗ, ೧–೩೨.

ಇಲ್ಲಿ "ಶ್ರೀವಿಜಯ... ಲೋಕಪಾಲಾದಿ ಕವಿಗಳ ಅತ್ಯುತ್ತಮ ವಸ್ತು–ವರ್ಣನೆಗಳುಳ್ಳ ಕೃತಿಗಳು ಮುಂದಿನ ಕಾವ್ಯಗಳಿಗೆ ಮಾದರಿಯಾಗಿವೆ" ಎಂಬುದಿಷ್ಟು ಈ ಪದ್ಯದಿಂದ ಹೊರಡುವ ಅರ್ಥವೆಂದು ನನ್ನ ಗ್ರಹಿಕೆ. ತದಾದ್ಯಕಾವ್ಯ ಪದದಲ್ಲಿನ ತಚ್ಛಬ್ದ ಹಾಗೂ ಸಮಾಸವನ್ನು ಗಮನಿಸಿದಾಗ ಈ ಅರ್ಥ ಮನದಟ್ಟಾಗದಿರದು. ಸಮಾಸ–ಘಟಕವಾದ ತಚ್ಛಬ್ದವಿಲ್ಲಿ ಇದೇ ಪದ್ಯದಲ್ಲಿ ಉಕ್ತವಾದ "ನಿರತಿಶಯ... ವಿರಚನೆ"ಯನ್ನು ಪರಾಮರ್ಶಿಸುತ್ತದೆ. ಆದ್ಯ ಶಬ್ದಕ್ಕೆ ಮೊದಲ, ಮೊದಲುಳ್ಳ ಎಂದರ್ಥ. ತದಾದ್ಯವೆಂಬಲ್ಲಿ ಅತದ್ಗುಣಸಂವಿಜ್ಞಾನ ಬಹುವ್ರೀಹಿ ಸಮಾಸ[1]ವಿದೆಯೆಂಬುದು ಸ್ಪಷ್ಟ. "ತದಾದ್ಯಕಾವ್ಯಕ್ಕೆ" ಎಂದರೆ "ಶ್ರೀವಿಜಯಾದಿ ಕವಿಕೃತಿಗಳಿಗಿಂತ ಮುಂದಿನ ಕಾವ್ಯಗಳಿಗೆ" ಎಂದರ್ಥ. ಇತ್ಥಂಚ "ಶ್ರೀವಿಜಯಾದಿ ಕವಿಗಳಿಗಿಂತ ಮುಂದಿನ ಕವಿಗಳ ಕಾವ್ಯಗಳಿಗೆ ಈ ಹೇಳಿದ ಶ್ರೀವಿಜಯಾದಿ ಕವಿಗಳ – ನಿರತಿಶಯ ವಸ್ತು ವಿಸ್ತರವಿರಚನೆಗಳು ಆದರ್ಶವಾಗಿವೆ: ಮಾದರಿ. ಮೇಲ್ಪಂಕ್ತಿಯಾಗಿವೆ" ಎಂಬುದು ಈ ಪದ್ಯದಿಂದ ಹೊರಡುವ ಪ್ರಾಥಮಿಕ ಶಾಬ್ದಬೋಧ. ಇದೀಗ ಆದ್ಯ ಶಬ್ದದ ಮುಖ್ಯಾರ್ಥಕ್ಕೆ ಬಾಧೆಯಿಲ್ಲ.[2]

---

೧. ತತ್ + ಆದ್ಯ + ಕಾವ್ಯ
ಆದೌ ಭವಾನಿ = ಆದ್ಯಾನಿ. ತಾನಿ–ಶ್ರೀವಿಜಯಾದಿ ಕವೀನಾಂ ನಿರತಿಶಯ–ವಸ್ತುವಿಸ್ತರವಿರಚನಾನಿ–ಏವ ಆದ್ಯಾನಿ ಯೇಷಾಂ, ತಾನಿ = ತದಾದ್ಯಾನಿ. ತದಾದ್ಯಾನಿ ಚ ಕಾವ್ಯಾನಿ = ತದಾದ್ಯಕಾವ್ಯಾನಿ ಎಂಬೀ ರೀತಿಯಲ್ಲಿ.

೨. ಪ್ರಕೃತಶಬ್ದಬೋಧಸ್ಥಳಗಳಲ್ಲಿ ಶಬ್ದದ ಶಕ್ಯಾರ್ಥವನ್ನೇ ಸ್ವೀಕರಿಸಲು ಸಾಧ್ಯವಿರುವಾಗ ಅದನ್ನುಳಿದು ಗೌಣಾರ್ಥವನ್ನಂಗೀಕರಿಸಿ ವಾಕ್ಯಾರ್ಥವನ್ನು ಹೇಳುವುದು ಸಂಪ್ರದಾಯವಿರುದ್ಧ. ಅನುವ್ಯವಸಾಯಾದಿಸ್ಥಳಗಳಲ್ಲಾದರೋ ವಾಕ್ಯದ ಒಟ್ಟು ತಾತ್ಪರ್ಯನಿರ್ವಾಹಕ್ಕಾಗಿ ಅಲ್ಲಲ್ಲಿಗೆ ಅಪೇಕ್ಷಿತವಾದ–ಗೌಣವಾದದ್ದನ್ನು ಬೇಕಾದರೂ–ಅರ್ಥವನ್ನು ಅಂಗೀಕರಿಸಬಹುದು.

ಪ್ರಾಸಂಗಿಕವಾಗಿ ನೈಷಧದ ಪದ್ಯವೊಂದನ್ನು ಇಲ್ಲಿ ಉದಾಹರಿಸಬಹುದು.

> ವಿಧೇಃ ಕದಾಚಿತ್ ಭ್ರಮಣೀವಿಲಾಸೇ ಶ್ರಮಾತುರೇಭ್ಯಃ ಸ್ವಮಹತ್ತರೇಭ್ಯಃ ॥
> ಸ್ಕಂಧಸ್ಯ ವಿಶ್ರಾಂತಿಮದಾಂ ತದಾದಿ ಶ್ರಾಮ್ಯಾಮಿ ನಾಪಿಶ್ರಮ ಪಿಷ್ಟಗೋಽಪಿ
>
> –ನೈಷಧೀಯ ಚರಿತಂ, III-೧೯.

(ಬ್ರಹ್ಮನ ಸ್ವೈರ ವಿಹಾರದ ಸಮಯದಲ್ಲೊಮ್ಮೆ ನನ್ನ (ಹಂಸ) ಹಿರಿಯರ ಹೆಗಲಿಗೆ ಬಿಡುವು ಮಾಡಿಕೊಟ್ಟೆ. ಅಂದು ಮೊದಲು ಎಡೆಬಿಡದೆ ಸುತ್ತಿಸಿದರೂ ದಣಿವನ್ನರಿಯೆ!)

ಇಲ್ಲಿನ "ತದಾದಿ"ಯೆಂಬ ಪದಕ್ಕೆ "ಅದು ಮೊದಲು" "ಅಲ್ಲಿಂದ ಮುಂದಕ್ಕೆ" ಎಂಬ ಅರ್ಥವಿರುವದನ್ನು ಕಾಣಬಹುದು. "ತದಾದಿ"ಯು ಇಲ್ಲಿ ಕ್ರಿಯಾವಿಶೇಷಣ*

ಕವಿರಾಜಮಾರ್ಗದಲ್ಲಿನ "ತದಾದ್ಯಕಾವ್ಯ" ಪದದ ಅರ್ಥವನ್ನು ವಿದ್ವಾಂಸರು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಿವರಿಸಿದ್ದು ಕಂಡು ಬರುತ್ತದೆ. ಉದಾಹರಣೆಗೆ:

೧. "ಆದ್ಯ ಕಾವ್ಯವೆಂದರೆ ಪ್ರಥಮ ಕಾವ್ಯವೆಂದೂ ಆಗಬಹುದು, ಶ್ರೇಷ್ಠ ಅಥವಾ ಪ್ರಮುಖ ಕಾವ್ಯವೆಂದೂ ಆಗಬಹುದು. ಕಾಲದ ದೃಷ್ಟಿಯಿಂದ "ಆದ್ಯ ಕಾವ್ಯ" ಎಂಬ ಗ್ರಹಿಕೆಯನ್ನು ಪುರಸ್ಕರಿಸುವದಾದರೆ, ಒಬ್ಬ ಕವಿಯ ಒಂದು ಕೃತಿ ಆದ್ಯಕಾವ್ಯವಾಗಬಹುದೇ ಹೊರತು ಹಲವು ಕವಿಗಳ ಹಲವು ಕೃತಿಗಳಲ್ಲ. ಆದ್ದರಿಂದ ಇಲ್ಲಿ "ಆದ್ಯಕಾವ್ಯ"ವೆಂದರೆ "ಶ್ರೇಷ್ಠಕಾವ್ಯ" ಎಂದು ಡಾ.ರಂ.ಶ್ರೀ. ಮುಗಳಿ ಅವರು ಅರ್ಥಮಾಡಿರುವದೇ ಸಾಧು" (ಕನ್ನಡ ಸಾಹಿತ್ಯ ಚರಿತ್ರೆ) ಎನ್ನುತ್ತಾರೆ ಶ್ರೀಮಾನ್

---

> ಊರ್ಧ್ವೋರ್ಧ್ವಮಾರುಹ್ಯ ಯದರ್ಥ ತತ್ವಂ
> ಧೀಃ ಪಶ್ಯತಿ ಶ್ರಾಂತಿ ಮವೇದಯಂತೀ ।
> ಫಲಂ ತದಾದ್ಯೈಃ ಪರಿಕಲ್ಪಿತಾನಾಂ
> ವಿವೇಕಸೋಪಾನ ಪರಂ ಪರಾಣಾಮ್ ॥
>
> –ಅಭಿನವಗುಪ್ತ

> ಮೇಲು ಮೇಲಕ್ಕೇರಿ ಅರ್ಥತತ್ವವನಿದೋ
> ಬಳಲಿಕೆಯನರಿಯದೆಯೆ ಬುದ್ಧಿ ಕಾಣುತಿದೆ ।
> ಫಲಸಿದ್ಧಿಯದು ಮೊದಲ ಸೂರಿಗಳು ನಿರ್ಮಿಸಿದ
> ಸುವಿಚಾರಸೋಪಾನ ಸರಣಿಗಳಿಗೆ ॥
>
> –ತೀ.ನಂ.ಶ್ರೀ.

* ಇಲ್ಲಿನ "ಆದ್ಯಕ್ಕೆ" ಮೊದಲ (ಹಿಂದಿನ, ಹಿರಿಯ "ಆದ್ಯರು") ಎಂಬರ್ಥವಿದ್ದರೂ ಇದು "ತದಾದ್ಯ"ದ ಬಗೆಯ ಸಮಸ್ತಪದವಲ್ಲವಾದ್ದರಿಂದ ಪ್ರಕೃತಕ್ಕೆ ಉದಾಹರಣೆಯಲ್ಲ.

ಎಂ.ವಿ. ಸೀತಾರಾಮಯ್ಯನವರು.[೩] ಈ ವಿವರಣೆಯು ಮೇಲಿನ ಪದ್ಯಕ್ಕೆ "ಶ್ರೀ ವಿಜಯಾದಿ ಕವಿಗಳ ಅತ್ಯುತ್ತಮ-ವಸ್ತು-ವಿಸ್ತರ-ರಚನೆಗಳು ಅವರ ಶ್ರೇಷ್ಠ ಕಾವ್ಯಕ್ಕೆ ಉದಾಹರಣೆ" ಎಂಬ ವಾಕ್ಯಾರ್ಥ ಸಿದ್ಧಿಸುತ್ತದೆ. "ಅವರ ಉತ್ತಮ ಕೃತಿಗಳು ಅವರ ಶ್ರೇಷ್ಠ ಕಾವ್ಯ" ಎಂಬಲ್ಲಿ "ಸಾಗರಃ ಸಾಗರೋಪಮಃ" ಎಂಬಂತೆ ಅನನ್ವ-ಯಾಲಂಕಾರಕ್ಕೊಂದು ಉದಾಹರಣೆ ಸಿದ್ಧಿಸೀತೇ ಹೊರತು ಪ್ರಕೃತಕ್ಕೆ ವಿವಕ್ಷಿತಾರ್ಥವನ್ನು ವ್ಯಾಖ್ಯಾನಿಸಿದಂತಾಗುವದಿಲ್ಲ. ತದಾದ್ಯ ಕಾವ್ಯವೆಂಬಲ್ಲಿನ ಬಹುವ್ರೀಹಿ ಸಮಾಸವನ್ನು ಡಾ. ಮುಗಳಿಯವರಾಗಲಿ, ಶ್ರೀ ಎಂ.ವಿ.ಸೀ. ಅವರಾಗಲಿ ಗಮನಿಸಿದಂತಿಲ್ಲ.

೨. "ತದಾದ್ಯಕಾವ್ಯ"

"I-೩೧ನೇ ಪದ್ಯದಲ್ಲಿ ಉಕ್ತರಾದ ಸಂಸ್ಕೃತ ಕವಿಗಳು ಹೇಗೆ "ಮಹಾಕಾವ್ಯ ಪ್ರಣಯಮ"ನಾಗಿಸಿದರೋ ಹಾಗೆ ಕನ್ನಡದಲ್ಲಿ ಶ್ರೀ ವಿಜಯಾದಿಗಳ ವಸ್ತುವಿಸ್ತರ ವಿರಚನೆ( = ವಸ್ತು ಕಾವ್ಯ = ಮಹಾ ಕಾವ್ಯ?) ತತ್ + ಆದ್ಯ ಕಾವ್ಯಕ್ಕೆ (ಆ ಮೊಟ್ಟ ಮೊದಲಿನ ಅಥವಾ ಶ್ರೇಷ್ಠ? ಕಾವ್ಯಕ್ಕೆ) ಲಕ್ಷ್ಯಂ; ತತ್ ಸರ್ವನಾಮ ಶ್ರೇಷ್ಠ (ಪ್ರಸಿದ್ಧ) ದ್ಯೋತಕವೇ ಆಗಿರುವದರಿಂದ "ಆದ್ಯ"ಕ್ಕೆ ಪ್ರಥಮ ಎಂಬರ್ಥವೇ ಹೆಚ್ಚು ಸಮಂಜಸ ವಾಗಿ ಕಾಣುತ್ತದೆ"[೪] – ಶ್ರೀಮಾನ್ ಎಂ.ವಿ. ಸೀತಾರಾಮಯ್ಯನವರು.

ಈ ವಿವರಣೆಯಿಂದ "ಶ್ರೀವಿಜಯಾದಿ ಕವಿಗಳ ಕೃತಿಗಳು ಕನ್ನಡದ ಮೊಟ್ಟಮೊದಲ ಕಾವ್ಯಗಳಾಗಿದ್ದವೆಂ"ಬ ಅರ್ಥ ಸಿದ್ಧಿಸುತ್ತದೆ. ಇದನ್ನು ಅಂಗೀಕರಿಸಿದಾಗ "ಶ್ರೀವಿಜ ಯಾದಿ ಕವಿಗಳಿಗಿಂತ ಹಿಂದೆ ಕನ್ನಡದಲ್ಲಿ ಕಾವ್ಯರಚನೆಯೇ ಆಗಿರಲಿಲ್ಲವೇ?" ಎಂಬ ಪ್ರಶ್ನೆ ಏಳುವದು ಸಹಜ.

೩. "ತದಾದ್ಯಕಾವ್ಯ"ದಲ್ಲಿ ಆದ್ಯವೆಂದರೆ "ಮೊದಲುಳ್ಳ" ಎಂದು ಅರ್ಥವಿಸಿದರೆ "ಪರಮ ಶ್ರೀ ವಿಜಯ..." ಮುಂತಾದ ಕವಿಗಳೆಲ್ಲ ಕವಿರಾಜಮಾರ್ಗಕಾರನಿಗಿಂತ ಮೊದಲಿನವರಾಗುತ್ತಾರೆ. ಇವರಲ್ಲಿ ಕೆಲವರು ಪ್ರಾಚೀನರು, ಕೆಲವರು ಸಮಕಾಲೀ ನರು ಇರುವ ಸಂಭವವಿದೆ. ವಿಶೇಷತಃ "ಶ್ರೀ ವಿಜಯ" ಇದು ಕವಿರಾಜಮಾರ್ಗಕಾರನ ಹೆಸರಿರಬೇಕೆಂಬ ಊಹೆಗೆ ಆಧಾರಗಳಿವೆ. ಅಂತೇ "ಆದ್ಯ" ವೆಂದರೆ "ಶ್ರೇಷ್ಠ" ವೆಂಬ ಅರ್ಥವು ಹೆಚ್ಚು ಸಮಂಜಸವಾಗಿದೆ."[೫]. –ಶ್ರೀಮಾನ್ ಡಾ. ರಂ.ಶ್ರೀ ಮುಗಳಿ ಅವರು.

"ಇಲ್ಲ; ಇಲ್ಲಿನ ಆದ್ಯ ಶಬ್ದಕ್ಕೆ "ಮೊದಲುಳ್ಳ" ಎಂದು ಅರ್ಥೈಸಿದ ಮಾತ್ರಕ್ಕೆ "ಶ್ರೀವಿಜಯಾದಿ ಕವಿಗಳು ಕವಿರಾಜಮಾರ್ಗಕಾರನಿಗಿಂತ ಹಿಂದಿನವರು" ಎಂಬಂತಹ ಅರ್ಥವೇನೂ ಸಿದ್ಧವಾಗುವದಿಲ್ಲ. ವಸ್ತುತಃ ಶ್ರೀವಿಜಯಾದಿ ಕವಿಗಳ ಕಾವ್ಯಗಳಿಗಿಂತ

---

೩. ಕ. ರಾ. ಮಾರ್ಗದ ಪೀಠಿಕೆ: ಪು. L. 1968 ರ ಮುದ್ರಣ.

೪. ತಾ. 12-8-1970 ರ ಒಂದು ಕಾಗದ.

೫. ತಾ. 7-12-1970 ರ ಒಂದು ಕಾಗದ.

ಮುಂದಿನ ಕಾವ್ಯಗಳೇ ತದಾದ್ಯ**ಕಾವ್ಯ** ಪದಕ್ಕಿಲ್ಲಿ ವಿವಕ್ಷಿತವಾದ ಅರ್ಥ. "ವಾಲ್ಮೀಕಿಯ ರಾಮಾಯಣವು ತದಾದ್ಯಕಾವ್ಯಗಳಿಗೆ ಮಾದರಿಯಾಗಿ**ದೆ**" ಎಂಬೊಂದು ವಾಕ್ಯವಿದ್ದರೆ ಅಲ್ಲಿ "ವಾಲ್ಮೀಕಿಯು ರಾಮಾಯಣಕ್ಕಿಂತ ಹಿಂದಿನವನು" ಎಂದು ಅರ್ಥವಾಗುವ ಸಂಭವವಿಲ್ಲವಷ್ಟೇ!

೪) "ತದಾದ್ಯಕಾವ್ಯ..... ಇಲ್ಲಿ ನಾನು ತಿಳಿಯುವ ಅರ್ಥಸಂದರ್ಭಾನುಸಾರವಾಗಿ "ಕನ್ನಡದ ಮಹಾಕಾವ್ಯ" ಇಷ್ಟೇ. ಸಂಸ್ಕೃತದಲ್ಲಿ ಕಾವ್ಯಶಬ್ದ ನಪುಂಸಕಲಿಂಗ. ಆದ್ಯ ಕಾವ್ಯವೆಂದರೆ=ಮೊದಲ ಮಹಾಕವಿಗಳ ರಚನೆ. ಇಲ್ಲಿ "ಕನ್ನಡ"ವೆನ್ನುವ ಬದಲು ಕಾವ್ಯ ಶಬ್ದಕ್ಕೆ ವಿಶೇಷಣವಾಗಿ ನಪುಂಸಕಲಿಂಗದ ತಚ್ಛಬ್ದ ಬಳಸಿದಂತೆ ಭಾಸವಾಗುತ್ತದೆ. ಹಿಂದಿನ ಪದ್ಯದಲ್ಲಿ ಸಂಸ್ಕೃತ ಮಹಾಕಾವ್ಯವನ್ನು ಹೇಳಿ ತದ್ಭಿನ್ನ (To Show Contrast) ಕನ್ನಡ ಕಾವ್ಯವನ್ನು ಇಲ್ಲಿ ಸ್ಪಷ್ಟಪಡಿಸುತ್ತಿದ್ದಾನೆ. ನಿಮ್ಮ Interpretation ಈ ಸಂದರ್ಭಕ್ಕೆ ಹೊಂದುವದಿಲ್ಲವೇನೋ."[೬]

—ಶ್ರೀಮಾನ್ ಪಾ.ಕೆ. ಕೃಷ್ಣಮೂರ್ತಿ ಅವರು.

ಪದ ಅಥವಾ ಪ್ರಕರಣದಿಂದ ಉಪಸ್ಥಿತವಾದ ಅರ್ಥವನ್ನು ಬೋಧಿಸುವದು ತಚ್ಛಬ್ದದ ಸ್ವಭಾವವೆಂದು ಸಾಮಾನ್ಯವಾಗಿ ಗೃಹೀತವಾಗಿದೆ. ಯದ್ಯಪಿ ಕವಿರಾಜಮಾರ್ಗ ಕಾರನಿಗೆ ಗ್ರಂಥದ ಉದ್ದಕ್ಕೂ ಕನ್ನಡದ್ದೇ ಮಹಾಪ್ರಕರಣ. ನೃಪತುಂಗನೇ ಮಹಾಪ್ರಕರಣಿ. ಆದರೆ ಪದ ಹಾಗೂ ಪ್ರಕರಣಗಳ ಪೈಕಿ ಪದವೇ (ಶ್ರುತಿ) ಪ್ರಬಲವಾದ ಪ್ರಮಾಣ ವಾದುದರಿಂದ ಇಲ್ಲಿ "ಶ್ರೀ ವಿಜಯಾದಿಗಳ ನಿರತಿಶಯ ವಸ್ತು ವಿಸ್ತರವಿರಚನೆ" ಯೆಂದು ಪದೋಪಾತ್ತವಾದ ಅರ್ಥವನ್ನುಳಿದು ತಚ್ಛಬ್ದಕ್ಕೆ "ಕನ್ನಡ"ವೆಂದು ಅರ್ಥೈಸು ವದು ಪ್ರಾಮಾಣಿಕವೆನಿಸಲಾರದು. "ಲೋಕಮು... ಮಾಱಿಕ್ಕುಂ। ತದ್ವ್ಯತಿರೇಕೋಕ್ತಿ..." (ಕ. ರಾ. ಮಾ. I –೭೯) "ಪುರಾಣ ಶಾಸ್ತ್ರೋಕ್ತಂಗಳ್। ತದನು ಮತ..." (ಕ.ರಾ.ಮಾ.. III –೫) ಈ ಮೊದಲಾದ ವಾಕ್ಯಗಳಲ್ಲಿ ಸಮಾಘಟಕವಾದ ತಚ್ಛಬ್ದಕ್ಕೆ ಆಯಾ ವಾಕ್ಯಗಳಲ್ಲೇ–**ಪದೋ**ಪಾತ್ತವಾದ–ಉಕ್ತವಾದ "ಲೋಕ" "ಪುರಾಣ ಶಾಸ್ತ್ರ" ಮೊದಲಾದ ಅರ್ಥಗಳನ್ನು ಸ್ವೀಕರಿಸುವಂತೆ ತದಾದ್ಯ ಕಾವ್ಯವೆಂಬಲ್ಲೂ ಕೂಡ ತಚ್ಛಬ್ದಕ್ಕೆ ನಿರತಿಶಯವಸ್ತು ವಿಸ್ತರವಿರಚನೆಯೇ ಅರ್ಥವೆಂದು ಗ್ರಹಿಸುವದೇ ಸಮಂಜಸ.

೫) "ಕ.ರಾ.ಮಾರ್ಗ. I –೩೦ರಲ್ಲಿಯ "ಆದ್ಯ"ಕ್ಕೂ ಇದೇ (ಶ್ರೇಷ್ಠ) ಅರ್ಥವಿದೆ ಯೆಂಬ ಅವರ (ಶ್ರೀ. ಮುಗಳಿಯವರ) ಹೆಚ್ಚಿನ ಸಮರ್ಥನೆಯನ್ನು ಗಮನಿಸಬೇಕು"[೭]

—ಶ್ರೀಮಾನ್ ಎಂ.ವಿ. ಸೀತಾರಾಮಯ್ಯನವರು.

---

೬. ತಾ. 30–12–1970 ರ ಒಂದು ಕಾಗದ.

೭. ಕ. ರಾ. ಮಾರ್ಗ ಪೀಠಿಕೆ: ಪುಟ L. 1968

ಈ "ಹೆಚ್ಚಿನ ಸಮರ್ಥನೆ" ಪ್ರಕೃತಕ್ಕೆ ವಸ್ತುತಃ ಹೆಚ್ಚೆಂದೇ ನನಗನಿಸುತ್ತದೆ. ಯಾಕಂದರೆ, ಉಪಲಬ್ಧ ವಾಙ್ಮಯಗಳ ಪೈಕಿ ಋಗ್ವೇದವು "ಆದ್ಯ"ವೆಂಬ ನಂಬಿಕೆಯಿದೆಯಷ್ಟೇ. ಅದು ಪದ್ಯರೂಪದಲ್ಲಿದೆ. ಲೌಕಿಕವಾಙ್ಮಯದ "ಆದಿಕಾವ್ಯ" ರಾಮಾಯಣವೂ ಪದ್ಯರೂಪದಲ್ಲಿದೆ. ಹೀಗೆ ನಮ್ಮ ವಾಙ್ಮಯ ಸರಸ್ವತಿಯು ಇದಂ ಪ್ರಥಮವಾಗಿ ಛಂದೋಮಯಿಯಾಗಿಯೇ ಮೈದಳೆದದ್ದನ್ನು ಮನದಂದರೆ ಶ್ರೀ ವಿಜಯನ "ಪದ್ಯಂ" "ಆದ್ಯಂ" ಎಂಬ ಮಾತಿನ ಗುಟ್ಟು ಬಯಲಾಗದಿರದು. ವಾಙ್ಮಯದ ಮಟ್ಟಿಗೆ ಹೇಳುವಾಗ "ಪದ್ಯ ಮೊದಲು, ಗದ್ಯ ಮತ್ತಿನದ"ಷ್ಟೇ. ಅಂತೆಯೇ ಇಲ್ಲಿನ "ಆದ್ಯ"ಕ್ಕೂ "ಮೊದಲಿನದು" ಎಂದೇ ಅರ್ಥೈಸುವದರಲ್ಲಿ ಬಾಧಕವೇನೂ ಇಲ್ಲ. "ಆದ್ಯಂ ಎಂಬುದು ಪ್ರಾಚೀನತೆಯ ಸೂಚನೆ. ಸಾಹಿತ್ಯದ ಪ್ರಾರಂಭಸ್ವರೂಪವು ಪದ್ಯಾತ್ಮಕವೆಂಬೀ ಅಭಿಪ್ರಾಯವನ್ನು ಈ ಶಬ್ದವು ಪುಷ್ಟೀಕರಿಸುತ್ತದೆ"[೯] –ಶ್ರೀ. ಟಿ.ಕೇಶವ ಭಟ್ಟರ ಈ ಹೇಳಿಕೆಯು ಇಲ್ಲಿ ಸಲ್ಲುತ್ತದೆ.

ಹೀಗೆ, ಮೇಲೆ ಉದಾಹರಿಸಿದ ಎರಡು ವಾಕ್ಯಗಳಲ್ಲೂ ಕೂಡ (ಕ.ರಾ.ಮಾ. I –೩೦,೩೨) ಆದ್ಯ ಶಬ್ದಕ್ಕೆ ಮೊದಲುಳ್ಳದ್ದೆಂಬ ಅರ್ಥವೇ ಒಪ್ಪುತ್ತದೆ. ತದಾದ್ಯಕಾವ್ಯವೆಂಬಲ್ಲಿನ "ತದಾದ್ಯ"ದಲ್ಲಿ ಅತದ್ಗುಣಸಂವಿಜ್ಞಾನ ಬಹುವ್ರೀಹಿ ಸಮಾಸವಿದೆ. ಶ್ರೀ ವಿಜಯಾದಿಗಳ ರಸಾವಹಕೃತಿಗಳು ಮತ್ತಿನ ಕಾವ್ಯಗಳಿಗೆ "ಮಾರ್ಗ"ದರ್ಶಕವಾಗಿದ್ದವು ಎಂಬುದೀಗ ನನ್ನ ನಿಗಮನ.

---

೮. ಮಾ ನಿಷಾಧ । ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ।
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥
ವಾಲ್ಮೀಕಿಯ ಮುಖದಿಂದ ಮೈದೋರಿದ ಮೊಮ್ಮೊದಲ "ವಾಙ್ಮಯ ಸರಸ್ವತೀ"ಯ ರೂಪವಿದು.

೯. ಸಂಶೋಧನ ರತ್ನಮಾಲೆ : ಪುಟ 125

ತದಾದ್ಯ ಕಾವ್ಯಪದಾರ್ಥದ ಜಿಜ್ಞಾಸೆಯ ಬಗೆಗೆ ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ತಿಳಿಸಿ ಉಪಕರಿಸಿದ ವಿದ್ವನ್ಮಹನೀಯರು ಮಾನ್ಯ ಶ್ರೀ ಎಂ. ವಿ. ಸೀತಾರಾಮಯ್ಯ, ಡಾ. ಕೆ. ಕೃಷ್ಣಮೂರ್ತಿ ಡಾ. ಮುಗಳಿ. ಅವರಿಗೆ ನನ್ನ ಕೃತಜ್ಞತೆಗಳು.

# ಸಂಜೀವಿನಿ

ಆರ್. ಆರ್. ಹೆಗಡೆ

ಅಂದು—
ನಾನು ಮತ್ತು ನನ್ನವಳು 'ಪುಟ್ಟಿ'
ಬಹಳ ವಿಚಾರ ಮಾಡಿದ್ದೇವೆ.
ಮಾಡಿ
ತಲೆಕೆಡಿಸಿಕೊಂಡಿದ್ದೇವೆ.
ಅದಕ್ಕಾಗಿಯೋ ಇರಬೇಕು
ನನ್ನ ತಲೆಯ ಹಿಂಬದಿ
ಅವಳಿಗೆ 'ಒಯಾಸಿಸ್ ಅಂತೆ'
ಕಂಡಿದ್ದು.
ಪಾಪ!
ಅವಳಿಗೂ ಹಾಗೆಯೆ,
ಹುಳಬಿದ್ದ 'ಬೇಣ'ದಂತೆ
ಆಗಿದೆ ಅವಳ ತಲೆ.
'ಸಾವು ಕಟ್ಟಿಟ್ಟ ಬುತ್ತಿ'
ಅಲ್ಲ
'ಜಾತಸ್ಯ ಮರಣಂ ಧ್ರುವಂ'
ಎಂದೆ ನಾನು
ಹೆಂಡತಿಯ ಮುಂದೆ ಪಾಂಡಿತ್ಯ
ಪ್ರದರ್ಶನಕ್ಕಾಗಿ!
ಸಾಯದೇ ಇರುವದಕ್ಕೆ ಉಪಾಯವೇನು
ಪ್ರಶ್ನೆ
ಕೊರೆಯುತ್ತಿತ್ತು
ತಲೆತಿನ್ನುತ್ತಿತ್ತು.

ಇಂದು—
ಸಂಜೆ ಪಾರ್ಕಿನಲ್ಲಿ

ಒಮ್ಮೆಲೆ ಜ್ಞಾನೋದಯವಾಯಿತು.
ಬುದ್ಧನಿಗೆ ಆದಂತೆ
ಕೂಡಲೇ ಓಡಿದೆ–ಹೇಗೆ ?
ಬಿದ್ದರೆ ಹಲ್ಲು ಸಿಕ್ಕದ ಹಾಗೆ.
ಸಿಕ್ಕಿತು, ಸಿಕ್ಕಿತು, ಸಿಕ್ಕಿತು
ಬಾಗಿಲು ತಟ್ಟುತ್ತ 'ಅವಳಿಗೆ' ಹೇಳಿದೆ
ಏನು ?
ಹುಟ್ಟಲೇ ಬಾರದು.

# ಶ್ರೀರಾಮ ಪರೀಕ್ಷಣಂ: ಒಂದು ಪರಿಶೀಲನೆ

**ಶಶಿಕಲಾ ವೋಳದಿ**

ಪರಿವರ್ತನೆ ಬದುಕಿನ ಸಹಜ ನಿಯಮ. ಮಾನವನು ದೈಹಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅನೇಕ ಅವಸ್ಥೆಗಳನ್ನು ದಾಟಿರುವನು. ಜೀವನದ ರೀತಿ-ನೀತಿಗಳು ಆಚಾರವಿಚಾರಗಳು ಜೀವನಮೌಲ್ಯಗಳು ವ್ಯತ್ಯಾಸವಾಗುತ್ತಲೇ ಇವೆ. ಇದನ್ನು ಸ್ವೀಕರಿಸುವಲ್ಲಿ ಇಬ್ಬಗೆಯ ಮನೋಭಾವ ವ್ಯಕ್ತವಾಗುವುದು. ಹಳೆಯ ಮೌಲ್ಯವನ್ನು ಸಂಪೂರ್ಣವಾಗಿ ಇಲ್ಲವಾಗಿಸಿ ಹೊಸ ಮೌಲ್ಯಗಳನ್ನುಂಟಾಗಿಸುವುದು ಒಂದು; ಕಟ್ಟಡವೊಂದು ಹಳೆಯದಾಗಿ ವಾಸಕ್ಕೆ ಅಯೋಗ್ಯವಾಗಲು ಪೂರ್ತಿಯಾಗಿ ಕೆಡವಿ ಹೊಸದೊಂದನ್ನು ಕಟ್ಟಿಸುವಂತೆ ಹಳೆಯ ಮೌಲ್ಯಗಳನ್ನು ಕಾಲಮಾನಕ್ಕೆ ತಕ್ಕಂತೆ ಪರಿಷ್ಕರಿಸಿ ಸ್ವೀಕರಿಸುವುದು ಇನ್ನೊಂದು; ಕಟ್ಟಡವು ಹಳೆಯದಾಗಿ ವಾಸಕ್ಕೆ ಅಯೋಗ್ಯವಾಗದಂತೆ ಅದನ್ನು ಆಗಾಗ ಸರಿಪಡಿಸುತ್ತ ಅನುಕೂಲಕ್ಕೆ ತಕ್ಕಂತೆ ಮಾರ್ಪಾಡುಗೊಳಿಸುತ್ತಿರುವುದು. ಶ್ರೀ ಡಿ. ವಿ. ಜಿ. ಯವರು ಎರಡನೆಯ ರೀತಿಯನ್ನು ಒಪ್ಪಿದವರು.

> ಜನ ಧರ್ಮಂ ಬಹುಕಾಲಗ
> ಳನುಭವದಿಂದೊಗೆದ ನೀತಿಯದು ಪಳಸಿಕೆಡಲ್
> ಮನುಜವಿವೇಕಂ ರಚಿಸುಗು
> ಮನು ಪೂರ್ವ ಕ್ರಮದಿ ನೊಂದು ನವಪದ್ಧತಿಯಂ

ಧರ್ಮವು ಅನುಭವದಿಂದೊಗೆದ ನೀತಿ. ಕಾಲಕ್ಕೆ ತಕ್ಕಂತೆ ವ್ಯತ್ಯಾಸ ಮಾಡಿ ಒಂದು ನವ ಪದ್ಧತಿಯನ್ನು ರಚಿಸಲಾಗುವುದು. ಪುರುಷ ವಿವೇಕ, ಪೂರ್ವಾಚರಣೆ, ಲೋಕ ಪ್ರಯೋಗ ಇವುಗಳು ಸರಿಯಾಗಿ ಕೂಡಿದರೆ ಮಾತ್ರ ಶುಭವುಂಟು. ಪೂರ್ವಾಚಾರದ ತಳಹದಿಯ ಮೇಲೆ ಸದ್ಯದ ಪರಿಸ್ಥಿತಿಗನುಸರಿಸಿ ಪುರುಷ ವಿವೇಕ ಪರಿಣಾಮರೂಪವಾಗುದಿಸಿದ ಧರ್ಮ, ನೀತಿ, ಮೌಲಗಳು ಶುಭವನ್ನುಂಟು ಮಾಡುತ್ತವೆ: ಹಳೆಯ ಬೇರುಳ್ಳ ಮರ ಹೊಸ ತಳಿರನ್ನು ತಳೆದು ಚೇತರಿಸಿಕೊಂಡಂತೆ. ಇದು ಡಿ. ವಿ. ಜಿ.ಯವರ ದೃಢ ನಿಷ್ಠೆ. ಈ ವಿಚಾರಗಳು 'ಶ್ರೀರಾಮ ಪರೀಕ್ಷಣಂ' ಎಂಬ ಕಿರುಕಾವ್ಯದಲ್ಲಿ ವ್ಯಕ್ತವಾಗಿದೆ. ಇದೊಂದು ಉತ್ತಮ ಕಲಾಕೃತಿಯಾಗಿರುವಂತೆಯೇ ತಾತ್ವಿಕ ಗ್ರಂಥವೂ ಆಗಿದೆ. ರಾಮನ ಕಥೆಯಾದರೂ ರಚನೆಯ ಉದ್ದೇಶದಲ್ಲಿ ನಿರೂಪಣಾ ಕ್ರಮದಲ್ಲಿ ನಾವೀನ್ಯವಿದೆ.

ರಾಮಾಯಣವು ಅತ್ಯಂತ ಪುರಾತನ ಕೃತಿ. ರಾಮನು ಧರ್ಮಜ್ಞನಾಗಿ ವಿವೇಚನೆಯಿಂದ ನಡೆದು ಲೋಕಹಿತಾರ್ಜನೆಯನ್ನು ಮಾಡಿ ದೇವಮಾನವನಾಗುವ ಮಹತ್ಕಾರ್ಯವನ್ನು ಚಿತ್ರಿಸುವ ಜೀವಂತ ಕೃತಿ. ಏಕೆಂದರೆ ಭೂತ, ವರ್ತಮಾನ, ಭವಿಷತ್ಕಾಲಕ್ಕೊಪ್ಪುವ ಜೀವನಮೌಲ್ಯಗಳನ್ನು ಒದಗಿಸಿದೆ. ಅಲ್ಲಿರುವ ಸಮಸ್ಯೆಗಳಿಂ ಅವಕ್ಕೆ ನೀಡಿದ ಪರಿಹಾರಗಳು ತ್ರಿಕಾಲಾಬಾಧಿತವಾಗಿದ್ದು ಅದನ್ನು ಸರ್ವಕಾಲಿಕ ಕೃತಿಯನ್ನಾಗಿಸಿವೆ. ಭಾರತೀಯ ಸಂಸ್ಕೃತಿಯ ಸಾರ ಸರ್ವಸ್ವವೂ ಆಗಿದೆ. ಅಂದಿನಿಂದ ಇಂದಿನ ವರೆಗೂ ಜೀವನದಲ್ಲಿ ಮಾರ್ಗದರ್ಶಿಕವಾಗಿದೆ ಎಂಬುದವರ ಮತ. ಕವಿಗಳಿಂ ಈ ಕೃತಿಯಲ್ಲಿ ಆಧುನಿಕ ಜೀವನಾನುಭವಗಳ ಹಿನ್ನೆಲೆಯಲ್ಲಿ ರಾಮನನ್ನು ಪರಿಶೀಲಿಸಿದ್ದಾರೆ. ರಾಮಕಥೆಯನ್ನು ಉದ್ದಕ್ಕೆ ಹೇಳುತ್ತಾ ಹೋಗದೆ ಅವನ ಜೀವನದಲ್ಲಿಯ ಹಲವು ಸಂದಿಗ್ಧದ, ಸಂಘರ್ಷದ ಸಂದರ್ಭಗಳನ್ನು ತೆಗೆದುಕೊಂಡು ಅವನ್ನು ವಿಶ್ಲೇಷಿಸಿ ನೋಡುವ ವಿಮರ್ಶಾತ್ಮಕ ವಿವೇಚನಾ ದೃಷ್ಟಿ ಪ್ರಮುಖವಾಗಿ ಗೋಚರಿಸುತ್ತದೆ. ಯಾವುದನ್ನೂ ವಿವೇಕದ ಒರೆಗಲ್ಲಿಗೆ ತಿಕ್ಕಿ ನೋಡದೆ ಸ್ವೀಕರಿಸಬಾರದೆಂಬ ಚಿರಂತನಮತಿಯನ್ನು ತೋರಿದಂತೆಯೇ ಮಾನವನು ಸಮಾಜಜೀವಿಯಾಗಿ ಪರಿಮಿತಕಾಲ ಮಾತ್ರ ಬಾಳುವುದರಿಂದ, ಆ ಪರಿಸರಕ್ಕೆ ಹೊಂದಿಕೊಂಡು ಬಾಳುವ ದೃಷ್ಟಿ ಅವನಿಗವಶ್ಯವೆಂಬುದನ್ನು ಮನಗಾಣಿಸುತ್ತಾರೆ. ಇಲ್ಲಿ ಎತ್ತಿಕೊಂಡ ಸಮಸ್ಯೆಗಳ ಮುಖಾಂತರ ರಾಮನ ವ್ಯಕ್ತಿತ್ವದ ಮೌಲ್ಯ ಮಾಪನವನ್ನು ಮಾಡಿದ್ದಾರೆ. ಆದ್ದರಿಂದ ಇದು 'ಶ್ರೀರಾಮ ಪರೀಕ್ಷಣಂ' ದೇವನೆಂಬ ಭಾವದೀದ ರಚಿಸಿದ ಪುರಾಣ ಕೃತಿಯಲ್ಲ. ಇದು ಭಾರತೀಯ ಸನಾತನ ಸಂಸ್ಕೃತಿಯ ಪರೀಕ್ಷಣವೂ ಹೌದು.

ರಾಮಾಯಣದ ಉದ್ದೇಶ 'ಬಾಳ್ಸಟಿಯ ಪರಮಾಗಮ'ವು. ಅಲ್ಲಿಯ ಕೆಲವು ಪ್ರಸಂಗಗಳನ್ನೆತ್ತಿಕೊಂಡು ಆ ಸಂದರ್ಭದಲ್ಲಿ ರಾಮನಿಂತೇಕೆ ಆಚರಿಸಿದನೆಂದು ಪ್ರಶ್ನಿಸಲು ಅದಕ್ಕೆ ರಾಮನು ತಾನಂತು ನಡೆದುಕೊಂಡುದಕ್ಕೆ ವಿವರಣೆ ನೀಡುವನು. ಅಹಲ್ಯೆಯು ಕಾಮಪ್ರಚೋದನೆಯು ನಿಸರ್ಗ ನಿಯಮವಾಗಿದೆಯೆಂದ ಮೇಲೆ, ಅದನ್ನನುಸರಿಸಿ ನಡೆದುದು ಅಪರಾಧವಾಗುವುದೇಕೆ? ಎಂದು ವಾಲಿವಧೆ ಅನ್ಯಾಯದಿಂದಾದುದು ಸ್ವಾರ್ಥ ಸಾಧನೆಗಾಗಿ ಮಾಡಿದುದೆಂಬುದು ತಾರೆಯ ಆರೋಪ; ಒಂದೇ ರೀತಿಯ ಅಪರಾಧವನ್ನೆಸಗಿದ ಈರ್ವರಲ್ಲಿ ಒಬ್ಬನಿಗೆ ಕ್ಷಮೆ. ಇನ್ನೊಬ್ಬನಿಗೆ ಶಿಕ್ಷೆಯೇಕೆಂಬುದು ಮಂಡೋದರಿಯ ಸವಾಲು. ರಾಮನು ಮಹಾರಾಜನಾಗಿದ್ದೂ ಅಜ್ಞಾನಿಗಳ ನುಡಿಗಿತ್ತ ಬೆಲೆ ಸಮವೇ, ಕೈ ಹಿಡಿದು ಇಷ್ಟು ಕಾಲ ಸಹಜೀವನ ನಡೆಸಿಯೂ ನಂಬಿಕೆಯಿಲ್ಲದೇ ಪರಿತ್ಯಜಿಸಿದನಲ್ಲಾ ಎಂದು ಸೀತೆಯು ಕಳೆವಳೆ. ತಿಳಿಯದ ಜನರಾಡಿದ ನುಡಿಯನ್ನಾಲಿಸಿ ಮಂಗಳ ಮಾತೆಯನ್ನು ಶಿಕ್ಷಿಸುವುದೆ, ಅಡವಿಗಟ್ಟುವುದೇ ಎಂದು ವ್ಯಥೆ. 'ಉಚ್ಚ ರೀತಿಯ ಧರ್ಮಾಚರಣೆ ಕೆಲವರಿಗಷ್ಟೇ ಮೀಸಲಾದುದೇ? ನೀಚ ಜಾತಿಯವರು ತಪಾದಿಗಳನ್ನಾಚರಿಸಬೇಡವೇ ಎಂಬುದು ಲಕ್ಷ್ಮಣನ ಕೇಳಿಕೆ. ಧರ್ಮದ ಸ್ವರೂಪ ವೇಷಹುದು, ರೂಢಿಯೆ, ವಿವೇಕದಿಂದುದಿಸಿದ ಮಾರ್ಗವೇ ಎಂಬುದು ಹನುಮಂತನ

ಸಂಶಯ. ಎಲ್ಲಕ್ಕೂ ಸಕಾರಣವಾಗಿ ಸಮಾಧಾನದುತ್ತರವನ್ನು ರಾಮನು ನೀಡುವನು. ಇದು 'ರಾಮ ಪರೀಕ್ಷಣ'ದ ವಿಷಯ ವಿಸ್ತಾರ.

ಧರೆಯ ಸುಖ ಮನವನ್ನು ಕೆರಳಿಸುತ್ತಿರಲು ಆ ಬೇಗೆಯನ್ನು ಹರಿಸಿ ಬಾಳಿನಲ್ಲಿ ನೆಮ್ಮದಿಯನ್ನು ಕಾಣುವುದೆಂತು? ಜೀವನದಲ್ಲಾವುದು ಸರಿಯಾದ ಮಾರ್ಗ? ಭೋಗಿಯಾಗಿರುವುದೇ. ವೈರಾಗ್ಯದಿಂದ ಬಾಳುವುದೇ, ನಿಯಮಿತತನವಿರಬೇಕೆ, ಸ್ವೈರವೃತ್ತಿಯೇ? ಇದು ಇಲ್ಲಿ ಎತ್ತಿದ ಮೊದಲನೆಯ ಸಮಸ್ಯೆ. ಇದನ್ನು ಮಂಡಿಸಿದವಳು ಅಹಲ್ಯೆ. ರಾಮನು ಧರ್ಮ ಸಂದಿಗ್ಧವನ್ನೆದುರಿಸುವುದು ಇದು ಮೊದಲನೆಯ ಸಲ. ಅದೇ ತಾನೇ ಬಾಲ್ಯವನ್ನು ಕಳೆದು ಯೌವನದ ಹೊಸಲಿನಲ್ಲಿ ಕಾಲಿರಿಸುತ್ತಿದ್ದ ರಾಮನಿಗೆ ಅಹಲ್ಯೆ ನೈಸರ್ಗಿಕವಾದ ತನುವಿನ ಒತ್ತಡ, ಭೋಗ ಲಾಲಸೆ, ಸಾಮಾಜಿಕ ಮೌಲ್ಯವನ್ನು ಕಡೆಗಣಿಸಿದವನಿಗುಂಟಾದ ಶೋಚನೀಯ ಸ್ಥಿತಿಯನ್ನು ವಿವರಿಸುತ್ತಾಳೆ. ಶಾಪ ವಿಮೋಚನಾ ಸಂದರ್ಭವಿದು. ಆದ್ದರಿಂದ ಅವಳು ಪರಿಶುದ್ಧವಾದ ದೇಹ ಆತ್ಮವನ್ನುಳ್ಳವಳಾಗಿರಬೇಕು. ಆದರೆ ಪಶ್ಚಾತ್ತಾಪದಗ್ನಿಯಲ್ಲಿ ಬೆಂದು ಅವಳ ಮನ ಪರಿಶುದ್ಧವಾಗಿದೆಯೇ? ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ರಾಮನಿಗೆ ಅಹಲ್ಯೆಯ ಆರ್ತ ಧ್ವನಿ ಕೇಳಿಸುವುದು. ತಾನು ಪತಿತೆ, ರಾಮನ ಶುಭ್ರೀಭೂತ ದೇಹದ ಕಾಂತಿ ತನ್ನ ಕಣ್ಣೆದುರಿಸದು, ಅವನನ್ನು ದಿಟ್ಟಿಸಿ ನೋಡಲು ನಾಚಿಕೆ ಮುಟ್ಟಿ ನಮಸ್ಕರಿಸಲು ಧೈರ್ಯಸಾಲದು. ಶರಣಾಗತಿಯೇ ಗತಿ. ನಿನ್ನ ಪಾವಿತ್ರ್ಯದ ಸೋಂಕಿನಿಂದ ಶುದ್ಧೀಕರಿಸಿ ಉದ್ಧರಿಸು ಎಂದು ಗೋಳಿಡುವಂತೆಯೇ ಸಂದೇಹಮನದಿಂದೊಂದು ಪ್ರಶ್ನೆಯನ್ನು ಕೇಳುವಳು. ಈ ದ್ವಂದ್ವ ಮನದಲ್ಲಿರುವಂತೆ ಮನಃಶಾಂತಿಯೆಂದಿಗೂ ದೊರೆಯದು. ತಾನೆಸಗಿದುದು ತಪ್ಪೇ? ನಿಸರ್ಗದಲ್ಲಿ ಇದರ ಬೀಜವಿಲ್ಲವೆ? ಗಾಳಿ ನೀರು ದೊರೆಯಲು ಮೊಳಕೆಯೊಡೆಯದೆ, ಮನದ ದಂದುಗ ಬಣ್ಣಿಸಲಂಜುವೆನು ಎಂದು ಹೇಳಿದರೂ ಮನದಲ್ಲಿ ಮೂಡಿದ ತುಮುಲವನ್ನು ಬಿಚ್ಚಿ ಹೇಳುವಳು.

'ನಾಣಹುದು ತಂದೆ ಬಿನ್ನವಿಸಲೆನ್ನಯ ಕತೆಯ
ಆತ್ಮದವನತಿಯ... ಸುಖ ಚಪಲಕೃತಿಯ' ಎಂದು ಹೇಳಿ
'ಕಾಮನೆಯ ಬೇಗೆಗಳೆಲ್ಲಿಹವರಸಲಂಜುವೆನು
ಹೊರಗೊ ಒಳಗೊ ತನವೊಳು ಮನದೊಳೊ'

ಎಂದು ಒಂದೊಂದನ್ನು ವಿಶ್ಲೇಷಿಸಿ ನೋಡುವಳು. ಮಾನವನು ಸ್ವತಂತ್ರನಲ್ಲ. ಅವನು ತನುಮನ ಪರಿಸರ ಕಾಲ ಇವೆಲ್ಲವುಗಳ ಹಿಡಿತಕ್ಕೆ ಸಿಕ್ಕು ನಡೆಯುವಂತಹನು. ಈ ಆಶೆಯುದಿತಕ್ಕೆ ಯಾವುದು ಕ್ಷೇತ್ರ ? ಸುಖೋಪಭೋಗೆಚ್ಛೆ ಸಹಜವಾದುದು. "ಆನಂದದ ಬೀಜಾಂಶ ಆ ಪರವಸ್ತುವಿನಲ್ಲಿದೆ. ಈ ಲೌಕಿಕ ಸುಖಗಳು ಪರಮ ಸುಖದ ಅರುಣ ಕಿರಣಗಳು" ಎಂದಾಗ ಸಹಜ ಸ್ವಭಾವಾಚರಣೆಯು ಶಿಕ್ಷಾರ್ಹವೇ?. ಮನದಾಸೆಗಳು ಲುಪ್ತವಾಗವು. ಋಷಿಪತ್ನಿಯಾದ ಮಾತ್ರದಿಂದ ಸಂಯಮ ಸಾಧಿಸಿದಂತಾಗುವುದೇ ? ದೇಹ ಸಹಜ ಧರ್ಮ ಅದೆಂತು

ಬಾಹ್ಯನಿಯಮ ಪ್ರತಾರಣೆಯಿಂದ ಇಲ್ಲವಾದೀತು. ತನು ಜೀವಿಸಿರುವಾಗ ಮನವು ಸತ್ತಪ್ಪದೆಂತು? ಜೀವವನುಭವಿಸುವ ತಾಪ, ಮನದ ವೇಗ ತರ್ಕಾದಿಗಳಿಂದ ದೂರೀಕರಿಸುವ ಪ್ರಯತ್ನ ಒಳಹೊಕ್ಕ ಮುಳ್ಳನ್ನು ಬೀಸಣಿಗೆ ಬೀಸಿ ಹೊರ ತೆಗೆಯುವ ಪ್ರಯತ್ನದಷ್ಟೇ ಹಾಸ್ಯಾಸ್ಪದ ವ್ಯರ್ಥ. ಕಾಮವು ಸಹಜವಾದುದು. ಮರಕ್ಕೆ ಹಚ್ಚಡ ಹೊದಿಸಲು ಚಿಗುರೊಡೆಯದೇ? ಮುಗಿಲ ಕರೆಕೇಳಿ ನವಿಲಾಡುವಷ್ಟೇ ಸಹಜವಾದುದು ಕಾಮ. ಮನದ ಮೋಹ ಪ್ರಕೃತಿಯ ಸಹಕಾರದಿಂದ ಉದ್ವೇಗಗೊಂಡಾಚರಿಸಲು ಆ ಕೃತಿಗೆ ತಾನೆಷ್ಟು ಹೊಣೆ ಎಂದರೂ ಶಿಕ್ಷೆಯಾಯಿತು. ಆದ್ದರಿಂದ ಇದು ಆತ್ಮದವನತಿಯೇ ಸರಿ. ಪಾಪವಾವುದು, ಪುಣ್ಯವಾವುದು ತಿಳಿಯದಾದರೂ ಯುಗಾಂತರದ ಕಹಿಯನುಭವಿಸಿದೆ. ಈಗಲಾದರೂ ಈ ಶಿಲಾ ನಿಶ್ಚಲತೆಯಿಂದ ಪಾರು ಮಾಡೆಂದು ಕೇಳಿಕೊಳ್ಳುವಲ್ಲಿ ಕವಿಗೆ ಮಾನವ ಸ್ವಭಾವದ ಅರಿವಿದೆಯೆಂಬುದನ್ನು ಕಾಣುತ್ತೇವೆ. ಪಾಪ ಪುಣ್ಯಗಳ ಹಿನ್ನೆಲೆಯಲ್ಲಿರುವ ಜಟಿಲತೆಯರಿವೂ ಇದೆ. ಕಾಮ ಭಾವನೆಯು ಸಹಜವಾದುದಾದರೂ ಅದರ ಬಗ್ಗೆ ಸ್ವೇಚ್ಛೆಯಿಂದಿರುವುದೇ? ಮಾನವನೆಂದ ಮೇಲೆ ಹಿಡಿತ ಬೇಡವೆ? ನಿಯಮಿತತನ ಬೇಡವೆ? ಪುರುಷಾರ್ಥಗಳಲ್ಲಿ ಕಾಮಕ್ಕೆ ಸ್ಥಾನವಿದೆಯಾದರೂ ಧರ್ಮದ ನಂತರದ ಸ್ಥಾನವದಕ್ಕೆ. ಧರ್ಮಬಾಹಿರವಾದ ಕಾಮಕ್ಕೆಡೆಯಿರದು. ಮಾನವನಿಗೆ ವಿವೇಕವಿದೆ. ವಿವೇಚನೆಯಿದೆ. ಅವನನ್ನು ಪ್ರಾಣಿಮಾತ್ರದಿಂದ ಭಿನ್ನವಾಗಿ ಸುಮಹತ್ತರಕ್ಕೇರಿಸುವ ಗುಣ ಅವನ ನಿಗ್ರಹ ಶಕ್ತಿ. ಭಾವನೆಗಳನ್ನು ಯದ್ವಾ ತದ್ವಾ ಹರಿಬಿಡದೆ ತಡೆಯುವ ಶಕ್ತಿ. ಅದನ್ನೇ ಅಹಲ್ಯೆ ಕಳೆದುಕೊಂಡಿರುವಳಲ್ಲದೆ ಸಾಮಾಜಿಕ ಮೌಲ್ಯದ ಒರೆಗೆ ಹಚ್ಚಿ ನೋಡಲು ಇವಳು ನಡತೆದಪ್ಪಿದುದು ಖಚಿತವೇ ಆಗಿದೆ. ಆ ತಪ್ಪಿನ ಹೊಣೆ ಸಮಾನವಾಗಿ ಗೌತಮ ಇಂದ್ರರೀರ್ವರ ಮೇಲೂ ಇರುವಾಗ ಇವಳೊಬ್ಬಳೇ ಶಿಕ್ಷೆಯನುಭವಿಸಿದುದೇಕೆ?

ಗೌತಮನು ತನ್ನದೇ ಅಪರಾಧವೆಂದು ಒಪ್ಪಿಕೊಳ್ಳುತ್ತಾನೆ. ಋಷಿ ಧರ್ಮವನ್ನಷ್ಟೇ ಆಚರಿಸಿ ಪತಿ ಧರ್ಮವನ್ನು ಮರೆತೆ. ಗಾಣದೆತ್ತಿನಂತೆ ತುಳಿದ ನೆಲವನ್ನೇ ತುಳಿಯುತ್ತಾ ಕಣ್ಕಟ್ಟಿದ ಹಯದಂತೆ ಅತ್ತಿತ್ತ ನೋಡದೆ ಸಹಧರ್ಮಿಣಿಯ ಭಾವನೆಗಳನ್ನರಿಯದೇ ಅವಳ ಇರವನ್ನು ಮರೆತಂತೆ ವರ್ತಿಸಿದನಲ್ಲದೆ ಈರ್ಷೆಯಿಂದ ಶಾಪವನ್ನಿತ್ತೆ.

ಇಂದ್ರನ ಕಥೆ ಮಾತ್ರ ನಿಜವಾಗಿಯೂ ಸುರಪ ಪತನದ ಕಥೆ. ಸುಖ ಚಪಲವಿರುವುದು ಇವನಲ್ಲಿ. ನೈಸರ್ಗಿಕವಾದ ಆ ಮೋಹ ದೇವತೆಯಾದವನನ್ನೂ ಬಿಡದು ಎಂದವನ ಮತ.

ಇದಕ್ಕೆ ಪರಿಹಾರವನ್ನು ರಾಮನೀಯದೇ ಅವರು ಕುಸುಮ ಶರತಂತ್ರದಲ್ಲಿ ಸಿಲುಕಿ ಪರಿತಪಿಸುವುದನ್ನು ಕಂಡು ಗುರುವಿಗೆ ಪ್ರಶ್ನಿಸುತ್ತಾನೆ. 'ಮನದಾತುರದಿಂದ, ಪಶ್ಚಾತ್ತಾಪದ ವೇಗೆಯಿಂದ ಬಳಲುವವರನ್ನು ಸಾಂತ್ವನಗೊಳಿಸಲಾಗದೇ. ಎಂದು. ವಿಶ್ವಾಮಿತ್ರನು ಅವರಿಗೆ ಆಶ್ವಾಸನೆ ನೀಡಿ ಸಮಾಧಾನಪಡಿಸುವನು. ಅವನೂ ಈ ತಂತ್ರದಲ್ಲಿ

ಸಿಲುಕಿ ಪರಿತಪಿಸಿದವನೇ. ಅದರ ತೀವ್ರತೆಯು ಅರಿವು ಅವನಿಗಿದೆ. ಈ ಲೋಕದಲ್ಲಿ ಎಲ್ಲವೂ ಬೀಳುವ ಮನೆಗಳೇ. ಬೀಳುತ್ತಿರುವಂತೆ ಮರಳಿ ನಿಲ್ಲಿಸುವುದು ಪುರುಷ ಧರ್ಮವೆನ್ನುತ್ತಾನೆ.

ಇಲ್ಲಿ ರಾಮನಿನ್ನೂ ಯಾವ ಅಧಿಕೃತ ನಿರ್ಣಯವನ್ನೂ ಕೊಡುವ ಸ್ಥಿತಿಯಲ್ಲಿಲ್ಲ. ಅನುಭವ ಪ್ರಪಂಚದಲ್ಲಿನ್ನೂ ಬಾಲಕ. ಎಂತಹ ಬಲಿಷ್ಠನಾದರೂ ಮಾನವ ಜೀವನ ಸಮುದ್ರದ ವೀಚಿ ಮಾತ್ರವೆಂಬುದನ್ನು ಕಂಡುಕೊಳ್ಳುತ್ತಾನೆ. 'ಸರನೆದೆ ರಾಗ ಮೋಹ ಗಳ ವಲ್ಮೀಕಂ, ಅವುಗಳನ್ನು ಕಳಚಿಕೊಳ್ಳುವ ಪ್ರಯತ್ನವೇ ಸುಕೃತದ ಬೀಜ. ಜೀವಿತ ದುದ್ದೇಶ. ಪರಿಣತಿಯೆಡೆಗೆ ಪಯಣ. ಆ ದಿಶೆಯಲ್ಲಿಟ್ಟ ಒಂದೊಂದು ಹೆಜ್ಜೆ ಮಹ ತ್ವದ್ದು. ಒಂದು ಘಟನೆ, ಅದರಿಂದುಂಟಾದ ಭಾವನೆ, ವಿಚಾರಗತಿ, ಮನೋವಿಶ್ಲೇಷಣೆ ಎಲ್ಲವೂ ಮನವನ್ನು ತನುವನ್ನು ಪರಿಷ್ಕರಿಸುವುದು ಮನಃಪರಿಪಾಕವನ್ನು ಸಾಧಿಸು ವಲ್ಲಿ ಆತುರಗತಿ ಸಲ್ಲದು. ಅದರ ಗತಿ ಮಂದಗತಿ. ಆತುರದಿಂದ ಸಾಧಿಸಿದುದು ಶಾಶ್ವತವಾಗಿರದು. ಭೋಗೇಚ್ಛೆ ನೈಜವಾಗಿರುವಂತೆ ತ್ಯಾಗೇಚ್ಛೆಯು ನೈಜವಾದುದಾಗಿರ ಬೇಕು. ಆಗ ಅದು ಶಾಶ್ವತ.

ಎರಡನೆಯ ಪ್ರಶ್ನೆ ವಾಲಿಯ ಪತ್ನಿ ತಾರೆಯದು. ವಾಲಿವಧೆಯ ನಂತರ ಅವಳೇ ಪ್ರಶ್ನೆಯನ್ನು ರಾಮನೆದುರಿಗಿಡುತ್ತಾಳೆ. ಈ ಹೊತ್ತಿಗಾಗಲೇ ರಾಮನು ಪ್ರಬುದ್ಧ ನಾಗಿದ್ದಾನೆ. ರಾಗ ಮೋಹಾದಿಗಳ ಒತ್ತಡವನ್ನು ನಿಗ್ರಹಿಸಿ ಸಂಯಮ ಸಾಧಿಸಿದವನಾಗಿ ದ್ದಾನೆ. ಜೀವನದ ಸುಖ ದುಃಖದ ಘಟನೆಗಳು ಅವನ ಮನವನ್ನು ಮೆದುಗೊಳಿಸಿವೆ. ಬುದ್ಧಿಯನ್ನು ಹದಗೊಳಿಸಿವೆ. ಸಿಂಹಾಸನಾಧಿಕಾರವನ್ನು ತಪ್ಪಿಸಿದ ತಂದೆ ತಾಯಿಗಳ ಬಗೆಗೆ ಅನೇಕ ಭಾವನೆಗಳುಂಟಾದರೂ ಅವನ್ನು ನಿಯಮನಗೊಳಿಸಿ ಮಗನಾದವನಿಗೆ ಯೋಗ್ಯವಾದ ರೀತಿಯಲ್ಲಿ ನಡೆದು ಧರ್ಮಪಾಲನೆ ಮಾಡಿದ್ದನು. ರಾಜ್ಯ ಸುಖಕ್ಕೆ ತಿಲಾಂಜಲಿಯಿತ್ತು ಸುಖ ಚಾಪಲ್ಯವನ್ನು ಹತ್ತಿಕ್ಕಿಸಿದವನಾಗಿದ್ದನು. ಧರ್ಮದಿಂದ ಬಾಳು ವುದೇ ಜೀವಿತದುದ್ದೇಶವೆಂದು ಕಂಡುಕೊಂಡಿದ್ದನು. ಅಹಲ್ಯಾ ಸಂದರ್ಭದಲ್ಲಿ ತೋರಿ ದುದಕ್ಕಿಂತಲೂ ಉದಾತ್ತವಾದ ವ್ಯಕ್ತಿತ್ವ ಇಲ್ಲಿ ಗೋಚರಿಸುತ್ತದೆ. ತನ್ನ ಬಾಳಿನ ರೂಪ ರೇಷೆಯನ್ನು ಸರಿಯಾಗಿ ಗುರುತಿಸಿದವನಾಗಿದ್ದಾನೆ. ಕ್ರೋಧ ಮೋಹಾದಿಗಳು ಕ್ಷಣಿಕ ವಾದವುಗಳು. ದೀರ್ಘ ಕಾಲ ಇರುವವಲ್ಲ. ಅವುಗಳನ್ನು ಕೆಲ ಹೊತ್ತು ಸಹಿಸಲು ಅನಾಹುತವೇನೂ ಆಗದೆಂದು ಮನಗಂಡಿದ್ದನು. ಅವನು ತಾರೆಯ ತೀಕ್ಷ್ಣ ಆರೋಪ, ತೀವ್ರ ಕೋಪವನ್ನು ಶಾಂತ ಚಿತ್ತದಿಂದಲೇ ಕೇಳಿದನು. 'ಅಪತ್ನಿನಾತುರಕೆ ಸತ್ಯ ಬಾಗು ವುದುಂಟು' ಎಂದು ಆರೋಪಿಸಿದರು. ಕ್ರುದ್ಧನಾಗದೇ, ರಾಜನಾಗಿ ವರ್ತಿಸಿ ಸುಗ್ರೀವ ವಾಲಿಯರ ನ್ಯಾಯ ಬಗೆಹರಿಸಿದುದರಿಂದ ಯಾವ ಕಟು ಪ್ರತಿಕ್ರಿಯೆ ತೋರ ದಿರುವನು. ನೊಂದ ಮನದ ಸಂತಾಪದರಿವು ಅವನಿಗಿದೆ. ಅವಳ ಮಾತನ್ನು ಸಮಾ- ಧಾನ ಚಿತ್ತದಿಂದಾಲಿಸಿ ಸ್ಪಷ್ಟ ನುಡಿಯಲ್ಲಿ ಶಾಂತಚಿತ್ತದಿಂದುತ್ತರಿಸಿ ಅವಳ ಸಂತಪ್ತ ಮನಕ್ಕೆ ತಂಪನ್ನೀಯಲು ಪ್ರಯತ್ನಿಸುವನು. ಅವಳ ಆರೋಪ ಕೆಲಮಟ್ಟಿಗೆ ಸತ್ಯ ವೆಂದೊಪ್ಪಿಕೊಳ್ಳುವನು.

ತಾರೆಯು, ಆಣಕನ ನುಡಿಗಳಿಂದ ಅವನ ಮನವನ್ನು ಕೆಣಕುವಂತೆ ಆಡುತ್ತಾಳೆ. "ರಾಮ! ನೀನು ಬ್ರಹ್ಮನ ಧೂರ್ತ ತಂತ್ರಗಳಿಗೆ ಬಗೆದವನು. ಉದಾರಿ, ಸೂಕ್ಷ್ಮ ವಿಚಾರಿ. ವಾಲಿಯವಸಾನ ಕಾಲವು ನಿನ್ನ ಪರೀಕ್ಷಾ ಕಾಲವೂ ಹೌದು. ನೀನು ಮಾಡಿದ ಪಾಪ ವೈಖರಿ ನೆನಪಿದೆಯೆ. ಕಪಿವರನನ್ನು ಮೃಗವೆಂದು ಕರೆದು ಕಪಿ ಸಖ್ಯವನ್ನು ಬಯ ಸಿದೆ. ಎದುರಿಗೆ ನಿಂತು ಯುದ್ಧ ಮಾಡದೆ ಮರೆಗೆ ನಿಂತು ಬಾಣವಸೆದೆ. ರಾಜ ಮಾರ್ಗ ವಲ್ಲಿ ಕೊಂಕು ಡೊಂಕುಗಳಿದ್ದುವೇ. Divide and rule ನಿಯಮವನ್ನನುಸರಿಸಿ ಸೋದರರಲಿ ವಿಗ್ರಹವನ್ನು ತಂದು ಸುಗ್ರೀವನ ಸಖ್ಯ ಬಗೆದೆ. ಅಂತೂ ನಿನ್ನ ಉದ್ದೇಶ ಫಲಿಸುವಂತಾಯ್ತು. ವಾನರನನ್ನು ವಧಿಸುವ ನಯ ಬೇರೆಯೇ‌ದೊರೆದ ನೀನು ಅವರ ಪ್ರಣಯನನು ಬೇರೆಯೆಂಬುದು ತಿಳಿಯೆಯಾ? ಯಃಕಶ್ಚಿತನಂತ ನೀನು ಪತ್ನಿ ವಿಯೋಗ ದುಃಖ ಗ್ರಹಿತನಾಗಿ ಭೇದಕ್ಕೆ ಮನ ತೆತ್ತೆ.

ಘಾತಿಸಿದೆ ವಾಲಿಯನು ಶತ್ರುಬಲಶಾಲಿಯನು
ನೀತಿ ಲಕ್ಷ್ಯವ ತೊರೆದು ನೆನೆ ನೆನೆದು ರಾಘವನು.

ಕೊಲ್ಲುವುದೇ ನಿನಗೆ ಬೇಕಾದಾಗ ಅವನನ್ನು ಅಪಮರ್ಯಾದೆಗೆಕೀಡಾಗಿಸಿದೆ. 'ಗೌರವವ ನುಳಿದಂಗೆ ತತ್ತ್ವದರಿವಾದೀತೆ? ಧರ್ಮಪಾಲನೆ ಮಾಡುವೊಡೆ ಪ್ರಕೃತಿ ಯಂತ್ರದ ಚಕ್ರ ಕೀಲ ನೋಡಿ ನಡೆ" ಎಂದು ಹಲವಾರು ರೀತಿಯಲ್ಲಿ ಅವನನ್ನು ಹೀಗಳೆಯಲು ರಾಮನು ಎಲ್ಲಕ್ಕೂ ಹೌದೆಂದು ಒಪ್ಪಿಕೊಂಡು ತಾನೂ ಸ್ವತಂತ್ರನಲ್ಲ. ವಿಧಿ ಚಕ್ರಕ್ಕೆ ಸಿಲುಕಿದವನೇ. ವಾಲಿಯಂತ್ಯಕ್ಕೆ ತಾನು ನೆಪಮಾತ್ರನೆನ್ನುತ್ತಾನೆ. 'ಅರೆತ್ತಲೆಸೆದ ಕಲ್ಲಾರ ತಲೆಯೊಡೆಯು ವುದೋ ಲೋಕ ಘಟನೆಗಳ್ ಎಲರ್ ಬೀಸುವಂತೆ' ಪ್ರಕೃತಿಯ ಮೇಲೆ ಮಾನವ ನಿಯಂ ತ್ರಣ ಸಾಧಿಸದು. ಅಂತಹ ಒಂದು ವಿಧಿ ಹಿಡಿತದಲ್ಲಿ ಮಾನವನು ಸಿಲುಕಿರುವನೆಂಬ ಒಂದು ಬಲಿಷ್ಠ ನಂಬಿಕೆ ಈ ಕೃತಿಯುದ್ದಕ್ಕೂ ಸಾಗಿಕೊಂಡು ಬಂದಿದೆ. ಕರ್ಮಕ್ಕೆ ತಕ್ಕ ಫಲ ಇದ್ದೇ ಇರುವುದು. ಸೀತಾವಿಯೋಗ ದುಃಖದಿಂದ ಭ್ರಮಿತನಾಗಿದ್ದುದು ನಿಜ ವಾಗಿದ್ದು, ತನ್ನಂತೆ ಪತ್ನಿವಿಯೋಗ ದುಃಖಿಯಾದ ಸುಗ್ರೀವನಲ್ಲಿ ಅನುತಾಪ ಸಹಜ ವಾಯ್ತು. ಆದರೂ ರುಮೆಯನ್ನು ತಾನು ನಿಂದಿಸಿದುದಿಲ್ಲವೆನ್ನುತ್ತಾನೆ. ಇಂತೆಸ ಗಿದ ಕರ್ಮ ಫಲ ರೂಪವಾಗಿಯೇ ಸೀತೆಗೆ ಅಪನಿಂದೆ ಬಂದುದು. ವಾಲಿಯೂ ತಪ್ಪಿ ದವನಲ್ಲವೆ? ಶೂರ ಶ್ರೇಷ್ಠನಾದರೂ ನಿಗ್ರಹಾರ್ಹನಲ್ಲವೆ? ಏಕೆಂದರೆ ಕಿರಿಯ ಸೋದರ ನಲ್ಲಿ ವೈರ ಸಾಧಿಸಿದ, ಅವನ ಮನೆ ಮುರಿದ. ಅವನ ವೈಭವ ಇವನಿಗೆ ಸಹಿಸದಾಯ್ತು. ಈ ದುಷ್ಕರ್ಮವೇ ಅವನ ಅಂತ್ಯಕ್ಕೆ ಕಾರಣ. ಬಾಣವೋ ಕೃಪಾಣವೊ ನಿಮಿತ್ತ ಮಾತ್ರ. ಆದದ್ದೆಲ್ಲಾ ಒಳಿತಕ್ಕೇ ಆಯ್ತು. ಸತ್ತು ವಾಲಿ ಅಮರನಾದನೆನ್ನುವನು. ಕರ್ಮಕ್ಕೆ ತಕ್ಕ ಫಲ ಅನುಭವಿಸಿದನೆಂಬ ಭಾವನೆಯನ್ನು ಒಪ್ಪಬಹುದಾದರೂ ವಾಲಿ ಸತ್ತು ಅಮರನಾದುದೆಂತು ಒಳಿತು, ಎಂತು ಸಾಧಿಸಲಾಯ್ತು ಎಂಬುದರ ಬಗ್ಗೆ ಮನ ಶಂಕಿತ ವಾಗಿ ಉಳಿಯುವುದು. ತಾರೆ ರಾಮನಿಗೆ ಈ ಪ್ರಶ್ನೆಯನ್ನು ಕೇಳಿ ಮನೋವಿಶ್ಲೇಷಣೆ

ಮಾಡಿ ಶುದ್ಧವಾಗಿಸಿ ಗುರುವಾದಳೆಂದು ಧೀರತೆಯನ್ನು ಪ್ರಕಟಿಸಿದ್ದಾನೆ. ಮಾನವನದು ಕ್ಷಣಿಕ ದೃಷ್ಟಿ. 'ವಿಧಾತಂ ಕೊನೆತೋರದೆನೆಯ್ದುವೀ ಕಥಾ ತಂತುಗಳೊಳ್ ಮನುಜಂ ಪೂರ್ವಾಪರ ಶೋಧನೆಗೈಯಲ್ ಪಟುವೇ? ಅವನ ಕಣ್ಣೆವೆಸಿಂಡದೇಂ' ನಿಯತಿ ಮೀರುವುದು ಸಾಧ್ಯವಿಲ್ಲ. ಇದು ಏಕೆ ಹೀಗೆ ಎಂದು ಮಾನವ ಪ್ರಶ್ನಿಸುವಂತಿಲ್ಲ. ಆಗಬೇಕಾದುದು ಆಗಿಯೇ ತೀರುತ್ತದೆಂಬ ಬಲವತ್ತರವಾದ ಭಾವನೆಯಿದೆ. ಮಾನವ ತನ್ನಕರ್ತವ್ಯವನ್ನು ಮೀರಕೂಡದು.

ಯಾವುದೂ ತನ್ನಿಂದ ತಾನೇ ಒಳ್ಳೆಯದು ಕೆಟ್ಟುದಾಗಿರಲಾರದು. ಅದು ಪರಿಣಾಮ ಮತ್ತು ಬಳಕೆಯ ರೀತಿಯನ್ನವಲಂಬಿಸಿರುವುದು. ಪೌರುಷ ಜೀವನದ ರೀತಿಯಾಗಿರಲಿ ಅಥವಾ ಸಹನೆಯೇ ಆಗಿರಲಿ ಯಾವ ರೀತಿ ಅದನ್ನು ತೋರಲಾಯಿತೆಂಬುದು ಮುಖ್ಯ. ವಾಲಿ ರಾವಣಾದಿಗಳು ಅಪ್ರತಿಮ ವೀರರು. ಅದರವರಿಗಾದ ಗತಿ ಅಪಗತಿ. ಕಾರಣ ಅವರ ಕರ್ಮ. 'ಚಿತ್ತಸ್ವಾತಂತ್ರ್ಯಮ್ ಜನದುತ್ತಮಧನ'ವೆಂದು ಗುರುತಿಸದೆ ಸೀತೆಯ ಮನೋವಿರೋಧವನು ಲಕ್ಷಿಸದೇ ಕದ್ದೊಯ್ದ. ಆದ್ದರಿಂದ ಇವನು ಇಂದ್ರ ವಾಲಿಯರಿಗಿಂತಲೂ ಹೆಚ್ಚಿನ ಅಪರಾಧಿ. ವಾಲಿ ರಾವಣರು ಮತ್ತತೆಯಿಂದ ನಡೆದರು. ತನ್ನ ವಿಕ್ರಮದಿಂದ ಸುಖವಾಗಿ ಬಾಳಬೇಕಾಗಿದ್ದ ರಾವಣನಿಗಾದ ಗತಿ ಭೀಕರ ಮತ್ತು ವಿಚಿತ್ರವಾದುದು. ಸೀತಾನುಚಿಂತೆಯಿಂದ ಅವನ ಮನ ಕಾದ ಹಂಚಿನಲ್ಲಿರುವಾಗ ಹುರಿಗಾಳಿನಂತೆ ಸಿಡಿಯುತ್ತಿತ್ತು. ಇದಕ್ಕೆ ಬಿಡುಗಡೆಯೆಂದರೆ ಸಾವು. 'ಸಾವಲ್ತಿದು ಮುಕ್ತಿ.'

ರಾಮನು ಧರ್ಮದರ್ಶಿ. ಧರ್ಮ ಸಂಧಿಗ್ಧತೆ ಒದಗಿದಾಗಲೆಲ್ಲ ದೀರ್ಘವಾಗಿ ಆಲೋಚಿಸಿ, ಉತ್ತಮವಾದ ಸಾರ್ವತ್ರಿಕ ಹಿತವಾದ ರೀತಿಯಲ್ಲಿ ಆಚರಿಸಿದವನು. ಹಲವಾರು ಕರ್ತವ್ಯಗಳಿದ್ದು ಅದರಲ್ಲಿ ಒಂದನ್ನು ಆಚರಿಸಬೇಕಾದ ಪ್ರಸಂಗದಲ್ಲಿ ಧರ್ಮ ಸಂಕಟವೊದಗುವುದು. ಯಾವುದನ್ನಾರಿಸಿದರೂ ಮತ್ತೊಂದಕೆ ಚ್ಯುತಿ ಬಂದೇ ಬರುವುದು. ಆಗ ಕಡಮೆ ಪ್ರಮಾಣದ ಅನ್ಯಾಯ, ಅನರ್ಥಕ್ಕೆ ಆಸ್ಪದ ಕೊಡುವ ಧರ್ಮವನ್ನು ಪಾಲಿಸಬೇಕಾಗುವುದು. ರಾಮನು ರಾಜಧರ್ಮ ಪತಿಧರ್ಮಗಳಲ್ಲಿ ಒಂದನ್ನಾರಿಸಿಕೊಳ್ಳುವಲ್ಲಿ ಸ್ವಸುಖವನ್ನು ಕಡೆಗಾಣಿಸಿ ಮೊದಲನೆಯದನ್ನು ಸ್ವೀಕಾರ ಮಾಡಿದನು. ಇಂದಿಗೂ ಇದು ಸಮಸ್ಯೆಯೇ ಆಗಿ ಉಳಿದಿದೆ. ರಾಜವಿಧಿಗೆ ಪಾಮರಾಕ್ರೋಶವು ಆಧಾರವೆ? ಯಾರೊ ತಿಳಿಯದೆ ಎಂದ ಮಾತು ನಿಯಮವಾಗುವುದೆ? ಪ್ರಜೆಗಳು ಒಂದು ಬುದ್ಧಿಮಟ್ಟವುಳ್ಳವರಾಗಿರಬೇಡವೆ? ಸೀತೆಯ ಪ್ರಶ್ನೆ ಇದೇ ಆಗಿದೆ. ಯಾವ ಕಾರಣಕ್ಕಾಗಿ ತನ್ನನ್ನು ಅಡವಿಗಟ್ಟಿದನು. 'ಕೇಳೌ ಹೃದಯೇಶ್ವರಿ' ಎಂಬ ರಾಮನ ಸಂಬೋಧನೆ ಅವಳ ಆ ಸ್ಥಾನಕ್ಕೆ ಚ್ಯುತಿಯೆಂದಿಗೂ ಇಲ್ಲವೆಂದು ತೋರಿಸಿ ಕೊಡುವುದು. ರಾಮನೆನ್ನುತ್ತಾನೆ. 'ಸೀತೆ. ನೀನು ಸುಖ ದುಃಖ ಸಮಾನ ಸ್ವೀಕಾರೆಯೆಂದು ಭಾವಿಸಿದ್ದೆ. ಸಾಮಾನ್ಯರಂತೆ ನೀನು ದುಃಖಿಸುತ್ತಿರುವೆ! ವ್ಯಷ್ಟಿಲಾಭಕ್ಕಿಂತ ಸಮಷ್ಟಿಲಾಭ ಖಚಿತವಾಗಿ ಶ್ರೇಷ್ಠವಾದುದು. ಹೆಂಡತಿಯೊಡನೆ ಬಾಳುವುದು ಒಳ್ಳೆಯದು. ಎಲ್ಲರೊಡನೆ ಚೆನ್ನಾಗಿ

ಬಾಳುವುದು ಅದಕ್ಕೂ ಒಳ್ಳೆಯದು. ಆವಳಿಗೆ ಅನ್ಯಾಯವಾಯಿತೆಂಬುದು ಸರಿಯೇ. ಹೆಚ್ಚಿನ ನ್ಯಾಯ ಪರಿಪಾಲನೆಯಲ್ಲಿ ಕೆಲವೊಮ್ಮೆ ಅಷ್ಟು ಮಟ್ಟಿನ ಅನ್ಯಾಯವಾಗುವುದು ಅನಿವಾರ್ಯವಾಗುವುದು. ಕೆರೆಯೊಂದನ್ನು ಕಟ್ಟಬೇಕೆಂದಾಗ ಅಲ್ಲಿಯ ಹಲವಾರು ಊರುಗಳು ಮುಳುಗಡೆಯಾಗುತ್ತವೆಯಾದ್ದರಿಂದ ಆ ಜನರಿಗೆ ಕಷ್ಟವಾಗುವುದು. ಕೆರೆಯಿಂದಾಗುವ ಹಿತ ಆ ಕಷ್ಟಕ್ಕಿಂತಲೂ ಎಷ್ಟೋ ಪಾಲು ದೊಡ್ಡದು. ಇದು ಲೋಕಧರ್ಮ. ರಾಮನು ತನ್ನ ಈ ವರ್ತನೆಗೆ ಕಾರಣವನ್ನು ವಿವರಿಸುತ್ತಾನೆ. ಧರ್ಮದ ತಕ್ಕಡಿಯಲ್ಲಿ ನಿಜಭೋಗ, ಲೋಕಸಂಸ್ಕೃತಿ ಎರಡನ್ನೂ ತೂಗಿ ಭಾರವಾದುದನ್ನು ಗ್ರಹಿಸುವುದು ಪುರುಷ ಧರ್ಮ. ದೊರೆಯಾದವನಿಗೆ ಕುಟುಂಬ ಪ್ರಜೆಗಳು. (ಹೆಂಡತಿ ಮಕ್ಕಳಷ್ಟೇ ಅಲ್ಲ) ಅವರೆಂತಹವರೇ ಆಗಿರಲಿ ಪರಿಪಾಲ್ಯರು. ಗೃಹಪತಿಯು ಅವರನ್ನು ರಕ್ಷಿಸಬೇಕಾಗುವುದು ಪರಮ ಕರ್ತವ್ಯ. ಎರಡನೆಯದಾಗಿ ಜನರಲ್ಲಿ ದಂಪತಿಗಳ ಅನುರಾಗದಲ್ಲಿ ಶಂಕೆಯುಂಟಾಗಲು ರಾಜರಾಣಿಯರು ಕೌಟುಂಬಿಕ ಜೀವನವನ್ನು ಪರಿತ್ಯಜಿಸಬೇಕಾದುದು. ಧರ್ಮಪತ್ನಿಗೆ ಅನ್ಯಾಯವಾಗುವುದೆಂಬುದಕ್ಕೆ ಮನ ತೆರದೆ ಆರ್ಯಧರ್ಮಕ್ಕೆ ಲಕ್ಷ್ಯವಿತ್ತುದು ತಪ್ಪೇ ? ಜನರ ಮಾತನ್ನು ಕಡೆಗಣಿಸಿ ಕೂಡಿ ಬಾಳಿದರೂ ಚಿಂತೆ ತಪ್ಪುತ್ತಿರಲಿಲ್ಲ. ಅಬಲರಾದವರಿಗೆ ಮರುಕಸಂದಂತೆ ಬಲವಂತರಿಗೆ ಆತ್ಮ ನಿಗ್ರಹ ಸಲ್ಲುತ್ತದೆ. ಗೌತಮ ಕುಟುಂಬಕ್ಕೆ ಮರುಕದೋರಿದುದು ಈ ಕಾರಣದಿಂದ. ತಾಯಿ ಎಳೆಗೂಸನೆತ್ತಿಕೊಂಡಂತೆ ಬೆಳೆದವನನ್ನು ನಡೆಯ ಹೇಳಳೆ? ಲೋಕಹಿತಾರ್ಜನೆಯಲ್ಲಿ ಇಂತಹ ಸ್ವಸುಖ ತ್ಯಾಗವು ಅವಶ್ಯವೆಂದು ಲಕ್ಷ್ಮಣನೂ ತೋರಿಸಿ ಕೊಡಲಿಲ್ಲವೆ? ಸ್ವಾರ್ಥತ್ಯಾಗ, ಕಷ್ಟಸಹಿಷ್ಣುತೆ, ಧರ್ಮ ಪರಿಜ್ಞಾನ, ಆತ್ಮನಿಗ್ರಹ ಇವುಗಳು ಪ್ರಜಾಪ್ರಮುಖರಲ್ಲಿರಬೇಕಾದ ಅವಶ್ಯ ಗುಣಗಳು. ಇವುಗಳಿಗೆ ಪ್ರತೀಕವಾಗಿದ್ದಾನೆ ರಾಮ.

ಈ ಸಂದರ್ಭವನ್ನು ಕವಿ ನಾಟಕದಲ್ಲಿರುವಂತೆ ಒಂದು ಅದ್ಭುತ ಘಟನೆಯೊಂದಿಗೆ ಕೊನೆಗೊಳಿಸುವರು. ರಾಮನ ಉತ್ತರದೊಂದಿಗೆ ಒಂದು ಘನ ಗರ್ಜನೆ ಕೇಳಿಸಿತು. 'ನೀನು ಪುರುಷಾಗ್ರಣಿ ಅರಸನಾದರೂ ಅಧಿಕಾರ ದರ್ಪಕ್ಕೆಡೆಗೊಡದೆ ರಾಜ ಕಿಂಕರನಾಗಿ ವರ್ತಿಸಿದೆ ಯೆಂದು. ಇದು ಇಡೀ ತಾತ್ವಿಕ ಲೋಕದ ಅಭಿಪ್ರಾಯವಾಗಿದೆ.

ರಾಮನನ್ನು ಲೋಕ ಜನರು ತಮ್ಮವರ ಅಜ್ಞಾನಕ್ಕೆ ಮರುಗಿ ಮಂಗಳ ಸ್ವರೂಪಿ ಸೀತೆಯನ್ನು ಕರೆಯಿಸೆಂದು ಒತ್ತಾಯಿಸಲು ಹಿತ ನುಡಿಗಳಿಂದ 'ನಿಮ್ಮಲ್ಲಿ ತಪ್ಪಿಲ್ಲ ತನ್ನಿಂದಲೇ ಏನಾದರೂ ತಪ್ಪು ಘಟಿಸಿರಬೇಕು. ಅದರ ಫಲವಿದು. ರುಮೆಯ ಶಾಪವೊ. ಏನೊ? ಪಿಸುಣ ಮಾತು ನಿರ್ದೋಷಿಗಳನ್ನು ದಹಿಸುವುದು. ಸೀತೆ ತನ್ನ ಕಾರ್ಯ ಪೂರೈಸಿ ಕೃತಕೃತ್ಯಳಾಗಿದ್ದಾಳೆ. ಇಲ್ಲಿ ಎಲ್ಲಕ್ಕೂ ಮಿತಿಯಿದೆ. ತಾನೆ? ಕುಶಲವರನ್ನು ರಾಜ್ಯಪಾಲರೆಂದು ನಿಯಮಿಸುವನು.

ಸೀತಾ ಪರಿತ್ಯಾಗವು ರಾಮನ ವ್ಯಕ್ತಿತ್ವವನ್ನು ಕ್ಲಿಷ್ಟಗೊಳಿಸಿದಂತೆಯೆ ಅವನ ಜೀವನ ಕಾಲದಲ್ಲೊದಗಿದ ಇನ್ನೊಂದು ಘಟನೆಯೆಂದರೆ ಶಂಬೂಕ ವಧೆ. ಅವನು

ದಂಡ್ಯನೇಕೆ? ತಪವೊಂದು ತಪ್ಪೇ? ಶೂದ್ರರು ಮಾನವರಲ್ಲವೆ? ಊರ್ಧ್ವ ಪ್ರಗತಿ ಪ್ರಯತ್ನವೆಸಗಲು ರೌದ್ರಶಿಕ್ಷೆಯೆ? ಎಂಬುದು ಪ್ರಶ್ನೆ. ರಾಮನು ಇದಕ್ಕೂ ಉದ್ವೇಗ ರಹಿತ ಮನದಿಂದ ಉತ್ತರಿಸುತ್ತಾನೆ. ಈ ತೆರನ ಸಂದೇಹ ಕ್ಷಣಿಕ ಕರುಣೆ-ಯಿಂದುದಿಸಿದುದು. ಆತ್ಮಕ್ಕೆ ಶಿಕ್ಷೆಯಂತೆ ಬಂದರೂ ಅಕ್ಷಯ ಸುಖವನ್ನುಂಟುಮಾಡುವ ರೀತಿ ಒಳ್ಳೆಯದು. ಅಲ್ಪದೃಷ್ಟಿ ಒಳ್ಳೆಯದಲ್ಲ. ಶಂಬೂಕ ಬಯಸಿದುದೇನು ರಂಭಾಸಾಲೋಕ್ಯ, ಸ್ವರ್ಗ. ತಪಸ್ಸಿರುವುದು ಅಹಂನಾಶಕ್ಕೆ. ನಿಜಭೋಗ ತೃಪ್ತಿ ಗಾಗಿ ಅಲ್ಲ. ಸೌಖ್ಯದಾಸೆಯಿಂದ ಸ್ವರ್ಗ ಬಯಸಿದರೂ ತಪ್ಪೇನು? ಅದೂ ತಪ್ಪಲ್ಲ. ಋತುವು ವಿಶ್ವ ಪ್ರಕೃತಿಯ ಅಂತಃಸತ್ವವಾಗಿದೆ. ಆದ್ದರಿಂದಲೇ ವರ್ಣಾಶ್ರಮ ಧರ್ಮ ಸಂಸ್ಕೃತಿಯುಂಟಾಗಿದೆ. ರೂಢಿ, ಸಂಪ್ರದಾಯಗಳು ಬಹು ಜನರ ಬಹು ಕಾಲದನು ಭವ ಚಿಂತನೆಗಳ ಫಲವಾಗಿವೆ. ಯಾವ ಕುಲದಲ್ಲಿ ಜನಿಸಿರುವನೋ ಆ ಕುಲದಲ್ಲಿ ಧರ್ಮ ಕಾಣಲಿಲ್ಲವೆ. ಕುಲಧರ್ಮವೊಂದಿದೆ ತಾನೆ! ತಪೋಮಾರ್ಗದಲ್ಲಿ ಸಂಭಾವಿತರಾದವರ ಹಿತೋಕ್ತಿಯನ್ನವನು ಪಡೆಯಲಿಲ್ಲ. ಸ್ವಬುದ್ಧಿಯೇ ಸರ್ವಪ್ರಮಾಣವೆಂದು ಬಗೆಯು ವುದು ಉದ್ಧಟತನ. ಸತ್ಯಸಿದ್ಧಾಂತವು ಮೋಹಬದ್ಧಂಗೆ ದೊರೆಯದು. ವಕ್ರ ದೃಷ್ಟಿ ಯುಳ್ಳವನಿಗೆ ಪೂರ್ಣ ಸತ್ಯದರಿವಾಗದು. ಪ್ರಗತಿ ಮಾರ್ಗದಲ್ಲಿ ಆತುರಗತಿ ಸಲ್ಲದು. ಪ್ರಯೋಜನಕಾರಿಯೂ ಅಲ್ಲ. ಮೆಟ್ಟಲು ಮೆಟ್ಟಲಾಗಿ ಹತ್ತಿ ಎತ್ತರ ಸಾಧಿಸಬೇಕಾ ದುದು. ಒಂದೇ ನೆಗೆತಕ್ಕಲ್ಲ. ದೂರ ಮಾರ್ಗವನ್ನು ದಾಟಿ ಮನೆ ಸೇರದೆ ಗವಾಕ್ಷದಿಂದ ಮನೆ ಸೇರಿದರೆ ಕಳ್ಳನೆನಿಸಿಕೊಳ್ಳುವನು. ಬಾಗಿಲಿನಿಂದ ಒಳ ಹೊಕ್ಕರೆ ಸಭ್ಯನಾಗುವನು. ಮಾನವರಲ್ಲಿ ವ್ಯತ್ಯಾಸವಿರುವುದು ಅವರು ತೋರುವ ಗುಣಗಳಲ್ಲಿ. ಜೀವಿಯ ಕರ್ಮ ವಿಪಾಕವು ಮಾವಿನ ಹುಳಿಯಳಿದು ಪಕ್ವವಾಗಿ ಸಿಹಿ ರಸದುಂಬಿದಂತೆ. ಅಹಂ ಅಭಿ ಮಾನದ ವಿಷವು ಲೋಕದೂಟದ ಸವಿಯನ್ನು ಕೆಡಿಸುವುದು. ಸುಧಾರಣೆಯನ್ನು ಮಾಡುವ ಉದ್ದೇಶ ಉತ್ಸಾಹದಲ್ಲಿ ಲೋಕಹಿತವನ್ನು ಕಡೆಗಾಣಿಸಲಾಗದು.

ಲೋಕ ಜೀವನಕ್ಕೆ ಎಷ್ಟೋ ತೆರನ ಸೇವೆಗಳು ಬೇಕು. ಅದನ್ನರಿತು ಕರ್ಮ ವಾಚರಿಸುವವನು ಕೃತಕೃತ್ಯನು. ಮಾನವನಾಶೆಗೂ ಮಿತಿಯಿರಬೇಕು. ಬೇಕಾದು ದನ್ನು ಬಯಸುವುದು ಉಚಿತವಲ್ಲ. ನದಿಯು ದಂಡೆಯ ಮಿತಿಯಲ್ಲಿ ಹರಿಯಲು ಕಾಲುವೆಯಿಂದ ನೀರನ್ನು ತೆಗೆದು ಬೆಳೆಯನ್ನು ತೆಗೆಯಬಹುದು. ಆ ನದಿಯು ದಡ ಮೀರಿ ಹರಿಯಲು ಬದುಕಿಗೆ ಕೇಡು. ಹೃದಯರಸವು ಶಾಸ್ತ್ರವಿಧಿನಾಳಿಕೆಯಿಂದ ಹರಿ ದರೆ ಶುಭ. ಶಾಸ್ತ್ರೋಕ್ತ ಆಚಾರದಿಂದ ಸ್ವಜೀವಪರಿಷ್ಕೃತಿ. ಲೋಕೋಪಯುಕ್ತಿ ಎರಡನ್ನೂ ಸಾಧಿಸಬಹುದು. ತಪವೂ ಅಂತೆಯೇ. ಶಾಸ್ತ್ರ ವಿಮುಖಿಯಾದವಗೆ ಅದರ ಲಾಭವಾಗದು. 'ಅತಿ ಸರ್ವತ್ರ ವರ್ಜಯೇತ್' ಅತಿ ವಾಂಛೆ ಮೋಹ ಸಲ್ಲದು. ಸುಖೋಪಭೋಗಕ್ಕೊಂದು ಮಿತಿಯಿದೆ. ಸಣ್ಣವರು ದೊಡ್ಡವರೆಂಬ ಭಾವನೆಯಿಂದ ಲ್ಲದೆ ಅನುಕೂಲ ದೃಷ್ಟಿಯಿಂದ ಮಾಡಿದ ವ್ಯವಸ್ಥೆಯಿದು. ಕರ್ತವ್ಯವನ್ನು ಮರೆತು ತಾನು ಮೇಲೆಂದು ಭಾವಿಸಲು ಸಾಮಾಜಿಕ ವ್ಯವಸ್ಥೆಗೆ ಧಕ್ಕೆಯುಂಟಾಗುವುದು.

ಇದಕ್ಕೆ ವಿರುದ್ಧವಾದ ರೀತಿಯಲ್ಲಿ ವಾದವನ್ನು ಮಂಡಿಸಬಹುದಾದರೂ ರಾಮನ ಮಾತುಗಳಲ್ಲಿ ಒಂದು ಸಾಮಾಜಿಕ ವ್ಯವಸ್ಥೆಗೆ ಬೇಕಾದ ಶಾಸ್ತ್ರ ನಿಯಮ, ಒಂದು ಬಿಗಿಯ ಅವಶ್ಯಕತೆ ಇವುಗಳು ಎದ್ದು ಕಾಣಿಸುತ್ತವೆ. ಮಾನವನು ಪ್ರಾಕೃತಿಕ ಜೀವಿಯಾದರೂ ಸ್ವೇಚ್ಛೆಯಿಂದ ವರ್ತಿಸಲಾರ. ಸುಸಂಸ್ಕೃತನಾಗಿ ಒಂದು ಸಾಮಾಜಿಕ ವ್ಯವಸ್ಥೆಯನ್ನು ಒಪ್ಪಿಕೊಂಡು ಬಾಳುವೆ ನಡೆಸುವಾಗ ತಾನೇ ಆ ನಿಯಮವನ್ನು ವಿರೋಧಿಸಲಾಗದು. ಮೊದಲಿನಿಂದಲೂ ರಾಮನು ಸಂಪ್ರದಾಯನಿಷ್ಠೆ ಶಾಸ್ತ್ರನಿಷ್ಠೆಯನ್ನು ತೋರಿದವನು. ಶಂಬಕ ವಧೆ ಮಾನವೀಯ ದೃಷ್ಟಿಯಿಂದ ಮತ್ತು ವೈಯಕ್ತಿಕ ದೃಷ್ಟಿಯಿಂದ ನೋಡಲು ಅಪರಾಧವೆನಿಸಿದರೂ ಸಾಮಾಜಿಕ ದೃಷ್ಟಿಯಿಂದ ಈಕ್ಷಿಸಲು ತಪ್ಪೆನಿಸದು. ಸಾಮಾಜಿಕ ವ್ಯವಸ್ಥೆ ಬದಲಾದಂತೆ ಅದು ತಾನಾಗಿ ಸರಿ ಹೊಂದುವುದು. ಇಲ್ಲಿ ತೋರುವುದು ಜಾತೀಯ ಸಂಕುಚಿತ ದೃಷ್ಟಿಯಾಗಿರದೇ ವಿಶಾಲವಾದ ಸಾಮಾಜಿಕ ಹಿತದೃಷ್ಟಿಯಾಗಿದೆ ಎನ್ನಬಹುದು. ರಾಮನ ಔನ್ನತ್ಯವಿರುವುದು ಇಲ್ಲಿ. ಸಂಘರ್ಷ ಕಾಲದಲ್ಲಿ ಉಚಿತವಾದುದನ್ನು ತಿಳಿದು ಆಚರಿಸುವುದರಲ್ಲಿ, ಸಮಷ್ಟಿ ಹಿತಕ್ಕೆ ಒಮ್ಮೊಮ್ಮೆ ವ್ಯಷ್ಟಿಹಿತ ಬಲಿಯಾಗುವುದು ಅನಿವಾರ್ಯವಾಗುತ್ತದೆ. ಪ್ರಮುಖನಾದವನು, ರಾಜನಾದವನು ಸಾಮಾಜಿಕ ನಿಯಮಕ್ಕೆ ಬದ್ಧನಾಗಿರುವನಲ್ಲದೇ ಅದರ ಪರಿಪಾಲಕನೂ ಆಗಿರುವನು.

ಕೊನೆಯ ಪ್ರಶ್ನೆ ಹನುಮಂತನದು. ಅವನ ನಿಸ್ವಾರ್ಥ ಲೋಕ ಹಿತಜೀವನದಂತೆ ಅವನ ಪ್ರಶ್ನೆಯೂ ಉದಾತ್ತವಾದುದು. ಧರ್ಮದ ಸ್ವರೂಪವಾವುದು ? ಜೀವಿಗೆ ಕರ್ಮ ಪಾಶದಿಂದ ಬಿಡುಗಡೆಯೆಂತು, ಪರಾರ್ಥ ಸಾಧನೆಗನುವಾದ ಪ್ರಶ್ನೆ. ಧರ್ಮ ಸ್ವರೂಪ ನಿರ್ಣಯದಲ್ಲಿ ರೂಢಿಗಾವಸ್ಥಾನ. ಶಾಸ್ತ್ರಕ್ಕೆ ಎಷ್ಟು ಪ್ರಮಾಣದ ಬೆಲೆ, ಮಾನವನ ನೈಜಮತಿಯಿಂದುದಿಸಿದ ಕ್ರಿಯೆಗೆ ಯಾವ ನೆಲೆ? ಸಮಸ್ಯೆಗಳೆತ್ತಿದ ಬಗೆ ಪರಿಪೂರ್ಣವೆನಿಸಿದರೂ ಉತ್ತರ ಮಾತ್ರ ಸನಾತನ ರೀತಿಯಲ್ಲಿದೆ. ಲೋಕವೊಂದು ಅಶ್ವತ್ಥವೃಕ್ಷ. ಹಳೆಯದು ಹೋಗಿ ಹೊಸ ಶಾಖೆಗಳುದಿಸುತ್ತವೆ. ಜೀವನ ಸಮುದ್ರದಲ್ಲಿ ಮಾನವ ಜೀವನ ವೀಚಿ ಮಾತ್ರ ಇತ್ಯಾದಿ.

ಜೀವನವಾಹಿನಿ ಎಂದಿನಿಂದಲೋ ಆರಂಭಿಸಿ ನಿರಂತರವಾಗಿ ಹರಿಯುತ್ತಲೇ ಇದೆ. ಹೊಸ ನೀರು ಸೇರಿದರೂ, ಪಾತ್ರದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಮೂಲತಃ ಮಾನವನ ಸ್ವಭಾವಾದಿಗಳಲ್ಲಿ ವಿಶೇಷ ವ್ಯತ್ಯಾಸವಾಗದು. ಆದರ್ಶವೆಂಬುದು ಎಂದಿನಿಂದಲೂ ಅದೇ ಆಗಿದೆಯೆನ್ನಬಹುದು. ಪ್ರಾಚೀನ ಕಾಲದಿಂದ ಉಚ್ಚತಮ ಸಂಸ್ಕೃತಿಯನ್ನು ಪಡೆದು ಖ್ಯಾತಿ ಹೊಂದಿದ ಭಾರತ ಇಂದಿಗೂ ಅದನ್ನು ಉಳಿಸಿ ಬೆಳೆಸಿಕೊಳ್ಳಬೇಕಾದುದು. ಕೆಲವು ಮಾರ್ಪಾಡುಗಳಾಗುವುದು ಆವಶ್ಯಕ ಅನಿವಾರ್ಯ. ಚಿರಂತನವಾದರೂ ಶಾಶ್ವತವಾದುದು ಸರ್ವಗ್ರಾಹ್ಯವೂ ಸಾರ್ವಕಾಲಿಕವೂ ಆಗಿರಬೇಕಾದುದು. ಆ ಗುಣ ಸನಾತನ ಧರ್ಮದಲ್ಲಿದೆಯೆನ್ನಬೇಕು. ಅಂತಹ ಭವ್ಯ ಪರಂಪರೆ ಮುನ್ನಡೆಸಿಕೊಂಡು ಬಂದರೆ ಬಾಳಿಗೊಂದು ಶಕ್ತಿ, ಸದ್ರೂಪ, ಸುಫಲ ದೊರೆತಂತಾಗುವುದು. ರಾಮನಲ್ಲಿ ಅಂತಹ ಒಂದು ವ್ಯಕ್ತಿತ್ವವಿದೆ. ಅವನು ಮುಗ್ಗರಿಸಿದನೆಂದು ಹೇಳಬಹು

ದಾದೆಡೆಗಳೂ ಇಂದಿಗೂ ಯಾವ ರೀತಿಯಲ್ಲಿ ಬದಲಾಗದೇ ಅದೇ ತಗ್ಗು ದಿನ್ನೆಗಳಿಂದ ಕೂಡಿವೆ. ಜನರನ್ನು ಮುಗ್ಗರಿಸಿ ಬೀಳುವಂತೆ ಮಾಡುತ್ತಿವೆ. ಗಂಡು ಹೆಣ್ಣಿನ ಸಮಸ್ಯೆ, ಅಹಲ್ಯೆ, ವಾಲಿ, ರಾವಣಾದಿಗಳು ಸಿಕ್ಕು ಇಂದಿಗೂ ತೊಡಕೇ ಆಗಿದೆ. ರಾಮನೊಂದು ರೀತಿಯಾಗಿ ನಡೆದನು. ತನಗುಚಿತವೆನಿಸಿದ ರೀತಿಯಲ್ಲಿ, ಸನ್ನಿವೇಶ, ಕಾಲಧರ್ಮ, ನೀತಿಗಳಿಗನುಸರಿಸಿ ಎಂತು ನಡೆದರೂ ಪರಿಪೂರ್ಣವಾದ ರೀತಿಯೆನಿಸುವಂತಿಲ್ಲ. ಇಲ್ಲಿ ಅಂತಹ ಸಮಯದಲ್ಲಿ ಸೂಕ್ಷ್ಮ ದೃಷ್ಟಿಯಿಟ್ಟುಕೊಂಡು ಆಚರಿಸುವುದೇ ಧರ್ಮ. ಆ ಒಂದು ಬಾಳಿನ ಔನ್ನತ್ಯದ ರೀತಿ ಇಲ್ಲಿ ಕಂಡಿದೆ.

# ದಾರಿ

ಸು. ರುದ್ರಮೂರ್ತಿ

ಈ ದಾರಿ ನಡೆದು ನಡೆದೂ ನವೆದು ಸಾಕಾರವಾಗಿದೆ
ನನ್ನ ಮನಸ್ಸಿನ ವಾಂಛೆಗಳಿಗೆ
ನಾ ನಡೆಯತೊಡಗಿದಂದಿನಿಂದ ನಾಲ್ಕೆಂಟು ಸಲ ಕಿತ್ತು
ಟಾರು ಬಳಿದು ಹೊಸದಾಗಿಸಿದರೂ
ಸವೆಯತೊಡಗಿದೆ ಮತ್ತೆ ನಡೆದಂತೆ,
ಹೌದು, ನಡಿಗೆ ನಿಲ್ಲುವತನಕ ಈ ದಾರಿ
ರಿಪೇರಿ
ಇನ್ನೆಷ್ಟು ಸಾರಿ.
ಸದಾ ಸವೆಯುವ ದಾರಿ ಇದು,
ಇರುವೆ ನಡೆದರೂ ಆನೆ ಸಾಗಿದರೂ ಕೂಡ.
ಊರಾಚೆ ಬಂಡೆ ಸೀಳಿದ ಜಲ್ಲಿ
ಇದರ ಸವೆದೊಡಲಲ್ಲಿ ಅವಶೇಷ.
ಯಾವಾಗಲೂ ಕರಿ ಮುಸುಕಿನ ಮೌನ
ಧ್ಯಾನ,
ಮಳೆಬಂದಾಗ ಅಷ್ಟಗಲ ಕಣ್ತೆರೆದು
ನೆಲದಿಂದ ಮುಗಿಲವರೆಗು ಬ್ರಹ್ಮಾಂಡ ತುಂಬಿಕೊಳ್ಳುತ್ತದೆ.
ತನ್ನೊಳಗೆ ಮನನ ಮತ್ತೆ ಮಳೆ ಬರುವತನಕ.

ನಡುಹಗಲ ಬಿರುಬಿಸಿಲಿನಲ್ಲಿ ನೂರೆಂಟು
ಮಿಣಿ ಮಿಣಿ ಗಾಜು ಬಾಯಲ್ಲಿ ಮಿಂಚಿನ ಮಾತು,
ಬುದ್ಧಿ ಕೆರಳಿ ಭೋ ಎಂದು ಬಾಯ್ಬಿಟ್ಟರೋ
ಅಪಘಾತ–ರಕ್ತತರ್ಪಣ ಇದರ ದಾಹದಾವಾನಲಕ್ಕೆ,
ನಿಜ ನಿಜ ಇದು ಮಲಗಿದ ದಾರಿ
ಮಾತಾಡುವ ದಾರಿ
ಅಪಘಾತಗಳ ದಾರಿ
ಸವೆಯುವ ದಾರಿ
ನನ್ನ ಪಾಲಿಗೆ ಒಂದು ದಿನ ಸತ್ತು
ತಾನು ಮಾತ್ರ ಸಾಯದೆ ಸವೆಯುತ್ತಲೇ ಇರುವ ದಾರಿ.

# ಶಿವಾಜಿಯ ಬಸ್ರೂರ ದಾಳಿ

**ಕೆ. ಜಿ. ವಸಂತ ಮಾಧವ**

ಶಿವಾಜಿಯು ಕೈಕೊಂಡ ನೌಕಾ ದಾಳಿಗಳಲ್ಲಿ ಬಸ್ರೂರಿನ[೧] ದಾಳಿಯು ಹಲವು ವೈಶಿಷ್ಟ್ಯಗಳನ್ನೊಳಗೊಂಡಿದೆ. ತನ್ನ ಮಾತೃಭೂಮಿಯಿಂದ ಸುಮಾರು ೧೪೦ ಮೈಲು ದೂರದಲ್ಲಿರುವ ಬಸ್ರೂರನ್ನು ನೌಕಾಬಲದಿಂದ ಶಿವಾಜಿ ದಾಳಿ ಮಾಡಿ ಅಕ್ಕಪಕ್ಕದಲ್ಲಿರುವ ವಿದೇಶೀ ವರ್ತಕರನ್ನು ದಂಗುಗೊಳಿಸಿದನು. ಈ ದಾಳಿ ಆಕಸ್ಮಿಕವೋ ಯಾ ಪೂರ್ವೋದ್ದೇಶವುಳ್ಳದ್ದಾಗಿತ್ತೋ ಮತ್ತು ಇದು ಯಾವ ಉದ್ದೇಶವಾಗಿ ನಡೆದಿತ್ತೆಂಬುದನ್ನು ಅರಿಯಲು ಪೋರ್ತುಗೀಸ, ಇಂಗ್ಲೀಷ, ಡಚ್ಚ ಮತ್ತು ಮರಾಠರ ಬಖೈರಗಳು ಸಹಾಯ ಮಾಡುತ್ತವೆ.

**ಶಿವಾಜಿಯ ನೌಕಾಬಲದ ಸಿದ್ಧತೆ :** ಕೊಂಕಣ ಕರಾವಳಿಯನ್ನು ಗೆದ್ದ ಶಿವಾಜಿಯು ಇದನ್ನು ಸಂರಕ್ಷಿಸಲು ನೌಕಾ ದಳದ ಆವಶ್ಯಕತೆಯನ್ನು ಕಂಡು ಹಿಡಿದನೆಂದು ಸಮಕಾಲೀನ ಬರಹಗಳಿಂದ ತಿಳಿದು ಬರುತ್ತದೆ. ಗೋವೆಯಲ್ಲಿರುವ ಪೋರ್ತುಗೀಸ ವೈಸರಾಯಿಯು ತನ್ನ ದೊರೆಗೆ ಬರೆದ ಪತ್ರದಲ್ಲಿ[೨] ಶಿವಾಜಿಯ ನೌಕಾ ಬಲದ ಬೆಳವಣಿಗೆಯನ್ನು ತಿಳಿಸಿದ್ದಲ್ಲದೆ ಇದರಿಂದ ಪೋರ್ತುಗೀಸ ಸಾಮ್ರಾಜ್ಯಕ್ಕೆ ಅಪಾಯವಿದೆ ಎಂದು ಎಚ್ಚರಿಸಿದನು. ಬೆಸ್ಸಿನ್ (Bassin) ಮತ್ತು ಚಾವುಲ ಗೆದ್ದ ನಂತರ ಕೊಂಕಣ ಕರಾವಳಿಯಲ್ಲಿ ಶಿವಾಜಿಯು ಪ್ರಬಲ ಶಕ್ತಿ ಆದನು. ಈ ಪ್ರದೇಶಗಳನ್ನು ರಕ್ಷಿಸಲು ನೌಕಾ ಬಲದ ಆವಶ್ಯಕತೆಯನ್ನು ಅರಿತು ಶಿವಾಜಿಯು ಕೆಲವು ಯುದ್ಧ ನೌಕೆಗಳನ್ನು ಕಟ್ಟಿ ಅವುಗಳನ್ನು ಭಿಮುಂಡಿ, ಕಲ್ಯಾಣ ಮತ್ತು ಪಾನವೆಲಗಳಲ್ಲಿ ಇರಿಸಿದನು.[೩] ಕೊಂಕಣ

---

೧. ಟಿ. ಎಸ್. ಶೆಜ್ವಳಕರರು 'ಬಸ್ರೂರಿನ ಮೇಲೆ ಶಿವಾಜಿ ದಾಳಿ' (T. S. Shejwalkar: Shivaji Raid on Basrur) ಎಂಬ ಲೇಖನ *Bulletin of Deccan College, Poona* No. 4–1942–43 P. 135–146.ನಲ್ಲಿ ಪ್ರಕಟವಾಗಿತ್ತು. ಇತ್ತೀಚೆಗೆ ಸಿಕ್ಕಿದ ಕೆಲವು ಐತಿಹಾಸಿಕ ದಾಖಲೆಗಳ ಆಧಾರದಿಂದ ಈ ಲೇಖನವನ್ನು ಪರಿಸ್ಕರಿಸಲು ಪ್ರಯತ್ನಿಸಲಾಗಿದೆ.

೨. ಗೋವೆಯ ಪೋರ್ತುಗೀಜ ವೈಸರೊಯಿ ತಾ. 16–8–1659 ರಲ್ಲಿ ಪೋರ್ತುಗಲ್ಲಿನಲ್ಲಿರುವ ತನ್ನ ದೊರೆಗೆ ಬರೆದ ಪತ್ರ. ಇದನ್ನು ಬಿ. ಕೆ. ಆಪ್ಟೆಯವರು (B. K. Apte) ಬರೆದ 'The Early Beginning of Maratha Navy' ಎಂಬ ಲೇಖನದಿಂದ ಉಲ್ಲೇಖಿಸಿದುದು. ಈ ಲೇಖನ ಜೂನ 1941 ರ *Bulletin of Deccan College Poona*–1941 p. 404 ರಲ್ಲಿ ಪ್ರಕಟವಾಗಿದೆ.

೩. G. S. Sardesai : *New History of Maratha* vol p. 122.

ಕರಾವಳಿಯಲ್ಲಿ ಶಿವಾಜಿಗೆ ಬಿಜಾಪುರ ಸುಲ್ತಾನರ ಅಡಿಯಲ್ಲಿದ್ದ (Vassas) ಜಂಜಿರದ ಸಿದ್ಧಿ ಪ್ರಬಲ ಸ್ಪರ್ಧಿಗಳಾಗಿದ್ದರು. ಇವರ ಉಪಟಳವನ್ನು ಶಿವಾಜಿಯು ಆಗಿಂದಾಗ್ಗೆ ಎದುರಿಸಬೇಕಾಗಿತ್ತು.[೪] ಇದರಿಂದಾಗಿ ಶಿವಾಜಿಯು ದಕ್ಷ ನೌಕಾಬಲವಿಲ್ಲದೆ ಜಂಜಿರಾದ ಸಿದ್ಧಿಯವರನ್ನು ಬಗ್ಗಿಸಲು ತನಗೆ ಸಾಧ್ಯವಿಲ್ಲವೆಂದು ಮನಗಂಡು ಯುದ್ಧ ನೌಕೆಗಳನ್ನು ನಿರ್ಮಿಸಲು ಯತ್ನಿಸಿದನು. ಚಟ್ನಿಸ ಬಖೈರನ ವರದಿಯಂತೆ "ಶಿವಾಜಿಯು ಕೆಲವು ಹಡಗುಗಳನ್ನು ಪಡೆದನು. ಗುರಾಬ (Guraab), ಟಾರನಡೆ (Tarnade) ಗಲಬಟ್ (Gulbat), ಮುಬಾರ (Mubar), ಸಿಬಾಡ (Sibad), ಪಾಗರ (Pagar), ಮಚವೆ (Machva) ಮತ್ತು ದೊಡ್ಡದಾದ ಟಿರಾಕಟಿ (Tirakati) ಗಳೆಂಬ ನೌಕೆಗಳನ್ನು ನಾನ್ನೂರರಿಂದ ಐನೂರರ ವರೆಗೆ ತಯಾರಿಸಿದನು. ಇವುಗಳಿಗಾಗಿ ಸುಮಾರು ೫ ರಿಂದ ಹತ್ತು ಲಕ್ಷ ರೂಪಾಯಿಗಳ ವರೆಗೆ ಖರ್ಚು ಮಾಡಿದನು. ಇವುಗಳ ಮೇಲ್ವಿಚಾರಣೆಗೆ ದರಯಾ ಸಾಗರ ಮತ್ತು ಮಾಣಿಕ ಭಂಡಾರಿಯವರನ್ನು ಸುಭೇದಾರರಾಗಿ ಶಿವಾಜಿ ನೇಮಿಸಿದ್ದಲ್ಲದೆ ಇವುಗಳನ್ನು ಬಲಶಾಲಿಯಾಗಿ ಮಾಡಲು ಕೋವಿ, ಮದ್ದುಗುಂಡುಗಳನ್ನು ಸರಬರಾಜು ಮಾಡಿ, ಸಮುದ್ರಯಾನದಲ್ಲಿ ಪರಿಣತರಾದವರನ್ನು ಇದರಲ್ಲಿ ಸೇರಿಸಿಕೊಂಡನು. ಈ ನೌಕಾಬಲದಿಂದ ಆತ್ಮ ವಿಶ್ವಾಸ ಪಡೆದ ಶಿವಾಜಿಯು ಉತ್ತರ ಕೊಂಕಣ ಕರಾವಳಿಯ ಪ್ರದೇಶಗಳನ್ನು ಕೊಳ್ಳೆ ಹೊಡೆದು, ಅಲ್ಲಿ ಆಳಿಕೊಂಡಿದ್ದ ಸಣ್ಣ ಪುಟ್ಟ ರಾಜರುಗಳಿಂದ ಕಪ್ಪ ಕಾಣಿಕೆಗಳನ್ನು ಪಡೆಯುವುದರಲ್ಲಿ ಯಶಸ್ವಿಯಾದನು. ಇವನ ನೌಕಾಬಲದ ಶೀಘ್ರ ಬೆಳವಣಿಗೆಯು ಜಂಜಿರಾದ ಸಿದ್ಧಿಗೆ ಗಾಬರಿ ಮತ್ತು ಭಯವನ್ನುಂಟು ಮಾಡಿತು.[೫] ಈ ಘಟನೆಗಳು ಕ್ರಿ. ಶ. ೧೬೬೪ರಲ್ಲಿ ಸಂಪೂರ್ಣವಾಯಿತೆಂದು ಜಡೇ ಶಕಾವಳಿಯಿಂದ[೬] ತಿಳಿದು ಬರುತ್ತದೆ. ವೆನಗುರಲಾದಲ್ಲಿರುವ ಡಚ್ಚರು ಶಿವಾಜಿಯು ನೌಕಾಬಲದ ಬೆಳವಣಿಗೆಯಿಂದ ಗಾಬರಿಗೊಂಡು ಇವುಗಳನ್ನು ತಮ್ಮ ವಿರುದ್ಧ ಶಿವಾಜಿಯು ಉಪಯೋಗಿಸಿಯಾನೆಂದು ಭಾವಿಸಿದರು.[೭] ಆದರೆ ಶಿವಾಜಿ ಕ್ರಿ. ಶ. ೧೬೬೪ರ

---

೪. ಜಂಜಿರಾದ ಸಿದ್ಧಿ ಮತ್ತು ಶಿವಾಜಿಯರೊಳಗೆ ಕದನ 1648 ರಲ್ಲಿ ಆರಂಭವಾಗಿತ್ತೆಂದು ಮನೋಹರ ಮಾಲಗೊಂಕರ ತಮ್ಮ ಪುಸ್ತಕ "*Kanhoji Angrey, Maratha Admiral* ದಲ್ಲಿ ತಿಳಿಸಿದ್ದಾರೆ. p. 39.

೫. ಚಟ್ನಿಸ ಬಖೈರ p. 141–145- ಇದನ್ನು ಮಲ್ಲಾಹರರಾವು ಚಟ್ನಿಸ 1810 ರಲ್ಲಿ ಸಂಗ್ರಹಿಸಿದರು. ಇದು ಶಿವಾಜಿಯ ಪರಾಕ್ರಮಗಳನ್ನು ತಿಳಿಸುತ್ತದೆ. ಇದರ ವಿಮರ್ಶೆ ಜೆ. ಎನ್. ಸರಕಾರ (J. *N.* Sarkar of *1929* Edition) ಬರೆದ Shivaji and His Times-p. 412 ರಲ್ಲಿದೆ. ಇದರ ಪಾಠ– H. G. Rawlinson and Pattawardhan- ಬರೆದ *Source Book of Maratha History* p. *98* ನೋಡಬಹುದು.

೬. ಇದು ಮರಾಠ ಇತಿಹಾಸದ ಪ್ರಾಚೀನ ದಾಖಲೆ, ಇದು ಮರಾಠ ಇತಿಹಾಸವನ್ನು 1618 ರಿಂದ 1697 ರ ವರೆಗೆ ತಿಳಿಸುತ್ತದೆ. H. G. Rawlinson and Pattawardhan; *Source Book of Maratha History*. p. 34

೭. ಟಿ. ಎಸ್. ಶೆಜ್ವಳಕರರ ಲೇಖನ, ಅದೇ ಲೇಖನ, ಅದೇ ಪತ್ರಿಕೆಯಲ್ಲಿ P. 130

ನವೆಂಬರ್ ತಿಂಗಳಲ್ಲಿ ತನ್ನ ನೌಕಾಬಲದೊಂದಿಗೆ ಕನ್ನಡ ಕರಾವಳಿಯಲ್ಲಿರುವ ಭಟ್ಕಳದ ಕಡೆಗೆ ಸಾಗಿದನು. ಇವನ ನೌಕಾದಳದ ಚಲಾವಣೆಯಲ್ಲಿ ಆಸಕ್ತಿ ಹೊಂದಿದ ವಿದೇಶೀಯರು ಇದು ಭಟ್ಕಳವನ್ನು ಶಿವಾಜಿಯು ವಶಪಡಿಸಿಕೊಳ್ಳಲು ಮಾಡಿದ ತಂತ್ರವೆಂದು ಅಭಿಪ್ರಾಯಪಟ್ಟರು. ಆದರೆ ಈ ನೌಕಾಯಾನದಿಂದ ಶಿವಾಜಿಗೆ ಹೆಚ್ಚಾಗಿ ಏನನ್ನೂ ಸಾಧಿಸಲಾಗಲಿಲ್ಲ. ಅವನು ಬಿಜಾಪುರ ಸುಲ್ತಾನ್ ಕವಾಸ್‌ಖಾನನಿಂದ ಸೋಲಿಸಲ್ಪಟ್ಟು ಹಿಂತಿರುಗಬೇಕಾಯಿತು.[೮] ಈ ನೌಕಾಕವಾಯತಿನಿಂದ ಶಿವಾಜಿಗೆ ಕನ್ನಡ ಕರಾವಳಿಯ ರಾಜಕೀಯ ಮತ್ತು ಭೌಗೋಲಿಕ ಸ್ಥಿತಿಗತಿಗಳ ಪರಿಚಯವಾಯಿತೆಂದು ಟಿ.ಎಸ್. ಶೆಜ್ವಳಕರ ಅಭಿಪ್ರಾಯಪಟ್ಟಿದ್ದಾರೆ.[೯] ಆದರೆ ಇದು ಊಹೆಯಾಗಿದೆ ಎಂದು ಇಲ್ಲಿ ಹೇಳಬಹುದಲ್ಲದೆ ಇದನ್ನು ಸಮರ್ಥಿಸಲು ಇವತ್ತಿನ ವರೆಗೆ ಯಾವ ಇತಿಹಾಸ ದಾಖಲೆಗಳೂ ದೊರಕಿಲ್ಲ. ಆದರೆ ಶಿವಾಜಿಯ ಈ ಚಟುವಟಿಕೆಯು ಕಾರವಾರದಲ್ಲಿದ್ದ ಇಂಗ್ಲೀಷರಿಗೆ ಭಯವನ್ನುಂಟು ಮಾಡಿ ಇದರ ಪರಿಣಾಮವಾಗಿ ಅವರು ತಮ್ಮ ಭಂಡಸಾಲೆಯನ್ನು ಮುಚ್ಚುವ ವಿಚಾರದಲ್ಲಿ ಇದ್ದರು.[೧೦] ಈ ಘಟನೆಯ ಆಧಾರದಿಂದ ಶಿವಾಜಿಯು ಬಸ್ರೂರು ದಾಳಿಯ ಕಾಲದಲ್ಲಿ ಬಲವಾದ ಮತ್ತು ಸುಸಜ್ಜಿತವಾದ ನೌಕೆಗಳನ್ನು ತಯಾರು ಮಾಡಿಕೊಂಡಿದ್ದನೆಂದು ನಾವು ತಿಳಿಯಬಹುದು.

## ಬಸ್ರೂರಿನ ರಾಜಕೀಯ ಹಿನ್ನೆಲೆ :

ಶಿವಾಜಿಯ ಬಸ್ರೂರಿನ ದಾಳಿಯನ್ನು ತಿಳಿಸುವ ಮೊದಲು ಇಲ್ಲಿನ ರಾಜಕೀಯ ಸ್ಥಿತಿಯನ್ನು ಅರಿಯುವ ಅಗತ್ಯವಿದೆ. ಈ ನಗರವು ಗಂಗೊಳ್ಳಿ ಹೊಳೆಯ ಮುಖಜ ಭೂಮಿಯಿಂದ ಸುಮಾರು ನಾಲ್ಕು ಮೈಲು ಪೂರ್ವಕ್ಕಿದೆ. ಬಸ್ರೂರಿನಲ್ಲಿ ಈ ಹೊಳೆಯನ್ನು ವಾರಾಹಿ ನದಿ ಎಂದು ಕರೆಯುತ್ತಾರೆ. ಈ ಹೊಳೆಯು ಸಮುದ್ರ ಸೇರುವಲ್ಲಿ ಉತ್ತರ ದಕ್ಷಿಣಗಳಲ್ಲಿ ಗಂಗೊಳ್ಳಿ ಮತ್ತು (ಪೋರ್ತುಗೀಸರ ಕಂಬೋಳಿಮ) ಕುಂದಾಪುರಗಳೆಂಬ ಪಟ್ಟಣಗಳಿವೆ. ಪ್ರಾಚೀನ ಕಾಲದಿಂದಲೂ ಬಸ್ರೂರು ಕರ್ನಾಟಕದಲ್ಲಿರುವ ಉತ್ತಮ ಬಂದರು ಮತ್ತು ವ್ಯಾಪಾರ ಕೇಂದ್ರಗಳಲ್ಲಿ ಒಂದಾಗಿತ್ತು. ಇದು ವಿಜಯನಗರದ ಅರಸರ. ಮತ್ತು ಅವರ ನಂತರ ಕೆಳದಿ ಅರಸರ ಆಳ್ವಿಕೆಯ ಮೇಲ್ವಿಚಾರಣೆಗೆ ಬಂತು. ಕ್ರಿ. ಶ. ೧೫೭೦ ರಲ್ಲಿ ಪೋರ್ತುಗೀಸರು ಇಲ್ಲಿ ತಳವೂರಿ ಇಲ್ಲಿ ಆಳಿಕೊಂಡಿದ್ದ

---

೮. ಕಾರವಾರದಿಂದ ಸೂರತಕ್ಕೆ ಬರೆದ ಪತ್ರ. ಈ ಪತ್ರ ತಾ. 26-11-1664 ರಲ್ಲಿ ಬರೆಯಲ್ಪಟ್ಟಿತ್ತು. Wiliam Foster: The *English Factories In India-1661-64* p. 358 J. *N*. Sarkar; ಅದೇ ಗ್ರಂಥ *1929 Edition* p. 234 ಶಿವಕಲಿನ ಪತ್ರಸಾರ ಸಂಗ್ರಹ 1021. ಟಿ. ಎಸ್. ಶೆಜ್ವಳಕರ ಲೇಖನದಿಂದ ಉಲ್ಲೇಖಿಸಿದ್ದು. ಈ ಲೇಖನ ಅದೇ ಮತ್ತು ಆದೇ ಪತ್ರಿಕೆಯಲ್ಲಿ p, *137*

೯. ಟಿ ಎಸ್. ಶೆಜ್ವಳಕರ; ಅದೇ ಲೇಖನ ಅದೇ ಪತ್ರಿಕೆ p, 140

೧೦. ಡಚ್ಚರ ಭಂಡಶಾಲೆಯ ಪತ್ರ: ಇದು ಜನವರಿ 21 ಕ್ರಿ. ಶ. *1665* ರಲ್ಲಿ ಬರೆದದು. ಇದರ ವಿವರ M. A. Desai: *Chitakula and Karwar* p, 28-29,

ಸುರಾಲಿನ ತೋಳಹಾರರಿಂದ ಸಾಧಾರಣ ೫೦೦ ಚೀಲ ಅಕ್ಕಿ ಕಪ್ಪವನ್ನು ಪಡೆದುಕೊಂಡು ಇಲ್ಲಿ ಬೆಳೆದ ಕರಿಮೆಣಸಿನ ವ್ಯಾಪಾರವನ್ನು ಮಾಡಿಕೊಂಡಿದ್ದರು.[೧೧] ಪೋರ್ತುಗೀಸ ದಾಖಲೆಗಳಲ್ಲಿ ಬಸ್ರೂರು ಮತ್ತು ಕುಂದಾಪುರಗಳನ್ನು ಮೇಂಬಸ್ರೂರು ಮತು ಕೆಳೆ ಬಸ್ರೂರು ಎಂದು ನಮೂದಿಸಿದ್ದರು (Upper Basrur, Lower Basrur). ಇವರ ಸಣ್ಣ ಕೋಟೆಯೊಂದು ಕೆಳ ಬಸ್ರೂರಿನಲ್ಲಿ ಇರುವುದನ್ನು ಇಟಲಿ ಪ್ರವಾಸಿ ಪಿಯೊಟ್ರೊ ಡೆಲ್ಲಾವಿಲ್ಲಿ ೧೬೨೩ರಲ್ಲಿ ಗಮನಿಸಿದ್ದನು.[೧೨] ಕ್ರಿ. ಶ. ೧೬೩೩ರಲ್ಲಿ ಕೆಳದಿ ವೀರಭದ್ರನು ಪೋರ್ತುಗೀಸರೊಡನೆ ಮಾಡಿಕೊಂಡ ಒಪ್ಪಂದದಂತೆ ಬಸ್ರೂರಿನ ವ್ಯಾಪಾರಸ್ಥರು ಪ್ರತಿ ವರ್ಷ ಪೋರ್ತುಗೀಸರಿಗೆ ೫೦೦ ಚೀಲ ಅಕ್ಕಿಯ ಕಪ್ಪವನ್ನು ಕೊಡುವಂತೆ ವೀರಭದ್ರನು ಅನುಜ್ಞಿಸಬೇಕು.[೧೩] ಕೆಳದಿ ಶಿವಪ್ಪನ ಕಾಲದಲ್ಲಿ ಕನ್ನಡ ಕರಾವಳಿಯಲ್ಲಿ ಪೋರ್ತುಗೀಸರ ಪ್ರಾಬಲ್ಯ ಅಡಗಿಸಲ್ಪಟ್ಟು ಅವರು ವ್ಯಾಪಾರ ಮಾತ್ರಕ್ಕೆ ತಮ್ಮ ಚಟುವಟಿಕೆಗಳನ್ನು ಸೀಮಿತಗೊಳಿಸಬೇಕಾಯ್ತು. ಕ್ರಮೇಣ ಡಚ್ಚರು ಬಸ್ರೂರಿನಲ್ಲಿ ಪೋರ್ತುಗೀಸರ ಪ್ರತಿ ಸ್ಪರ್ಧಿಗಳಾದರು. ಇವರು ಬಸ್ರೂರಿನಲ್ಲಿ ಭಂಡಸಾಲೆ (Factory) ಸ್ಥಾಪಿಸಿ ಅಕ್ಕಿ ವ್ಯಾಪಾರ ಮಾಡುತ್ತಿದ್ದರೆಂದು ಕ್ರಿ. ಶ. ೧೬೬೨ರ ಇಂಗ್ಲಿಷ್ ಭಂಡಸಾಲೆಯ ಪತ್ರದಿಂದ ತಿಳಿದು ಬರುತ್ತದೆ.[೧೪] ಮರು ವರ್ಷದ ಇಂಗ್ಲಿಷ್ ಭಂಡಸಾಲೆಯ ಬರಹಗಳಿಂದ ಡಚ್ಚರು ಗೋವೆಯ ದಕ್ಷಿಣದಲ್ಲಿ ಪ್ರಬಲರಾಗಿ ಅಲ್ಲಿನ ವ್ಯಾಪಾರದಲ್ಲಿ ಸ್ವಾಯತ್ತತೆಯನ್ನು ಸ್ಥಾಪಿಸಲು ಹವಣಿಸುತ್ತಿದ್ದರೆಂದು ತಿಳಿದು ಬರುವುದು.[೧೫] ಇದೇ ಕಾಲದಲ್ಲಿ ಕೆಳದಿ ಭದ್ರಪ್ಪ ನಾಯಕನು ಡಚ್ಚರೊಡನೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಆತುರನಾಗಿದ್ದನು. ಇವನ ಪ್ರತಿನಿಧಿ ಮಲ್ಲಪ್ಪ ಮಲ್ಯನು ಬಸ್ರೂರಿನಲ್ಲಿರುವ ಡಚ್ಚರೊಡನೆ ವ್ಯಾಪಾರ ಒಪ್ಪಂದಗಳ ವಿಚಾರಪತ್ರ ವ್ಯವಹಾರ ನಡೆಸಿದ್ದನು.[೧೬] ಕ್ರಿ.ಶ. ೧೬೬೩ರಲ್ಲಿ ಕೆಳದಿ ಭದ್ರಪ್ಪ ನಾಯ

೧೧. Fariya Sousa; *Asiada Portuguese* vol II p, 470, Heras Henry, Riv for; *Aravidu*, Dynasty, vol I 269. Pereya Antonio Pinto; *Historia Da India No Tempo Em Que A Governoru Visroey D. Louis De Adite 1616* Coimbra, Vuotud by Dr. B. S. Shastry; *The Portuguese In Kanara;* 1498-*1763* p, *101*, ಅಪ್ರಕಟಿತ. ಈ ಪ್ರಬಂಧ ಬೊಂಬಾಯಿ ವಿಶ್ವವಿದ್ಯಾಲಯಕ್ಕೆ *1969* ರಲ್ಲಿ ಸಲ್ಲಿಸಿದ್ದು.

೧೨. Dellavalle; His Travels : vol II p, 297

೧೩. ಡಾ. ಬಿ. ಎಸ್. ಶಾಸ್ತ್ರಿ., ಕೆಳದಿ ಅರಸರೂ ಹಾಗೂ ಪೋರ್ತುಗೀಸರು p, 64.

೧೪. W. Fostar: ಅದೇ ಗ್ರಂಥ p. 120.

೧೫. ಕ್ರಿ. ಶ. 1663 ರಲ್ಲಿ ಒಕ್ಸಿನ್ಡನ್ (Oxi Don ಮತ್ತು ಅವನ ಸಲಹೆಗಾರರ ಅಭಿಮತ. ಸೂರತ ಫೆಕ್ಟರಿಯಿಂದ ಫೋಸ್ಟರ್; ಅದೇ ಗ್ರಂಥ p. 228.

೧೬. ಬಟಾವಿಯಾ ಡಾಗ್ ರಿಜಿಸ್ಟರ್-ಇದರ ಸಾರಾಂಶ. *Bombay Historic Society* 1929 Vol. IV p. 244; ಪತ್ರಿಕೆ 246 ರಲ್ಲಿ ನೋಡಬಹುದು. ಇದೇ ಸಂದರ್ಭದಲ್ಲಿ ಮಲ್ಲಪ ಮಲ್ಲನು ತಾ. 20-4-1663 ರಲ್ಲಿ ಕೆಳದಿ ಮಲ್ಲಪ್ಪನಾಯಕನ ಪರವಾಗಿ ಡಚ್ಚ ವೈಸರಾಯಿಗೆ ಬರೆದ ಪತ್ರ. ಅದೇ ಪತ್ರಿಕೆ 1930-31 p. 91.

ಕನು ಬಿಜಾಪುರ ಆದಿಲ್‌ಶಾಹನ ಆಕ್ರಮಣವನ್ನು ಎದುರಿಸಬೇಕಾಯಿತು.[೧೭] ಇವರ ಪರಿಣಾಮವಾಗಿ ಭಟ್ಕಳ ಮತ್ತು ಬಸ್ರೂರಿನಲ್ಲಿರುವ ವ್ಯಾಪಾರಸ್ಥರು ತಮ್ಮ ಪ್ರಾಣ ರಕ್ಷಣೆಗೋಸ್ಕರ ಈ ಊರುಗಳನ್ನು ಭಯದಿಂದ ತ್ಯಜಿಸಿ ಕಾಡಿಗೆ ಪಲಾಯನ ಮಾಡಿದರು. ಬಿಜಾಪುರ ಸುಲ್ತಾನನ ಸೈನ್ಯವು ಈ ಎರಡು ವ್ಯಾಪಾರ ಕೇಂದ್ರಗಳನ್ನು ತಮ್ಮ ವಶ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಿತು.[೧೮] ಆದರೆ ಕೆಳದಿ ಭದ್ರಪ್ಪನಾಯಕನು ಬಿಜಾಪುರ ಸುಲ್ತಾನನೊಡನೆ ಒಪ್ಪಂದ ಮಾಡಿಕೊಂಡು ತನ್ನ ರಾಜ್ಯವನ್ನು ರಕ್ಷಿಸಿಕೊಂಡನು.[೧೯] ಈ ಒಪ್ಪಂದವಾದ ಸ್ವಲ್ಪಕಾಲದಲ್ಲಿಯೇ ಭದ್ರಪ್ಪನು ನಿಧನನಾದನು.[೨೦] ಇವನ ತಮ್ಮ ಸೋಮಶೇಖರನಾಯಕನು ತನ್ನ ೮ನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದನು. ಚಿಕ್ಕವನಾದ ಇವನ ಅಸಹಾಯಕತೆಯ ಲಾಭ ಪಡೆದು ಕನ್ನಡ ಕರಾವಳಿಯಲ್ಲಿ ಕೆಳದಿ ಅರಸರ ಸಾಮಂತರಾಗಿದ್ದ ತುಳು ರಾಜರುಗಳು ಕೆಳದಿ ಅಧಿಕಾರದ ವಿರುದ್ಧ ಬಂಡೆದ್ದರು. ಕೆಳದಿ ರಾಜ್ಯದ ರಾಜಧಾನಿಯಾದ ಬಿದನೂರು ಗೊಂದಲಮಯವಾಯಿತು. ಇದೇ ಸಂದರ್ಭದಲ್ಲಿ ಆದಿಲ್‌ಶಾಹ ಇವರ ಮೇಲೆ ಸೈನ್ಯ ಸಮೇತ ದಂಡೆತ್ತಿ ಬಂದನು.[೨೧] ಆದರೆ ನಾರಾಯಣ ಮಲ್ಯನು ತನ್ನ ಚಾಣಾಕ್ಷತೆಯಿಂದ ಬಿದನೂರಿನಲ್ಲಿ ಶಾಂತಿ ಸ್ಥಾಪಿಸಿ ರಾಜ್ಯಕ್ಕೆ ಬಂದಿದ್ದ ಗಂಡಾಂತರವನ್ನು ಹೋಗಲಾಡಿಸಿದನು. ಇವನು ಸೋಮಶೇಖರ ನಾಯಕನ ಅಧಿಕಾರವನ್ನು ಬಲಗೊಳಿಸಿದನು.[೨೨] ಇದೇ ಸಂದಿಗ್ಧ ಸ್ಥಿತಿಯಲ್ಲಿ ಪೋರ್ತುಗೀಸರು ಮತ್ತು ಡಚ್ಚರು ಕನ್ನಡ ಕರಾವಳಿಯಲ್ಲಿ ಪ್ರಬಲ ಪ್ರತಿಸ್ಪರ್ಧಿಗಳಾಗಿದ್ದರು. ಇವರ ಪ್ರತಿಸ್ಪರ್ಧೆ ಕುಂದಾಪುರ, ಗಂಗೊಳ್ಳಿ ಮತ್ತು ಬಸ್ರೂರುಗಳಲ್ಲಿ ಅಧಿಕವಾಗಿತ್ತು. ಈ ಬಂದರುಗಳನ್ನಲ್ಲದೇ ಇನ್ನಿತರ ಕನ್ನಡ ಕರಾವಳಿಯ ಬಂದರುಗಳನ್ನು ಮುತ್ತಿಗೆ ಹಾಕುವ

---

೧೭. ವಿಲಿಯಂ ಫೋಸ್ಟರ್ ಇದೇ ಗ್ರಂಥ p.239 ತಾ.19-5-1663 ರಲ್ಲಿ ಕಾರವಾರದಿಂದ ಸೂರತ್ ಕೌನ್ಸಿಲ್‌ಗೆ ಬರೆದ ಪತ್ರ.

೧೮. ಕಾರವಾರದಿಂದ ಸೂರತ ಕೌನ್ಸಿಲ್ಲಿಗೆ ಬರೆದ ಇನ್ನೊಂದು ಪತ್ರ ಈ ಪತ್ರದ ತಾ. 6-11-1663 ಡಬ್ಲ್ಯು. ಫೋಸ್ಟರ: ಅದೇ ಗ್ರಂಥ p. 261.

೧೯. ಕಾರವಾರದಿಂದ ಸೂರತ ಕೌನ್ಸಿಲ್ಲಿಗೆ ಬರೆದ ಮತ್ತೊಂದು ಪತ್ರ ಇದು ತಾ. 18-4-1664, ರಲ್ಲಿ ಬರೆದದು. ಡಬ್ಲ್ಯು ಫೋಸ್ಟರ್; ಅದೇ ಗ್ರಂಥ p. 343-44.
*Journal of Bombay Historic Society*-1930 Vol II p. 265 ಡಾ. ಬಿ. ಎಸ್. ಶಾಸ್ತ್ರಿ ಕೆಳದಿ ಅರಸರು ಹಾಗೂ ಪೋರ್ತುಗೀಜರು p. 115

೨೦. ಇದೇ ಪತ್ರ: ಈ ಪತ್ರವು ಸೋಮಶೇಖರ ನಾಯಕನು ಸತ್ತನೆಂದು ತಪ್ಪಾಗಿ ಬರೆದುದನ್ನು ಇಲ್ಲಿ ಗಮನಿಸಬೇಕು. ಡಚ್ಚರ ಪತ್ರಗಳ ಪ್ರಕಾರ ಭದ್ರಪ್ಪ ನಾಯಕನನ್ನು ವಿಷ ಉಣಿಸಿ ಕೊಲ್ಲಿಸಿದರೆಂದು ತಿಳಿಸಿದೆ. *Journal of Bombay. Historic Society* II 1930 p, 260, 267, 268.

೨೧. ಲಿಂಗಣ್ಣ ಕವಿ : ಕೆಳದಿ ನೃಪ ವಿಜಯ p. 126 ಪದ್ಯ 31, *J.B.H. 5-1930* p. 268.ಡಬ್ಲ್ಯು. ಫೋಸ್ಟರ್ : ಅದೇ ಗ್ರಂಥ p, 348

೨೨. ಡಬ್ಲ್ಯು. ಫೋಸ್ಟರ್: ಅದೇ ಗ್ರಂಥ p, 349

ಇರಾಧೆಯಿಂದ ಪೋರ್ತುಗೀಸರು ತಮ್ಮ ನೌಕೆಯನ್ನು ಕನ್ನಡ ಕರಾವಳಿಗೆ ಕಳುಹಿಸಿದರು.[೨೩] ಈ ಸ್ಥಿತಿಯಲ್ಲಿ ಸೋಮಶೇಖರ ನಾಯಕನು ಪೋರ್ತುಗೀಸರೊಡನೆ ಒಪ್ಪಂದ ಮಾಡಿಕೊಂಡನೆಂದು ತಿಳಿದು ಬರುತ್ತದೆ. ಇದರಂತೆ ಕೆಳದಿ ಸೋಮಶೇಖರ ನಾಯಕನು ಪೋರ್ತುಗೀಸರಿಗೆ ಕರಾವಳಿ ಬಂದರುಗಳಲ್ಲಿ ವ್ಯಾಪಾರ ಮಾಡಿಕೊಳ್ಳಲು ಹೆಚ್ಚಿನ ಸೌಲಭ್ಯದೊಂದಿಗೆ ಕರಾವಳಿಯ ಕೋಟೆಗಳನ್ನು ಇವರಿಗೆ ಹಿಂತಿರುಗಿಸಲು ಒಪ್ಪಿರಬೇಕು. ಇದನ್ನು ಕಾರ್ಯಗತ ಮಾಡಲು ನಾರಾಯಣ ಮಲ್ಯನು ಪೋರ್ತುಗೀಸರೊಡನೆ ಬಸ್ರೂರಿನಲ್ಲಿ ಮಾತುಕತೆ ನಡೆಸುತ್ತಿದ್ದನೆಂದು ಇಂಗ್ಲಿಷ್ ಭಂಡಸಾಲೆಯ ದಾಖಲೆಗಳು ತಿಳಿಸುತ್ತವೆ.[೨೪] ಆದರೆ ಇದಕ್ಕೆ ಡಚ್ಚರು ಪ್ರಬಲ ವಿರೋಧಿಗಳಾಗಿ ಇದು ಜಾರಿಗೆ ಬರಬಾರದೆಂದು ಪ್ರತಿಭಟಿಸುತ್ತಿದ್ದರು. ಒಂದು ವೇಳೆ ಪೋರ್ತುಗೀಸರಿಗೆ ಕೆಳದಿ ಅರಸನು ಕೋಟೆಗಳನ್ನು ಹಿಂತಿರುಗಿಸಿದರೆ ಕೆಳದಿ ರಾಜ್ಯದ ಮೇಲೆ ಯುದ್ಧ ಮಾಡುವೆವೆಂದು ಡಚ್ಚರು ಬೆದರಿಸುತ್ತಿದ್ದರು. ಅದೇ ರೀತಿಯಾಗಿ ಅವರು ಬಸ್ರೂರಿಗೆ ಎರಡು ಯುದ್ಧ ನೌಕೆಗಳನ್ನು ಕಳುಹಿಸಿದರು. ಅದರ ಉದ್ದೇಶವು ಸಂಪೂರ್ಣವಾಗಿ ಪೋರ್ತುಗೀಸರಿಗೆ ಕೋಟೆಗಳು ಸಿಗದಂತೆ ಮಾಡಿದ್ದಾಗಿದೆ ಎಂದು ಅಲ್ಲಿನ ಜನರು ಆಡಿಕೊಳ್ಳುತ್ತಿದ್ದರೆಂದು ಭಟ್ಕಳದಲ್ಲಿರುವ ಇಂಗ್ಲಿಷ್ ಭಂಡಸಾಲೆಯ ಪ್ರತಿನಿಧಿ ಟೈಲರ್ ಸೂರತ್ ಕೌನ್ಸಿಲ್‌ಗೆ ವರದಿ ಮಾಡಿದ್ದನು.[೨೫] ಕೆಳದಿ ರಾಜರ ವ್ಯಾಪಾರ ಪ್ರತಿನಿಧಿ ನಾರಾಯಣ ಮಲ್ಯನು ಗೋವೆಯಲ್ಲಿರುವ ಪೋರ್ತುಗೀಸ ವೈಸರಾಯಿಗೆ ಬರೆದ ಪತ್ರದಲ್ಲಿ ಡಚ್ಚರು ಬಂಡೆದ್ದ ಪಾಳೆಯಗಾರ ಮತ್ತು ಮಲಬಾರು ನಾಯರ ಸಹಾಯದಿಂದ ಕೆಳದಿ ರಾಜ್ಯದ ಮೇಲೆ ದಾಳಿ ಮಾಡುವುದಾಗಿ ಬೆದರಿಕೆ ಹಾಕುವುದನ್ನು ತಿಳಿಸಿದ್ದಾನೆ.[೨೬] ಈ ರಾಜಕೀಯ ಗೊಂದಲದ ಸ್ಥಿತಿಯನ್ನು ಅರಿತು ಶಿವಾಜಿ ಬಸ್ರೂರಿನ ಮೇಲೆ ದಾಳಿ ಮಾಡಿದನು.

**ದಾಳಿಯ ಉದ್ದೇಶ :** ಶಿವಾಜಿಯ ಬಸ್ರೂರಿನ ದಾಳಿಯ ಉದ್ದೇಶವೇನೆಂಬುದನ್ನು ಇಲ್ಲಿ ತಿಳಿಯುವ ಅಗತ್ಯವಿದೆ. ಬಸ್ರೂರು ಕೆಳದಿ ನಾಯಕರ ಆಧಿಪತ್ಯದಲ್ಲಿದ್ದುದರಿಂದ, ಇಲ್ಲಿನ ದಾಳಿ ಕೆಳದಿ ನಾಯಕರ ವಿರುದ್ಧವಾಗಿದ್ದಿತೆಂದು ಅಭಿಪ್ರಾಯಪಡುವವರಿದ್ದಾರೆ. ಆದರೆ ಈ ಅಭಿಪ್ರಾಯಕ್ಕೆ ಯಾವ ಐತಿಹಾಸಿಕ ದಾಖಲೆಗಳೂ ಸಮರ್ಥನೆ ನೀಡುವುದಿಲ್ಲ. ಕೆಳದಿ ಅರಸರ ಚರಿತ್ರೆಯನ್ನು ತಿಳಿಸುವ ಕೆಳದಿ ಬಸವರಾಜ. ಮತ್ತು

---

೨೩. ಡಬ್ಲ್ಯು. ಫೊಸ್ಟರ್, ಅದೇ ಗ್ರಂಥ p, 347, ಕಾರವಾರದಿಂದ ಸೂರತ್‌ಗೆ ತಾ. 8-8-1664 ರಲ್ಲಿ ಬರೆದ ಪತ್ರ.

೨೪. ಭಟ್ಕಳದಿಂದ ಟೈಲರ್‌ರು ತಾ. 7-11-1664 ರಲ್ಲಿ ಸೂರತ್ ಕೌನ್ಸಿಲಗೆ ಬರೆದ ಪತ್ರ. ಡಬ್ಲ್ಯು. ಫೊಸ್ಟರ್: ಅದೇ–ಗ್ರಂಥ p, 349

೨೫. ಇದೇ ಪತ್ರ ಇದೇ ಗ್ರಂಥಕರ್ತರ ಇದೇ ಗ್ರಂಥದಲ್ಲಿ p, 349

೨೬. ನಾರಾಯಣ ಮಲ್ಯನು ಗೋವೆಯಲ್ಲಿರುವ ಪೋರ್ತುಗೀಸ ವೈಸರೊಯಿಗೆ ಬರೆದ ಪತ್ರ ಇದು ತಾ. 25-11-1664 ಅಲ್ಲಿ ಬರೆಯಲ್ಪಟ್ಟಿತು ಡಾ. ಬಿ. ಎಸ್. ಶಾಸ್ತ್ರಿ *The Portuguese in Kanara-1498-1763* ಅಪ್ರಕಟಿತ ಪ್ರಬಂಧ.

ಲಿಂಗಣ್ಣ ಕವಿಯಿಂದ ರಚಿಸಲ್ಪಟ್ಟ "ಶಿವತತ್ವ ರತ್ನಾಕರ" ಮತ್ತು "ಕೆಳದಿ ನೃಪವಿಜಯ" ಶಿವಾಜಿಯ ದಾಳಿಯನ್ನು ಪ್ರಸ್ತಾಪಿಸುವುದೇ ಇಲ್ಲ. ಆದ್ದರಿಂದ ಈ ದಾಳಿ ಕೆಳದಿ ಅರಸರ ವಿರುದ್ಧವಲ್ಲವೆಂದು ಅಭಿಪ್ರಾಯಪಡಬಹುದು. ಹಾಗಾದರೆ ಕೊಳ್ಳೆ ಹೊಡೆಯುವ ಉದ್ದೇಶವೇ? ಈ ದಾಳಿಯಿಂದ ಶಿವಾಜಿಯು ವಿಪರೀತ ಹಣವನ್ನು ದೋಚಿಕೊಂಡು ಹೋಗಿದ್ದನೆಂದು ವಿದೇಶೀಯ ದಾಖಲೆಗಳು ತಿಳಿಸುವುದರಿಂದ ಈ ಅಭಿಪ್ರಾಯಕ್ಕೆ ಆಧಾರ ವಿದೆ. ಈ ದಾಳಿಪೂರ್ವದ ಶಿವಾಜಿಯ ಚಟುವಟಿಕೆಗಳನ್ನು ಅರಿತರೆ ಇದರ ಉದ್ದೇಶ ವನ್ನು ತಿಳಿಯಬಹುದು. ವಿದೇಶೀ ದಾಖಲೆಗಳ ಪ್ರಕಾರ ಕ್ರಿ. ಶ. ೧೬೬೪ರ ವರೆಗೆ ಶಿವಾಜಿಯು ಆದಿಲ್‌ಶಾಹಿ ಆಡಳಿತದ ದುಃಸ್ಥಿತಿಯ ಲಾಭ ಪಡೆದು ದಕ್ಷಿಣ ಕೊಂಕಣ ದಲ್ಲಿದ್ದ ವಿಜಾಪುರ ಸುಲ್ತಾನರ ಆಶ್ರಿತ ಪಾಳೆಯಗಾರರನ್ನು ಸದೆಬಡಿದು ತನ್ನ ವರ್ಚ ಸ್ಸನ್ನು ಇಲ್ಲಿ ಹೆಚ್ಚಿಸಿಕೊಳ್ಳುತ್ತಿದ್ದನು. ಇವನ ಪ್ರಾಬಲ್ಯವನ್ನು ವೀಕ್ಷಿಸುತ್ತಿದ್ದ ಪೋರ್ಚು ಗೀಸರು ಗಾಬರಿಯಾದರು. ದಕ್ಷಿಣ ಕೊಂಕಣದಲ್ಲಿದ್ದ ಆದಿಲ್‌ಶಾಹಿ ಪಾಳೆಯಗಾರರು ಶಿವಾಜಿಯ ದಾಳಿಯನ್ನು ತಾಳಲಾಗದೆ ಪೋರ್ಚುಗೀಸರ ರಾಜ್ಯವಾದ ಗೋವೆಗೆ ಪಲಾ ಯನ ಮಾಡಿ ಅಲ್ಲಿಂದ ಸೈನ್ಯ ಕಟ್ಟಿ, ಶಿವಾಜಿಯ ರಾಜ್ಯದ ಮೇಲೆ ಆಗಿಂದಾಗ್ಗೆ ದಾಳಿ ಮಾಡುತ್ತಿದ್ದರು. ಈ ಚಟುವಟಿಕೆಗಳು ಪೋರ್ಚುಗೀಸ ರಾಜ್ಯದಿಂದ ಬರುತ್ತಿದ್ದುದರಿಂದ ಇದರಲ್ಲಿ ಪೋರ್ಚುಗೀಸರ ಕೈವಾಡವಿದೆ ಎಂದು ತಿಳಿದು ಶಿವಾಜಿಯು ಪೋರ್ಚುಗೀಸ ವೈಸ ರಾಯಿಗೆ ಆಗಿಂದಾಗ್ಗೆ ಪ್ರತಿಭಟನೆ ಕಳುಹಿಸುತ್ತಿದ್ದನೆಂದು ಪೋರ್ಚುಗೀಸ ದಾಖಲೆಗಳನ್ನು ಅಭ್ಯಸಿಸಿದ ಡಾ. ಜೆ. ಎನ್. ಸರಕಾರರು ತಮ್ಮ "ಶಿವಾಜಿ ಮತ್ತು ಅವನ ಸಮಕಾಲ" ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ.[೨೭] ಇದೇ ಸಮಯದಲ್ಲಿ ಡಚ್ಚರ ಭಂಡಸಾಲೆಯಿರುವ ವೆನಗೊರಲಾವನ್ನು ಶಿವಾಜಿ ಕೊಳ್ಳೆ ಹೊಡೆದು ಅಪಾರ ದ್ರವ್ಯಗಳನ್ನು ದೋಚಿಕೊಂಡ ಹೋದನೆಂದು ತಿಳಿದಿದೆ.[೨೮] ಇಷ್ಟಲ್ಲದೆ ಇವನು ಪೋರ್ಚುಗೀಸ ಮತ್ತು ಡಚ್ಚರನ್ನು ಆಗಿಂದಾಗ್ಗೆ ಬೆದರಿಸುತ್ತಿದ್ದನು.[೨೯] ಪೋರ್ಚುಗೀಸರು ಈ ಕಾಲದಲ್ಲಿ ಬೊಂಬಾಯಿಯನ್ನು ಇಂಗ್ಲಿಷರಿಗೆ ಕೊಡ ಮಾಡುವುದರಲ್ಲಿ ದೀರ್ಘವಾಗಿ ಆಲೋಚಿಸುತ್ತಿದ್ದುದರಿಂದ ಶಿವಾ ಜಿಯು ಈ ಚಟುವಟಿಕೆಗಳ ಮೇಲೆ ಹೆಚ್ಚಿನ ನಿಗ ಇಡಲಿಲ್ಲ.[೩೦] ಅಲ್ಲದೆ ಈ ಮೊದಲೇ ತಿಳಿಸಿ ದಂತೆ ಶಿವಾಜಿಯು ಬಸ್ರೂರಿನ ರಾಜಕೀಯ ಸ್ಥಿತಿಗತಿಗಳನ್ನು ಅಲ್ಲಿನ ಡಚ್ಚ ಪೋರ್ಚುಗೀ ಸರು ವ್ಯಾಪಾರದ ಪ್ರತಿಸ್ಪರ್ಧೆಯನ್ನೂ ತಿಳಿದುಕೊಂಡಿದ್ದನು. ಗೋವೆಗೆ ಬಸ್ರೂರು ಮತ್ತು ಇನ್ನಿತರ ಕನ್ನಡ ಕರಾವಳಿ ಬಂದರುಗಳಿಂದ ಧಾರಾಳವಾಗಿ ಅಕ್ಕಿ, ಕರಿಮೆಣಸುಗಳು ಬರುತ್ತಿದ್ದವು.[೩೧] ಇದನ್ನು ತಡೆಗಟ್ಟಿದರೆ ಪೋರ್ಚುಗೀಸ ಮತ್ತು ಡಚ್ಚರನ್ನು ಸುಲಭವಲ್ಲಿ

---

೨೭. J. N. Sarkar: *Shivaji And His Times* (1952 Edition p. 234-350)
೨೮. ಇದೇ ಗ್ರಂಥಕರ್ತರ- ಇದೇ ಗ್ರಂಥ (1929 ರ ಮುದ್ರಣ) p. 234
೨೯. ಶೆಜ್ವಳಕರ ಅದೇ ಲೇಖನ ಅದೇ ಪತ್ರಿಕೆ p, 140 (T. S. Shejwalkar)
೩೦. ಲೇಖಕರು : " "
೩೧. ಡಬ್ಲ್ಯು ಫೋಸ್ಟರ್; ಅದೇ ಗ್ರಂಥ p, 342, ಗೋವಾದಿಂದ ತಾ. *1-4-1664* ರಲ್ಲಿ ಬರೆದ ಪತ್ರ.ಡಾ. ಬಿ. ಎಸ್. ಶಾಸ್ತ್ರಿ: ಕೆಳದಿ ಅರಸರೂ ಹಾಗೂ ಪೋರ್ಚುಗೀಸರು. p, *116*

ತನ್ನ ಹಿಡಿತಕ್ಕೆ ತರಬಹುದೆಂದು ನಿಶ್ಚಯಿಸಿದ ಶಿವಾಜಿ ಗೋವೆಯನ್ನು ದಾಳಿ ಮಾಡದೆ ಅವರ ವ್ಯಾಪಾರ ಕೇಂದ್ರವಾದ ಬಸ್ರೂರನ್ನು ದಾಳಿ ಮಾಡಿರುವುದು ಅವನ ರಾಜಕೀಯ ಮುತ್ಸದ್ದಿತನವನ್ನು ತೋರಿಸುತ್ತದೆ. ಬಸ್ರೂರು ದಾಳಿಯಲ್ಲಿ ಶಿವಾಜಿ ಮತ್ತು ಪೋರ್ತುಗೀಸರು ಮೈತ್ರಿಯಲ್ಲಿದ್ದರೆಂಬ ಡಾ॥ ಸೇನರ ವ್ಯಾಖ್ಯಾನ[೩೨]ದಲ್ಲಿ ಹುರುಳಿಲ್ಲವೆಂದು ಮೇಲೆ ತಿಳಿದ ದಾಖಲೆಗಳಿಂದ ತಿಳಿಯಬಹುದು.

**ಶಿವಾಜಿ ಬಸ್ರೂರಿನಲ್ಲಿ :** ಶಿವಾಜಿಯು ಇಲ್ಲಿನ ಚಟುವಟಿಕೆಗಳ ಕುರಿತಾಗಿ ಇಂಗ್ಲಿಷ್ ಮತ್ತು ಡಚ್ಚರ ಕಾಗದ ಪತ್ರಗಳಿಂದ ಹೆಚ್ಚಿನ ವಿವರಗಳು ತಿಳಿಯುತ್ತವೆ. ಫೆಬ್ರವರಿ ಆರಂಭದಲ್ಲಿ ಶಿವಾಜಿಯು ೮೫ ಫ್ರೀಗೇಟರ್ (Frigater) ಮೂರು ದೊಡ್ಡ ನೌಕೆಯೊಂದಿಗೆ ಮಲವನ್‌ನಿಂದ ಹೊರಟು ಯಾರ ಆತಂಕವಿಲ್ಲದೆ ಬಸ್ರೂರಿನ ಮೇಲೆ ದಾಳಿ ಮಾಡಿ ಅಲ್ಲಿರುವ ಅಮೂಲ್ಯ ವಸ್ತುಗಳನ್ನು ಮತ್ತು ದ್ರವ್ಯಗಳನ್ನು ಸೂರೆ ಮಾಡಿ ತಾ. ೧೩ರಂದು ಗೋಕರ್ಣಕ್ಕೆ ಬಂದನೆಂದು ಇಂಗ್ಲಿಷ್ ಭಂಡಸಾಲೆಯ ಒಂದು ಪತ್ರ ತಿಳಿಸುತ್ತದೆ.[೩೩] ಈ ನೌಕಾದಾಳಿಯ ಕುರಿತಾಗಿ ಡಚ್ ದಾಖಲೆ ಈ ರೀತಿ ತಿಳಿಸುತ್ತದೆ: ಜನವರಿ ಅಂತ್ಯದ ವರೆಗೆ ಈ ದಂಗೆಕೋರ (Rebel) ಶಿವಾಜಿ ಯಾವ ಸಾಹಸಕ್ಕೆ ಕೈ ಹಾಕಲಿಕ್ಕಿಲ್ಲವೆಂದು ತಿಳಿದಿದ್ದೆವು. ಆದರೆ ಫೆಬ್ರವರಿ ೧೮ನೆಯ ದಿನ ಈ ದಂಗೆಕೋರ ೫೦ ಫ್ರೀಗೇಟರ್. ಮೂರು ಸಣ್ಣ ಯುದ್ಧ ನೌಕೆ, ೪೦೦೦ ನಾವಿಕರೊಂದಿಗೆ ಮಲವನದಿಂದ ದಕ್ಷಿಣಕ್ಕೆ ತೆರಳಿದನೆಂದು ನಮಗೆ ತಿಳಿಯಿತು. ಆದರೆ ಇವನು ಯಾವ ಕಾರಣಕ್ಕಾಗಿ ಮತ್ತು ಯಾರ ವಿರುದ್ಧವಾಗಿ ಈ ನೌಕೆಗಳೊಂದಿಗೆ ತೆರಳಿದನೆಂಬುದು ತಿಳಿಯಲಾಗಲಿಲ್ಲ. ಆದರೆ ಇವನು ಗೋವೆಯ ದಕ್ಷಿಣಕ್ಕೆ ತೆರಳಿರುವುದರಿಂದ ಕನ್ನಾನೂರಿಗೋ ಯಾ ಮಲಬಾರು ರಾಜ್ಯದ ಕಡೆಗೋ ಹೋಗಿರಬಹುದೆಂದು ನಾವು ಮೊದಲು ತಿಳಿದುಕೊಳ್ಳಲು ಅವಕಾಶವಿದ್ದಿತು. ಆದರೆ ಮಾರ್ಚ್ ೩ರಲ್ಲಿ ಇವನು ಕನ್ನಡ ಕರಾವಳಿಯಲ್ಲಿರುವ ಬಸ್ರೂರಿನ ಮೇಲೆ ದಾಳಿ ಮಾಡಿದ ವಿಷಯ ನಾವು ಆಶ್ಚರ್ಯದಿಂದ ತಿಳಿದೆವು. ಇಲ್ಲಿರುವ ನಮ್ಮ ರೆಸಿಡೆಂಟ (Resident) ಬ್ಯುರಿಯುನ ಪತ್ರದಂತೆ ಶಿವಾಜಿಗೆ ೩೦೦ ಸಾವಿರ ಗಿಲ್ಡರ್ (Gilder) ನಾಣ್ಯ ಸಿಕ್ಕಿದಲ್ಲದೆ ಅವನು ಏಳು ಮಂದಿ ಭಾರಿ ಶ್ರೀಮಂತ ವರ್ತಕರನ್ನು ವಶಪಡಿಸಿಕೊಂಡು ಹೋದನೆಂದು ತಿಳಿದು ಬಂತು. ಆದರೆ ಇಲ್ಲಿ ಇವನಿಗೆ ೮೦೦ ಸಾವಿರಕ್ಕೂ ಹೆಚ್ಚಿನ ಗಿಲ್ಡರ್ ನಾಣ್ಯ ಸಿಕ್ಕಿರಬಹುದೆಂದು ಇಲ್ಲಿನ ಜನರು ಆಡಿಕೊಳ್ಳುತ್ತಾರೆ. ಇಷ್ಟೆಲ್ಲಾ ಸಿಕ್ಕರೂ ಇವನು ಇದರಿಂದ ತೃಪ್ತಿ ಪಡಲಿಲ್ಲ. ಇವನ ಶೌರ್ಯವೇ

---

೩೨. ಡಾ. ಎಸ್. ಎನ್. ಸೇನ್ (Dr. S. N. Sen) *Military System of The Maratha* p. 162,

೩೩. ಕಾರವಾರದಿಂದ ಸೂರತಕ್ಕೆ ತಾ. 14-3-1665 ರಲ್ಲಿ ಬರೆದ ಪತ್ರ. ಡಬ್ಲ್ಯು. ಫೋಸ್ಟರ್: ಅದೇ ಗ್ರಂಥ 1665-67 ಪು. 71. *J. Grant Duff–History of The Maratha* ಪು. 91. ಜೆ. ಎನ್. ಸರಕಾರ ಅದೇ ಗ್ರಂಥ ಪು. 238. (1929 ರ ಮುದ್ರಣ)

ಇಲ್ಲಿನ ಯಶಸ್ಸಿಗೆ ಮುಖ್ಯ ಕಾರಣ.[೩೪] ಮರಾಠರ ಚಾರಿತ್ರಿಕ ದಾಖಲೆ ಜಡೇಶಕಾವಳಿ. ಇವನ ಬಸ್ರೂರದಾಳಿ ಮಾಘಮಾಸದಲ್ಲಾಯಿತು ಎಂದು ತಿಳಿಸಿದೆ.[೩೫] ಇವರ ಇನ್ನೊಂದು ಸಾಹಿತ್ಯವಾದ ಶಬಶಾದ ಬಖ್ಯಾರ ಇವನ ಬಸ್ರೂರ ದಾಳಿ ಬೆಳಿಗ್ಗೆ ಅನಿರೀಕ್ಷಿತವಾಗಿ ನಡೆಯಿತೆಂದು ತಿಳಿಸಿದೆ.[೩೬] ಈ ದಾಳಿ ಫೆಬ್ರುವರಿ ೧೩ ಯಾ ೧೪ ರಲ್ಲಿ ನಡೆಯಿತೆಂದು ಶೆಜ್ವಳಿಕರರು ಅಭಿಪ್ರಾಯಪಟ್ಟರೆ ಸರ್ ದೇಸಾಯಿಯವರು ಇದು ಫೆಬ್ರುವರಿ ೮ರಲ್ಲಿ ನಡೆಯಿತೆಂದು ತಿಳಿಸಿದ್ದಾರೆ.[೩೭] ಇದರಲ್ಲಿ ಸರ್ ದೇಸಾಯಿಯವರ ಅಭಿಪ್ರಾಯವು ಸಮರ್ಪಕವಾಗಿದೆ ಎನ್ನಬಹುದು. ಏಕೆಂದರೆ ಕಾರವಾರದಲ್ಲಿರುವ ಇಂಗ್ಲಿಷ್ ಭಂಡಸಾಲೆಯ ಪತ್ರವು ಶಿವಾಜಿಯು ಫೆ. ೧೩ ರಂದು ಗೋಕರ್ಣ ತಲ್ಪಿದನೆಂದು ಉಲ್ಲೇಖಿಸುತ್ತದೆ. ಬಸ್ರೂರಿನಿಂದ ಗೋಕರ್ಣಕ್ಕೆ ೧೨೦ ಮೈಲು ಅಂತರವಿದೆ. ಸಮುದ್ರದಲ್ಲಿ ಈ ಯಾನಕ್ಕೆ ಕನಿಷ್ಟಪಕ್ಷ ಮೂರು ಯಾ ನಾಲ್ಕು ದಿವಸಗಳು ಬೇಕೇ ಬೇಕು.

ಈ ನೌಕಾ ದಾಳಿಯು ಕಾಲದಲ್ಲಿ ಶಿವಾಜಿಯನ್ನು ಯಾರೂ ಎದುರಿಸಿದ ವಿಷಯ ಯಾವ ಸಮಕಾಲೀನ ದಾಖಲೆಗಳೂ ತಿಳಿಸದ ಕಾರಣ ಇದು ಯಶಸ್ವಿಯಾಗಿ ನಡೆದಿರಬೇಕೆಂದು ತಿಳಿದರೆ ತಪ್ಪಾಗದು. ಈ ನೌಕಾ ದಂಡಯಾತ್ರೆಯಲ್ಲಿ ಒಂದು ವಿಷಯ ಗಮನಿಸಬೇಕು. ಸಮುದ್ರಯಾನದಲ್ಲಿ ಬಸ್ರೂರಿಗೆ ಹೋಗುವ ಹಾದಿ ಸುಗಮವಾಗಿಲ್ಲ. ಈ ದಾರಿಯಲ್ಲಿ ಅಲ್ಲಲ್ಲಿ ಬಂಡೆಕಲ್ಲುಗಳು, ಅಳಿವೆ ಭಾಗದಲ್ಲಿ ಹೊಯ್ಗೆ ಬೀಳುತ್ತಾ ಇರುವುದಲ್ಲದೆ ಬಸ್ರೂರು ಅಳಿವೆ ಭಾಗದಿಂದ ನಾಲ್ಕು ಮೈಲು ಒಳಗಿದೆ. ಹಲವಾರು ಕುದುರುಗಳು ಮಧ್ಯದಲ್ಲಿವೆ. ಶಿವಾಜಿಯು ಈ ಭೌಗೋಲಿಕ ತೊಡಕುಗಳನ್ನು ಎದುರಿಸಿ ಬೆಳಿಗ್ಗೆ ಬಸ್ರೂರು ತಲುಪಿದನೆಂದು ಹೇಳುವಾಗ ಇವನಿಗೆ ಇಲ್ಲಿನ ಜನರ ಸಹಕಾರ ದೊರಕಿರಬೇಕೆಂಬ ಶೆಜ್ವಳಿಕರರ ಊಹೆಗೆ ಆಧಾರವಿದೆ. ಅದೇ ಸಮಯದಲ್ಲಿ ಶಿವಾಜಿಯ ಪೂರ್ವ ಯೋಜಿತ ಕಾರ್ಯಕ್ರಮ ಮತ್ತು ರಾಜಕೀಯ ಮುತ್ಸದ್ದಿತನವು ಮೆಚ್ಚತಕ್ಕದ್ದು. ಯಾವ ಪೂರ್ವ ಯೋಜನೆಯಿಲ್ಲದೆ ಶಿವಾಜಿಯು ಅತಿ ಶೀಘ್ರದಲ್ಲಿ ಸಾಹಸಮಯವಾದ ಇಂತಹ ಕೆಲಸವನ್ನು ಮಾಡುವುದು ಅಸಾಧ್ಯ. ಅಲ್ಲದೆ ಇದಕ್ಕೆ ಸ್ಥಳೀಯ ಸಹಕಾರವೂ ಅತಿ ಅಗತ್ಯವಾಗಿದೆ. ಈಗಲೂ ಈ ಪ್ರದೇಶವನ್ನು ರಾತ್ರಿ ಸಂಚರಿಸುವುದು ಕಷ್ಟ. ಈ ದಾಳಿಯಲ್ಲಿ ಶಿವಾಜಿಯು ಇಲ್ಲಿನ ಬಟ್ಟೆಗಳು. ದವಸಧಾನ್ಯ. ಚಿನ್ನ. ಇತರ ಲೋಹಗಳು, ಮಸಾಲೆ ಸಾಮಾನುಗಳು, ಮತ್ತು ಕುದುರೆಗಳು ಇವುಗಳನ್ನೆಲ್ಲಾ ದೋಚಿಕೊಂಡು ಹೋದನೆಂದು ತಿಳಿಯುವಾಗ ಇವನ ನಾವಿಕರ ದಕ್ಷತೆ ಹಾಗೂ ಸಾಮರ್ಥ್ಯ ಎಷ್ಟರ

೩೪. ಡಚ್ಚರ ರಿಕಾರ್ಡು: ಇದರ ಆಂಗ್ಲಭಾಷೆಯ ಅನುವಾದ ಡಾ. ಬಾಲಕೃಷ್ಣರ *Shivaji the Great* Vol. I, ಪು. 543-544

೩೫. ಜಡೇ ಶಕಾವಳಿ H, G, Rawlinson and Pattawardhana; *Source Book of Maratha History P. 34*

೩೬. ಟಿ. ಆರ್. ಶೆಜ್ವಳಕರ; ಅದೇ ಲೇಖನ, ಅದೇ ಪತ್ರಿಕೆ P. 142.

೩೭. ಸರ್ ದೇಸಾಯಿ, ಅದೇ ಗ್ರಂಥ Vol, I 153,

ಬಹುದೆಂದು ನಾವು ತಿಳಿಯಬಹುದು. ಇಲ್ಲಿನ ಮಹಾಲಿಂಗೇಶ್ವರ ದೇವಸ್ಥಾನದ ಸಂಪತ್ತನ್ನು ಶಿವಾಜಿ ದೋಚಿರಲಿಕ್ಕಿಲ್ಲ. ಏಕೆಂದರೆ ಇವನ ಜೀವನ ಚರಿತ್ರೆಯಲ್ಲಿ ಎಲ್ಲೂ ದೇವಾಲಯಗಳನ್ನು ಕೊಳ್ಳೆ ಹೊಡೆದ ದಾಖಲೆಗಳು ಸಿಗುವುದಿಲ್ಲ. ಅಲ್ಲದೆ ಸಮಕಾಲೀನ ದಾಖಲೆಗಳೂ ಆ ಬಗ್ಗೆ ಸಮರ್ಥನೆ ನೀಡುವುದಿಲ್ಲ. ಆದ್ದರಿಂದ ಶಿವಾಜಿ ಇಲ್ಲಿನ ವಿದೇಶೀ ವರ್ತಕರ ಐಶ್ವರ್ಯವನ್ನು ದೋಚಲಿಕ್ಕಾಗಿಯೇ ಬಂದಿರಬೇಕು. ಈ ದಾಳಿಯಲ್ಲಿ ಪರಕೀಯ ಪ್ರಾಬಲ್ಯವನ್ನು ಮುರಿಯುವುದೇ ಅವನ ನಿಜವಾದ ಉದ್ದೇಶ. ಈ ದಾಳಿಯ. ನಂತರ ಶಿವಾಜಿಯು ಹಿಂತಿರುಗಿ ಹೋಗುವಾಗ ಭಟ್ಕಳ ಮತ್ತು ಹೊನ್ನಾವರ ಬಂದರುಗಳನ್ನು ದಾಳಿ ಮಾಡುವುದಾಗಿ ಮುನ್ಸೂಚನೆಯನ್ನು ಕೊಟ್ಟಿದ್ದನು.[೩೮] ಆದರೆ ಈ ದಾಳಿಯ ಬಗ್ಗೆ ಯಾವ ಪುರಾವೆಗಳೂ ಸಿಕ್ಕಿಲ್ಲ.

**ಪರಿಣಾಮ :** ಫೆಬ್ರವರಿಯ ಶಿವಾಜಿಯ ಈ ನೌಕಾ ದಾಳಿಯು ಇವನ ನೌಕಾ ಜೀವನದ ಸಂಧಿಕಾಲ.ಇದು ಶಿವಾಜಿಯ ಧೈರ್ಯ ಮತ್ತು ಸಾಹಸದ ಪ್ರಥಮ ಹೆಜ್ಜೆ. ಇಲ್ಲಿ ಕೊಳ್ಳೆ ಹೊಡೆದ ಸಂಪತ್ತು ಇವನ ಆಕಸ್ಮಿಕ ದಾಳಿ ಹಾಗೂ ಸಾಮರ್ಥ್ಯದ ಪ್ರತಿಫಲ. ಎಂದು ಬಿ. ಕೆ. ಆಪ್ಟೆ ಕೊಂಡಾಡಿದ್ದಾರೆ.[೩೯] ಆದರೆ ಈ ಘಟನೆಯು ಕನ್ನಡ ಕರಾವಳಿಯ ರಾಜಕೀಯ ಮತ್ತು ಆರ್ಥಿಕ ಸ್ಥಿತಿ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಈ ದಾಳಿಯ ನಂತರವೂ ಬಸ್ರೂರು ಉತ್ತಮ ರೀತಿಯ ವ್ಯಾಪಾರ ಕೇಂದ್ರವಾಗಿತ್ತೆಂದು ಕ್ರಿ. ಶ. ೧೭೨೦ರಲ್ಲಿ ಬಂದ ಇಂಗ್ಲೀಷ್ ಪ್ರವಾಸಿ ಅಲೆಕ್ಸಾಂಡರ್ ಹೆಮಿಲ್ಟನ್ ತನ್ನ ವರದಿಯಲ್ಲಿ ಬರೆದಿದ್ದನು.[೪೦] ಈ ದಾಳಿಯ ಪರಿಣಾಮವಾಗಿ ಕನ್ನಡ ಕರಾವಳಿಯಲ್ಲಿ ವ್ಯಾಪಾರ ಮಾಡಿಕೊಂಡಿದ್ದ ಇಂಗ್ಲೀಷರು ಮರಾಠರ ಉಪಟಳವನ್ನು ಆಗಿಂದಾಗ್ಗೆ ಎದುರಿಸಬೇಕಾಯಿತು. ಈ ದಾಳಿಯಿಂದ ಮರಾಠಿಗರಿಗೆ ತಮ್ಮ ನೌಕಾ ದಳದ ಸಾಮರ್ಥ್ಯತೆಯ ಬಗ್ಗೆ ಆತ್ಮ ವಿಶ್ವಾಸ ಹೆಚ್ಚಿತು.

## ಉಪಸಂಹಾರ :

ಶಿವಾಜಿಯ ಈ ನೌಕಾ ದಾಳಿಯ ಪರಿಶೀಲನೆಯಿಂದ ನಾವು ಈ ಕೆಳಗಿನ ಅಭಿಪ್ರಾಯ ಪಡೆಯಬಹುದು.

೧. ಶಿವಾಜಿಯು ಬಸ್ರೂರಿನ ದಾಳಿಯ ಪೂರ್ವದಲ್ಲಿಯೇ ನೌಕೆಗಳನ್ನು ಕಟ್ಟಿ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದನು.

---

೩೮. D. V. Kale (Edited), *English Records on Shivaji* Vol, I; P. 107,

೩೯. B. K, Apte, *The Beginning of Maratha Navy*, Published in the *Bulletin of Deccan College Poona*, June 1941-p. 404

೪೦. Alexander Hamilton: *New Account* of East India, Vol 1930 Edition, p. 159.

೨. ಈ ದಾಳಿಯ ಕಾಲದಲ್ಲಿ ಬಸ್ರೂರು ಕರ್ನಾಟಕದ ಪ್ರಮುಖ ವಿದೇಶೀಯರ ವ್ಯಾಪಾರ ಕೇಂದ್ರವಾಗಿತ್ತು. ಪೋರ್ತುಗೀಸರು ಮತ್ತು ಡಚ್ಚರು ಇಲ್ಲಿನ ವ್ಯಾಪಾರವನ್ನು ತಮ್ಮ ತಮ್ಮ ವಶಕ್ಕೆ ತರಲು ಪೈಪೋಟಿ ನಡೆಸುತ್ತಿದ್ದರು. ಇಲ್ಲಿನ ಸಾರ್ವಭೌಮರಾದ ಕೆಳದಿ ರಾಜ್ಯದ ಆಸ್ಥಾನದಲ್ಲಿ ರಾಜಕೀಯ ಗೊಂದಲವಿದ್ದಿತ್ತು.

೩. ಶಿವಾಜಿಯು ಕೊಳ್ಳೆ ಹೊಡೆಯುವ ಮತ್ತು ಪರದೇಶಿ ವರ್ತಕರನ್ನು ಶಿಕ್ಷಿಸುವ ಇರಾಧೆಯಿಂದ ಬಸ್ರೂರನ್ನು ದಾಳಿ ಮಾಡಿದನು. ಈ ದಾಳಿಯಿಂದ ಕನ್ನಡ ಕರಾವಳಿಯ ರಾಜಕೀಯ ಮತ್ತು ಆರ್ಥಿಕ ಸ್ಥಿತಿಯಲ್ಲಿ ಯಾವ ಬದಲಾವಣೆ ತಾರದಿದ್ದರೂ, ಇದು ಮರಾಠರಿಗೆ ತಮ್ಮ ನೌಕಾ ಬಲದ ಮೇಲೆ ಆತ್ಮ ವಿಶ್ವಾಸ ವನ್ನುಂಟು ಮಾಡಲು ಸಹಾಯವಾಯಿತು. ಇಷ್ಟಲ್ಲದೇ ಇದು ಶಿವಾಜಿ ಕೈಕೊಂಡ ನೌಕಾ ಸಾಹಸಗಳಲ್ಲಿ ಮುಖ್ಯವಾದುದು ಮತ್ತು ಈ ಪ್ರದೇಶದಲ್ಲಿ ಇವನು ನಡೆಸಿದ ಪ್ರಥಮ ಹಾಗೂ ಕೊನೆಯ ದಾಳಿ.

# ಸಹಕಾರಿ

**ದೊಡ್ಡಬಾಣಗೆರೆ ಪ್ರಕಾಶಮೂರ್ತಿ**

ಬಾಳಿನ ಸಾಗರದ ದಡ
ಹತ್ತಿ ಇಳಿದು ನೊಂದು–ಬೆಂದ
ನಾನು
ಕಬ್ಬಿಣದ ರಜಕಗಳಾದರೆ
ಅವಳು
ಹರುಷದ ಆಯಸ್ಕಾಂತ

ಕಪ್ಪು–ಬಿಳುಪು ವರ್ಣದ
ನೋವು–ನಲವುಗಳ ಛಾಯೆಯ
ಅರಳಿದ ಹೂ
ನಾನು ಆದರೆ
ಅವಳು
ಮೋಹಿಬಿದ್ದು ಮಧು ಹೀರುವ ದುಂಬಿ

ಹೀಗೆ…
ನೋವುಗಳಿಗೆ ಟಾನಿಕ್ಕು
ಬಾಳಗಾಡಿಗೆ ಚಕ್ರ
ಬದುಕಿನ ದೀಪಕ್ಕೆ ಬತ್ತಿ
ಜೀವನ ನೌಕೆಗೆ ಹರಿಗೋಲು, ಆಗಿ
—ಎಲ್ಲದಕ್ಕೂ ಅವಳು ಸಹಕಾರಿ
ಅವಳೇ ಬಾಳಿನ ಬೆಳಕು
ಒಂದರಲ್ಲಿ ಏನು ಎಲ್ಲದರಲ್ಲೂ ಹೊಂದಿಕೊಂಡಿರುತ್ತಾಳೆ.
ಸ್ಕೂಟರೇರಿದಾಗ ಹಿಂದೆ ಹಾರಿ
ಅಪ್ಪಿಕೊಂಡು ಕುಳಿತುಕೊಳ್ಳುತ್ತಾಳೆ.

# ಅನ್ಯಭಾಷಾ ಬೋಧನೆ
# ೨. ನೇರಪದ್ಧತಿ

**ವಿಲ್ಸಂ ಮಾಡ್ರ**

ಅನ್ಯ ಭಾಷೆಯನ್ನು ಕಲಿಸುವಲ್ಲಿ ವ್ಯಾಕರಣ–ಭಾಷಾಂತರ ಪದ್ಧತಿ ವಿಫಲವಾಗಿರುವುದೇ ನೇರಪದ್ಧತಿಯ ಜನನಕ್ಕೆ ಕಾರಣವಾಯಿತೆನ್ನಬಹುದು. ಹಿಂದಿನ ಪದ್ಧತಿಯಲ್ಲಿದ್ದ ಲೋಪದೋಷಗಳನ್ನು ತೊಡೆದು ಹಾಕಲು ಪ್ರಸ್ತುತ ಪದ್ಧತಿಯಲ್ಲಿ ಪ್ರಯತ್ನ ಮಾಡಲಾಗಿದೆ.

ನೇರ ಪದ್ಧತಿಯ ಪ್ರಕಾರ ಅನ್ಯಭಾಷೆಯನ್ನು ಕಲಿಸುವಲ್ಲಿ ಸ್ವಭಾಷೆಯ ಬಳಕೆ ಮಾಡಲಾಗದು. ಸಮಾಜಸಂಪರ್ಕದ ತಳಹದಿಯ ಮೇಲೆ ಸಂದರ್ಭ ಸನ್ನಿವೇಶಗಳ ಹಿನ್ನೆಲೆಯಲ್ಲಿ ಪರಭಾಷೆಯನ್ನು ಕಲಿಸುವುದು ಇಲ್ಲಿಯ ವೈಶಿಷ್ಟ್ಯ. Language is learned in contact as well as in context. Infact the situational element is the very fabric of the Direct Method ಎಂಬ Kehoe Monika ಅವರ ಮಾತು ನೇರಪದ್ಧತಿಯ ತಿರುಳನ್ನು ತಿಳಿಸುತ್ತದೆ.

ಭಾಷೆ ಒಂದು ಕಲಿತ ಕ್ರಿಯೆ. ಆದುದರಿಂದ ಚಿಕ್ಕ ಮಗು ಹೇಗೆ ಭಾಷೆಯನ್ನು ಅನುಕರಣದ ಮೂಲಕ ಕಲಿಯುತ್ತದೆಯೊ ಹಾಗೆಯೇ ವಯಸ್ಕರೂ ಕೂಡಾ ಅನ್ಯ ಭಾಷೆಯನ್ನು ಕಲಿಯುವಲ್ಲಿ ಅನ್ಯಭಾಷಿಕರನ್ನು ಅನುಕರಿಸಿ ಕಲಿಯುತ್ತಾರೆ ಎಂಬ ನಂಬಿಕೆ ಈ ಪದ್ಧತಿಗೆ ಅಡಿಪಾಯರೂಪವಲ್ಲಿದೆ. ಕಾರಣ ಇಲ್ಲಿ ಅನುಕರಣೆಗೆ ಹೆಚ್ಚಿನ ಪ್ರಾಧಾನ್ಯತೆ.

ನೇರಪದ್ಧತಿಯಲ್ಲಿ ಸ್ವಭಾಷೆಗಾಗಲಿ ಭಾಷಾಂತರಕ್ಕಾಗಲಿ ಸ್ಥಾನವಿಲ್ಲ. ಭಾಷೆಯನ್ನು ಕಲಿಸುವಲ್ಲಿ ಆ ಭಾಷೆಗೆ ಸಂಬಂಧಪಟ್ಟ ಸಂಸ್ಕೃತಿಯ ಹಿನ್ನಲೆಯಲ್ಲಿ ತಕ್ಕುದಾದ ಸಂದರ್ಭ ಸನ್ನಿವೇಶಗಳನ್ನು ಕಲ್ಪಿಸಿ ಪಾಠಹೇಳುತ್ತಾರೆ. ಉದಾಹರಣೆಗೆ ತೆಂಗಿನ ಕುರಿತು ಪಾಠ ಮಾಡುವಾಗ ಪ್ರತ್ಯಕ್ಷವಾಗಿ ವಿದ್ಯಾರ್ಥಿಗಳನ್ನು ತೆಂಗಿನ ತೋಟಕ್ಕೆ ಕರೆದೊಯ್ದು ಅಥವಾ ತೆಂಗಿನ ಚಿತ್ರವನ್ನು ತೋರಿಸಿ ಅಥವಾ ಸ್ಲೈಡು. ಚಲನಚಿತ್ರ ಮುಂತಾದ ಸಾಧನಗಳ ಸಹಾಯದಿಂದ ವಿಷಯಜ್ಞಾನಮಾಡುವ ಜೊತೆಗೆ ಅನ್ಯಭಾಷಾ ಬಳಕೆಯನ್ನೂ ಕಲಿಸುತ್ತಾರೆ.

ಇಂಗ್ಲೀಷಿನಲ್ಲಿ ಕ್ರಿಸ್ತ–ಜಯಂತಿಯ ಹಬ್ಬದ ಕುರಿತುಪಾಠ ಹೇಳಬೇಕಾಗಿದೆ ಎಂದಿಟ್ಟುಕೊಳ್ಳೋಣ. ಇದನ್ನು ಸಾಧಿಸುವುದಕ್ಕೆ ನೇರಪದ್ಧತಿಯವರು ಕ್ರಿಸ್ತ–

ಜಯಂತಿಯ ಚಿತ್ರವನ್ನೊ ಚಲನಚಿತ್ರವನ್ನೊ ತೋರಿಸುತ್ತಾರೆ. ವಿದ್ಯಾರ್ಥಿಗಳು ತಮ್ಮ ಬಾಹ್ಯ ಜ್ಞಾನೇಂದ್ರಿಯಗಳ ಮೂಲಕ ಆ ಹಬ್ಬದ ಹಿನ್ನೆಲೆಯ ಸಂಸ್ಕೃತಿಯನ್ನು ತಿಳಿದು ಕೊಳ್ಳುತ್ತಿರುವಾಗಲೇ ಸಾಂತಾಕ್ಲೋಸ್, ಕ್ರಿಸ್‌ಮಸ್ ಟ್ರೀ. ಹಿಮ ಇವುಗಳ ಬಗ್ಗೆ ವಿವರಣೆ ಕೊಡುತ್ತಾರೆ. We must experince language, live in it, not merely understand it ಎಂಬ F. L. Billows ಇವರ ಮಾತನ್ನು ಇಲ್ಲಿ ಸ್ಮರಿಸಿ ಕೊಂಡರೆ ಅನ್ಯಭಾಷಾ ಅಧ್ಯಾಪನವಲ್ಲಿ ನೇರಪದ್ಧತಿಯ ಮಹತ್ವವನ್ನು ಅರಿತುಕೊಳ್ಳ ಬಹುದು.

ಪ್ರಸ್ತುತ ಪದ್ಧತಿಯ ಪ್ರಕಾರ ವ್ಯಾಕರಣವನ್ನು ಭಾಷೆಯಿಂದ ಪ್ರತ್ಯೇಕಿಸುವುದಿಲ್ಲ; ಪಾರಿಭಾಷಿಕ ಶಬ್ದಗಳ ಗೊಂದಲವೂ ಇಲ್ಲಿ ಕಾಣುವುದಿಲ್ಲ. ಸಂದರ್ಭೋಚಿತ ವಾಕ್ಯಗಳ ಕೊಟ್ಟು 'ವ್ಯಾಕರಣ' ಎಂಬ ಪರಿಜ್ಞಾನವನ್ನು ಉಂಟುಮಾಡದೆ ಸಹಜವಾಗಿ ಅವನ್ನು ಕಲಿಸುತ್ತಾರೆ. ಉದಾಹರಣೆಗೆ:

| | |
|---|---|
| ಅವನು ಬರುತ್ತಾನೆ | ಅವರು ಬರುತ್ತಾರೆ |
| ಅವಳು ಬರುತ್ತಾಳೆ | ಅವರು ಬರುತ್ತಾರೆ |
| ಅದು ಬರುತ್ತದೆ | ಅವು ಬರುತ್ತವೆ |

ಇಂತಹ ವಾಕ್ಯಗಳನ್ನು ಒಂದೆಡೆ ಹಾಕಿದಾಗ ವಿದ್ಯಾರ್ಥಿಗಳಿಗೆ 'ಅವನು' ಮತ್ತು 'ಅವಳು' ಇವುಗಳ ಬಹುವಚನರೂಪ 'ಅವರು' ಎಂದೂ ಅದಕ್ಕೆ ಸಂವಾದಿಯಾಗಿ ಕ್ರಿಯಾ ಪದದಲ್ಲಿ ಕಾಲ ಪ್ರತ್ಯಯದ ಬಳಿಕ–ಅನೆ–ಆಳೆ ಪ್ರತ್ಯಯಗಳ ಬದಲು–ಆರೆ ಪ್ರತ್ಯಯ ವನ್ನೂ–ಅದೆ ಪ್ರತ್ಯಯದ ಬದಲು–ಅವೆ ಪ್ರತ್ಯಯವನ್ನು ಬಳಸಬೇಕೆಂದೂ ತಿಳಿಯು ತ್ತದೆ. ಹೀಗೆ ಕಾಲಕ್ರಮೇಣ ಅವರು ಸಹಜವಾಗಿ ಕನ್ನಡದ ವ್ಯಾಕರಣ ನಿಯಮ ಗಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವನ್ನು ಗಳಿಸಿಕೊಳ್ಳುತ್ತಾರೆ.

ಒಂದು ಭಾಷೆಯನ್ನು ಕಲಿಸುತ್ತಿರುವಾಗಲೇ ವ್ಯಾಕರಣವನ್ನು ಹೊಯ್‌ಕೈಯಾಗಿ ಕಲಿಸುವುದು ನೇರಪದ್ಧತಿಯ ವೈಶಿಷ್ಟ್ಯ; The emphasis of the Direct Method, thus, is on speaking the language and learning the formal grammer as a by-product of the effort to learn the spokan form–ಎಂದು ಎ. ಚಂದ್ರಶೇಖರ್ ಅವರು ಹೇಳಿದ ಮಾತನ್ನು ಇಲ್ಲಿ ಗಮನಿಸಬೇಕು.

ಅನ್ಯಭಾಷೆಯನ್ನು ಕಲಿಸುವಲ್ಲಿ ವಸ್ತುಗಳೊಡನೆ ನೇರ ಸಂಪರ್ಕವನ್ನಿಡಲು ಸಾಧ್ಯ ವಾಗದ ವೇಳೆಯಲ್ಲಿ ಚಿತ್ರ. ಪಟ, ನಕಾಶೆ. ಸಿನೆಮಾ, ಟೆಲಿವಿಷನ್ ಮುಂತಾದ ಅಧ್ಯಾಪನ ಉಪಕರಣಗಳನ್ನು ಬಳಸುತ್ತಾರೆ. ಉದಾಹರಣೆಗೆ 'ನಾಯಿ ಬರುತ್ತದೆ' ಎಂಬ ವಾಕ್ಯವನ್ನು ಉಚ್ಚರಿಸುವಾಗ ರಜತಪರದೆಯ ಮೇಲೆ ನಾಯಿ ಬರುತ್ತಿರುವುದನ್ನು ತೋರಿ ಸುತ್ತಾರೆ. ವಿದ್ಯಾರ್ಥಿಯು ಅದನ್ನು ನೋಡುತ್ತಿರುವಾಗ ಆತ 'ನಾಯಿ ಬರುತ್ತದೆ'

ಎಂಬ ಮಾತನ್ನು ಕೇಳುತ್ತಾನೆ ಮಾತ್ರವಲ್ಲದೆ ತಾನೂ ಆ ವಾಕ್ಯವನ್ನು ಉಚ್ಚರಿ-ಸುತ್ತಾನೆ. ಹೀಗೆ ಏಕಕಾಲದಲ್ಲಿ ಮೂರು ನಾಲ್ಕು ಜ್ಞಾನೇಂದ್ರಿಯಗಳನ್ನು ಉಪಯೋಗಿಸಿಕೊಂಡು ವಸ್ತುಗಳೊಡನೆ ಸಂಪರ್ಕವನ್ನಿಟ್ಟುಕೊಂಡು ಭಾಷಾ–ಪ್ರಯೋಗಗಳನ್ನು ಕಲಿತುಕೊಳ್ಳುತ್ತಾನೆ. ಒಂದಕ್ಕಿಂತ ಹೆಚ್ಚು ನಾಯಿಗಳನ್ನು ತೋರಿಸಿ 'ನಾಯಿಗಳು ಬರುತ್ತವೆ' ಎಂದು ಹೇಳಲು ಕಲಿಸಿದಾಗ '-ಗಳು' ಎಂಬುದು ಬಹುವಚನರೂಪ; ಈ ರೂಪ ಬಂದಾಗ ಕ್ರಿಯಾಪದದಲ್ಲಿ ಯಾವ ವ್ಯತ್ಯಾಸವಾಗುತ್ತದೆ ಎಂಬ ಅರಿವು ವಿದ್ಯಾರ್ಥಿಗೆ ಸಹಜವಾದ ರೀತಿಯಲ್ಲಿ ಆಗುತ್ತದೆ. ಹೀಗೆ ವ್ಯಾಕರಣವು ಭಾಷೆ-ಯೊಂದಿಗೆ ಹಾಸು ಹೊಕ್ಕಾಗಿ ಬರುವುದರಿಂದ ನಿರಾಯಾಸವಾಗಿ ವ್ಯಾಕರಣ ಪ್ರಯೋಗಗಳನ್ನೂ ಭಾಷೆಯನ್ನೂ ಆತ ಕಲಿಯಬಲ್ಲ.

ನೇರಪದ್ಧತಿಯನ್ನು ಬಳಸಿಕೊಂಡು ಬರೆದಿರುವ ಪಠ್ಯಪುಸ್ತಕಗಳ ಆರಂಭದಲ್ಲಿ ಭಾಷಾಧ್ವನಿಗಳ ವಿವರಣೆ, ಧ್ವನಿಮಾಗಳ ವಿವೇಚನೆ ಹಾಗೂ ಉಚ್ಚರಣಾ ಸೂಚನೆಗಳು ಇರುತ್ತವೆ. ಪಾಠಗಳನ್ನು ಭಾಷೆಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ರಚಿಸಿರುತ್ತಾರೆ. ಭಾಷೆಯ ಕಲಿಸುವಿಕೆಯನ್ನು ಅರ್ಥವತ್ತಾಗಿ, ಸುಲಭವನ್ನಾಗಿ ಮಾಡಲು, ಆಸಕ್ತಿಯನ್ನು ಕೆರಳಿಸಲು ಯೋಗ್ಯ ಚಿತ್ರಗಳನ್ನು ಕೊಟ್ಟಿರುತ್ತಾರೆ.

ಪಾಠಗಳನ್ನು ಕಲಿಸುವಲ್ಲಿ ಮೊದಲು ಆಡುಮಾತಿಗೆ ಪ್ರಾಶಸ್ತ್ಯವನ್ನಿತ್ತು, ಬಳಿಕ ಬರವಣಿಗೆಗೆ ಗಮನವನ್ನು ಕೊಟ್ಟು ಭಾಷೆಯ ಸಾಹಿತ್ಯಿಕ ರೂಪಗಳನ್ನು ಕಡೆಯದಾಗಿ ಕಲಿಸುತ್ತಾರೆ. ದೈನಂದಿನ ಜೀವನದ ಸಂಗತಿಗಳಾದ ಮನೆ, ಆಹಾರ, ಊಟ, ಆಟ, ನಗರ, ಹಳ್ಳಿ, ಪ್ರಯಾಣ, ಪ್ರವಾಸ, ಗೆಳತಿಗೆ ಪತ್ರ, ವಿಮಾನ ನಿಲ್ದಾಣಕ್ಕೆ ಭೇಟಿ, ಸ್ವಾತಂತ್ರ್ಯ ದಿನಾಚರಣೆ, ಸಂತೆ ಇತ್ಯಾದಿ ವಿಷಯಗಳನ್ನು ಆಧಾರಗಳನ್ನಾಗಿ ಇಟ್ಟುಕೊಂಡು ಪಾಠಗಳನ್ನು ರೂಪಿಸುತ್ತಾರೆ.

ಕ್ಲಾಸುಗಳಲ್ಲಿ ವಿದ್ಯಾರ್ಥಿಗಳಿಂದ ಪಾಠಗಳನ್ನು ಗಟ್ಟಿಯಾಗಿ ಓದಿಸಿ ಸರಿಯಾದ ಉಚ್ಚಾರಣೆಯನ್ನು ಕಲಿಸುತ್ತಾರೆ. ವಿದ್ಯಾರ್ಥಿಗಳು ಪಠ್ಯಪುಸ್ತಕದ ವಾಕ್ಯಗಳನ್ನು ಸ್ವಭಾಷೆಗೆ ಭಾಷಾಂತರಿಸಲು ಈ ಪದ್ಧತಿಯಲ್ಲಿ ಅವಕಾಶವಿಲ್ಲ. ಪ್ರಶ್ನಾವಳಿ ಹಾಗೂ ಚರ್ಚೆಯ ಮೂಲಕ ವಿಷಯಗಳನ್ನು ಅವರು ತಿಳಿದುಕೊಳ್ಳಬೇಕು. ತಾವು ಕ್ಲಾಸಿನಲ್ಲಿ ಕಲಿತ ಪಾಠಗಳ ಮತ್ತು ನಡೆಯಿಸಿದ ಚರ್ಚೆಯ ಸಾರಾಂಶವನ್ನು ಕೊಡುವುದರ ಮೂಲಕ ವಿದ್ಯಾರ್ಥಿಗಳು ಬರಹ ನೈಪುಣ್ಯವನ್ನು ಪಡೆದುಕೊಳ್ಳುತ್ತಾರೆ.

ನೇರಪದ್ಧತಿಯಲ್ಲಿ ಮೆಚ್ಚತಕ್ಕ ಅಂಶವೆಂದರೆ ಭಾಷಾ ಉಚ್ಚಾರಣಕ್ಕೆ ಕೊಟ್ಟಿರುವ ಮಹತ್ವ. ಹಾಗೆಯೇ ಭಾಷೆ ಕಲಿಯುವಲ್ಲಿ ಎಲ್ಲ ಜ್ಞಾನೇಂದ್ರಿಯಗಳನ್ನು ಏಕಕಾಲದಲ್ಲಿ ಬಳಸುವ ಕ್ರಮ. ಇದರಿಂದಾಗಿ ವಿದ್ಯಾರ್ಥಿಗೆ ಆಡುನುಡಿಯು ಶೀಘ್ರವಾಗಿ ತಿಳಿದು ಭಾಷೆಯ ನೈಜಸ್ವರೂಪ ಅರ್ಥವಾಗುತ್ತದೆ. ಸಂದರ್ಭ ಸಿಕ್ಕಿದ ಹಾಗೆ ಸಮಾಜದಲ್ಲಿ ಬೆರೆಯಲು ಇಲ್ಲಿ ಪ್ರೋತ್ಸಾಹವಿರುವುದರಿಂದ ಭಾಷೆಯನ್ನು ಸುಲಭವಾಗಿ ನಿರರ್ಗಳವಾಗಿ ಕಲಿತು

ಕೊಳ್ಳಬಹುದು. ಸನ್ನಿವೇಶಗಳನ್ನು ಕಲ್ಪಿಸಿ ಭಾಷೆಯನ್ನು ಕಲಿಸುವುದರಿಂದ ವಿದ್ಯಾರ್ಥಿಗೆ ಯಾವ ಪದಗಳನ್ನು ಯಾವಾಗ ಬಳಸಬೇಕೆಂಬ ಪರಿಜ್ಞಾನ ಬರುತ್ತದೆ. ಭಾಷೆಯನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಲಿಸುವುದರಿಂದಾಗಿ ಕಲಿತುದನ್ನು ಜ್ಞಾಪಕದಲ್ಲಿಡಲು ಸುಲಭವಾಗುತ್ತದೆ. ಸ್ವಭಾಷೆಯನ್ನು ದೂರವಿಟ್ಟು ಅನ್ಯಭಾಷೆಯನ್ನೇ ಬಳಸುವುದರಿಂದ ಮಾತಾಡುವಲ್ಲಿ ಹಾಗೂ ಅರ್ಥಗ್ರಹಣಮಾಡುವಲ್ಲಿ ವಿದ್ಯಾರ್ಥಿ ಹೆಚ್ಚಿನ ಪ್ರಭುತ್ವವನ್ನು ಪಡೆಯುತ್ತಾನೆ.

ಮೇಲಿನ ಅಂಶಗಳನ್ನು ಗಮನಿಸಿದರೆ ನೇರಪದ್ಧತಿ ಭಾಷಾಂತರ ಪದ್ಧತಿಗಿಂತ ಹೆಚ್ಚು ಪರಿಣಾಮಕಾರಿಯಾದುದು ಎಂದು ತಿಳಿಯಬಹುದು. ಆದರೆ ಒಂದು ನಾಣ್ಯಕ್ಕೆ ಎರಡು ಮುಖಗಳಿರುವಂತೆ ಈ ಪದ್ಧತಿಯಲ್ಲಿ ಕೂಡಾ ಒಳಿತುಗಳ ಜೊತೆಗೆ ಕೆಡುಕುಗಳೂ ಇವೆ.

ಪ್ರಥಮತಹ. ಕಲಿಯುತ್ತಿರುವ ಭಾಷಾ ರಚನೆಯ ಸಂಪೂರ್ಣ ಪರಿಚಯವಾಗುವುದರ ಮೊದಲೇ ವಿದ್ಯಾರ್ಥಿ ತನ್ನ ಅಭಿಪ್ರಾಯಗಳನ್ನು ಅಭಿವ್ಯಕ್ತಪಡಿಸಲು ಅವಕಾಶ ಕಲ್ಪಿಸಿಕೊಡುವುದು ಸರಿಯೆನಿಸುವುದಿಲ್ಲ. ಮಗು ಭಾಷೆಯನ್ನು ಕಲಿಯುವುದಕ್ಕೂ ಪ್ರೌಢರು ಕಲಿಯುವುದಕ್ಕೂ ಇರುವ ವ್ಯತ್ಯಾಸವೇ ಇದಕ್ಕೆ ಕಾರಣ. ವಯಸ್ಕರಿಗೆ ಸ್ವಭಾಷೆಯಲ್ಲದೆ ಹಲವು ಅನ್ಯಭಾಷೆಗಳು ಗೊತ್ತಿರುವ ಸಾಧ್ಯತೆ ಇರುವುದರಿಂದ ಅವುಗಳ ಪ್ರಭಾವದಿಂದಾಗಿ ಹೊಸ ಭಾಷೆ ಕಲಿಯುವಲ್ಲಿ ಎಷ್ಟೋ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಕಾರಣ ಅನ್ಯ ಭಾಷಾರಚನೆಯನ್ನು ಸ್ವಭಾಷಾರಚನೆಯೊಡನೆ ತೌಲನಿಕವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಆದ್ದರಿಂದ ಅನ್ಯಭಾಷೆಯನ್ನು ಕಲಿಯುವ ಆರಂಭದಲ್ಲಿಯೇ ಅದನ್ನು ಪರಸ್ಪರ ಸಂಪರ್ಕಕ್ಕೋಸ್ಕರ ಅತಿಯಾಗಿ ಬಳಸಲು ಅವಕಾಶ ಪನ್ನೀಯುವುದು ಹಿತಕರವಲ್ಲ.

ಮಗು ಭಾಷೆ ಕಲಿಯುವುದಕ್ಕೂ ಪ್ರೌಢರು ಭಾಷೆ ಕಲಿಯುವುದಕ್ಕೂ ಇನ್ನೊಂದು ಮಹತ್ವವಾದ ವ್ಯತ್ಯಾಸ ಯಾವುದೆಂದರೆ ಎಳೆಯರಿಗೆ ಹೊಸಭಾಷೆ ಕಲಿಯುವಲ್ಲಿ ಇರುವಷ್ಟು ಉತ್ಕಟತೆ ಬೆಳೆದವರಿಗೆ ಇರುವುದಿಲ್ಲ. ತಮ್ಮ ಅವಶ್ಯಕತೆಗಳನ್ನು ಪೂರಯಿಸುವುದಕ್ಕೋಸ್ಕರ ಈ ಮೊದಲೇ ಒಂದು ಭಾಷೆಯನ್ನು ಅವರು ಅರಿತಿರುವುದೇ ಇದಕ್ಕೆ ಕಾರಣ. ಅದುದರಿಂದ ಭಾಷೆಯನ್ನು ತೀವ್ರಗತಿಯಲ್ಲಿ ಕಲಿಸುವುದಾಗಲಿ ಅಥವಾ ಹೆಚ್ಚಿನ ವಿಷಯಗಳನ್ನು ಅತ್ಯಲ್ಪಕಾಲದಲ್ಲಿ ಕಲಿಸುವುದು ಸರಿಯಲ್ಲ.

ನೇರ ಪದ್ಧತಿಯಲ್ಲಿ ಸನ್ನಿವೇಶಗಳನ್ನು ಕಲ್ಪಿಸಿ ಶಿಕ್ಷಣ ಸಾಧನಗಳನ್ನು ಬಳಸಿ ಭಾಷೆಯನ್ನು ಕಲಿಸುತ್ತಾರಷ್ಟೆ. ಈ ರೀತಿಯ ಪಾಠಗಳಿಂದ ಎಳೆಯರಿಗೆ ಆಗುವ ಆನಂದ, ಸಿಗುವ ಉತ್ಸಾಹ ಪ್ರೌಢರಿಗೆ ಆಗುವುದಿಲ್ಲ. ಚಲನ ಚಿತ್ರದಲ್ಲಿ ಒಂದು ಬೆಕ್ಕನ್ನು ನೋಡಿದರೆ ಮಗು ಆನಂದೋತ್ಸಾಹಗಳಿಂದ ಚೇತನನಾಗಿ "ಅದು ಏನು?" "ಅದು ಏನು ಮಾಡುತ್ತದೆ?" ಎಂಬೀ ಹಲವಾರು ಪ್ರಶ್ನೆಗಳನ್ನು ಕುತೂಹಲದಿಂದ ಕೇಳುತ್ತದೆ. ತನ್ಮೂಲಕ

ಚೆಕ್ಕಿನ ಬಗ್ಗೆ ಹೆಚ್ಚಿನ ವಿಷಯವನ್ನು ತಿಳಿಯುವಲ್ಲಿ ಯಶಸ್ವಿಯಾಗುವುದು. ಆದರೆ ಅದೇ ಚೆಕ್ಕನ್ನು ಪ್ರೌಢರು ನೋಡಿದರೆ ಅವರಲ್ಲಿ ಇಂತಹ ಆಸಕ್ತಿ ಹುಟ್ಟುವುದಿಲ್ಲ: ಅವರ ಕುತೂಹಲ ಕೆರಳುವುದಿಲ್ಲ. ಏಕೆಂದರೆ ಚೆಕ್ಕಿನ ಬಗ್ಗೆ ಅಂತೆಯೇ ಹಲವಾರು ವಿಷಯಗಳ ಬಗ್ಗೆ ಆಗಾಗಲೇ ಹೆಚ್ಚಿನ ಮಾಹಿತಿಯನ್ನು ಜ್ಞಾನವನ್ನು ಅವರು ಪಡೆದಿರುತ್ತಾರೆ. ಆದಕಾರಣ ಚಿತ್ರ ಇತ್ಯಾದಿಗಳ ಮೂಲಕ ಭಾಷೆಯನ್ನು ಕಲಿಯುವಲ್ಲಿ. ಪ್ರೌಢರು ಹೆಚ್ಚಿನ ಮಟ್ಟಿಗೆ ಅಸಮರ್ಥರು.

ಪ್ರಸ್ತುತ ಪದ್ಧತಿಯ ಪಠ್ಯಪುಸ್ತಕಗಳಲ್ಲಿ ಕೆಲವೇ ಕೆಲವು ದೈನಂದಿನ ಸಂಗತಿಗಳನ್ನು ಆಧರಿಸಿ ಪಾಠಗಳನ್ನು ರಚಿಸಿರುವುದರಿಂದ ಭಾಷೆಯ ಕ್ಲಿಷ್ಟ ರಚನೆಯ ಬಗ್ಗೆ ಸಂಪೂರ್ಣ ಜ್ಞಾನವನ್ನೀಯುವುದು ದುಸ್ಸಾಧ್ಯವಾಗಿದೆ. ಕಾರಣ ಭಾಷೆಯನ್ನು ಬೇಕಾದ ಹಾಗೆ ಅಳವಡಿಸುವ ಶಕ್ತಿ ದೊರಕದು; ಶೈಲಿಯನ್ನು ಬೆಳೆಯಿಸುವುದಾಗಲಿ. ಸಾಹಿತ್ಯ ನಿರ್ಮಾಣ ಮಾಡುವುದಾಗಲಿ ಕಷ್ಟಸಾಧ್ಯವಾಗುವುದು. ಇವನ್ನು ನೋಡಿದಾಗ "Mere casual conversation of the pure 'Direct Method' type causes a tremendous waste of time and effort" ಎಂಬ Robert Hall (Jr.) ಅವರ ಮಾತು ಸಂಪೂರ್ಣ ಸತ್ಯವೆನಿಸುತ್ತದೆ.

ಈ ಎಲ್ಲಾ ಕುಂದುಕೊರತೆಗಳಿಂದಾಗಿ ನೇರಪದ್ಧತಿಯು ಪ್ರೌಢರಿಗೆ ಅನ್ಯಭಾಷೆಯನ್ನು ಕಲಿಸಲು ಅಷ್ಟು ಸಮಂಜಸವಲ್ಲವೆಂದು ಹೇಳಬಹುದು. ಆದರೆ ಅನ್ಯಭಾಷಾ ಅಧ್ಯಾಪನ ಪದ್ಧತಿಗಳಲ್ಲಿ ವ್ಯಾಕರಣಭಾಷಾಂತರ ಪದ್ಧತಿಗಿಂತ ಅದು ತನ್ನ ಸ್ಥಾನವನ್ನು ಮೇಲ್ಮಟ್ಟದಲ್ಲಿ ಕಾಯ್ದುಕೊಂಡಿದೆನ್ನುವುದು ಸತ್ಯದ ಮಾತು.

(ಮುಂದುವರಿಯುವುದು)

# ಗ್ವಾಲಣ್ಣನ ವೀರಗಾಥಾ

ಸಂ : ಬಿ. ಆರ್. ಸುರಪುರ

ಉದಯಽ ವ್ಯಾಳ್ಯಾದಿ ಗ್ವಾಲಽ । ನದಿಯ ನೀರಲಿ ಜಳಕಽ
ನದಿಯ ನೀರಲಿ ಜಳಕಽ । ಹರಿಯ ನಾಮವ ಹಚ್ಚಿ।
ಗರಡ್ಯಿಽಯ ಮನೆಯಲ್ಲಿ ಸಾಮಸಗತ್ಯಿಽಯ ಮಾಡಿ ।
ಹಿಂಗಾಣಿ ಮುಂಗಾಣಿ ಒಗಿತಾನೊ ಗ್ವಾಲಯ್ಯ॥

ಅಲ್ಲಿಂದಽ ಹಡದವ್ವ ಹುಡುಕ್ಯಽತ ಹೊರಟಾಳೆ।
ಅಲ್ಲಿಂದ ಹಡವವ್ವ ಹುಡುಕ್ಯಽತ ಹೊರಟಾಳೆ।
"ವನಕಾಯೊ ಅಣದೋರೆ। ಕುರಿಕಾಯೋ ತಮದೋರೆ
ನಮ್ಮ ಗ್ವಾಲಣ್ಣನಽ ನೋಡಿರೇನ್ ಹಡದಪ್ಪಽ"
"ನಿಮ್ಮ ಗ್ವಾಲಣ್ಣನಽ ನೋಡಿಲ್ಲ ಹಡದವ್ವಽ"॥

ಅಲ್ಲಿಂದ ಹಡದವ್ವ ಮುಂದ್ಯಾಽಕ ನಡದಾಳೆ।
"ಆಡ್(ಡು) ಕಾಯೋ ಅಣ್ಣಗಳಿರಾ। ಮರಿಕಾಯೋ ತಮ್ಮಗಳಿರಾ
ನಮ್ಮ ಗ್ವಾಲಣ್ಣನಽ ನೋಡಿರೇನಪ್ಪಗಳಿರಾ"॥
"ನಿಮ್ಮ ಗ್ವಾಲಣ್ಣನಽ ನೋಡಿಲ್ಲ ಹಡದವ್ವಽ"॥

ಅಲ್ಲಿಂದ ಹಡದವ್ವ ಮುಂದ್ಯಾಽಕ ನಡದಾಳೆಽ।
ಮುಂದಾಕ ನಡದಾಳಽ। ಅಡವೀಯ ಬಿದ್ದಾಳೆ।
ಅಟ್ಟಂಬಾರಣದಡವಿ ಬಿದ್ದಾಳೋ ಹಡದವ್ವ
ಅಲ್ಲಿಯ ಒಬ್ಬಾನ ಕುರುಬಾನ ಕಂಡಾಳೆ।
"ಕುರಿಕಾಯೋ ಅಣ್ಣದೋರೆ। ಮರಿಕಾಯೋ ತಮದೋರೆ
ನಮ್ಮ ಗ್ವಾಲಣ್ಣನ ನೋಡಿದೇನ್ ಹಡದಪ್ಪ"॥
"ಅಲ್ಲಿಲ್ಲ ಇಲ್ಲಿಲ್ಲ ಗರಡೀಯ ಮನಿಯಲ್ಲಿ।
ಗರಡೀಯ ಮನಿಯಲ್ಲಿ ಸಾಮುಸಗತೀಯ ತಾನು ।
ಸಾಮುಸಗತಿಯ ತಾನು ಮಾಡ್ತಾನೆ ಹಡದವ್ವ
ಬಡಬಡಽ ಹೋಗವ್ವ ಗರಡೀಯ ಮನಿಗಾದರ
ಅಲ್ಲಿಂದಽ ಹೊರಿಯಾಕ ಕರೆಯವ್ವ ಗ್ವಾಲಣ್ಣನ"॥

ಬಡ ಬಡ ಹೋಗ್ಯಾಳೆ ಗರಡೀಯ ಮನ್ಯಿನಿಗಿ।
ಗರಡೀಯ ಮನ್ಯಿನಿಗಿ ಹಡದವ್ವ ಹೋಗ್ಯಾಳೆ।
'ಹೊರಗಾನೆ ನಿಂತಾಳೆ' ಅಲ್ಲಿಂದ ಕರದಾಳೆ।
ಹೊರಿಯಾಕ ಕರದಾಳೆ ಮಗನೀಗಿ ಅಂತಾಳೆ॥

"ದನ ಹೋಗಿ 'ಆರು ದಿವಸ' ಆರು ಹೋಗಿ ಮೂರು ದಿವಸ
ಆನೆಪ್ಪ ಗ್ವಾಲಣ್ಣ 'ಇಚಾರ' ಇಲ್ಲಲ್ಲ
ಸ್ವಲ್ಪಾನ 'ಈಚಾರ' ಇಲ್ಲಲ್ಲೊ ಗ್ವಾಲಣ್ಣ
ಅಲ್ಲಿಂದ ಇಬ್ಬರು ಮನ್ಯಿನಿಗಿ ಬಂದಾರೆ।
ತಾಯಿ ಮಕ್ಕಳು ಬಂದು ಮನ್ಯಿನ ಹೊಕ್ಕಾರೆ॥

ಗ್ವಾಲಣ್ಣನಾದರ ತಾಯಿಗಿ ಹೇಳ್ತಾನೆ।
ತಾಯಿಗಿ ಹೇಳತಾನ। "ನಾನಿನ್ನು ಹೊಗತೀನಿ
ನಾನಿನ್ನು ಹೊಗತೀನಿ। ಬುತ್ತೀಯ ಮಾಡವ್ವ।
ಬುತ್ತೀಯ ಮಾಡ್ಯಾಳೆ ಮಗನಿಗಿ ಕೊಟ್ಟಾಳೆ॥

ಹೋಗಿ ಬರತೀನಂತೆ ತಾಯಿಗಿ ಎರಗ್ಯಾನೆ
ತಾಯಿಗಿ ಕೇಳತಾನೆ 'ಆಶಿರಾ (ರ್ವಾ)ದ ಮಾಡಮ್ಮ।
"ಹೋಗಿ ಬಾ ಮಗ" ಎಂದು ಆಶಿರಾ(ರ್ವಾ)ದ ಮಾಡ್ಯಾಳೆ॥

ಅಲ್ಲಿಂದ ಗ್ವಾಲಣ್ಣ ನಡದಾನ ಮುಂದಾಕ।
ಊರ ಮುಂದಿರುವದು। ಹನುಮಂದೇವರ ಗುಡಿಯೋ
ಗುಡಿಯನ್ನ ಹೊಕ್ಕಾನ। ನಮಸ್ಕಾರ ಮಾಡ್ಯಾನೆ
ನಮಸ್ಕಾರ ಮಾಡ್ಯಾನ। ಹಿಂದಕ ಸರದಾನೆ
ಹಿಂದಕ ಸರದಾನ। ಹಿಂಗಾಣಿ ಮುಂಗಾಣಿ
ಹಿಂಗಾಣಿ ಮುಂಗಾಣಿ ಒಗದಾನ ಗ್ವಾಲಣ್ಣ
ಮುಂಗಾಣಿ ಒಗದಾನ ನಮಸ್ಕಾರ ಮಾಡ್ಯಾನೆ
ನಮಸ್ಕಾರ ಮಾಡ್ಯಾನ। ಮುಂದಾಕ ನಡದಾನೆ॥

ಅಲ್ಲಿಂದ ಗ್ವಾಲಯ್ಯ ಮುಂದಾಕ ನಡದಾನೆ
ಊರ ಮುಂದಿರುವದು ಅಗಸಿಯ ನೋಡ್ಯಾನೆ।
ಅಗಸಿಯ ಕಾಯೋರು। ಸೊಗಸುಳ್ಳ ಗೆಣೆದೋರು
ಸೊಗಸುಳ್ಳ ಗೆಣೆದೋರು। ಕೇಳ್ತಾರೆ ಗ್ವಾಲಣ್ಣನ॥
'ಆನೆಪ್ಪ ಗ್ವಾಲಣ್ಣ ಎಲ್ಲಿಗಿ ಹೋಗುತ್ತಿದ್ದಿ।
ಎಲ್ಲಿಗಿ ಹೋಗುತಿದ್ದಿ। ನಾವೂನು ಬರತೀವಿ'
ಗೆಳೆದೊರಗಿ ಗ್ವಾಲಣ್ಣ ನೆಪವನ್ನೇ ಹೇಳ್ಯಾನೆ।

"ಹೊಲ್ಯಕನಾದರs ಚಿಗರಿsನೆ ಬಂದಾವೆ।
ಚಿಗರಿsನ ಹೊಡಿಲಾಕ। ಹೋಗತೀನಿ ಗಣೆದೋರೆ"
"ನಾವೂನು ಆದರ ಬರ್ತೀವಿ ಗ್ವಾಲಣ್ಣ॥
"ಆಗsಲಿ ಗೆಣೆದೋರೆ ನಾಮುಂದ ಹೋಗತಿsನಿ
ಮುಂದ್ ಮುಂದs ಹೋಗತೀನಿ। ಹಿಂದ್s ಹಿಂದ ಬರ್ರೆಣ್ಣ"॥

ಅಲ್ಲಿಂದ ಗ್ವಾಲಣ್ಣ ಮುಂದಾಕ ನಡದಾನೆ
"ದನಕಾಯೋ ಅಣದೋರೆ। ಕರಕಾಯೋ ತಮುಗಳಿರಾ
ನಮ್ಮ ದನಗಳ ನಿsವು ನೋಡಿದರೇನ್ ಹಡದಪ್ಪ"
'ನಿಮ್ಮ ದನಗಳ ನಾವs ನೋಡಿಲ್ಲ ಗ್ವಾಲಣ್ಣ।

ಅಲ್ಲಿಂದ ಗ್ವಾಲಣ್ಣ ಮುಂದಾಕ ನಡದಾನೆ
ಅಲ್ಲಿದ್ದ ಒಬ್ಬಾನೆs ಆಡುಕಾಯೊs ಅಣ್ಣಾನೋ

"ಆಡ್‌ಕಾಯೋ ಅಣ್ಣದೋರೆ। ಮರಿಕಾಯೋ ತಮ್ಮದೋರೆ
ನಮ್ಮ ದನಗಳ ನೀವು ನೋಡಿರೇನ್ ಹಡದಪ್ಪ"
'ನಿಮ್ಮ ದನಗಳ ನಾನು ನೋಡಿಲ್ಲೋ ಗ್ವಾಲಣ್ಣ"॥

ಅಲ್ಲಿಂದ ಗ್ವಾಲಣ್ಣ ಮುಂದಾಕ ನಡದಾನೆ।
ಮುಂದಾಕ ನಡದಾನ। ಅಡವೀಯು ಬಿದ್ದಾನೆ।
ಅಟ್ಟಿಂಬಾರಣದಡವಿ ಬಿದ್ದಾನೆ ಗ್ವಾಲಣ್ಣ।
ಅಲ್ಲಿಯು ಒಬ್ಬಾನ ಕುರುಬಾನ ಕಂಡಾನೆ।
"ಕುರಿಕಾಯೋ ಅಣ್ಣಗಳಿರಾ। ಮರಿಕಾಯೊ ತಮ್ಮಗಳಿರಾ।
ನಮ್ಮ ದನಗಳ ನೀನು ನೋಡಿದೇನ್ ಹಡದಪ್ಪ" ।
"ಅಲ್ಲಿಲ್ಲ ಇಲ್ಲಿಲ್ಲ ಕರಿಗುಡ್ಡದ ಬ್ಯಾಡsರು
ಕರಿಗುಡ್ಡದ ಬ್ಯಾಡರು ಹೆಳ್ಳಿಟ್ಟ ಹಿಡಿಗ್ವಾಡಿ
ಹೆಳ್ಳಿಟ್ಟ ಒಡsಗ್ವಾಡಿ ಹೊಗಿಸ್ಯಾರೋ ಗ್ವಾಲಣ್ಣ"॥

ಅಲ್ಲಿಂದ ಗ್ವಾಲಣ್ಣ "ಕರಿಗುಡ್ಡಕ" ನಡದಾನೆ।
ಕರಿಗುಡ್ಡದ ಬ್ಯಾಡರು ತಯಾರ ಆಗ್ಯಾರೆ।
ತಯಾರ ಆಗ್ಯಾರ ದಂಡನ್ನ ಕೊಡಿಸ್ಯಾರೆ।
ಗ್ವಾಲಣ್ಣಗ ಹೇಳ್ತಾರೆ ಕರಿಗುಡ್ಡsದ ಬ್ಯಾಡರು
'ಲಡಾಯಿಗಾದರ ತಯಾರ ಆಗಪ್ಪ'
ದಂಡೀಗಿ ದಂಡsನ ತಯಾರ ಆಗ್ಯಾsರೆ
ಗ್ವಾಲಣ್ಣನಾದರ ಹಿಂದಾಕ ಸರದಾನೆ।

ಹಿಂದಾಕ ಸರದಾನs। ಬಟ್ಟಿsನೆ ಬಿಚ್ಚ್ಯಾನೆ
ಬಟ್ಟಿsನೆ ಬಿಚ್ಚ್ಯಾನೆ। ಹಿಂಗಾಣಿ ಮುಂಗಾಣಿ
ಹಿಂಗಾಣಿ ಮುಂಗಾಣಿ ಹೊಡದಾನ ಗ್ವಾಲಣ್ಣ
ಮುಂಗಾಣಿ ಒಗದಾನs। ದಂಡಿನಾಗ ಹೊಕ್ಕ್ಯಾನೆ।
ದಂಡಿನಾಗ ಹೊಕ್ಕ್ಯಾನ। ಲಡಾಯಿ ಮಾಡ್ಯಾನೆ।
ದಂಡೀಗಿ ದಂಡನ್ನ। ಸಫಾಯಿ ಮಾಡ್ಯಾನೆ।
ಅಲ್ಲಿಂದ ಗ್ವಾಲಣ್ಣ ಹೆಳ್ಳಿಟ್ಟು ಹಿಡಿಗ್ವಾಡಿ।
ಹಿಡಿಗ್ವಾಡಿಗಾದರs ಗ್ವಾಲಣ್ಣ ಹೋಗ್ಯಾನ।
ಹೋದವನೆ ಗ್ವಾಲಣ್ಣ ಪೆಕ್ಕಕನೆ ಒದ್ದ್ಯಾನೆ।
ಪೆಕ್ಕsನೆ ಒದ್ದ್ಯಾನ। ಬಾಗಿಲು ಮುರದಾನೆ।
ಬಾಗಿsಲು ಮುರದಾನ। ಒಳಿಯಾಕ ಹೋಗ್ಯಾನೆ।
ದನಗಳು ನೋಡ್‌ತಾವ। ಸುತ್ತ್ಯಾಲು ಮುತ್ತ್ಯಾವ।
ಸುತ್ತ್ಯsಲು ಮುತ್ತ್ಯಾವ। 'ಅಂಬಾ'ಯೆಂದಳುತಾವೆ।
ಅಲ್ಲಿಂದ ಗ್ವಾಲಣ್ಣ ದನಗಳ್ನ ಹೊಡಕೊಂಡು।
ದನಗಳ್ನ ಹೊಡಕೊಂಡು ಬರತಾನೆ ಗ್ವಾಲಣ್ಣ।
ರ್‍ಯsಕ್ತದ ಕಾವಲಿ ನೋಡ್‌ತಾವs ದನಗಳು।
ದನಗಳು ನೋಡ್ಯಾವ। ಭುಸುಗುಟ್ಟಿ ನಿಂತಾವೆ।
ಕಾವಲಿಗಿ ಬಂದಾವ। ಭುಸುಗುಟ್ಟಿ ನಿಂತಾವೆ।
ದನಗಳ ಜೊತೆಯಲ್ಲಿ ಕಾವಲಿ ಈಸ್ಯಾನೆ।
ಅಲ್ಲಿಂದ ಗ್ವಾಲಣ್ಣ ಮುಂದಾಕs ನಡದಾನೆ।
ಮುಂದು ಮುಂದೆ ಗ್ವಾಲಣ್ಣ। ಹಿಂದು ಹಿಂದೆ ದನಗೊsಳು।
ಮುಂದು ಮುಂದೆ ಗ್ವಾಲಣ್ಣ। ಹಿಂದು ಹಿಂದೆ ದನಗೊsಳು॥

× × ×

## ೨. ಎರಡನೆಯ ಭಾಗ

ಸಣಮಲ್ಲ ದೊಡ್ಡಮಲ್ಲ। ಪೂಜೀನ ಮಾಡ್ಯಾರೆ।
ಪೂಜೀನೆ ಮಾಡ್ಯಾರ। "ಕಾಳಮ್ಮ"ಗ ಬೇಡುತಾರೆ।
"ಕಾಳೆಮ್ಮ ನಿನಗಾದರ। ಕುರಿಕ್ವಾಣ ಕಡಿಶೀವಿ।
ಗ್ವಾಲಣ್ಣಗ ಇಟ್ಟೆ ್ಯೀಟು। ತಪ್ಪಬಾರದು ಕಾಳಮ್ಮ।
ನಟ್ಟನಡಹಣಿಯಾಕs। ಬಡಿಬೇಕು ಕಾಳಮ್ಮ"॥
ಹರಕೀಯ ಹೊತ್ತ್ಯಾರs। ಅಡಿವೀಯ ಬಿದ್ದ್ಯಾರೆ।
ಕಂಟೀsಯ ಸಾಲಲ್ಲಿs। ಅಡಗ್ಯಾರೋ ಬ್ಯಾಡರು।

ಅಲ್ಲಿಂದ ಗ್ವಾಲಣ್ಣ। ಮುಂದಾಕಽ ನಡದಾನೆ।
ಅಲ್ಲಿಂದ ಗ್ವಾಲಣ್ಣ। ಮುಂದಾಕು ನಡದಾನೆ।
ಮುಂದು ಮುಂದ ಗ್ವಾಲಣ್ಣ। ಹಿಂದು ಹಿಂದ ದನಗೊಽಳು।
ಮುಂದು ಮುಂದಽ ಬಂದಾನ। ಕಂಟೀಯು ಸನಿಯಾಕ
ಕಂಟೀಯು ಸನಿಯಾಕ ಬಂದಾನೆ ಗ್ವಾಲಣ್ಣ।
'ಕಾಳವ್ವ' ಆದರ ಬಡದಾಳೊ ಹಣೆಯಾಗ।
ಅಲ್ಲಿಂದ ಗ್ವಾಲಣ್ಣ ನಿಂತನ್ನ ನೋಡುತಾನೆ।
ಸಣ್ಣಿನೂಲಿನ ವಸ್ತ್ರ ಸುತ್ತ್ಯಾನೋ ಗಾಯಽಕ।
ನಿಂತಾನೆ. ನೋಡ್ಯಾನೆ, ಓಡ್ಯಾನ್ಽ ಹೋಗ್ಯಾನೆ।
ಓಡ್ಯಾನ್ನ ಹೋಗ್ಯಾನೆಽ। ಬ್ಯಾಡರ್ನ ಹಿಡದಾನೆ।
ಬ್ಯಾಡರ್ನ ಹಿಡದಾನೆಽ। ಕಾಲ್ ವ್ಯಾಲೆ ಕಾಲಿಟ್ಟು
ಕಾಲ್‌ವ್ಯಾಲೆ ಕಾಲಿಟ್ಟು। ಸೀಳ್ಯಾನೋ ಬ್ಯಾಡರ್ನ
ಸೀಳಿದ್ಸ ಹೆಣಗಳನಽ ಬೆನ್ನೀಗಿ ಕಟ್ಯಾನೆ।
ಅಲ್ಲಿಂದ ಹೊಲದಾಗ। ಹೋಗ್ಯಾನೆ ಗ್ವಾಲಣ್ಣ
ಹೊಲದಾಗ ಹೋಗ್ಯಾನ। 'ಕಾಯ್‌ಕುಳ್ಳು' ಆಯ್ವ್ಯಾನೆ
ಕಾಯ್‌ಕುಳ್ಳು ಆಯ್ವ್ಯಾನೆ 'ಕಿಚ್ಚನ್ನ ಕಾಣಿಸ್ಯಾನೆ'।
ಕಿಚ್ಚನ್ನ ಕಾಣಿಸ್ಯಾನೆ। ಮುಂದಕ್ಕ ನಡದಾನೆ।
ಮುಂದಽಕ ನಡದಾನೆ। ಊರಿಗೆ ಬರುತಾನೆ।

× × × ×

## ೩. ಮೂರನೆಯ ಭಾಗ

ಆಗಸೀಯು ಕಾಯೋರು। ಸೊಗಸುಳ್ಳ ಗೆಣೆದೋರು।
ಸೊಗಸುಳ್ಳ ಗೆಣೆದೋರು। ಕೇಳ್ಯಾರ ಗ್ವಾಲಣ್ಣನ।
"ಯಾಕಪ್ಪ ಗ್ವಾಲಣ್ಣ। ಮಾರಿಽನೆ ಬಾಡ್ಯಾದ"।
ಮಾರಿಽ ಬಾಡಿದ ಗ್ವಾಲ। ನಗುನಗುತಾ ಹೇಳುತಾನೆ।
"ಬ್ಯಾಸಿಗಿ ಬಿಸಿಲಪ್ಪ। ನೀರಡಿಕಿ ಜೋರಪ್ಪ"
ಅಲ್ಲಿಂದ ಗ್ವಾಲಣ್ಣಽ ಮುಂದಾಕ ನಡದಾನೆ।
ಊರ ಮುಂದಿರುವದು। ಹಣಮಂದೇವರ ಗುಡಿಯೋ
ಗುಡಿಽಗಿ ಬಂದಾನಽ। ನಮಸ್ಕಾರ ಮಾಡ್ಯಾನೆ
ನಮಸಾರ ಮಾಡ್ಯಾನಽ। ಮುಂದಾಕ ನಡದಾನೆ।
ಮುಂದಾಕ ನಡದಾನಽ। ಮನಿಽಗಿ ಬಂದಾನೆ।
ಮನೀಗಿ ಬಂದಾನಽ। ದನಗಳನಾದರಽ।

ದನಗಳನಾದರ ದೊಡ್ಡ್ಯಾಗ ಹೊಗಿಸ್ಯಾನೆ।
ದನಗಳನಾದರ ದೊಡ್ಡ್ಯಾಗ। ಹೊಗಿಸ್ಯಾನೆ।
ಗ್ವಾಲಣ್ಣನಾದರ ಹಡದವ್ವಗ ಹೇಳುತಾನೆ
"ಬಾನನ್ನ ಮಾಡವ್ವ। ಹಾಲನ್ನ ಹಿಂಡವ್ವ"
"ಬಾನ ನಾ ಮಾಡುತೀನಿ। ಹಾಲು ನೀ ಹಿಂಡಪ್ಪ"
ಬಾನನ್ನ ಮಾಡ್ಯಾಳಽ। ಹಾಲನ್ನ ಹಿಂಡ್ಯಾನೆಽ।
ತಾಯಿಽಗಿ ಹೇಳುತಾನ। "ಅಗಸಿಽಯು ಕಾಯೋರು।
ಅಗಸೀಯು ಕಾಯೋರು। ಸೊಗಸುಳ್ಳ ಗೆಣೆದೋರು।
ಗೆಣೆದೋರನಾದಽರ। ಕರಸವ್ವ ಹಡದವ್ವ।
ಅಣ್ಣಾನ ಕರಸಮ್ಮ। ತಮ್ಮಽನ ಕರಸಮ್ಮ।
ಅಕ್ಕಽನ ಕರಸಮ್ಮ। ತಂಗಿಽನ ಕರಸಮ್ಮ।
ಮಂದಿಽನ ಕರಸಮ್ಮ। ಮಕ್ಕಳ ಕರಸಮ್ಮ"॥
ಬಂಧು ಬಳಗದವರಽ। ಕರಸ್ಯಾಳೊ ಹಡದವ್ವ।
ತಾಯಿಽಗಿ ಹೇಳ್ತಾನ। "ಊಟಕ ಬಡಸಮ್ಮ"।
'ಬಾನ' ನಾ ನೀಡುತ್ತೀನಿ| ಹಾಲು ನೀ ನೀಡಪ್ಪ"
ಬಾನಽ ಹಾಲನಾದರಽ। ನೀಡ್ಯಾರ ತಾಯ್ಮಕ್ಕಳು
ಎಲ್ಲರಿಗಾಽದರ। ಊಟಽನ್ನ ಮಾಡಿಸ್ಯಾರೆ।
ಊಟ ಆದಽಮ್ಯಾಲಿ। ಗ್ವಾಲಣ್ಣನಾದರಽ
ತಾಯಿಯ ತೊಡಿಮ್ಯಾಲಿ ಮಲಗ್ಯಾನೊ ಗ್ವಾಲಣ್ಣ।
ತೊಡಿಮ್ಯಾಲಿ ಮಲಗ್ಯಾನೆ। ವಸ್ತ್ರವ ಬಿಚ್ಯಾನೇ।
ಸಣ್ಣನೂಲಿನ ವಸ್ತ್ರ ಬಿಚ್ಯಾಽನೆ ಗ್ವಾಲಣ್ಣ।
ತಾಯಿಯ ತೊಡಿಮ್ಯಾಲಿ ಮಲಗ್ಯಾನ ಗ್ವಾಲಣ್ಣ।
ತೊಡಿಮ್ಯಾಲಿ ಮಲಗ್ಯಾನ। ಕೈಯನ್ನ ಮುಗದಾನೆ
ತಾಯಿಽಯ ತೊಡಿಮ್ಯಾಲಿ। ಪ್ರಾಣಾನ್ನ ಬಿಟ್ಟಾನೆ।
ಓಸು ಮಂದಿಯಾದಽರ। 'ಗುರ್‌ಗರಿಽ'ತಾರಲ್ಲ.
ಕೂಡಿದ ಎಲ್ಲರು। ರೋದನಽ ಮಾಡ್ಯಾರೆ।
ರೋದನ ಮಾಡ್ಯಾರ। ಅಳು ಅಳುತಾ ಎಲ್ಲರು।
ಅಳು ಅಳುತಾ ಎಲ್ಲರು ಸಮ್‌ಶಾನ ಕೊಟ್ಟಾರೆ॥

---

ಹಾಡಿದವರು: ಶ್ರೀ ಚಂದ್ರಾಮಪ್ಪ ತಂದೆ ಗೋಪಣ್ಣ ನೇದಾರ್
ಸುರಪುರ

# ವಾಣಿಜ್ಯ ಬ್ಯಾಂಕು ವ್ಯವಸ್ಥೆಯಲ್ಲಿ ಸಣ್ಣ ಬ್ಯಾಂಕುಗಳ ಪಾತ್ರ

**ಎನ್. ಪ್ರಭುಸ್ವಾಮಿ**

ಕಳೆದ ಎರಡು ದಶಕಗಳಲ್ಲಿ (೧೯೫೧–೧೯೭೧) ಪಂಚವಾರ್ಷಿಕ ಯೋಜನೆಗಳು ಆರಂಭವಾದ ಮೇಲೆ ಇಂಡಿಯಾದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳು ಉಂಟಾಗಿವೆ. ಎರಡನೆ ಮಹಾಯುದ್ಧದ ಅವಧಿಯಲ್ಲಿ ದೇಶದಲ್ಲಿ ಉಂಟಾದ ಆರ್ಥಿಕ ಬದಲಾವಣೆಗಳ ಪರಿಣಾಮವಾಗಿ ಸಣ್ಣ ವಾಣಿಜ್ಯ ಬ್ಯಾಂಕುಗಳಿಗೆ ಪ್ರೋತ್ಸಾಹ ದೊರೆಯಿತು. ಅನೇಕ ಹೊಸ ಬ್ಯಾಂಕುಗಳು ದೇಶದ ವಿವಿಧಕಡೆ ಸ್ಥಾಪಿಸಲ್ಪಟ್ಟವು. ೧೯೪೫ ರ ಕೊನೆ ವೇಳೆಗೆ (ಎರಡನೆ ಮಹಾಯುದ್ಧ ಪೂರೈಸುವ ವೇಳೆಗೆ) ೭೨೨ ಸಣ್ಣ ಬ್ಯಾಂಕುಗಳು ದೇಶದಲ್ಲಿದ್ದವು. ಆದರೆ ಸಣ್ಣ ಬ್ಯಾಂಕುಗಳ ಸಂಖ್ಯೆ ೧೯೫೧–೧೯೭೧ರ ಅವಧಿಯಲ್ಲಿ ಕಡಮೆಯಾಯಿತು. ಅದರಲ್ಲೂ ೧೯೬೦ರಲ್ಲಿ ಎರಡು ಷೆಡ್ಯೂಲ್ ಬ್ಯಾಂಕುಗಳು ಮುಚ್ಚಲ್ಪಟ್ಟ ಮೇಲೆ. ಸಣ್ಣ ಬ್ಯಾಂಕುಗಳ ಅಸ್ತಿತ್ವಕ್ಕೆ ತೊಂದರೆಯಾಯಿತು. ಸಣ್ಣ ಬ್ಯಾಂಕುಗಳಿಗೆ ಸ್ವಶಕ್ತಿಯ ಆಧಾರದ ಮೇಲೆ ವ್ಯವಹಾರ ನಡೆಸಲು ಈಗಿನ ಕಾಲದಲ್ಲಿ ಸಾಧ್ಯವಿಲ್ಲವೆಂದು ರಿಸರ್ವ್ ಬ್ಯಾಂಕ್ ತೀರ್ಮಾನಿಸಿ ಅವುಗಳ ವಿಲೀನಕ್ಕೆ ಪ್ರೋತ್ಸಾಹಿಸಿತು. ಅದರ ಪರಿಣಾಮವಾಗಿ ಸಣ್ಣ ಬ್ಯಾಂಕುಗಳ ಸಂಖ್ಯೆ ಬಹಳ ಮಟ್ಟಿಗೆ ಇಳಿಯಿತು. ಇದೇ ಅವಧಿಯಲ್ಲಿ ಷೆಡ್ಯೂಲ್ ಬ್ಯಾಂಕುಗಳು ಬೆಳೆಯಲಾರಂಭಿಸಿದವು. ೧೯೫೧ರಲ್ಲಿ ಸಣ್ಣ ಬ್ಯಾಂಕುಗಳ ಸಂಖ್ಯೆ ೫೦೦ ಇದ್ದದ್ದು ೧೯೬೯ ರ ಕೊನೆ ವೇಳೆಗೆ ೨೦ ಕ್ಕೆ ಇಳಿಯಿತು. ೧೯೫೧ ರಲ್ಲಿ ಸಣ್ಣ ಬ್ಯಾಂಕುಗಳು ೧೪೭೩ ಶಾಖೆಗಳನ್ನು ಹೊಂದಿದ್ದವು. ಆದರೆ ೧೯೭೦ ರ ಕೊನೆ ವೇಳೆಗೆ ೧೪೨ ಶಾಖೆಗಳನ್ನು ಮಾತ್ರ ಹೊಂದಿದ್ದವು. ೧೯೫೧ ರ ಆರಂಭದಲ್ಲಿ ದೊಡ್ಡ ಬ್ಯಾಂಕುಗಳು ೨೬೪೬ ಶಾಖೆಗಳನ್ನು ಹೊಂದಿದ್ದವು. ೧೯೭೦ರ ಕೊನೆ ವೇಳೆಗೆ ಅವು ೧೧೦೦೬ ಶಾಖೆಗಳನ್ನು ಹೊಂದಿದ್ದವು.

೧೯೬೯ನೆ ಇಸವಿ ಜುಲೈ ತಿಂಗಳಲ್ಲಿ ೧೪ ದೊಡ್ಡ ಬ್ಯಾಂಕುಗಳ ರಾಷ್ಟ್ರೀಕರಣದಿಂದ ದೇಶದಲ್ಲಿರುವ ಎಲ್ಲಾ ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಒಟ್ಟು ಠೇವಣಿಗಳ ಪೈಕಿ ಶೇಕಡಾ ೮೫ರಷ್ಟು ಮತ್ತು ಒಟ್ಟು ಬ್ಯಾಂಕು ಶಾಖೆಗಳ ಪೈಕಿ ಶೇಕಡಾ ೮೦ರಷ್ಟು ಸರ್ಕಾರಿ ವಲಯದಲ್ಲಿರುವ ವಾಣಿಜ್ಯ ಬ್ಯಾಂಕುಗಳ ಸ್ವಾಧೀನಕ್ಕೆ ಬಂದಂತಾಯಿತು. ದೇಶದ ಒಟ್ಟು ವಾಣಿಜ್ಯ ಬ್ಯಾಂಕು ವ್ಯವಹಾರದ ಪೈಕಿ ೧/೪ ಭಾಗದಷ್ಟು ವ್ಯವಹಾರ ಇಂಡಿಯಾದ

ಸ್ಟೇಟ್ ಬ್ಯಾಂಕು ಮತ್ತು ಅದರ ಉಪಾಂಗಗಳ ಹತೋಟಿಯಲ್ಲಿದೆ. ೧೪ ರಾಷ್ಟ್ರೀಕೃತ ಬ್ಯಾಂಕುಗಳು ಒಟ್ಟು ಠೇವಣಿಯ ಶೇಕಡಾ ೫೬ರಷ್ಟನ್ನು ಹೊಂದಿವೆ. ಜೊತೆಗೆ ದೇಶದಲ್ಲಿರುವ ಒಟ್ಟು ಬ್ಯಾಂಕಿಂಗ್ ಶಾಖೆಗಳ ಪೈಕಿ ಶೇಕಡಾ ೫೦ರಷ್ಟನ್ನು ಹೊಂದಿವೆ.

ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಠೇವಣಿಯ ಶೇಕಡಾ ೬ರಷ್ಟನ್ನು ಮಾತ್ರ ಸಣ್ಣ ಬ್ಯಾಂಕುಗಳು ಹೊಂದಿವೆ. ಜೊತೆಗೆ ವಾಣಿಜ್ಯ ಬ್ಯಾಂಕುಗಳು ಹೊಂದಿರುವ ಒಟ್ಟು ಬ್ಯಾಂಕು ಶಾಖೆಗಳ ಪೈಕಿ ಶೇಕಡಾ ೧.೨ರಷ್ಟನ್ನು ಮಾತ್ರ ಹೊಂದಿವೆ. ಈ ಅಂಶಗಳನ್ನು ಪರಿಶೀಲಿಸಿದಾಗ ಸಣ್ಣ ಬ್ಯಾಂಕುಗಳ ಪ್ರಾಮುಖ್ಯತೆ ಇಳಿಮುಖವಾಗುತ್ತಿರುವುದು ಕಂಡು ಬರುತ್ತದೆ.

ಸರ್ಕಾರಿ ವಲಯದಲ್ಲಿರುವ ವಾಣಿಜ್ಯ ಬ್ಯಾಂಕುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಸಣ್ಣ ನಗರಗಳಲ್ಲಿ ಬ್ಯಾಂಕುಗಳ ಶಾಖೆಯನ್ನು ಆರಂಭಿಸುವ ಕಾರ್ಯಕ್ರಮವನ್ನು ತೀವ್ರವಾಗಿ ಕೈಗೊಂಡು ಸಣ್ಣ ಬ್ಯಾಂಕುಗಳ ವ್ಯವಹಾರ ವಿಸ್ತರಣೆಗೆ ಅವಕಾಶವಿಲ್ಲದಂತೆ ಮಾಡುತ್ತಿವೆ. ಸಣ್ಣ ಬ್ಯಾಂಕುಗಳು ಇದುವರೆಗೆ ಸಣ್ಣ ಕೈಗಾರಿಕಾ ಸಂಸ್ಥೆಗಳು ಕುಶಲ ಕಾರ್ಮಿಕರು, ಸಣ್ಣ ವ್ಯಾಪಾರಿಗಳು ಮತ್ತು ವ್ಯವಸಾಯಗಾರರಿಗೆ ಹಣ ಒದಗಿಸಿ ತಮ್ಮ ವ್ಯವಹಾರ ನಡೆಸುತ್ತಿದ್ದವು. ಈಗ ಸರ್ಕಾರಿ ವಲಯದ ಬ್ಯಾಂಕುಗಳು ಈ ಕ್ಷೇತ್ರಗಳಿಗೂ ಪ್ರವೇಶಿಸಿ ಸಣ್ಣ ಬ್ಯಾಂಕುಗಳ ವ್ಯವಹಾರವನ್ನು ಕುಗ್ಗಿಸುತ್ತಿವೆ. ಮೇಲ್ಕಂಡ ಕಾರಣಗಳಿಗಾಗಿ ಇನ್ನು ಮುಂದೆ ಸಣ್ಣ ಬ್ಯಾಂಕುಗಳ ಅವಶ್ಯಕತೆ ಇಲ್ಲ. ಅವುಗಳನ್ನು ದೊಡ್ಡ ಬ್ಯಾಂಕುಗಳ ಜೊತೆ ವಿಲೀನಗೊಳಿಸುವುದು ಉತ್ತಮ ಎಂದು ಅನೇಕರು ವಾದಿಸುತ್ತಾರೆ. ಈ ವಾದದ ಹಿನ್ನೆಲೆಯಲ್ಲಿ ಸಣ್ಣ ಬ್ಯಾಂಕುಗಳ ಪಾತ್ರವನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಸಣ್ಣ ಬ್ಯಾಂಕುಗಳ ಅವಶ್ಯಕತೆಯನ್ನು ಪರಿಶೀಲಿಸುವಾಗ ನಾವು ಮೂರು ಮುಖ್ಯ ಅಂಶಗಳನ್ನು ಗಮನದಲ್ಲಿಡಬೇಕು: (೧) ದೇಶದಲ್ಲಿ ದಕ್ಷತೆಯಿಂದ ಕೂಡಿದ ಬ್ಯಾಂಕಿಂಗ್ ವ್ಯವಸ್ಥೆ ಏರ್ಪಡಿಸುವುದು. (೨) ದೇಶಾದ್ಯಂತ ಬ್ಯಾಂಕಿಂಗ್ ಸೌಲಭ್ಯವನ್ನು ಕಲ್ಪಿಸಿಕೊಡುವುದು (೩) ಸಮಾಜದಲ್ಲಿರುವ ದುರ್ಬಲ ವರ್ಗದವರ ಹಿತಾಸಕ್ತಿಯನ್ನು ಕಾಪಾಡುವುದು. ಅಂದರೆ ಸರ್ಕಾರದ ನೂತನ ಧೋರಣೆಗೆ ಅನುಗುಣವಾಗಿ ಸಣ್ಣ ವ್ಯವಸಾಯಗಾರರು. ಸಣ್ಣ ಕೈಗಾರಿಕೋದ್ಯಮಿಗಳು. ಚಿಲ್ಲರೆ ವ್ಯಾಪಾರಿಗಳು. ಕುಶಲ ಕೆಲಸಗಾರರು. ಸ್ವಯಂ ಉದ್ಯೋಗಸ್ಥರು. ಇತ್ಯಾದಿ ವರ್ಗದ ಜನರಿಗೆ ಸುಲಭವಾಗಿ ಸಾಲದ ಸೌಲಭ್ಯ ದೊರೆಯುವಂತೆ ಮಾಡುವುದು.

ಮೇಲ್ಕಂಡ ಉದ್ದೇಶಗಳನ್ನು ಸಾಧಿಸಬೇಕಾದರೆ ಸಣ್ಣ ಬ್ಯಾಂಕುಗಳ ಮುಂದುವರಿಕೆಯು ಅವಶ್ಯಕ ಎಂಬುದು ಕಂಡು ಬರುತ್ತದೆ. ಇದುವರೆಗೆ ದೊಡ್ಡ ವಾಣಿಜ್ಯ ಬ್ಯಾಂಕುಗಳು ನೂರಾರು ಶಾಖೆಗಳನ್ನು ದೇಶದ ವಿವಿಧ ಭಾಗಗಳಲ್ಲಿ ತೆರೆದಿದ್ದರೂ. ಬ್ಯಾಂಕಿಂಗ್ ಸೌಲಭ ಒದಗಿಸುವ ದೃಷ್ಟಿಯಿಂದ ಇಂಡಿಯಾದಲ್ಲಿ ಇನ್ನೂ ಬ್ಯಾಂಕುಗಳ ಅವಶ್ಯಕತೆ ಇದೆ ಎಂಬುದು ಈ ಕೆಳಗೆ ಕಂಡ ಅಂಶಗಳಿಂದ ತಿಳಿದು ಬರುತ್ತದೆ. ಸರಾಸರಿ ೪೨

ಸಾವಿರ ಜನರಿಗೊಂದರಂತೆ. ಇಂಡಿಯಾದಲ್ಲಿ ಒಂದು ವಾಣಿಜ್ಯ ಬ್ಯಾಂಕು ಶಾಖೆ ಇದೆ. ಆದರೆ ಬ್ರಿಟನ್ನಿನಲ್ಲಿ ಪ್ರತಿ ನಾಲ್ಕು ಸಾವಿರ ಜನರಿಗೊಂದರಂತೆ. ಅಮೇರಿಕಾದಲ್ಲಿ ಪ್ರತಿ ೭ ಸಾವಿರ ಜನರಿಗೊಂದರಂತೆ. ಜಪಾನಿನಲ್ಲಿ ಪ್ರತಿ ೧೫ ಸಾವಿರ ಜನರಿಗೊಂದರಂತೆ ಮತ್ತು ಇರಾನ್‌ನಲ್ಲಿ ಪ್ರತಿ ೧೧ ಸಾವಿರ ಜನರಿಗೊಂದರಂತೆ ಒಂದು ವಾಣಿಜ್ಯ ಬ್ಯಾಂಕು ಇದೆ ಆದುದರಿಂದ ಆದಷ್ಟು ಜಾಗ್ರತೆ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿಯೂ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ಗುರಿಯನ್ನು ತಲುಪಬೇಕಾದರೆ ಸಣ್ಣ ಬ್ಯಾಂಕುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಒಳ್ಳೆಯದು. ಸಣ್ಣ ಬ್ಯಾಂಕುಗಳಿಗೆ ಗ್ರಾಮಾಂತರ ಪ್ರದೇಶದ ವಾತಾವರಣಕ್ಕೆ ಅನುಗುಣವಾಗಿ ಕೆಲಸ ಮಾಡುವ ಶಕ್ತಿ ಇದೆ. ಗ್ರಾಮಾಂತರ ಪ್ರದೇಶದ ಜನರಲ್ಲಿ ಬ್ಯಾಂಕಿನ ವಿಷಯದಲ್ಲಿ ಆಸಕ್ತಿ ಉಂಟು ಮಾಡುವಂತಹ ಶಕ್ತಿ ಸಣ್ಣ ಬ್ಯಾಂಕುಗಳಿಗಿದೆ. ದೊಡ್ಡ ಬ್ಯಾಂಕಿನ ಶಾಖೆಗಳು ಗ್ರಾಮಾಂತರ ಪ್ರದೇಶದಲ್ಲಿ ತೆರೆಯಲ್ಪಟ್ಟರೂ ಅವು ಗ್ರಾಮಾಂತರ ಪ್ರದೇಶದ ಜನರನ್ನು ಆಕರ್ಷಿಸುವುದರಲ್ಲಿ ಸಾಕಷ್ಟು ಯಶಸ್ವಿಯಾಗಿಲ್ಲ. ಏಕೆಂದರೆ ದೊಡ್ಡ ಬ್ಯಾಂಕಿನ ಶಾಖೆಯ ಆಡಳಿತ ನೋಡಿಕೊಳ್ಳುವವರಿಗೆ ಅವರುಗಳ ಸೇವೆಯ ವಿಷಯದಲ್ಲಿ (Service conditions) ಸ್ಥಿರತೆ ಇದೆ. ಆದುದರಿಂದ ಗ್ರಾಮಾಂತರ ಪ್ರದೇಶದ ಶಾಖೆಯ ವ್ಯವಹಾರ ಕುದುರಲಿ ಅಥವ ಕುದುರದೆ ಇರಲಿ ಬ್ಯಾಂಕಿನ ಅಧಿಕಾರಿಗಳು ನಿರಾಸಕ್ತರಾಗಿರುತ್ತಾರೆ. ಆದರೆ ಸಣ್ಣ ಬ್ಯಾಂಕುಗಳ ವಿಷಯದಲ್ಲಿ ಹಾಗಿಲ್ಲ. ಸಣ್ಣ ಬ್ಯಾಂಕುಗಳ ಅಸ್ತಿತ್ವವೇ ಅವುಗಳು ನಿರ್ವಹಿಸುವ ವ್ಯಾಪಾರದ ಪ್ರಮಾಣವನ್ನು ಅವಲಂಬಿಸಿದೆ. ಆದುದರಿಂದ ಸಣ್ಣ ಬ್ಯಾಂಕಿನ ಅಧಿಕಾರಿಗಳು ತಮ್ಮ ಸ್ಥಾನದ ಭದ್ರತೆಯ ದೃಷ್ಟಿಯಿಂದಲಾದರೂ, ಬ್ಯಾಂಕಿನ ವ್ಯಾಪಾರ ಕುದುರುವಂತೆ ಮಾಡುತ್ತಾರೆ. ಇದರಿಂದ ಎರಡು ರೀತಿಯ ಪ್ರಯೋಜನವಾಗುತ್ತದೆ: (೧) ಬ್ಯಾಂಕು ಆದಷ್ಟು ಗಿರಾಕಿಗಳನ್ನು ಆಕರ್ಷಿಸುವುದರ ಮೂಲಕ ಗ್ರಾಮಾಂತರ ಜನರಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ಜನಪ್ರಿಯಗೊಳಿಸುತ್ತದೆ. (೨) ಗ್ರಾಮಾಂತರ ಜನರಿಗೆ ಬ್ಯಾಂಕಿನ ಮೂಲಕ ಸೌಕರ್ಯ ಒದಗಿಸಿ ಅವರ ಆರ್ಥಿಕ ಪ್ರಗತಿಗೆ ಸಹಾಯವಾಗುತ್ತದೆ.

ಸಣ್ಣ ಬ್ಯಾಂಕುಗಳು ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿಲ್ಲವಾದುದರಿಂದ ಅವುಗಳನ್ನು ಮುಂದುವರಿಸಿಕೊಂಡು ಹೋಗುವುದು ಅನಪೇಕ್ಷಣೀಯ ಎಂದು ಬ್ಯಾಂಕಿಂಗ್ ಕಮಿಷನ್ನಿನ ಮುಂದೆ ಹಲವರು ಸಾಕ್ಷ್ಯವಿತ್ತಿದ್ದಾರೆ. ಆದರೆ ವಾಸ್ತವಿಕದೃಷ್ಟಿಯಿಂದ ನೋಡಿದರೆ ಸಣ್ಣ ಬ್ಯಾಂಕುಗಳನ್ನು ಮುಂದುವರೆಸಿಕೊಂಡು ಹೋಗುವುದು ಇಂಡಿಯಾದ ಗ್ರಾಮಾಂತರ ಪ್ರದೇಶಗಳ ದೃಷ್ಟಿಯಿಂದ ಒಳ್ಳೆಯದು ಎಂದು ಕಂಡು ಬರುತ್ತದೆ. ರಾಷ್ಟ್ರದ್ಯಂತ ಸಾಲದ ಸೌಲಭ್ಯವನ್ನು ದೊರಕಿಸುವ ವಿಷಯದಲ್ಲಿ ಅಧ್ಯಯನ ನಡೆಸುವಂತೆ ಒಂದು ಸಮಿತಿಯನ್ನು ನೇಮಿಸಲಾಗಿದೆ (National Credit Council). ಆ ಸಮಿತಿಯು ತನ್ನ ವರದಿಯಲ್ಲಿ ದೊಡ್ಡ ವಾಣಿಜ್ಯ ಬ್ಯಾಂಕುಗಳ ವಿಷಯದಲ್ಲಿ ಈ ಕೆಳಕಂಡಂತೆ ಅಭಿಪ್ರಾಯಪಟ್ಟಿದೆ.

ರಾಷ್ಟ್ರೀಕರಿಸಲ್ಪಟ್ಟಿರುವ ದೊಡ್ಡ ವಾಣಿಜ್ಯ ಬ್ಯಾಂಕುಗಳ ಹತ್ತಿರ ಸಾಕಷ್ಟು ಸಂಪನ್ಮೂಲಗಳಿವೆ. ತರಬೇತಿ ಹೊಂದಿದ ನೌಕರರು ಸಾಕಷ್ಟು ಪ್ರಮಾಣದಲ್ಲಿ ಬ್ಯಾಂಕುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಹೊಸ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳನ್ನು ಪ್ರಾರಂಭಿಸುವುದರ ಮೂಲಕ ತಮ್ಮ ಚಟುವಟಿಕೆಗಳನ್ನು ಅವು ವಿಸ್ತರಿಸಿಕೊಳ್ಳಬಹುದು. ಆದರೆ ಅವರಿಗೆ ನೌಕರರ ಸಂಬಳದ ಸಮಸ್ಯೆ ಒಂದು ತಲೆನೋವಾಗಿದೆ. ಸಣ್ಣ ಗ್ರಾಮಾಂತರ ಪ್ರದೇಶಗಳಲ್ಲಿರುವ ಬ್ಯಾಂಕಿಗೆ ತಮ್ಮ ನೌಕರರನ್ನು ನೇಮಿಸಿದರೂ ಬ್ಯಾಂಕುನೌಕರರ ಸಂಬಳದ ವಿಷಯದಲ್ಲಿ ಬ್ಯಾಂಕಿಗೆ ಬಹಳ ಖರ್ಚು ತಗಲುತ್ತದೆ. ಏಕೆಂದರೆ ದೊಡ್ಡ ಪಟ್ಟಣಗಳಲ್ಲಿರುವ ಬ್ಯಾಂಕ್ ನೌಕರರಿಗೆ ನಿರ್ಧರಿಸುವಷ್ಟೇ ಸಂಬಳವನ್ನು ಇವರಿಗೂ ಕೊಡಬೇಕಾಗುವುದು. ಅನೇಕ ಗ್ರಾಮಾಂತರ ಪ್ರದೇಶದ ಬ್ಯಾಂಕುಗಳಲ್ಲಿ ಸಾಕಷ್ಟು ವ್ಯಾಪಾರ ಇಲ್ಲದಿರುವುದರಿಂದ ಅವು ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ. ಆದರೆ ಬ್ಯಾಂಕಿನ ವೆಚ್ಚ ಮಾತ್ರ ಒಂದೇ ಸಮನೆ ಇರುತ್ತದೆ. ಇದರಿಂದ ಬ್ಯಾಂಕಿಗೆ ನಷ್ಟ ಉಂಟಾಗುತ್ತದೆ. ಆದುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಬ್ಯಾಂಕಿನ ಶಾಖೆಗಳನ್ನು ತೆರೆಯಲು ದೊಡ್ಡ ವಾಣಿಜ್ಯ ಬ್ಯಾಂಕಿನವರು ಹಿಂಜರಿಯುತ್ತಾರೆ.

ಮೇಲ್ಕಂಡ ಅಭಿಪ್ರಾಯವನ್ನು ಅವಲೋಕಿಸಿದಾಗ ಸಣ್ಣ ಬ್ಯಾಂಕುಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ ತಮ್ಮ ಕಾರ್ಯ ನಿರ್ವಹಿಸಲು ಸದವಕಾಶ ಇದೆ ಎಂಬುದು ತಿಳಿಯುತ್ತದೆ. ಸಣ್ಣ ಬ್ಯಾಂಕುಗಳು ತಮ್ಮ ವೆಚ್ಚವನ್ನು ಸರಿದೂಗಿಸಿಕೊಂಡು. ಗ್ರಾಮಾಂತರ ಪ್ರದೇಶದ ವಾತಾವರಣಕ್ಕೆ ಹೊಂದಿಕೊಂಡು ಕಾರ್ಯ ನಿರ್ವಹಿಸುವ ಶಕ್ತಿಪಡೆದಿವೆ.

ಸಣ್ಣ ಬ್ಯಾಂಕುಗಳು ತಮ್ಮ ಗಿರಾಕಿಗಳಿಗೆ ಸೌಲಭ್ಯ ಒದಗಿಸುವಾಗ ಸ್ವಲ್ಪ ಹೆಚ್ಚಿನ ಬಡ್ಡಿದರ ತೆಗೆದುಕೊಳ್ಳುವುದೇನೋ ನಿಜ. ಅವುಗಳ ಆದಾಯದ ದೃಷ್ಟಿಯಿಂದ ಇದು ಅತ್ಯಗತ್ಯ. ಆದರೂ ಸಣ್ಣ ಉದ್ದಿಮೆದಾರರಿಗೆ, ವ್ಯವಸಾಯಗಾರರಿಗೆ. ಬಡ ವರ್ಗದ ಹಳ್ಳಿಯ ಜನರಿಗೆ ಮತ್ತು ಸಣ್ಣ ವ್ಯಾಪಾರಸ್ಥರಿಗೆ ಸಾಲ ಒದಗಿಸುವ ವಿಷಯದಲ್ಲಿ ಅವರು ಶೀಘ್ರಗತಿಯಲ್ಲಿ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಇದರಿಂದ ಗಿರಾಕಿಗಳಿಗೂ ಸಂತೋಷವಾಗಿ. ಬ್ಯಾಂಕುಗಳು ಸ್ವಲ್ಪ ಹೆಚ್ಚಿಗೆ ಬಡ್ಡಿ ತೆಗೆದುಕೊಂಡರೂ. ಮನಃಪೂರ್ವಕವಾಗಿ ಬ್ಯಾಂಕುಗಳೊಡನೆ ವ್ಯವಹಾರ ನಡೆಸಲು ಗ್ರಾಮಾಂತರ ಜನರು ಮುಂದೆ ಬರುತ್ತಾರೆ. ದೊಡ್ಡ ಬ್ಯಾಂಕುಗಳು ಗಿರಾಕಿಗಳ ಬಯಕೆಯನ್ನು ಈಡೇರಿಸುವುದರಲ್ಲಿ ಬಹಳ ಮಂದಗತಿಯಿಂದ ಸಾಗುತ್ತವೆ. ಜೊತೆಗೆ ಅನೇಕ ಸಂದರ್ಭಗಳಲ್ಲಿ ಕಡೆಗಳಿಗೆಯಲ್ಲಿ ತಮ್ಮಿಂದ ಸಾಧ್ಯವಿಲ್ಲವೆಂದು ಗಿರಾಕಿಗಳನ್ನು ಕೈ ಬಿಡುತ್ತಾರೆ. ಇದರಿಂದ ಗ್ರಾಮಾಂತರ ಜನರಿಗೆ ನಿರುತ್ಸಾಹ ಉಂಟಾಗಿ, ದೊಡ್ಡ ಬ್ಯಾಂಕುಗಳ ವಿಷಯದಲ್ಲಿ ಅನಾದರಣೆ ತೋರುವ ಪ್ರವೃತ್ತಿ ಅವರಲ್ಲಿ ಕಂಡುಬರುತ್ತಿದೆ.

ಮೇಲ್ಕಂಡ ವಿವರಗಳನ್ನು ಪರಿಶೀಲಿಸಿದಾಗ ಸಣ್ಣ ಬ್ಯಾಂಕುಗಳೇ ನಮ್ಮ ಗ್ರಾಮಾಂತರ ಪ್ರದೇಶದ ಜನರ ಜೀವನಕ್ಕೆ ಹೊಂದಿಕೊಂಡು ನಡೆಯಬಲ್ಲವು ಎಂಬುದು ತಿಳಿಯುತ್ತದೆ. ಆದುದರಿಂದ ಸಣ್ಣ ಬ್ಯಾಂಕುಗಳನ್ನು ವಿಲೀನಗೊಳಿಸುವುದರ ಬದಲು ಅವು ಉಳಿದುಕೊಂಡು ತಮ್ಮ ಪಾತ್ರವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವಂತೆ ಮಾಡುವುದು ನಮ್ಮ ದೇಶದ ಆರ್ಥಿಕ ದೃಷ್ಟಿಯಿಂದ ಸಾಧುವಾದುದು ಎಂದು ಕಂಡು ಬರುತ್ತದೆ.

●

---

ಸೂಚನೆ : ಈ ಲೇಖನವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ೧೯೭೨ ರಲ್ಲಿ ಪ್ರಕಟಿಸಿದ "ಇಂಡಿಯಾದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕಂಡುಬರುವ ಪ್ರವೃತ್ತಿ ಮತ್ತು ಪ್ರಗತಿ" ಎಂಬ ವರದಿಯ ಆಧಾರದ ಮೇಲೆ ಬರೆಯಲಾಗಿದೆ.

# ಬೆಳಗಾಯಿತು

ಬಸವರಾಜ ಮಲಶೆಟ್ಟಿ

ರವಿ,
ದೂರದಿಂದಿಳಿದು ಬಂದು
ಅವಳನ್ನು ತಬ್ಬಿಕೊಂಡಾಗ,
ಅವಳ ಕಪ್ಪು ಮೈ ಕರಗಿ
ಹೊಂಬಣ್ಣ ಮುಖದೊಳಗೆ
ಮೂಗುತಿ
ಥಳಥಳನೆ ಹೊಳೆದಿತ್ತು.

ಅವಳು,
ಮುಂದಾಗಿ ನಡುಮನೆಗೆ ನಡೆದಾಗ
ನಕ್ಷತ್ರ ಮಲ್ಲಿಗೆ ರಾಶಿ
ಚೆಲ್ಲಾ ಪಿಲ್ಲಿ ಹರಡಿ
ಅವಳ ಕಪ್ಪು ತಲೆ ಅಂಗಳದ ತುಂಬೆಲ್ಲ.

ರವಿ,
ಎಚ್ಚರಾದ.
ತಯಾರಾದ, ಹೊರಡಲು
ಅವಳ ಮುಖ ಕೆಂಪು ಬಿಳುಪಾಗಿ
ಬೆಳಗಾಯಿತು.

# ಷಡಕ್ಷರಿಯ ಕಾವ್ಯೋದ್ದೇಶಗಳು

ಗುರುಲಿಂಗ ಕಾಪಸೆ

That nothing walks with aimless feet

*—Tennyson.*

ಉದ್ದೇಶರಹಿತವಾಗಿ ಏನೂ ಚಲಿಸದೆಂಬ ಟೆನಿಸನ್‌ನ ಅಭಿಪ್ರಾಯವು ಸಾಮಾನ್ಯವಾಗಿ ಜೀವನದ ಎಲ್ಲ ಕಾರ್ಯರಂಗಕ್ಕೂ ಅನ್ವಯಿಸುವಂತಹದು. ಇದು ಕವಿಯ ಕಾವ್ಯಸೃಷ್ಟಿಗೂ ಅನ್ವಯಿಸುತ್ತಿದೆಯೆಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಪ್ರತಿಯೊಬ್ಬ ಕವಿ ಕಾವ್ಯನಿರ್ಮಿತಿಗೆ ತೊಡಗುವ ಮುನ್ನ ತನ್ನ ಧ್ಯೇಯ–ಧೋರಣೆಗಳನ್ನು ಗುರುತಿಸಿಕೊಂಡಿರುತ್ತಾನೆ. ಕವಿತೆಯ ಫಲ–ಪ್ರಯೋಜನೆಗಳ ಬಗ್ಗೆಯೂ ಒಂದು ಲೆಕ್ಕ ಹಾಕಿಕೊಂಡಿರುತ್ತಾನೆ. ಕವಿಯ ಪ್ರಕೃತಿಗುಣ ಹಾಗೂ ಸಂಸ್ಕಾರಗಳಿಗನುಗುಣವಾಗಿ ಆಯಾಯ ಕವಿಯ ಕಾವ್ಯಧೋರಣೆ ರೂಪಿತವಾಗುತ್ತದೆ. ಜನಮನವನ್ನು ರಂಜಿಸಬೇಕೆಂಬ ಸಾಮಾನ್ಯ ಉದ್ದೇಶದಿಂದ ಬಾಳಬಟ್ಟೆಯು ಪರಮಾಗಮವಾಗಬೇಕೆಂಬ ಉದಾತ್ತಧ್ಯೇಯದವರೆಗೆ ಕಾವ್ಯೋದ್ದೇಶಗಳು ವಿವಿಧ ಬಗೆಯಾಗಿರುವುದಕ್ಕೆ ಅವ-ರವರ ವ್ಯಕ್ತಿತ್ವವೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಅಷ್ಟಲ್ಲದೆ ಸಾಮಯಿಕ ದೃಷ್ಟಿಕೋನವೂ ಆಯಾ ಕವಿಯ ಕಾವ್ಯೋದ್ದೇಶವನ್ನು ನಿರ್ಣಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆಂಬುದನ್ನು ಮರೆಯುವಂತಿಲ್ಲ.

ನಮ್ಮ ಪ್ರಾಚೀನ ಕವಿಗಳಲ್ಲಿ ಬಹುಜನರ ಕಾವ್ಯಧೋರಣೆ ಒಂದು ನಿರ್ದಿಷ್ಟ ಉದ್ದೇಶದಿಂದ ಕೂಡಿಕೊಂಡಿದ್ದುದನ್ನು ಯಾರೂ ಗುರುತಿಸಬಹುದಾಗಿದೆ. ಲೌಕಿಕ ಹಾಗೂ ಆಗಮಿಕಗಳೆನ್ನು ಬೆಳಗುವ ಪಂಪನ ಗುರಿ, ಶಿವಪಾರಮ್ಯ ಹಾಗೂ ಶರಣರ ಮಹಿಮೆಯನ್ನು ಬಿತ್ತರಿಸಲು ಹೊರಟ ಹರಿಹರನ ಮೀಸಲು ಉದ್ದೇಶ, 'ಶೃಂಗಾರ ರಸಮೆ ರಸಂ' ಎಂಬುದನ್ನು ಸ್ಥಾಪಿಸಲು ಹೊರಟ ನೇಮಿಚಂದ್ರನ ರಸಿಕ ದೃಷ್ಟಿ. 'ಆಧ್ಯಾತ್ಮವೇ ನಿಜತ ಪ್ರಯೋಜನವೆನೆಗೆ' ಎಂದು ಸ್ಪಷ್ಟಪಡಿಸಿದ ರತ್ನಾಕರವರ್ಣಿಯ ತಾತ್ವಿಕ ಧೋರಣೆ, ಮುಂತಾದವುಗಳೆನ್ನು ತಿಳಿಯದ ಕಾವ್ಯಾಭ್ಯಾಸಿಗಳಿಲ್ಲ.

ಕಾವ್ಯೋದ್ದೇಶ, ಕಾವ್ಯಾಭಿವ್ಯಕ್ತಿ ಕವಿಯಿಂದ ಕವಿಗೆ ಭಿನ್ನವಾದಷ್ಟೂ ಕಾವ್ಯ ಪ್ರಪಂಚದ ವೈವಿಧ್ಯ ಹೆಚ್ಚಾಗುತ್ತದೆ. ಕನ್ನಡದಲ್ಲಿ ಈ ವೈವಿಧ್ಯಕ್ಕೆ ಕೊರತೆಯಿಲ್ಲವಾದರೂ ಪ್ರತಿಯೊಬ್ಬ ಕವಿಗೆ ತನ್ನದೇ ಆದ–ತೀರ ಸ್ವತಂತ್ರವಾದ–ಕಾವ್ಯ ಧೋರಣೆಯೊಂದಿರುತ್ತದೆಂದು ಹೇಳಲಿಕ್ಕಾಗದು. ಪಂಪ, ಹರಿಹರ, ಕುಮಾರವ್ಯಾಸ, ರತ್ನಾಕರವರ್ಣಿಯಂಥ

ಯುಗ ನಿರ್ಮಾಪಕ ಕವಿಗಳಲ್ಲಿ ಅಂಥ ವಿಶೇಷ ಧೋರಣೆಯಿದ್ದುದು ಕಂಡು ಬರುತ್ತದೆ. ಉಳಿದ ಕವಿಗಳಲ್ಲಿ ಬಹಳಷ್ಟು ಜನರು ತಮ್ಮ ಪೂರ್ವದ ಇಲ್ಲವೆ ಸಮಕಾಲೀನನಾದ ಪ್ರಮುಖ ಕವಿಯೊಬ್ಬನ ಆದರ್ಶದಲ್ಲಿ ನಡೆದಿದ್ದುದು ಗೋಚರಿಸುತ್ತದೆ. ಮಹಾಕವಿ ಪಂಪನನ್ನು ರನ್ನ, ಪೊನ್ನ, ನಾಗಚಂದ್ರಾದಿಗಳು ಅನುಸರಿಸಿದ್ದನ್ನು, ಭಕ್ತಕವಿ ಹರಿ–ಹರನ ಮಾರ್ಗದಲ್ಲಿ ರಾಘವಾಂಕ, ಷಡಕ್ಷರದೇವ ಮೊದಲಾದವರು ನಡೆದುದನ್ನು ಇಲ್ಲಿ ಉದಾಹರಿಸಬಹುದು. ತನಗೆ ಸಮ್ಮತವಾದ ಇಲ್ಲವೆ ತನ್ನ ಅಭಿರುಚಿಗೆ ಹೊಂದಿಕೆಯಾಗುವ ಒಂದು ಆದರ್ಶವನ್ನು ಅನುಸರಿಸುವುದು ಮಾನವನ ಸಹಜಗುಣವಾಗಿದೆ. ಈ ದೃಷ್ಟಿಯಿಂದ ಕೆಲವು ಕವಿಗಳು ತಮಗಿಷ್ಟವಿರುವ ಕವಿಯೊಬ್ಬನ ಆದರ್ಶವನ್ನು ಸ್ವೀಕರಿಸಿದುದು ತಪ್ಪೇನೂ ಅಲ್ಲ. ಇಲ್ಲಿ ಮಹತ್ವದ ಮಾತೆಂದರೆ–ಇನ್ನೊಬ್ಬರ ಆದರ್ಶದಲ್ಲಿ ನಡೆದೂ ತನ್ನ ಸ್ವಂತಿಕೆಯನ್ನು ತೋರ್ಪಡಿಸಬೇಕಾದ್ದು. ಕಾವ್ಯವಸ್ತುವಿನ ಆಯ್ಕೆಯಲ್ಲಿ, ಪಾತ್ರಸೃಷ್ಟಿಯಲ್ಲಿ, ಬಂಧ–ಭಾಷೆಗಳಲ್ಲಿ ತನ್ನತನವನ್ನು ಕಾಯ್ದುಕೊಳ್ಳುವ ಕವಿ ಮಾತ್ರ ಬದುಕಬಲ್ಲನು. ಹಾಗಿಲ್ಲದವನು ಪರಪುಟ್ಟನೆನಿಸಿ ಕಣ್ಣಿಗೆ ಕಂಡೂ ಕಾಣದಂತಾಗುತ್ತಾನೆ.

ಈ ಹಿನ್ನೆಲೆಯಲ್ಲಿ ಷಡಕ್ಷರದೇವನ ಕಾವ್ಯೋದ್ದೇಶಗಳನ್ನು ನೋಡುವುದು ಸೂಕ್ತವೆನಿಸುತ್ತದೆ. ನಿಸ್ಸಂದೇಹವಾಗಿ ಷಡಕ್ಷರದೇವನು ಕನ್ನಡದ ಒಬ್ಬ ಅಭಿಜಾತ ಕವಿ. ಅವನ ವ್ಯಕ್ತಿತ್ವ ಪ್ರತಿಭೆ, ಪಾಂಡಿತ್ಯ, ಯತಿತ್ವಗಳ ಅಪೂರ್ವ ಸಂಗಮ. 'ಉಭಯ ಕವಿತಾ ವಿಶಾರದ' 'ಸರಸಜನ ಮಾನಿತ' 'ಯೋಗಿಜನ ಮಂಡನ' 'ಷಟ್‌ಸ್ಥಲ ಶಾಸ್ತ್ರ ದರ್ಶನಾಂಕ' ಇವು ಆತನಿಗೆ ಸಾರ್ಥಕವೆನಿಸುವ ಬಿರುದುಗಳು. ಹೀಗಿರುವ ಆತನು ಬದುಕಿದ್ದ ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ: ಮೈಸೂರೊಡೆಯರಲ್ಲಿ ಗಣ್ಯನಾದ, ಸ್ವತಃ ಕವಿಯಾದ ಚಿಕ್ಕದೇವರಾಯನ ಕಾಲದಲ್ಲಿ. ಆಗ ತಿರುಮಲಾರ್ಯ ಚಿಕು–ಪಾಧ್ಯಾಯ ಮೊದಲಾದವರು ರಾಜಾಶ್ರಯದಲ್ಲಿದ್ದುಕೊಂಡು ಸಾಹಿತ್ಯಸೃಷ್ಟಿಗೆ ತೊಡಗಿದ್ದರು. ಶಾಂತಲಿಂಗ ದೇಶಿಕ, ಷಣ್ಮುಖ ಶಿವಯೋಗಿಯಂಥ ಕೆಲವು ಕವಿಗಳು ರಾಜಾಶ್ರ–ಯದ ಕಕ್ಷೆಯ ಹೊರಗಿದ್ದು ಸಾಹಿತ್ಯ ಕೃಷಿಯನ್ನು ಕೈಕೊಂಡಿದ್ದರು. ಹೀಗೆ ಹಲವಾರು ಕವಿಗಳು–ಆಸ್ಥಾನದ ಒಳಗೆ ಮತ್ತು ಹೊರಗೆ–ಸಾಹಿತ್ಯ ಸೇವೆಯಲ್ಲಿ ಆಸ್ಥೆ ವಹಿಸಿ ದುಡಿಯುತ್ತಿದ್ದುದರಿಂದ ಕನ್ನಡ ಸಾಹಿತ್ಯಕ್ಕೆ ಇನ್ನೊಂದು ವಸಂತ ಕಾಲವು ಪ್ರಾಪ್ತವಾಗಿತ್ತು.

ಈ ಹಿಂದೆ ಆರೇಳು ಶತಮಾನಗಳಲ್ಲಿ–ಒಂದೆರಡು ಬರಗಾಲಗಳನ್ನು ಅನುಭವಿಸಿಯೂ–ನಮ್ಮ ಸಾಹಿತ್ಯವು ಸಮೃದ್ಧವಾಗಿ ಬೆಳೆದಿತ್ತು. ಬೆರಳಿಟ್ಟು ತೋರಿಸುವಂಥ ಕೆಲವು ವಿಕ್ರಮಗಳು ಸ್ಥಾಪಿತವಾಗಿದ್ದವು. ಇದನ್ನು ಬಲ್ಲ ಹದಿನೇಳನೆಯ ಶತಮಾನದ ಕವಿಗಳಿಗೆ ತಮ್ಮ ಕೊಡುಗೆ ಏನೆಂಬುದರ ಬಗೆಗೆ ಆಲೋಚನೆಯುಂಟಾಗಿರಬೇಕು. ಯಾಕೆಂದರೆ ಒಂದೊಂದು ಕಾಲಕ್ಕೆ ಅದರವೇ ಆದ ಸಂವೇದನೆಗಳಿದ್ದು. ಆ ಕಾಲದ ಕವಿಗಳು ಹಿಂದಿನ ಪರಂಪರೆಯಿಂದ ತಮ್ಮನ್ನು ಬೇರ್ಪಡಿಸಿಕೊಂಡು ಕಾಲದ ಪ್ರತಿನಿಧಿಗಳೂ ಆಗಿ ತಮ್ಮ ವೈಶಿಷ್ಟ್ಯವನ್ನು ತೋರಿಸಿಕೊಡುವ ಬಯಕೆಯುಳ್ಳವರಾಗಿರುತ್ತಾರೆ. ಈ ಶತಮಾನದ ಕವಿಗಳಲ್ಲಿಯೂ ಅಂಥ ಬಯಕೆಯಿಲ್ಲದಿಲ್ಲ. ಅದು ಕಾರಣದಿಂದಲೇ ಅವರು

ತಮ್ಮ ಕಾವ್ಯಧೋರಣೆಯನ್ನು ರೂಪಿಸಿಕೊಂಡಿದ್ದಾರೆ. ಅವರು ಚರಿತ್ರೆ, ಮಹಾತ್ಮೆಗಳನ್ನು ತಮ್ಮ ಕಾವ್ಯವಸ್ತುವಾಗಿರಿಸಿಕೊಂಡಿದ್ದು, ಸಾಂಗತ್ಯ, ಸೋಬಾನೆ, ಯಕ್ಷಗಾನ ರೂಪಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ.

ಇಂಥ ಕಾವ್ಯಧೋರಣೆ ರಾಜಾಶ್ರಯ ಪಡೆದ ಕವಿಗಳನ್ನು ಆಕರ್ಷಿಸುತ್ತಿರುವ ಸಂದರ್ಭದಲ್ಲಿ ಷಡಕ್ಷರದೇವನು ತನ್ನದೇ ಆದ ದಾರಿಯೊಂದನ್ನು ಹುಡುಕಿಕೊಂಡಿದ್ದಾನೆ. ಮಠಾಧಿಪತಿಯೂ ಯತಿಯೂ ಆದ ಆತನ ಅಭಿರುಚಿ ಉಳಿದ ಕವಿಗಳಿಗಿಂತ ಭಿನ್ನವಾಗಿರುವುದು ಸ್ವಾಭಾವಿಕವಾಗಿದೆ. ತನ್ನ ಧರ್ಮದ ಹಿನ್ನೆಲೆಯಲ್ಲಿ ತಾತ್ವಿಕ ಪಾತಳಿಯ ಮೇಲೆ ಕಾವ್ಯಸೃಷ್ಟಿ ಮಾಡಬೇಕೆಂಬ ಹಂಬಲ ಷಡಕ್ಷರದೇವನಿಗಿದ್ದಂತೆ ತೋರುತ್ತದೆ. ಈ ಹಿಂದೆ ಭಕ್ತಕವಿಯಾಗಿ, ಶಿವಕವಿಯಾಗಿ ಕನ್ನಡ ಸಾಹಿತ್ಯದಲ್ಲಿ ನೂತನ ಮಾರ್ಗವನ್ನು ನಿರ್ಮಿಸಿದ ಹರಿಹರದೇವನ ಆದರ್ಶವು ಷಡಕ್ಷರದೇವನ ಹಂಬಲವನ್ನು ಈಡೇರಿಸಿಕೊಡಲು ಒಂದು ದೀಪಸ್ತಂಭವಾಗಿ ಕಂಡಿದ್ದರಿಂದ ಆ ದಿಶೆಯಲ್ಲಿಯೇ ಮುಂದುವರಿಯಲು ಆತನು ನಿರ್ಧರಿಸಿದ್ದಾನೆ :

ಮೃದು ಮಧುರ ಪದ ವಿಳಾಸಾ
ಸ್ಪದ ರಸವಿಸರ ಪ್ರಕಾರ ಕರ್ಣಾಟ ಕವಿ
ತ್ವದೊಳೂರ್ವನೆ ಪೆಸರ್ವಡೆದ
ಗ್ಗದ ಹರಿಹರನುದಿತ ಮಾರ್ಗದಿಂದಿದನೊರೆವೆಂ[1]

ಈ ಪದ್ಯದ ಹಿನ್ನೆಲೆಯಲ್ಲಿ ಮೃದುಮಧುರ ಪದವಿಳಾಸಾಸ್ಪದ, ರಸವಿಸರ ಪ್ರಕಾರ ಎಂಬೆರಡು ಅಂಶಗಳನ್ನು ಷಡಕ್ಷರದೇವನು ಹರಿಹರನಲ್ಲಿ ಗಮನಿಸಿ, ಅವಷ್ಟನ್ನೇ ತನ್ನ ಕಾವ್ಯದಲ್ಲಿ ಬರಮಾಡಿಕೊಳ್ಳಲು ಯತ್ನಿಸಿದನೆಂದು ಅವಸರದಿಂದ ತೀರ್ಮಾನಿಸಬೇಕಾದ ಅಗತ್ಯವಿಲ್ಲ. ಹಾಗೆ ನೋಡಿದರೆ ಹರಿಹರನ ಮೃದುಮಧುರ ಪದವಿಳಾಸ ಷಡಕ್ಷರದೇವನಲ್ಲಿ ಕಂಡು ಬರುವುದು ಕ್ವಚಿತ್ತಾಗಿ. ರಸವಿಸರ ಪ್ರಕಾರದಲ್ಲಿ ಹರಿಹರನ ಮಟ್ಟಿಗೆ ಎತ್ತಿ ಹೇಳುವ ಭಕ್ತಿರಸದ ಉಕ್ಕಂದವೂ ಷಡಕ್ಷರದೇವನಲ್ಲಿ ದೊರೆಯುವುದು ಕಡಿಮೆ. ಇವೆರಡೂ ಹರಿಹರನ ವೈಶಿಷ್ಟ್ಯಗಳನ್ನು ಸೂಚಿಸುವ ವಿಶೇಷಣಗಳೆಂದು. ಅವುಗಳ ಅರ್ಥ ಅಷ್ಟಕ್ಕೇ ಸೀಮಿತವೆಂದು ಭಾವಿಸಿಯೇ ಮುಂದೆ ಹೋಗಬೇಕು. "ಹರಿಹರನುದಿತ ಮಾರ್ಗದಿಂದಿದನೊರೆವೆಂ" ಎಂಬಲ್ಲಿಯ 'ಉದಿತ ಮಾರ್ಗವು' ಆತನ ಕಾವ್ಯೋದ್ದೇಶವನ್ನು ಕುರಿತು ಹೇಳಿದುದಾಗಿದೆ. ಶಿವಪಾರಮ್ಯ, ಶರಣರ ಮಹಿಮೆಯನ್ನು ಬಣ್ಣಿಸುವುದೇ ಹರಿಹರನ ಕಾವ್ಯೋದ್ದೇಶವಾಗಿತ್ತೆಂಬುದು ಎಲ್ಲರಿಗೂ ತಿಳಿದ ವಿಷಯ. 'ಪಂಪಾಶತಕ'ದ ಎರಡು ಪದ್ಯಗಳಲ್ಲಿ ಹರಿಹರನು ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದುಂಟು. ಅವನ ಆ ನಿಲುವನ್ನು ಅಥವಾ ಕಾವ್ಯಸೃಷ್ಟಿಯ ನಿಶ್ಚಿತ ಧೋರಣೆಯನ್ನು

೧. 'ರಾಜಶೇಖರ ವಿಳಾಸಂ' – ಸಂ : ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ : ಆ. ೧, ಪ. ೨೯.

ಷಡಕ್ಷರನು ವಿಧೇಯ ಶಿಷ್ಯನಂತೆ ಅನುಸರಿಸಿದ್ದುದನ್ನು ಕಾಣಬಹುದು. ತತ್ಸಂಬಂಧಿಯಾದ ಅವರಿಬ್ಬರ ಪದ್ಯಗಳನ್ನು ನೋಡಿದರೆ ಈ ಮಾತಿನ ಇತ್ಯರ್ಥವಾಗುವುದು.

ಪೊಗಳೆಂ ಮಿಕ್ಕಿನ ಚಕ್ರಪಾಣಿ ಸರಿಸೀಜೋದ್ಭವ ಸಂಕ್ರಂದನಾ
ದಿಗಳಂ ತಾನೆನೆ ಮರ್ತ್ಯಕೀಟಕರ ಮಾತಂತಿರ್ಕೆ ಮತ್ತಾವನಂ
ಬಗೆದಾರೆಂ ಬಿಡದಾ ಪರಂಗೆ ಶಶಿಭೂಷಂಗೀಶ್ವರಂಗೆಯ್ದೆ ನಾ
ಲಗೆಯಂ ಮಾಱಿದೆನೊಲ್ದು ಹಂಪೆಯ ವಿರೂಪಾಕ್ಷಂಗದೇನೆಂದಪೆಂ[1]

ಚಕ್ರಪಾಣಿ ಮೊದಲಾಗಿ ಯಾರನ್ನೂ ಬಗೆಯದೆ ತನ್ನ ನಾಲಿಗೆಯನ್ನು ಹರನಿಗೆ ಸಂಪೂರ್ಣವಾಗಿ ಹರಿಹರನು ಸಮರ್ಪಿಸಿದರೆ,

ರಸೆಯೊಳ್ ರಸವತ್ಕವಿತೆಯ
ನುಸಿರಲ್ಪಡೆದಸಮ ನಯನನಂ ಪೊಗಳದೆ ಮಾ
ನಿಸರಂ ಸುರರಂ ಪೊಗಳ್ವುದು
ಕಸವರಮಂ ಕಳೆದು ಕಸವನಾಂತವೊಲಕ್ಕುಂ

ಅದರಿಂದೆ ಮಹಿತ ಮಹಿಮಾ
ಸ್ಪದನಂ ಶಿವನಂ ತದೀಯ ಶರಣವ್ರಜಮಂ
ಪಡೆದು ಮುದವೊದವೆ ಬಲ್ಲಂ
ದದೆ ನುತಿಪೆಂ ನುತಿಸೆನುಳಿದ ಸುರರಂ ನರರಂ[2]

ಮಾನಿಸರನ್ನು ಸುರರನ್ನು ಪೊಗಳುವುದು ಕಸವರವನ್ನು ಬಿಟ್ಟು ಕಸವನ್ನು ಪಡೆದುಕೊಂ–ಡಂತೆಂದು ಅಲಂಕಾರಪ್ರಿಯನಾದ ಷಡಕ್ಷರದೇವನು ಅಲಂಕಾರಿಕವಾಗಿಯೇ ಹೇಳಿ, ಶಿವನನ್ನು ಆತನ ಶರಣ ಸಮುದಾಯವನ್ನು ಸಂತಸದಿಂದ ತನಗೆ ತಿಳಿದಂತೆ ಸ್ತುತಿಸುವುದಾಗಿ ನುಡಿದು, ಕೊನೆಗೆ ಸುರರನ್ನು ನರರನ್ನು ಸ್ತುತಿಸಲಾರೆನೆಂದು ಸ್ಪಷ್ಟಪಡಿಸಿದ್ದಾನೆ. ಹರಿಹರನು ಒಂದು ವೃತ್ತದಲ್ಲಿ ಸಾಂದ್ರವಾಗಿ ಹೇಳಿದ ವಿಚಾರವನ್ನು ಷಡಕ್ಷರದೇವನು ಎರಡು ಕಂದಗಳಲ್ಲಿ ಒಂದಿಷ್ಟು ಬಿಡಿ ಬಿಡಿಯಾಗಿ ಹೇಳಿದ್ದಾನೆ, ಅಷ್ಟೆ.

ಹರಿಹರನು ಮಾನವರನ್ನು (ಕವಿಗಳನ್ನು) ಉದ್ದೇಶಿಸಿ (ಪದ್ಯದಲ್ಲಿ 'ಮಾನವ' ಎಂಬ ಸಂಬೋಧನೆಯಿದ್ದು ಅದು ಎಲ್ಲ ಮಾನವರನ್ನು (ಕವಿಗಳನ್ನು) ಒಳಗೊಳ್ಳುವಂತಿದೆ. ಆದರೆ ಅದು ಮಾನವನಾದ ತನ್ನನ್ನೇ ಕುರಿತು ಹರಿಹರನು ಸಂಬೋಧಿಸಿಕೊಂಡುದಾಗಿ ತೋರುತ್ತದೆ.) ಹೀಗೆ ಉಪದೇಶಿಸುತ್ತಾನೆ :

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆಯುಕ್ಕಟಾ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ಮೇಣ್

---

೧. 'ರಕ್ಷಾಶತಕ ಮತ್ತು ಪಂಪಾಶತಕ' –ಸಂ: ಶಿ. ಶಿ. ಬಸವನಾಳ, ಪಂಪಾಶತಕ ಪದ್ಯ–೨೧;

೩. 'ರಾಜಶೇಖರ ವಿಳಾಸಂ' –ಸಂ: ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ; ಆ. ೧, ಪ. ೨೧–೨೨,

ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನರ್ಪನ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಪಂಪೆಯಾಳ್ದನಾ೪

ಹರಿಹರನ ಈ ಉಪದೇಶವನ್ನು ಷಡಕ್ಷರನು ಸ್ವೀಕರಿಸಿ, ಆಚರಣೆಗೆ ಇಳಿಸಿದಂತೆ ಆತನ ಪದ್ಯವೊಂದರಿಂದ ತಿಳಿದು ಬರುತ್ತದೆ :

ಇಳೆಯೊಳ್ಮೆಣ್ಪುಟ್ಟಿ ಪುಟ್ಟುತ್ತುರುಳ್ವ ನರರ ಮೇಲುರ್ಬಿ ಕಬ್ಬಂಗಳಂ ಬಿ
ಚ್ಚಳಿಸುತ್ತಂ ತಮ್ಮ ದಗ್ಧೋದರವ ಪೊರೆಯಲೆಂದಕಟಾ ಕೆಟ್ಟರನ್ಯ
ರ್ಕಳಿದಂತಪ್ಪಲ್ಪ ಧೀಮಂತರನಸಮ ವೃಷಾಧೀಶನಂ ನಿತ್ಯನಂ ನಿ
ರ್ಮಳನಂ ಕೊಂಡಾಡಿ ಪೇಳ್ವೆಂ ಕೃತಿಯನೊಸಗೆಯಿಂ ಕೇಳ್ವುದೊಲ್ದೀಶ ಭಕ್ತರ್೫

ಹೀಗೆ ಹರಿಹರನಿಗೆ ಸಂವಾದಿಯಾದ ಕಾವ್ಯಧೋರಣೆಗಳು ಷಡಕ್ಷರದೇವನಲ್ಲಿ ದೊರೆಯುತ್ತವೆ. ಮಹಿತ ಮಹಿಮಾಸ್ಪದನಾದ ಶಿವನನ್ನು, ಶರಣ ಸಮುದಾಯವನ್ನು ಕುರಿತು ಕಾವ್ಯಸೃಷ್ಟಿ ಮಾಡುವುದೇ ಷಡಕ್ಷರದೇವನ ಮುಖ್ಯ ಕಾವ್ಯೋದ್ದೇಶವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಹರಿಹರನ ಈ ಉದ್ದೇಶವನ್ನು ತನ್ನ ಆದರ್ಶವಾಗಿಸಿಕೊಂಡೂ ಷಡಕ್ಷರನು ಕಾವ್ಯವಸ್ತುವಿನ ಆಯ್ಕೆಯಲ್ಲಿ ತುಂಬ ಸ್ವಾತಂತ್ರ್ಯ ವಹಿಸಿದ್ದಾನೆ. ಆತನ ಕನ್ನಡದ ಮೂರು ಕೃತಿಗಳಲ್ಲಿ ಯಾವುದೊಂದೂ ಹರಿಹರನಿಂದ ನೇರವಾಗಿ ಪ್ರೇರಣೆಯನ್ನು ಪಡೆದಿಲ್ಲ. 'ಬಸವರಾಜ ವಿಜಯಂ' ಕಾವ್ಯಕ್ಕೆ 'ಬಸವರಾಜದೇವರ ರಗಳೆ'ಯಿಂದ ನೆರವು ಪಡೆಯಬೇಕಾದ ವಸ್ತುವಿಷಯವಿದ್ದರೂ ಷಡಕ್ಷರದೇವನು ಅದಕ್ಕೆ ಗಮನ ಕೊಟ್ಟಂತೆ ಕಂಡು ಬರುವುದಿಲ್ಲ. ಭೀಮ ಕವಿಯ 'ಬಸವ ಪುರಾಣ'ವು ಮಾತ್ರ ಆತನನ್ನು ಆಕರ್ಷಿಸಿದಂತೆ ತೋರುತ್ತದೆ. 'ರಾಜಶೇಖರ ವಿಳಾಸಂ' ಮತ್ತು 'ಶಬರಶಂಕರ ವಿಳಾಸಂ' ಇವುಗಳ ವಸ್ತು ಹರಿಹರನಲ್ಲಿ ದೊರೆಯುವುದೇ ದುರ್ಲಭ. ಇವುಗಳ–ಲ್ಲೊಂದಕ್ಕೆ ಗುಬ್ಬಿ ಮಲ್ಲಣಾರ್ಯನ 'ಭಾವ ಚಿಂತಾರತ್ನ' ಆಕರವಾಗಿದೆ. ಇನ್ನೊಂದಕ್ಕೆ ಶಿವನ ಪಂಚವಿಂಶತಿ ಲೀಲೆಗಳನ್ನು ಬಿತ್ತರಿಸುವ ಕೃತಿಯೊಂದು ಸಹಾಯಕವಾಗಿ ನಿಂತಿದೆ. ಕುಮಾರವ್ಯಾಸ ಭಾರತದ ಪ್ರಸ್ತುತ ಸನ್ನಿವೇಶವು ಷಡಕ್ಷರನನ್ನು ಆಕರ್ಷಿಸಿದ್ದರೆ ಅದು ಅಸಹಜವಾದುದೇನೂ ಅಲ್ಲ. ವಸ್ತುವಿನ ಆಯ್ಕೆಯಲ್ಲಿ ಷಡಕ್ಷರನದು ತೀರ ಸ್ವತಂತ್ರ ದೃಷ್ಟಿ ಎಂಬುದು ಇಲ್ಲಿ ಮುಖ್ಯ.

'ರಾಜಶೇಖರ ವಿಳಾಸಂ' 'ಬಸವರಾಜ ವಿಜಯಂ' ಮತ್ತು 'ಶಬರಶಂಕರ ವಿಳಾಸಂ' ಇವುಗಳನ್ನು ಈ ಕ್ರಮವಾಗಿಯೇ ರಚಿಸುವಲ್ಲಿ ಷಡಕ್ಷರದೇವನು ಒಂದು ವಿಶಿಷ್ಟ ಉದ್ದೇಶವನ್ನು ಹೊಂದಿರಬೇಕೆನಿಸುತ್ತದೆ. ಮಾತ್ರ ಮಹಿಮೆ. ಶರಣ ಜೀವನ ಚರಿತ್ರೆ ಮತ್ತು ಶಿವನ ಲೀಲೆ ಇವು ಮೂರು ಕ್ರಮವಾಗಿ ಈ ಕೃತಿಗಳ ಕಾವ್ಯ ವಸ್ತುಗಳು. ಇವು ವೀರಶೈವ ಧರ್ಮದ ಕ್ರಮವಿಕಾಸವನ್ನು ಸೂಚಿಸುವಂಥವುಗಳಾಗಿವೆ. ಮಂತ್ರದೀಕ್ಷೆ ವೀರಶೈವ ಧರ್ಮಾಚರಣೆಯಲ್ಲಿ ಆರಂಭದ ಮೆಟ್ಟಲು. ಮಂತ್ರದೀಕ್ಷಿತನಾದವನು

೪. 'ರಕ್ಷಾಶತಕ ಮತ್ತು ಪಂಪಾಶತಕ' –ಸಂ: ಶಿ.ಶಿ. ಬಸವನಾಳ–ಪಂಪಾಶತಕ ಪದ್ಯ–೮೨.
೫. 'ಬಸವರಾಜ ವಿಜಯಂ' –ಸಂ: ಡಾ. ಆರ್. ಸಿ. ಹಿರೇಮಠ: ಆ. ೧. ಪ. ೪೪.

ಆದೊಂದನ್ನೇ ನಿಷ್ಠೆಯಿಂದ ಜಪಿಸುತ್ತಿದ್ದರೆ ಶಿವಸಾಕ್ಷಾತ್ಕಾರವನ್ನು ಪಡೆಯಬಲ್ಲನು. ಈ ಮಾತನ್ನು ಶಿವಭಕ್ತರಿಗೆ ಮನದಟ್ಟು ಮಾಡಿಕೊಡಲು ಮೊದಲಿಗೆ 'ರಾಜಶೇಖರ ವಿಳಾಸಂ' ಬರೆದಿರಬಹುದಾಗಿದೆ. ಭಕ್ತಿ. ಜ್ಞಾನ. ಕ್ರಿಯೆ (ಶಿವಾಚಾರ) ಇವು ಮಂತ್ರ ದೀಕ್ಷೆಯ ನಂತರ ಜೀವನದಲ್ಲಿ ಅಳವಡಬೇಕಾದ ಮಹತ್ವದ ಸಾಧನೆಗಳು. ಶರಣರ ಜೀವನದಲ್ಲಿ ಇವು ಹಾಸುಹೊಕ್ಕಾಗಿರುತ್ತವೆಂದು ಬೇರೆ ಹೇಳಬೇಕಾಗಿಲ್ಲ. ಭಕ್ತಿ ಭಂಡಾರಿಗಳಾದ ಬಸವಣ್ಣನವರ ಹಾಗೂ ಅವರ ಪ್ರಭಾವಲಯದಲ್ಲಿ ಬೆಳಗಿದ ಶರಣರ ಜೀವನವನ್ನು ಚಿತ್ರಿಸಲು 'ಬಸವರಾಜ ವಿಜಯಂ' ಎಂಬ ಬೃಹತ್ ಕಾವ್ಯವನ್ನು ಬರೆದಿರಬೇಕು. ಮಂತ್ರದೀಕ್ಷೆ, ಶರಣ ಜೀವನ ಇವು ಮೊದಲನೆಯ ಹಾಗೂ ಎರಡನೆಯ ಮೆಟ್ಟಲುಗಳಾದರೆ ಶಿವನು ಮಾನವ ರೂಪದಲ್ಲಿ ಪ್ರಕಟಗೊಳ್ಳುವುದು ಮೂರನೆಯ ಹಾಗೂ ಕೊನೆಯ ಮೆಟ್ಟಲಾಗುತ್ತದೆ. ಮೊದಲಿನ ಎರಡು ಹಂತಗಳಲ್ಲಿ ಮಾನವನು ದೇವರೆಡೆಗೆ ಸಾಗುವ ಪ್ರಯತ್ನ ಹೆಚ್ಚಾಗಿದ್ದರೆ, ಮೂರನೆಯ ಹಂತದಲ್ಲಿ ದೈವತ್ವವು ಮಾನವ ರೂಪದಲ್ಲಿ ಇಳಿದು ಬರುವುದರ ಸಾಧ್ಯತೆ ಹೆಚ್ಚಾಗಿದೆ. ಒಟ್ಟಿಂದದಲ್ಲಿ ದೈವತ್ವವನ್ನು ಆಹ್ವಾನಿಸುವ ಮಾನವ ಅಭೀಪ್ಸೆಯೂ. ಆ ಅಭೀಪ್ಸೆಗೆ ಓಗೊಡುವ ದೈವೀ-ಕೃಪೆಯೂ ಷಡಕ್ಷರದೇವನ ಕಾವ್ಯಗಳಲ್ಲಿ ಕ್ರಮವಾಗಿ ಮೂಡಿ ಬಂದಿವೆ ಎಂದು ಹೇಳಬಹುದು. ಸ್ವತಃ ಯತಿಯಾದ ಷಡಕ್ಷರದೇವನು ತನ್ನ ಸಾಧನೆ, ಸಿದ್ಧಿಗಳನ್ನು ಆಧಾರವಾಗಿಟ್ಟು ಕಾವ್ಯಸೃಷ್ಟಿ ಮಾಡಿದಂತಿದೆ. ಅಂತೆಯೇ ದೀಕ್ಷೆ. ಸಾಧನೆ. ಶಿವಕೃಪೆಗಳು ಸುವ್ಯವಸ್ಥಿತ ತತ್ವನಿರೂಪಣೆಗಳಾಗಿ, ಒಂದೊಂದು ಕಾವ್ಯದ ವಸ್ತುಗಳಾಗಿ, ಕವಿಯ ಯತಿತ್ವ ಮತ್ತು ಕವಿತ್ವಗಳೆರಡನ್ನೂ ಸಮ ಸಮವಾಗಿ ಬೆಳಗಿಸಿವೆ.

'ರಾಜಶೇಖರ ವಿಳಾಸಂ' ಕಾವ್ಯದಲ್ಲಿ ಮಂತ್ರ ದೀಕ್ಷೆ. ಮಂತ್ರ ಜಪ. ಮಂತ್ರ ಸಿದ್ಧಿಗಳನ್ನು ಷಡಕ್ಷರದೇವನು ಅನುಭವಪೂರ್ಣವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಲೌಕಿಕಾನುಭವವು ಕಾವ್ಯದಲ್ಲಿ ಬೇಕಾದಷ್ಟಿದ್ದರೂ ಅದು ಕವಿಯ ಅನುಭವ ಕ್ಷೇತ್ರದ ಹೊರಗಿನದು ; ಅಂದರೆ ಇನ್ನೊಬ್ಬರಿಂದ ತಿಳಿದುಕೊಂಡಂತಹದು. ಕಾವ್ಯದಲ್ಲಿ ಎದ್ದು ಕಾಣುವ ಶೃಂಗಾರಚಿತ್ರಣದ ಬಗ್ಗೆ ಕವಿಯು ತನಗಿರುವ ಅನುಭವವೆಂತಹದೆಂದು ಹೇಳುವ ಮಾತೇ ಇದಕ್ಕೆ ಸಾಕ್ಷಿ:

> ಅನುಚಿತ್ತಮಲ್ತೆ ಯೋಗಿಜನ ಮಂಡನ ನೀ ಕೃತಿ ಪೇಳ್ವುದಿಲ್ಲಿ ಕೇ
> ಳ್ಮನಸಿಜ ಕೇಳಿ ಮುಖ್ಯಜನರಂಜನ ವರ್ಣನೆಗೆವುದೆಂದು ಸ
> ಜ್ಜನರಿದನೆನ್ನಡರ್ಕೆ ಶಿವಯೋಗಿ ಹರೀಶ್ವರ ಮಲ್ಲಣಾರ್ಯರಿಂ
> ದಿನ ಪೊಸಕಬ್ಬಮಂ ನೆಗಳ್ದರಾನವರಂತಿರೆ ಪೇಳ್ವೆನಿಂತಿದಂ.[೬]

ಎಂದಿದ್ದಾನೆ. ಇಲ್ಲಿಯ ಶೃಂಗಾರವೆಲ್ಲ ಹರೀಶ್ವರ. ಮಲ್ಲಣಾರ್ಯರಿಂದ ಎರವಲು ಪಡೆದಿದೆಯೆಂದು ಕವಿ ಹೇಳುತ್ತಿದ್ದರೂ, ಕೆಲವೆಡೆಯಲ್ಲಿ ಅವರನ್ನು ಮೀರಿಸುವಂತೆ ಚಿತ್ರಿಸಿರು

---

೬. 'ರಾಜಶೇಖರ ವಿಳಾಸಂ' ಸಂ: ಡಾ. ಆರ್.ಸಿ. ಹಿರೇಮಠ ಮತ್ತು ಪ್ರಾ. ಎಂ. ಎಸ್. ಸುಂಕಾಪುರ: ಆ. ೧ ಪ-೮೮.

ವುದು ಅಚ್ಚರಿಯನ್ನುಂಟುಮಾಡುತ್ತದೆ. ಅದೇನೇ ಇದ್ದರೂ ಲೌಕಿಕವನ್ನು ಚಿತ್ರಿಸುವುದು ಕವಿಯ ಉದ್ದೇಶವಾಗಿರಲಿಲ್ಲ ಎಂಬುದನ್ನು ಮಾತ್ರ ಒಪ್ಪಿಕೊಳ್ಳಬೇಕಾಗುವುದು. ನೇಮಿಚಂದ್ರನ ರಸವೊಸರುವ 'ಲೀಲಾವತಿ'ಯನ್ನು ಮೆಟ್ಟಿ ನಿಲ್ಲುವ ಸರಸಕಾವ್ಯವನ್ನು ಷಡಕ್ಷರದೇವನು ಬರೆಯಲು ಉದ್ದೇಶಿಸಿದನೆಂಬ ಐತಿಹ್ಯವೊಂದಿದೆ. ಅದೂ ಒಂದು ಸಾಮಯಿಕ ದೃಷ್ಟಿಯಾಗಿದ್ದರೂ ಇರಬಹುದು. ಆದರೆ ಅದೇ ಕವಿಯ ಮುಖ್ಯ ಆಶಯವಲ್ಲ. "ಓದುಗರಿಗೆ ಶೃಂಗಾರರಸದ ಲಂಚ ಕೊಟ್ಟು ಅವರನ್ನು ಶಾಂತರಸದ ಮಂಗಳ ಮಂಚಕ್ಕೆ ಕೊಂಡೊಯ್ಯಬೇಕೆಂಬುದೇ ಕವಿಯ ಉದ್ದೇಶವಾಗಿರಬೇಕು."[೭] ಎಂದು ಶ್ರೀ ಎಚ್. ದೇವೀರಪ್ಪನವರು ಹೇಳುವ ಮಾತು ತರ್ಕಶುದ್ಧವೆನಿಸುತ್ತದೆ ಕಾಂತಾಸಮ್ಮಿತದಂತೆ ತನ್ನ ಕಾವ್ಯವಿರಬೇಕೆಂದು ಕವಿ ಬಯಸಿರಬಹುದಾಗಿದೆ. ನಮ್ಮ ಈ ಊಹೆಯನ್ನು ಬದಿಗಿಟ್ಟು ಕವಿಯೇ ತನ್ನ ಕಥಾನಕದ ಬಗ್ಗೆ ಏನು ಹೇಳುತ್ತಾನೆಂಬುದನ್ನು ನೋಡಬೇಕು:

ನರನೊರ್ಮೆ ನೆನೆಯೆ ಶಂ
ಕರನಂ ನೆಱೆ ಮಾಳ್ಪ ಮಹಿಮೆಯುಂ ತಳೆದ ಷಡ
ಕ್ಷರ ಮಾತ್ರದಮಳಕಥನಮು
ನೊರೆವೆನ್ನಿಂದನ್ಯರೊಳರೆ ಧನ್ಯರ್ಜಗದೊಳ್[೮]

ಷಡಕ್ಷರ ಪಂಚಾಕ್ಷರ ಮಂತ್ರ ಜಪಿಸಿದರೆ, ಅವನ ಮಹಿಮೆ ವ್ಯಕ್ತವಾಗುವ ಅಮಳ ಕಥೆಯನ್ನು ಹೇಳಿ ಧನ್ಯತೆಯನ್ನು ಪಡೆಯುವ ಉದ್ದೇಶ ಕವಿಗಿದ್ದುದು ಇಲ್ಲಿ ಸ್ಪಷ್ಟವಾಗುತ್ತದೆ. ಈ ಉದ್ದೇಶವನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಅವನ ಕಾವ್ಯವರ್ಣನೆಯ ಪರಿಧಿಯನ್ನು ಗುರುತಿಸಬೇಕು. ಶೃಂಗಾರ, ಕರುಣ ಮೊದಲಾದ ರಸಪ್ರಸಂಗಗಳು ಕಾವ್ಯವನ್ನು ಆಕರ್ಷಕವಾಗುವಂತೆ ಮಾಡಲುಬಂದ ಸಲಕರಣೆಗಳಾಗಿವೆ. ಕಾವ್ಯದ ಅಂತರ್ಯದಲಿ ಒಂದೆರಡು ಸನ್ನಿವೇಶಗಳಲ್ಲಿ–ಪಂಚಾಕ್ಷರಮಂತ್ರದ ಘನತೆಯನ್ನು ಅತ್ಯಂತ ತಾತ್ತ್ವಿಕವಾಗಿ ವರ್ಣಿಸಿದ್ದು, ಕವಿಯು ನಿಜವಾದ ಧೋರಣೆಯನ್ನು ವ್ಯಕ್ತಪಡಿಸುತ್ತದೆ.

ಚೆನ್ನನ ಶಿವಾಚಾರ್ಯರು ಕಥಾನಾಯಕನಾದ ರಾಜಶೇಖರನಿಗೆ ಮಂತ್ರೋಪದೇಶ ಮಾಡುವ ಸಂದರ್ಭದಲ್ಲಿ ಪ್ರಣವ ಪಂಚಾಕ್ಷರಿ ಮಂತ್ರದ ಮಹತ್ತ್ವವು ಹೇಗೆ ವ್ಯಕ್ತವಾಗಿದೆಯೆಂಬುದನ್ನು ನೋಡಬೇಕು:

ಘನಮುಕ್ತಿಕಾಂತೆಗಿದು ತಾಂ
ಜನಸಿ ಲಸದ್ಭಕ್ತಿಯುವತಿಗಿದು ಕೆಳದಿ ಮರಾ

೭. 'ಅಭಿವಂದನೆ' (ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳ ಸಂಭಾವನಾ ಗ್ರಂಥ)ದಲ್ಲಿಯ ಶ್ರೀ ಎಚ್. ದೇವೀರಪ್ಪನವರ ಲೇಖನ: 'ರಾಜಶೇಖರ ವಿಳಾಸ'–ಪು. ೨೮೧.

೮. 'ರಾಜಶೇಖರ ವಿಳಾಸಂ'–ಸಂ: ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ –ಆ. ೧. ಪ. ೮೯.

ತ್ರನರ ಮತದಿಂದೆ ಶರಣಾಂ
ಗನೆ ಗಭವನನೆಳೆದು ತರ್ಪದೂದವಿ ಪೆಱತೇಂ[೯]

ಮುಕ್ತಿಗೆ ತಾಯಿಯೂ, ಭಕ್ತಿಗೆ ಕೆಳದಿಯೂ ಆದ ಮಂತ್ರವು ಅಭವನನ್ನು ಶರಣಸತಿ ಯೆಡೆಗೆ ಎಳೆದು ತರುವ ದೂದವಿಯೂ ಆಗಿದ್ದುದು ಗಮನಾರ್ಹವಾಗಿದೆ. ಇಲ್ಲಿಯ ರೂಪಕ ಷಡಕ್ಷರದೇವನ ಕವಿತ್ವಕ್ಕೆ ಒಂದು ಅನುಪಮ ನಿದರ್ಶನವಾಗಿದೆ. ಇದೇ ಸಂದರ್ಭ ದಲ್ಲಿ ಬರುವ ಇನ್ನೊಂದು ಪದ್ಯದಲ್ಲಿ ಅನುಭಾವ ದರ್ಶನದ (Mystic–vision) ಎತ್ತರವನ್ನೂ ಕಾಣಬಹುದು.

ತನುವಿಲ್ಲದ ತನುವಿಧ್ವಂ
ಸನಂಗೆ ತನು ಪೇಳಲೊಂದು ಪೆಸರಿಲ್ಲದ ಚಿ
ದ್ಘನಲಿಂಗಕ್ಕಿದು ಪೆಸರೆಂ
ದೆನೆ ಬಣ್ಣಿ ಪರಾರೊ ಪಂಚವರ್ಣದ ಘನವಂ[೧೦]

ಬಣ್ಣನೆಗೆ ಮೀರಿದ ಈ ಪಂಚಾಕ್ಷರ ಮಂತ್ರವನ್ನು ನಂಬಿ ಜಪಿಸಿದರೆ ಅಮಳ ಶಿವಪದವಿ ದೊರಕುವುದೆಂದು ಕವಿ ಮುಂದಿನ ಪದ್ಯಗಳಲ್ಲಿ ಹೇಳಿದ್ದಾನೆ.

ಪಂಚಾಕ್ಷರ ಮಂತ್ರದ ಮೇಲಿರಬೇಕಾದ ಶ್ರದ್ಧೆ–ನಿಷ್ಠೆಗಳು ಪುತ್ರಾಪೇಕ್ಷಿತಳಾಗಿ ಮಂತ್ರದೀಕ್ಷಿತಳಾದ ರಾಜಶೇಖರನ ತಾಯಿಯ ಆಚರಣೆಯಲ್ಲಿ, ರಾಜಶೇಖರನ ಶಿವ ಪೂಜಾ ಸನ್ನಿವೇಶದಲ್ಲಿ, ಕೊನೆಗೆ ಮರಣದಂಡನೆಯ ಶಿಕ್ಷೆ ಅನುಭವಿಸಬೇಕಾದ ಸಂದರ್ಭ ದಲ್ಲಿ ಮನೋಜ್ಞವಾಗಿ ಚಿತ್ರಿತವಾಗಿವೆ. ಕಾವ್ಯದ ಮುಕ್ತಾಯವು ಒಂದು ಅದ್ಭುತ ಪವಾಡದಂತಿದ್ದರೂ ಭಕ್ತ ಕುಟುಂಬವೊಂದು ತನ್ನನ್ನು ಸಮಗ್ರವಾಗಿ ಪರತತ್ತ್ವಕ್ಕೆ ಸಮ–ರ್ಪಿಸಿಕೊಂಡ ಅಸಾಧಾರಣ ಚಿತ್ರಣವುಳ್ಳದ್ದಾಗಿದೆ. ಕಾವ್ಯದ ಮೈಯಲ್ಲಿ ವಿಸ್ತಾರವಾದ ಲೌಕಿಕ ವರ್ಣನೆಗಳು ಬಂದಿದ್ದರೂ ಆಕಾಶದಲ್ಲಿ ಬಹುದೂರಕ್ಕೆ ಹೋದ ಗಾಳಿಪಟವು ತನ್ನ ಮೂಲಸೂತ್ರಕ್ಕೆ ಬದ್ಧವಾಗಿರುವಂತೆ ಆ ಎಲ್ಲ ವರ್ಣನೆಗಳು ಮಂತ್ರ ಮಹಿಮೆಯ ಸೂತ್ರಕ್ಕೆ ಬದ್ಧವಾಗಿವೆ.

‘ಬಸವರಾಜ ವಿಜಯಂ’ ಕಾವ್ಯವು ಹೆಸರೇ ಸೂಚಿಸುವಂತೆ ಬಸವಣ್ಣನವರ ವ್ಯಕ್ತಿತ್ವ ಹಾಗೂ ಪ್ರಭಾವಲಯದ ಸುತ್ತ ಹೆಣೆದ ಕಥೆಗಳ ಮಾಲೆಯಾಗಿದೆ.

ಕೃತಿ ಬಸವಪುರಾಣಂ ಕೃತಿ
ಪತಿ ಬಸವಂ ಕೃತಿಯನುಸಿರ್ದವಂ ಶಿವಕವಿ ಸಾ
ರತರ ಷಡಕ್ಷರಿ ದೇವಂ
ಕೃತಿಪಾಲಕರ ಭವಭಕ್ತರೆನೆ ಮಚ್ಚದರಾರ್[೧೧]

---

೯. ‘ರಾಜಶೇಖರ ವಿಳಾಸಂ’ –ಸಂ: ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ; –ಆ, ೪. ಪ. ೯೧.

೧೦. ಅದೇ ,, ,, ಆ. ೪. ಪ. ೯೪

೧೧. ‘ಬಸವರಾಜ ವಿಜಯಂ’–ಸ: ಡಾ. ಆರ್. ಸಿ. ಹಿರೇಮಠ –ಆ. ೧. ಪ. ೫೬

ಹೀಗೆಂದು ಕಾವ್ಯವಸ್ತುವಿನ ನಿರ್ದೇಶನ ಮಾಡಿ, ಬಸವಣ್ಣನವರ ವ್ಯಕ್ತಿತ್ವವನ್ನು ಶಿವಕವಿ ಷಡಕ್ಷರದೇವನು ಭಕ್ತಿಪುಲಕಿತನಾಗಿ ಕೊಂಡಾಡಿದ್ದಾನೆ. ಬಸವಣ್ಣನವರ ಜೀವನವನ್ನು ಚಿತ್ರಿಸುವಲ್ಲಿ ಕವಿಗಿರುವ ಉದ್ದೇಶವು ಕಾವ್ಯದ ಪ್ರಥಮಾಶ್ವಾಸದಲ್ಲಿ ನಾರದ ಹಾಗೂ ಶಿವನ ಸಂಭಾಷಣೆಯ ಮೂಲಕ ವ್ಯಕ್ತವಾಗಿದೆ. ನಾರದನು ಪರಶಿವನನ್ನು ಭೆಟ್ಟಿಯಾಗಿ:

ನರಲೋಕವೊಂದಜ್ಞಿತೊಳ್ಪರ
ಹರಭಕ್ತಿಯತೀವ ಗುಪ್ತಮಾಗಿರ್ದಪುದು[೧೨]

ಎಂದು ವರದಿ ಮಾಡಿದುವಲ್ಲದೆ, ಪುರಹರನು ಸ್ವತಃ ಅವತರಿಸಿ ಭಕ್ತಿ, ಜ್ಞಾನ ವೊದಲಾದವುಗಳನ್ನು ಭೂಮಿಯ ಮೇಲೆ ಬೆಳಗಿಸಬೇಕೆಂದು ವಿಜ್ಞಾಪಿಸಿಕೊಳ್ಳುವನು. ಅದಕ್ಕೆ ಶಿವನು:

..................ಎನಗಂ
ನಂದೀಶಂಗಂ ಭೇದಮ
ದೊಂದದು ಮದ್ರೂಪನೀತನಂ ಕಳುಪಿದಪೆಂ[೧೩]

ಎಂದು ತನಗೂ ನಂದೀಶನಿಗೂ ಇರುವ ಅಭೇದ ಸಂಬಂಧವನ್ನು ಹೇಳಿ:

ಈ ನಂದಿನಾಥನಿಂದೆ ಸೆ
ದಾನಂದ ಬಡೆವುದಲ್ತೆ ಜಗಮು ಪರಶಿವಂ
ತಾನೆನೆನಿಪೀತಂ ಭಕ್ತಿ
ಜ್ಞಾನ ಶಿವಚಾರಮಂ ಪ್ರತಿಷ್ಠಿಪನಿಳೆಯೊಳ್ [೧೪]

ಎಂದು ಸ್ಪಷ್ಟಪಡಿಸಿದ್ದಾನೆ. ಪರಶಿವನ ಪ್ರತಿರೂಪವಂತಿರುವ ಬಸವಣ್ಣನವರು ಭಕ್ತಿ, ಜ್ಞಾನ, ಶಿವಾಚಾರ (ಕ್ರಿಯೆ)ಗಳನ್ನು ಇಹದಲ್ಲಿ ಪ್ರತಿಷ್ಠಾಪನೆ ಮಾಡಿದುದನ್ನು ನಿರೂಪಿಸುವುದೇ ಷಡಕ್ಷರದೇವನ 'ಬಸವರಾಜ ವಿಜಯಂ' ಕಾವ್ಯದ ಮುಖ್ಯ ಗುರಿಯಾಗಿತ್ತೆಂಬುದು ಮೇಲಿನ ಸಂಭಾಷಣೆಯಿಂದ ಖಚಿತವಾಗುತ್ತದೆ. ಇಲ್ಲಿ ಬರುವ ಹಲವಾರು ಶರಣರ ಕಥೆಗಳು ಆ ಗುರಿಯ ವ್ಯಾಪ್ತಿಗೇ ಸೇರಿದವುಗಳಾಗಿವೆ. ಈ ಕಾವ್ಯದಲ್ಲಿ ಕವಿಯ ವರ್ಣನೆಯ ವ್ಯಾಮೋಹ ಕಡಿಮೆಯಾಗಿದ್ದು, ವಾಸ್ತವತೆ, ಸಹಜತೆಗಳ ಕಡೆಗೆ ದೃಷ್ಟಿ ಹರಿದಿದೆ. ಶರಣರ ಜೀವನವನ್ನು ಮನಂಬುಗುವಂತೆ ಚಿತ್ರಿಸುವಲ್ಲಿ ಕವಿ ತನ್ಮಯನಾಗಿದ್ದಾನೆ. ಅದರಿಂದಾಗಿ ಈ ಕೃತಿಯು ಉಳಿದ ಕೃತಿಗಳಿಗಿಂತ ಭಿನ್ನವಾಗಿದೆ, ಮಿಗಿಲಾಗಿದೆ. ಇದು ಕನ್ನಡ ಸಾಹಿತ್ಯಕ್ಕೇ ಷಡಕ್ಷರದೇವನು ಕೊಟ್ಟ ಮಹತ್ವದ ಕೊಡುಗೆ ಎಂದು ಹೇಳಬಹುದು.

ಅನೇಕ ಕಥೆಗಳುಳ್ಳ ಈ ಕಥಾವಸ್ತುವನ್ನು ಆಯ್ದುಕೊಳ್ಳುವಲ್ಲಿ ಷಡಕ್ಷರದೇವನು ಇನ್ನೊಂದು ಉದ್ದೇಶವನ್ನು ಇರಿಸಿಕೊಂಡಿರಬಹುದೆಂದು ಅನ್ನಿಸುತ್ತದೆ. ಕಥೆಗಳ

---

೧೨. 'ಬಸವರಾಜ ವಿಜಯಂ' –ಸಂ: ಡಾ. ಆರ್. ಸಿ. ಹಿರೇಮಠ ಆ. ೧. ಪ. ೯೨
೧೩. ಅದೇ ,, ಆ. ೧. ಪ. ೪೬
೧೪. ಅದೇ ,, ಆ. ೧. ಪ. ೯೭

ಮೂಲಕ ಜನತೆಗೆ ಧರ್ಮತತ್ತ್ವಗಳನ್ನು ತಿಳಿಸಿ ಕೊಡುವುದು ಒಂದು ಸುಲಭ ಉಪಾಯವಾಗಿದೆ. "ಮತಧರ್ಮ ತತ್ವಗಳನ್ನು, ಅವುಗಳ ನೀತಿಯ ನೆಲೆಗಟ್ಟನ್ನು, ಸಂದೇಶವನ್ನು ಜನ ಸಾಮಾನ್ಯರಿಗೆ ತಿಳಿಸುವುದಕ್ಕಾಗಿ ಪುರಾಣಗಳ ಸೃಜನೆಯಾಗುತ್ತದೆ. ಕಥೆಗಳೇ ಇದಕ್ಕೆ ಪರಮ ಸಾಧನವೆಂದು ಬಹು ಕಾಲದಿಂದಲೂ ಜನತೆಯ ಅನುಭವಕ್ಕೆ ಬಂದ ಮಾತು.[೧೫]" ಎಂದು ಡಾ. ಆರ್. ಸಿ. ಹಿರೇಮಠ ಅವರು ಸೋದಾಹರಣವಾಗಿ ವಿವರಿಸಿದ್ದುಂಟು. ಈ ಮಾತು ಷಡಕ್ಷರದೇವನ ಅನುಭವಕ್ಕೂ ಬಂದಿರಲು ಸಾಕು.

ಪಂಚವಿಂಶತಿ ಲೀಲೆಗಳಲ್ಲೊಂದಾದ 'ಶಬರಶಂಕರ ಲೀಲೆ'ಯನ್ನು ಕವಿ ಆಯ್ದುಕೊಳ್ಳುವಲ್ಲಿ ಮಾನವರೂಪದಲ್ಲಿ ದೈವತ್ವವು ಪ್ರಕಟವಾಗುವುದನ್ನು ಚಿತ್ರಿಸುವ ದೃಷ್ಟಿಯಿದ್ದಂತೆ ತೋರುತ್ತದೆ. ಶಿವನು ತನ್ನ ಭಕ್ತರನ್ನು ಅರೆದು, ಒರೆದು ನೋಡಿ; ಅವರ ಅಚಲ ಭಕ್ತಿಗೆ ಒಲಿದು ಬೇಡಿದ್ದನ್ನೀವನೆಂಬ ಶರಣರ ಅನುಭವ ಸತ್ಯವನ್ನು ಈ ಕೃತಿಯಲ್ಲಿ ಪ್ರತಿಬಿಂಬಿಸುವ ಹಂಬಲವೂ ಕವಿಗಿಲ್ಲದಿಲ್ಲ. "....ಈ ಕಾವ್ಯದಲ್ಲಿ ಕಾಣುವುದು ಲೀಲಾಪ್ರಿಯನಾದ ಭಕ್ತಿಕಂಪಿತನಾದ ಶಿವನ ಕರುಣೆ, ಭಕ್ತನಾದ ಅರ್ಜುನನ ತಪೋನಿಷ್ಠೆ"[೧೬] ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಷಡಕ್ಷರದೇವನು ಅರ್ಜುನನ ತಪೋನಿಷ್ಠೆಯಲ್ಲಿ ಯೋಗಾನುಭವವನ್ನು ಸಾಕ್ಷಾತ್ತಾಗಿ ಚಿತ್ರಿಸಿದ್ದುದು ಇನ್ನೊಂದು ವೈಶಿಷ್ಟ್ಯವಾಗಿದೆ. ಸ್ವತಃ ಯೋಗಜೀವನವನ್ನು ಬಾಳಿದ ಆತನಿಗೆ ತನ್ನ ಅನುಭವವನ್ನು ಅಭಿವ್ಯಕ್ತಿಗೊಳಿಸಲು ಅರ್ಜುನನ ತಪಸ್ಸು ಒಳ್ಳೆಯ ಮಾಧ್ಯಮವಾಗಿದೆ. ನಿದರ್ಶನಕ್ಕಾಗಿ ಈ ಸನ್ನಿವೇಶದಲ್ಲಿಯ ಒಂದೆರಡು ಪದ್ಯಗಳನ್ನು ನೋಡಬೇಕು.

ದಶವಿಧ ನಾದಮಂ ಪದೆದು ಕೇಳ್ವ ಸಮುಜ್ವಳಬಿಂದು ತೇಜಮಂ
ಸ್ವಶುಭಚಿದಕ್ಷಿಯಿಂ ಬಿಡದೆ ನೋೞ್ಪ ವಿಕಾಶಿಮನೋಬ್ಜಗಂಧಮಂ
ಕುಶಲದೆ ಕೂರ್ತ ವಾಸಿಪ ಮಹಾಸುಖಸಂಶ್ರಯ ಮಧ್ಯನಾಡಿಕಾ
ವಿಶದಮೃತಪ್ರವಾಹಮೆನೆ ಪೀರ್ವ ವಿಳಾಸಮಳುಂಬಮಾತನೊಳ್

ಜ್ಞಾತೃ ಜ್ಞಾನ ಜ್ಞೇಯಕ
ತೀತನನಾದ್ಯಂತ ಶೂನ್ಯನಂ ನಿರಘ ಪರಂ
ಜ್ಯೋತಿಃ ಸ್ವರೂಪನಂ ಪ್ರ
ಖ್ಯಾತ ಚಿದಾನಂದ ರೂಪನಂ ಚಿಂತಿಸಿದಂ[೧೭]

ಇಲ್ಲಿಯ ವರ್ಣನೆ ಪಾತಂಜಲ ಯೋಗದರ್ಶನದಿಂದ ಆಧಾರಿತವಾದದ್ದೆನಿಸಿದರೂ ಸ್ವಯಂಪೂರ್ಣವಾಗಿದೆ. ನಾದ, ಬಿಂದು, ಕಲೆಗಳ ಅನುಭವ, ಜ್ಞಾತೃ–ಜ್ಞಾನ–ಜ್ಞೇಯ ತ್ರಿಪುಟಿಗಳಳಿದು ಜ್ಯೋತಿಃಸ್ವರೂಪನಾದ ಚಿದಾನಂದರೂಪನನ್ನು ಕಾಣುವ ದರ್ಶನ ಷಡಕ್ಷರದೇವನ ಯೋಗಸಿದ್ಧಿಯ ಪ್ರತಿಬಿಂಬದಂತಿದೆ.

---

೧೫. 'ಬಸವರಾಜ ವಿಜಯಂ' ಸಂ : ಡಾ. ಆರ್. ಸಿ. ಹಿರೇಮಠ, ಪ್ರಸ್ತಾವನೆ ಪು. CXXV

೧೬. 'ಶಬರಶಂಕರ ವಿಳಾಸ ಪ್ರಬಂಧಂ' (ಸಂಗ್ರಹ) ಸಂ : ಜಿ. ಎಸ್. ಶಿವರುದ್ರಪ್ಪ. ಬಿ. ಎಸ್. ಶಾಸ್ತ್ರಿ, ಪೀಠಿಕೆ–ಪು. XXXIX

೧೭. 'ಶಬರಶಂಕರ ವಿಳಾಸಂ' ಸಂ : ಶಿ. ಶಿ. ಬಸವನಾಳ–ಆ. ೨, ಪ. ೯೬–೯೭,

ಈ ಖಂಡಕಾವ್ಯದ ಕಥಾವಸ್ತು ಚಿಕ್ಕದು. ಐದು ಆಶ್ವಾಸಗಳಲ್ಲಿ ಕಾವ್ಯವನ್ನು ಹಿಗ್ಗಿಸಿಕೊಂಡ ಷಡಕ್ಷರದೇವನು ಶಿವಸ್ತುತಿಯನ್ನೂ ವಿಶೇಷ ಆಸ್ಥೆಯಿಂದ ಮಾಡಿದ್ದಾನೆ. ಇಲ್ಲಿ ಐವತ್ತಕ್ಕೂ ಮಿಕ್ಕಿ ಶಿವಸ್ತುತಿಪರವಾದ ಪದ್ಯಗಳಿರುವುದು ಕವಿಯ ಭಕ್ತಿಭಾವವನ್ನು ಎತ್ತಿ ತೋರಿಸುತ್ತದೆ. ಆದುದರಿಂದ ಈ ಕೃತಿಯು ಭಕ್ತಿ ಹಾಗೂ ಯೋಗಗಳ ಸಮನ್ವಯವನ್ನು ಸಾಧಿಸುವಂತಿದೆ. ಇಷ್ಟಲ್ಲದೆ ಸ್ಥಿರತರ ಭಕ್ತಿಯಿಂದ, ಸಮುಜ್ವಳಿತ ತಪಸ್ಸಿನಿಂದ ನೀನಾನೆಂಬುಭಯ ಅಳಿಯುವುದನ್ನೂ ಕವಿ ನಿವೇದಿಸಿದ್ದಾನೆ.

ನೀನಾನೆಂಬೆರಡಱದುದು
ಮಾನಸಮಂಭೋಧಿಯಾಲಿಕಲ್ಲಾಯ್ತು ಶಿವಂ
ತಾನಾವನೊ ತಾನೆ ಶಿವ
ನೇನಾದನೊ ಎಂಬ ತೆಱದಿನವನೊಪ್ಪಿರ್ದಂ[೧೮]

ಈ ಅದ್ವೈತಾನುಭವವನ್ನು ಅಥವಾ ಸಾಮರಸ್ಯವನ್ನು ನಿರೂಪಿಸುವುದು ಷಡಕ್ಷರದೇವನಿಗೆ ತೀರ ಅಗತ್ಯವಾಗಿ ತೋರಿದ್ದರಿಂದಲೇ ಈ ಸನ್ನಿವೇಶದ ಪ್ರಯೋಜನವನ್ನು ಪಡೆದಿದ್ದಾನೆ. ಇಲ್ಲಿ ಕಾವ್ಯವು ಉನ್ನತವಾದ ಆಧ್ಯಾತ್ಮಿಕ (Metaphysical) ಸ್ತರಗಳಲ್ಲಿ ವಿಹರಿಸುತ್ತದೆ.

ಹೀಗೆ ಆಧ್ಯಾತ್ಮಿಕ ಎತ್ತರವನ್ನು ತಲುಪಿಯೂ ಕಾವ್ಯವು ಜೀವನದಿಂದ ದೂರುಳಿಯುವುದಿಲ್ಲ. ಅರ್ಜುನನ ಭಕ್ತಿ, ತಪಸ್ಸುಗಳ ಪರಿಸರದಲ್ಲಿ, ಕಿರಾತವೇಷದ ಶಿವನ ನಡೆ–ನುಡಿಗಳಲ್ಲಿ ಮಾನವೀಯ ಮೌಲ್ಯಗಳಿವೆ. ಬೇಟೆಯ ವರ್ಣನೆಯು ಕಣ್ಣಿಗೆ ಕಟ್ಟುವಂತಹ ವಾಸ್ತವ ಚಿತ್ರಣವಾಗಿದೆ. ಭಕ್ತನಾದ ಅರ್ಜುನ ಹಾಗೂ ಭಕ್ತವತ್ಸಲನಾದ ಶಂಕರ ಇವರುಗಳ ಹೋರಾಟವು 'ಗೆಲುವೆನೆಂಬ ಭಾಷೆ ಭಕ್ತನದು; ಕೊಲುವೆನೆಂಬ ಭಾಷೆ ಶಿವನದು' ಎಂಬ ಶರಣರ ನುಡಿಯನ್ನು ಪ್ರಾಯೋಗಿಕ ಸತ್ಯವಾಗಿಸುತ್ತದೆ. ಕೊನೆಗೆ ಗೆಲುವು ಭಕ್ತನದು, ಶಿವನು ಭಕ್ತಿಕಂಪಿತನು ಎಂಬುದನ್ನು ಸಿದ್ಧ ಮಾಡಿಕೊಡುತ್ತದೆ. ಇದನ್ನೂ ಈ ಕಾವ್ಯದಲ್ಲಿ ಷಡಕ್ಷರದೇವನು ಸಾಧಿಸುವ ದೃಷ್ಟಿಯುಳ್ಳವನಾಗಿರಬಹುದು.

ಹೀಗೆ ಆಯಾ ಕಾವ್ಯವಸ್ತುವನ್ನು ತನ್ನ ನಿರ್ದಿಷ್ಟ ಉದ್ದೇಶಕ್ಕಾಗಿ ದುಡಿಸಿಕೊಂಡ ಷಡಕ್ಷರದೇವನು ಕಾವ್ಯಬಂಧದ ಬಗೆಗೂ ನಿಶ್ಚಿತ ಧೋರಣೆ ತಳೆದಿದ್ದಾನೆ. ವರ್ಣಕ ಕಾವ್ಯಗಳಿಂದ ನೇರವಾಗಿ ಕಥಾವಸ್ತುವನ್ನು ಆಯ್ದುಕೊಂಡಿದ್ದರೂ ವಸ್ತುಕವಾಗಿ ಕಾವ್ಯ ರಚಿಸುವ ಆಕಾಂಕ್ಷೆ ಕವಿಗಿದೆ.

...........ವೆರಮಲ್ಲಣ್ಣಾರ್ಯರು
ವಿರ್ಣಕವಿರಾಜರಾಜಿನುತಮಾಗಿರೆವರ್ಣಕದಿಂದೆ ಭಾವರ

---

೧೮. 'ಶಬರಶಂಕರ ವಿಳಾಸಂ' ಸಂ : ಶಿ. ಶಿ. ಬಸವನಾಳ, ಆ, ೨. ಪ. ೧೦೫,

ತ್ನಾಕರವಾಗೆ ಪೇಳ್ದರದಸೊಪ್ಪಿರೆ ವಸ್ತುಕವಾಗಿ ಪೇಳ್ವುದಾ
ಲೋಕಿತ ಕಾವ್ಯಬೃಂದದೊಳಗಿಲ್ಲದ ಮಂಜುಳಯುಕ್ತಿಪುಂಜದಿಂ[೧೯]

ಎಂದು ರಾಜಶೇಖರ ವಿಳಾಸದಲ್ಲಿ

ಪದಿನಯ್ದುಸೆಯುದಿದೆನಿಸುವ
ಮದನಾರಿಯ ಶಬರಲೀಲೆಯಂ ವಸ್ತುಕಮಾ
ರ್ಗದೊಳೊರೆದೆಂ......[೨೦]

ಎಂದು ಶಬರಶಂಕರ ವಿಳಾಸದಲ್ಲಿ ಹೇಳಿದ್ದಲ್ಲದೆ, ಬಸವಪುರಾಣವನ್ನು ಭೀಮಕವಿಯು ವರ್ಣಕ ಪ್ರೌಢಿಯಿಂದ ನೆಗಳ್ದುದನ್ನು[೨೧] ನೆನಪಿಸಿಕೊಂಡಿದ್ದಾನೆ. ಗಂಭೀರ ಪ್ರಕೃತಿಯ, ಕನ್ನಡ–ಸಂಸ್ಕೃತಗಳೆರಡರಲ್ಲಿ ಅಪಾರ ಪಾಂಡಿತ್ಯವುಳ್ಳ ಷಡಕ್ಷರದೇವನಿಗೆ ವಸ್ತುಕ ಮಾರ್ಗವೇ ಅಭಿವ್ಯಕ್ತಿಯ ತಕ್ಕ ಮಾಧ್ಯಮವಾಗಿ ಕಂಡಿದೆ. ಪಾಂಡಿತ್ಯದ ಉನ್ನತ ಶಿಖರಕ್ಕೇರಿದವರಿಗೆ ದೇಶಿಯ ಬಯಲು ಸೀಮೆಗೆ ಇಳಿದು ಬರುವುದು ಒಂದು ಪ್ರಮೇಯವೇ ಆಗಬಹುದೇನೋ? ಅಷ್ಟಲ್ಲದೆ ಸುಲಭೀಕರಣ ಮತ್ತು ಸರಳೀಕರಣಗಳು ತಮ್ಮ ಅಂತಸ್ತಿಗೆ ಸಮವಾಗಲಾರದೆಂಬ ಭಾವನೆಯೂ ಸಾಮಾನ್ಯವಾಗಿ ಪಂಡಿತರಾದವರಲ್ಲಿ ಇರುವಂತೆ ತೋರುತ್ತದೆ. ವಿದ್ವಾಂಸರಾದವರು ಜನತೆಯ ಬೌದ್ಧಿಕ ಮಟ್ಟವನ್ನು ಎತ್ತರಿಸಬೇಕೆಂಬ ಆಶೆಯುಳ್ಳವರೂ ಆಗಿರುವುದು ಸಹಜವಾಗಿದೆ. ಹಾಗೆ ಷಡಕ್ಷರದೇವನೂ ಆಶಿಸಿರಬಹುದಾಗಿದೆ. ಅಲ್ಲದೆ ವಿಬುಧರಿಂದ ತನ್ನ ಕಾವ್ಯ ಮನ್ನಿಸಲ್ಪಡಬೇಕೆಂಬ ಅಪೇಕ್ಷೆಯೂ ಕವಿಗಿದ್ದುದು ಆವನ ಕೃತಿಗಳಲ್ಲಿ ವ್ಯಕ್ತವಾಗಿದೆ.

ಕಾವ್ಯಮೆನಿಸಿರ್ದು ವಿಭುದಸು
ಸೇವ್ಯಂ ಘನರಸ ಮಿದೆನಿಸಿ ಭಂಗವಿರಹಿತಂ
ಭವ್ಯಗುಣಮೆನಿಸಿ ಕುಜನಾ
ಭಾವ್ಯಂ ಮತ್ಕೃತಿ ಚಮತ್ಕೃತಿಪ್ರದಮಲ್ತೇ[೨೨]

ಇಲ್ಲಿಯ 'ವಿಬುಧ ಸುಸೇವ್ಯಂ' ಹಾಗೂ 'ಭವ್ಯ ಗುಣಮೆನಿಸಿ ಕುಜನಾಭಾವ್ಯಂ' ಎಂಬ ಪದಗಳು ಕವಿಯ ದೃಷ್ಟಿಕೋನವನ್ನು ಸೂಚಿಸುತ್ತವೆ. ಇನ್ನೊಂದು ಪದ್ಯದಲ್ಲಿಯ 'ಅತಿರಸ ವೃತ್ಯಲಂಕೃತಿ' 'ಸಮನ್ವಿತ ಪದ್ಧತಿ' ಎಂಬ ಮಾತುಗಳು, 'ಬುಧವ್ರಜಸಮ್ಮತಿ' ಎಂಬ ವಿಚಾರವು ವಸ್ತು ಕಾವ್ಯದ ಬಗೆಗೆ ಕವಿಗಿರುವ ಆಸಕ್ತಿಯನ್ನು ತೋರಿಸಿಕೊಡುತ್ತದೆ.

'ಬಸವರಾಜ ವಿಜಯ'ವು "ಶಿವತಾಯುತರ್ಥದಾಯಿ ಬಂಧುರ ಬಸವೇಶನಂತೆ

೧೯. 'ರಾಜಶೇಖರ ವಿಳಾಸಂ' ಸಂ : ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ, ಆ. ೧. ಪ. ೭೮.

೨೦. 'ಶಬರಶಂಕರ ವಿಳಾಸಂ' ಸಂ : ಶಿ. ಶಿ. ಬಸವನಾಳ, ಅ. ೫, ಪ. ೫ .

೨೧. 'ಬಸವರಾಜ ವಿಜಯಂ' ಸಂ : ಡಾ. ಆರ್. ಸಿ. ಹಿರೇಮಠ, ಆ. ೧. ಪ. ೨೯.

೨೨. 'ರಾಜಶೇಖರ ವಿಳಾಸಂ' ಸಂ : ಡಾ. ಆರ್. ಸಿ. ಹಿರೇಮಠ. ಮತ್ತು ಡಾ. ಎಂ. ಎಸ್. ಸುಂಕಾಪುರ, ಆ. ೧. ಪ. ೮೧.

ಸುವದೀ ನವ್ಯಕಾವ್ಯಂ" ಎಂದಿಷ್ಟು ಅದರ ಮಹಿತಿಯನ್ನು ಹೇಳಿ ಮುಗಿಸದೆ ಮುಂದು ವರಿದು ಒಂದು ವೃತ್ತದಲ್ಲಿ ವಸ್ತುಕದಲ್ಲಿ ಬಳಕೆಯಾಗುವ ತನ್ನ ಪ್ರೀತಿಯ ವೃತ್ತಗಳನ್ನು ಹೆಸರಿಸಿದ್ದಾನೆ.

ಶ್ರೀಲಸದ್ಗಣಬದ್ಧ ವಾಕ್ಸುಮನಃ ಪ್ರತಾನ ಮನೋಹರಂ
ಲಾಲಿತೋತ್ಪಲಮಾಲೆ ಚಂಪಕಮಾಲೆ ಮಂಜುಳಮಲ್ಲಿಕಾ
ಮಾಲೆ ಕಾಂಚನಮಾಲೆ ಪೃಥ್ವಿವಿರಾಜಿತಂ ಲಲಿತಂ ತಟಿ
ಸ್ರಾಲೆಯಾ ಮಣಿ ಮಾಲೆಯುಂತೆ ಮತ್ಕೃತಿ ಪ್ರಮದಾವೃತ್ತಂ॥೨೩

ಈ ಪದ್ಯವು ಮಾಲೆಗಳ ಮಾಲೆಯೇ ಆಗಿದ್ದು, ಗಣಬದ್ಧವಾದ, ವಾಕ್ಸುಮನಗಳಂತಿರುವ ವೃತ್ತಗಳ ಕಡೆಗೆ ಕವಿಯು ಒಲಿದಿದ್ದು ಕಂಡುಬರುತ್ತದೆ.

ತನ್ನ ಸಮಗ್ರ ಕಾವ್ಯಕೃಷಿಯ ಬಗ್ಗೆ ಬರೆಯುತ್ತ ಅದರ ವಿಶೇಷತೆಯನ್ನು ಷಡಕ್ಷರದೇವನು ಹೀಗೆಂದು ಬಣ್ಣಿಸಿದ್ದಾನೆ:

ಸಕ್ಕದಗಬ್ಬಮಂ ಮಿಸುಪ ಕನ್ನಡಗಬ್ಬಮನೊಲ್ದು ಕೋವಿದರ್
ಚಿಕ್ಕಸಮುತ್ತು ಮೆಚ್ಚಿ ಪೊಗಟುತ್ತಿರೆ ಶಂಭುಕೃಪಾವಶೇಷದಿಂ
ಮೊಕ್ಕಳಮಾಗೆ ಸರ್ವರಸಮೊಪ್ಪಿರೆ ಪೇಟ್ದನಶೇಷ ಕಾವ್ಯಮಂ
ದಕ್ಕಿದು ಸಾರಮೆಂದೆನೆ ಷಡಕ್ಷರದೇವನದೇಂ ಪ್ರಗಲ್ಭನೋ॥೨೪

ಈ ಹೇಳಿಕೆಯಿಂದ ಕಾವ್ಯಕೋವಿದರು ಆಶ್ಚರ್ಯಪಟ್ಟು ಪ್ರಶಂಸುವಂತೆ ಸಂಸ್ಕೃತ, ಕನ್ನಡಗಳೆರಡರಲ್ಲಿ ಕೃತಿ ರಚಿಸಿ ಷಡಕ್ಷರದೇವನು ಪ್ರಗಲ್ಭನೆನಿಸಿಕೊಳ್ಳಲು ಅರ್ಹನಾಗಿದ್ದುದು ತಿಳಿದು ಬರುತ್ತದೆ.

ಹೀಗೆ ಪ್ರಗಲ್ಭನೆನಿಸಿಯೂ ಆತನು ರಸರುಚಿಯನ್ನು ಚೆನ್ನಾಗಿಬಲ್ಲವನಾಗಿದ್ದಾನೆ. ಕವಿ ವಿಬುಧರ ಮನಸ್ಸನ್ನು ಸೂರೆಗೊಳ್ಳುವಂತೆ ರಸವತ್ತಾಗಿ ಕಾವ್ಯ ರಚಿಸಬೇಕೆಂಬುದನ್ನೂ ಅರಿತಿದ್ದಾನೆ.

ಕವಿ ವಿಬುಧರ ಕಿವಿಯೊಳ್ಸೂ
ಸುವ ನವರಸಮಿಳಿದು ತೀವಿ ತನುವಂ ಮನಮಂ
ಕವಿದು ಪೊರಸೂಸಿತೆನೆ ಪೊ
ಣ್ಮುವ ಸುಖಬಾಷ್ಪಂ ತುಳುಂಕೆ ಪೇಳ್ವುದು ಕೃತಿಯಂ॥೨೫

ನವರಸ ಸೂಸಿ, ಸುಖಬಾಷ್ಪ ಉಂಟಾಗುವಂತೆ ಷಡಕ್ಷರದೇವನು ಕಾವ್ಯ ರಚಿಸಲು ಯತ್ನಿಸಿದುದನ್ನು ಅವನ ಕೃತಿಗಳಿಂದ ಅರಿತುಕೊಳ್ಳಬಹುದಾಗಿದೆ. ಆದರೆ ಇದು ನೂರಕ್ಕೆ ನೂರರಷ್ಟು ಸಾಧಿಸಿದೆ ಎಂದು ಹೇಳಬರುವಂತಿಲ್ಲ.

---

೨೩. 'ಬಸವರಾಜ ವಿಜಯಂ' ಸಂ : ಡಾ. ಆರ್. ಸಿ. ಹಿರೇಮಠ, ಆ. ೧. ಪ. ೬೧.
೨೪. 'ಶಬರಶಂಕರ ವಿಳಾಸಂ' ಸಂ : ಶಿ. ಶಿ. ಬಸವನಾಳ, ಆ. ೫. ಪ. ೬೨.
೨೫. 'ರಾಜಶೇಖರ ವಿಳಾಸಂ' ಸಂ ; ಡಾ. ಆರ್. ಸಿ. ಹಿರೇಮಠ, ಮತ್ತು ಡಾ. ಎಂ. ಎಸ್. ಸುಂಕಾಪುರ, ಆ. ೧. ಪ. ೫೨.

ತನ್ನ ಕಾವ್ಯ ರಸಜ್ಞರ ಮೇಲೆ ಬೀರಬಲ್ಲ ಪರಿಣಾಮವನ್ನು ಕುರಿತು ಅತ್ಯಂತ ಸೊಗಸಾಗಿ ಹೇಳಿದ ಮಾತನ್ನು ಮರೆಯುವಂತಿಲ್ಲ.

ಜೇಂಗೊಡದಂತೆ ಝೇಂಕರಿಪ ತುಂಬಿಗಳಿಂಚರದಂತೆ ಪೆಂಪನಾ
ಳ್ದಿಂಗಡಲಂತೆ ಪಣ್ತೆಸೆವ ಮಾಮರದಂತೆ ಪಯೋಜದಂತೆ ಬೆ
ಳ್ದಿಂಗಳ ಸೊಂಪಿನಂತೆ ಸುಸಿಲಾಸೆಯ ನಲ್ಲಳ ನೋಟದಂತೆ ಚಿ
ತ್ತಂಗೊಳಲಾರ್ಪುದೀ ಕೃತಿ ಷಡಕ್ಷರದೇವಕೃತಂ ರಸಜ್ಞರಾ೨೬

ರಾಜಶೇಖರ ವಿಳಾಸ'ವನ್ನು ಕುರಿತು ಹೇಳಿದ ಇಲ್ಲಿಯ ಮಾತುಗಳಲ್ಲಿ ಅತಿಶಯೋಕ್ತಿ ಇಲ್ಲದಿಲ್ಲವಾದರೂ ಸತ್ಯಕ್ಕೆ ತೀರ ದೂರವಾದುದಾಗಿಲ್ಲ.

ಕಾವ್ಯವು ರಸನಿಷ್ಠವಾಗಿರಬೇಕೆಂಬುದು ಕಾವ್ಯ ಮೀಮಾಂಸೆಯ ಮಹತ್ವದ ಸಿದ್ಧಾಂತವಾಗಿದೆ. ನವರಸಗಳೆಲ್ಲ ಇರಬೇಕೆಂಬುದು ಮಹಾಕಾವ್ಯದ ತಂತ್ರಗಳಲ್ಲೊಂದು. ಇವನ್ನೆಲ್ಲಬಲ್ಲ ಪಂಡಿತನಾದ ಷಡಕ್ಷರದೇವನು ತನ್ನ ಕಾವ್ಯಕೃತಿಗಳಲ್ಲಿ ರಸಸೃಷ್ಟಿಗೆ ವಿಶೇಷ ಗಮನ ಕೊಟ್ಟಿದ್ದಾನೆ. 'ರಾಜಶೇಖರ ವಿಳಾಸ'ದಲ್ಲಿ ಶೃಂಗಾರ, ಕರುಣರಸಗಳು, 'ಬಸವರಾಜ ವಿಜಯ'ದಲ್ಲಿ ಭಕ್ತಿರಸವೂ, 'ಶಬರಶಂಕರ ವಿಳಾಸ'ದಲ್ಲಿ ಭಕ್ತಿಯ ಜೊತೆಗೆ ವೀರರಸವೂ ಅಕೃತಕವಾಗಿ ವ್ಯಕ್ತವಾಗಿದ್ದು, ಸಹೃದಯರನ್ನು ಖಂಡಿತವಾಗಿ ಸೆರೆ ಹಿಡಿಯುತ್ತವೆ.

ಒಟ್ಟಿನಲ್ಲಿ ಷಡಕ್ಷರದೇವನು ಅಭಿಜಾತಕಾವ್ಯದ ಎಲ್ಲ ಲಕ್ಷಣಗಳನ್ನೂ ತನ್ನ ಕೃತಿಗಳಲ್ಲಿ ಬರಮಾಡಿಕೊಳ್ಳಲು ಯತ್ನಿಸಿದ್ದಾನೆ. ವಸ್ತುಕ ಕಾವ್ಯದ ಎಲ್ಲ ಸೊಬಗನ್ನೂ ತನ್ನ ಕೃತಿಗಳಲ್ಲಿ ತುಂಬಲು ಹವಣಿಸಿದ್ದಾನೆ. ಸಂಸ್ಕೃತ ಭೂಮಿಷ್ಠವಾದ ಗಂಭೀರ ವೃತ್ತಗಳೂ ಇಲ್ಲಿವೆ, ಲಲಿತವಾದ ಕನ್ನಡ ಕಂದಗಳೂ ಇಲ್ಲಿವೆ. ಛಂದಸ್ಸಿನ ವಿವಿಧ ಮಟ್ಟುಗಳನ್ನು ಬಳಸಿದ್ದು ಇನ್ನೊಂದು ವೈಶಿಷ್ಟ್ಯವಾಗಿದೆ. ಆತನಿಗಿರುವ ಇನ್ನೊಂದು ಗೀಳೆಂದರೆ ವರ್ಣನಾಪ್ರಿಯತೆ. ಕಥಾವಸ್ತುವನ್ನು ಮುಚ್ಚಿ ಮರೆ ಮಾಡುವಷ್ಟು ವರ್ಣನೆಯ ಬಾಹುಳ್ಯ ಅವನ ಕೃತಿಗಳಲ್ಲಿರುವುದನ್ನು ಕಾಣಬಹುದು. 'ಬಸವರಾಜ ವಿಜಯ'ವೊಂದರಲ್ಲಿ ಮಾತ್ರ ವರ್ಣನೆಯ ಹಾವಳಿ ಇಲ್ಲ. ಮಾತೆತ್ತಿದರೆ ಸಾಕು ಒಂದು ಅಲಂಕಾರದ ರೂಪ ತಾಳಿತೆನ್ನುವಷ್ಟರ ಮಟ್ಟಿಗೆ ಷಡಕ್ಷರದೇವನು ಅಲಂಕಾರಗಳನ್ನು ಸೃಷ್ಟಿಸಿದ್ದಾನೆ. ಕಾವ್ಯದ ನಿರರ್ಗಳ ಓಟಕ್ಕೆ ವರ್ಣನೆ, ಅಲಂಕಾರಗಳು ತಡೆಯನ್ನುಂಟು ಮಾಡುತ್ತಿದ್ದರೂ ಅವುಗಳಿಗೇ ತಮ್ಮದೇ ಆಕರ್ಷಣೆಯಿದೆ.

ಪಾತ್ರಗಳ ಮನೋಧರ್ಮವನ್ನು ಚಿತ್ರಿಸುವಲ್ಲಿ, ಸನ್ನಿವೇಶಗಳನ್ನು ಸೃಷ್ಟಿಸುವಲ್ಲಿ ಷಡಕ್ಷರದೇವನು ತನ್ನ ಸ್ವಂತಿಕೆಯನ್ನು ತೋರಿಸಿದ್ದು, ಅಲ್ಲಿಯೂ ಆತನ ಕಾವ್ಯೋದ್ದೇಶ ವ್ಯಕ್ತವಾಗುತ್ತದೆ. ಆದರೆ ಅದೊಂದು ಪ್ರತ್ಯೇಕವಾಗಿ ಚರ್ಚಿಸಬೇಕಾದ ವಿಷಯ.

---

೨೬. ರಾಜಶೇಖರ ವಿಳಾಸಂ: ಸಂ. ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ-ಆ. ೧, ಪ. ೫೨.

# ಉತ್ಕಟೇಚ್ಛೆ

ಎಸ್. ವಿ. ಶಿವಕುಮಾರ

ತುಂಬು ನೀಲಾಕಾಶದಲಿ
ರೆಕ್ಕೆ ಬಡಿಯದೆ ತೇಲುಗೊಂಡ
ಒಂಟಿ ಹದ್ದಿನಂತಾಗಿ
ಅಲ್ಲಿಂದಲೆ ಇಲ್ಲಿಯ ಆಟ–ಪಾಟಗಳ
ಪರಿವೀಕ್ಷಕನಾಗಿ
ವಾಸನಾಯುಕ್ತ ಸುಸೂಕ್ಷ್ಮ ಕಣ್ಣಾಗಿ
ನೆರಳು–ಬೆಳಕಿನಲಿ
ಬೆಳೆಗೊಂಡು ಬೇರಿಳಿದ
ಕಳೆ–ಬೆಳೆಗಳ ಖಚಿತಿಸಿಕೊಂಡು
ಆರು ಮೂರಾಗುವ, ಮೂರು ಆರಾಗುವ—
ಡೊಂಬತನಕ್ಕೆ,
ಅತ್ತಲಿತ್ತ ಉಯ್ಯಲಾಡುವ–
ಅಸ್ಥಿರತೆಗೆ,
ಚಣಕೊಂದು ಬಣ್ಣ ಕಟ್ಟುವ–
ಗೋಸುಂಬೆತನಕ್ಕೆ
ಧೂಮಕೇತುವಾಗಿ
ಒಂದೊಂದನೆ ಹೀರಿ ಹೀರಿ
ಪಟ್ಟೆಂದು ಬಯಲಾಗಬೇಕೆಂಬ
ಉತ್ಕಟೇಚ್ಛೆ.

# ಪಂಪಭಾರತದ ಪಾಠಾಂತರಗಳು

## (ಪ್ರಥಮ ಆಶ್ವಾಸ)

**ಹೇಮಲತಾ ಪಡಕಿ**

ಪಂಪ ಮಹಾಕವಿಯು ತನ್ನ ಭಾರತವನ್ನು ಬರೆದು ಸಾವಿರ ವರ್ಷಗಳಾದವು. ಮುದ್ರಣ ಸೌಕರ್ಯವಿಲ್ಲದ ಅಂದಿನ ದಿನಗಳಲ್ಲಿ ಲಿಪಿಕಾರರು ಈ ಮಹಾಕಾವ್ಯದ ಅನೇಕ ಪ್ರತಿಗಳನ್ನು ಮಾಡಿದರು. ಅನೇಕ ದೋಷಗಳು ಈ ಲಿಪಿಕಾರರಿಂದ ಆಗಿರುವ ಸಂಭವ ಇದ್ದೇ ಇದೆ. ಹೀಗಾಗಿ ಕೆಲವು ಪದಗಳ ಅರ್ಥ ಇದುವರೆಗೂ ಆಗಿಲ್ಲ. ಡಾ। ಡಿ. ಎಲ್. ಎನ್. ಅವರ ಪಂಪಭಾರತ ದೀಪಿಕೆ ಈ ನಿಟ್ಟಿನಲ್ಲಿ ಸ್ತುತ್ಯಕಾರ್ಯಮಾಡಿದೆ. ಆದರೂ ಹಲವು ದೋಷಯುತವಾದ ಪಾಠಗಳು ಹಾಗೇ ಉಳಿದಿವೆಯಲ್ಲದೆ ಹೊಸ ದೋಷಗಳೂ ಹುಟ್ಟಿಕೊಂಡಿವೆ. ಹೀಗಾಗಿ ಪಂಪಭಾರತದ ಪಾಠಗಳ ಅತ್ಯಂತ ಅಧ್ಯಯನ ಅವಶ್ಯವೆನಿಸುತ್ತದೆ. ಇಂಥ ಅಧ್ಯಯನ ಈ ಲೇಖನದ ಉದ್ದೇಶವಾಗಿದೆ.

ಬಿ. ಎಲ್. ರೈಸ್ ಅವರು ೧೮೯೮ ರಲ್ಲಿ ಮೈಸೂರು ಅರಮನೆಯ ಸರಸ್ವತೀ ಭಾಂಡಾರದ ತಾಳೆಯೋಲೆಯ ಪ್ರತಿ (ಖ), ಭಂಡಾರ್ಕರ್ ಓರಿಯಂಟಲ್ ರಿಸರ್ಚ ಇನ್‌ಸ್ಟಿಟ್ಯೂಟದ ತಾಳೆಯೋಲೆಯ ಪ್ರತಿ (ಗ) ಗಳ ಆಧಾರದ ಮೇಲೆ ಪಂಪಭಾರತ ವನ್ನು ಪ್ರಕಟಗೊಳಿಸಿದರು. ಈ ಮೂರು ಪ್ರತಿ (೨ ತಾಳೆ ಪ್ರತಿ. ೧ ಮುದ್ರಿತ ಪ್ರತಿ) ಗಳ ಮತ್ತು ಆರಾ ಪಟ್ಟಣದ ಸೆಂಟ್ರಲ್ ಜೈನ ಓರಿಯಂಟಲ್ ಲೈಬ್ರರಿಯಲ್ಲಿಯ ತಾಳೆ ಯೋಲೆ ಪ್ರತಿ(ಘ)ಗಳ ಆಧಾರದ ಮೇಲೆ ಕ. ಸಾ. ಪರಿಷತ್ತು ಬೆಳ್ಳಾವೆ ವೆಂಕಟ ನಾರಾಯಣಪ್ಪನವರ ಸಂಪಾದಕತ್ವದಲ್ಲಿ ಪಂಪಭಾರತವನ್ನು ಪ್ರಕಟಗೊಳಿಸಿತು. ಘ ಪ್ರತಿ ಮೂಲ ಪಂಪಭಾರತಕ್ಕೆ ಸಮೀಪವಾದದ್ದು. ಆದರೆ ಈ ಪ್ರತಿಯಲ್ಲಿ ತಿದ್ದುಪಡಿಗಳು ಬಹಳ ಪ್ರಮಾಣದಲ್ಲಿ ಮಾಡಲ್ಪಟ್ಟಿವೆ.

ಈ ಲೇಖನದಲ್ಲಿ ಪರಿಷತ್ತು ಪ್ರಕಟಿಸಿದ ಪಂಪಭಾರತವನ್ನು ಆಧಾರವಾಗಿಟ್ಟು ಕೊಂಡಿದ್ದರೂ ದೀಪಿಕೆಯಲ್ಲಿಯ ದೋಷಾದೋಷಗಳನ್ನೂ ಅವಶ್ಯವಿದ್ದಲ್ಲಿ ಚರ್ಚಿಸ ಲಾಗಿದೆ.

೧-೧. ಈ ಪದ್ಯದಲ್ಲಿ ಪಂಪ ತನ್ನ ಆಶ್ರಯದಾತ ಅರಿಕೇಸರಿ ನಾರಾಯಣ ನಿಗಿಂತ ಉದಾತ್ತನೆನ್ನುತ್ತ ಆತ ತನಗೆ ಸೌಖ್ಯಕೋಟಿಯನ್ನೀಯಲಿ ಎಂದು ಪ್ರಾರ್ಥಿ ಸಿದ್ದಾನೆ. ಪಾಠಾಂತರ ಸಮಸ್ಯೆ ತಲೆದೋರುವದು ಪದ್ಯದ ಮೂರನೆಯ ಪಾದದಲ್ಲಿ. ಸುಪುಷ್ಪ ವೃಷ್ಟಿ ಎಂಬಲ್ಲಿ. ಇದಕ್ಕೆ ಇರುವ ಒಂದೇ ಒಂದು ಪಾಠ 'ಸುಪುಷ್ಪವೃಷ್ಟಿ'.

(ಪ). ಪದ್ಯದ ಮೊದಲಿನ ಎರಡು ಸಾಲುಗಳಿಂದ ಅರಿಕೇಸರಿಯ ಉದಾತ್ತತೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆದರೆ ಮೂರನೆಯ ಪಾದದಲ್ಲಿ ಅದು ಸ್ಪಷ್ಟವಾಗುವದಿಲ್ಲ. ಡಾ। ಡಿ. ಎಲ್. ನರಸಿಂಹಾಚಾರ್ಯರು ದೀಪಿಕೆಯಲ್ಲಿ ಈ ಪಾಠವನ್ನು ಊಹಾತ್ಮಕವಾಗಿ ಪರಿಷ್ಕರಿಸಿ 'ಸುಪುಷ್ಪಪಟ್ಟ' ವೆಂಬ ಪಾಠವನ್ನು ಸ್ವೀಕರಿಸಿದ್ದಾರೆ. ಅವರು "ದೇವತಾ ವಿಗ್ರಹಗಳಿಗೆ ಪುಷ್ಪಪಟ್ಟವೆಂಬ ಕಿರೀಟವನ್ನು ಕೆತ್ತುತ್ತಿದ್ದರು. ನಾರಾಯಣ ಬರಿ ಪುಷ್ಪಪಟ್ಟವನ್ನು ತಾಳಿದರೆ ಅರಿಕೇಸರಿ ತನಗೇ ಮೀಸಲಾದ ಸುಪುಷ್ಪಪಟ್ಟ ವೆಂಬ ಕಿರೀಟವನ್ನು ಧರಿಸಿದ್ದನು" ಎಂದು ಅರ್ಥೈಸಿದ್ದಾರೆ. ಈ ಪಾಠದ ಬಗ್ಗೆ ಚರ್ಚೆ ನಡೆಸಿ ಡಾ। ಎಮ್. ಎಮ್. ಕಲಬುರ್ಗಿಯವರು ಇದು 'ಸುಪುಷ್ಪಪಟ್ಟ'ವಲ್ಲ, ಸುಪುಷ್ಪದೃಷ್ಟಿ' ಎಂದು ಹೇಳಿದ್ದಾರೆ. 'ಸುಪುಷ್ಪದೃಷ್ಟಿ'ಯೆಂಬ ಪಾಠವನ್ನು ಇಟ್ಟುಕೊಂಡರೆ ಅರಿಕೇಸರಿ ನಾರಾಯಣನಿಗಿಂತ ಉದಾತ್ತನೆಂಬ ಅರ್ಥ ಸ್ಪಷ್ಟವಾಗಿ ಆಗುತ್ತದೆ. "ವಿಷ್ಣುವಿಗೆ ಸುಪುಷ್ಪ (ಕಮಲ) ದೃಷ್ಟಿ ಮೂಲತಃ ಇದ್ದುದಲ್ಲ. ಕಮಲದ ಬದಲು ಶಿವನ ಪಾದಕ್ಕೆ ಕಣ್ಣು ಅರ್ಪಿಸಿದ ಕಾರಣ ಅದು ಅವನ ಕಣ್ಣಿಗೆ ಅಲಂಕಾರಿಕವಾಗಿ ಬಳಕೆಯಾದ ಪದ. ಆದರೆ ಅರಿಕೇಸರಿಯದು ಹೀಗಲ್ಲ. ಅತನು ಸುಪುಷ್ಪ (ಕಮಲ) ದೃಷ್ಟಿಯನ್ನು ಜನ್ಮತಃ ತಾಳಿರುವನು ಎಂದು ಹೇಳುವ ಉದ್ದೇಶವಿದ್ದಂತಿದೆ ಕವಿಗೆ. ಇದರಿಂದ 'ಸುಪುಷ್ಪದೃಷ್ಟಿ' ಎಂಬುದೇ ಯೋಗ್ಯಪಾಠವೆನಿಸುತ್ತದೆ."[೧] 'ಸುಪುಷ್ಪದೃಷ್ಟಿ.' ಅಕ್ಷರಸಾದೃಶ್ಯದಿಂದ 'ಸುಪುಷ್ಪವೃಷ್ಟಿ' ಯಾಗಿರುವ ಸಾಧ್ಯತೆ ಇರುವದರಿಂದ 'ಸುಪುಷ್ಪದೃಷ್ಟಿ'ಯೇ ಉಚಿತಪಾಠವೆಂದು ಹೇಳಬಹುದು.

೧-೯. ಈ ಪದ್ಯದಲ್ಲಿ ಕವಿಯು ಅರಿಕೇಸರಿಗೆ ಅರ್ಪಿಸಿದ ಕಾವ್ಯಶ್ರೀಯ ವಿಷಯವಾಗಿ ಹೇಳುತ್ತಾನೆ. ಪಾಠಾಂತರಸಮಸ್ಯೆ ಇರುವದು ಕೊನೆಯ ಪಾದದಲ್ಲಿ. ಪಂ. ಭಾ. ಹಾಗೂ ದೀಪಿಕೆಯಲ್ಲಿ 'ಅರಿಕೇಸರಿಗಲ್ಲದ ವಸ್ತುಗೀವುದೇ' ಎಂಬ ಪಾಠವನ್ನು ಸ್ವೀಕರಿಸಲಾಗಿದೆ. ಇದಕ್ಕೆ ಪಾಠಾಂತರ 'ವಸ್ತುವೀವುದೆ' (ಪ). ಅರಿಕೇಸರಿಗೆ ಅಲ್ಲದ ವಸ್ತುವಿಗೆ ಕಾವ್ಯಶ್ರೀಯನ್ನು ಕೊಡುವದೇ ಎಂದು ದೀಪಿಕೆಯಲ್ಲಿ ಅರ್ಥ ಹೇಳಲಾಗಿದೆ. ಆದರೆ ಪರಿಷ್ಕೃತ ಪಾಠವನ್ನು ಅಂಗೀಕರಿಸಿದರೆ ಇದಕ್ಕಿಂತ ಹೆಚ್ಚು ಉಚಿತವಾದ ಅರ್ಥ ಹೊರಡಬಹುದು ಎನಿಸುತ್ತದೆ. ಅರಿಕೇಸರಿಗೆ ಅಲ್ಲದ (ಸಲ್ಲದ) ವಸ್ತುವನ್ನು ಕೊಡುವದೇ ? ಹಾಗೆ ಕೊಡಬಾರದೆಂದೇ ಅತನ ಘನತೆಗೆ ತಕ್ಕ ಕಾವ್ಯಶ್ರೀಯನ್ನೇ ಕಾಣಿಕೆಯನ್ನಾಗಿ ಇತ್ತಿದ್ದಾನೆ ಕವಿ. ಆದ್ದರಿಂದ ಇಲ್ಲಿ 'ಅರಿಕೇಸರಿಗಲ್ಲದ ವಸ್ತುವೀವುದೇ' ಎಂಬ ಪಾಠವೇ ಉಚಿತವೆನಿಸುತ್ತದೆ.

೧-೧೦. ಈ ಪದ್ಯದಲ್ಲಿ ಗುಣಾರ್ಣವ ಹಾಗೂ ಕವಿತಾ ಗುಣಾರ್ಣವ ಇಬ್ಬರೂ ಶ್ರೇಷ್ಠರೆಂದು ಹೇಳಲಾಗಿದೆ. ಪಾಠಾಂತರ ಸಮಸ್ಯೆ ಉದ್ಭವವಾಗುವದು ಪದ್ಯದ ಮೂರನೇಯ ಪಾದದಲ್ಲಿ. 'ಷೋಡಶಾವನಿಪರೋಳಿಯೊಳಂ' ಎಂಬ ಪಾಠವನ್ನು

---

೧. 'ಪಂಪ ಭಾರತದ ಮಂಗಲ ಪದ್ಯ' –ಎಮ್. ಎಮ್. ಕಲಬುರ್ಗಿ.

ಪಂ. ಭಾ. ಮತ್ತು ದೀಪಿಕೆಯಲ್ಲಿ ಸ್ವೀಕರಿಸಲಾಗಿದೆ. ಇದಕ್ಕೆ 'ಷೋಡಶಾವನಿಪರೋಳಿ–ಯೊಳೀ' (ಪ) ಎಂಬ ಬೇರೆ ಪಾಠವೂ ಇದೆ. ಈ ಎರಡೂ ಪಾಠಗಳಲ್ಲಿ ಅರ್ಥ ವ್ಯತ್ಯಾಸಗಳೇನೂ ಕಂಡು ಬರುವದಿಲ್ಲ, ಆದರೆ ಪದ್ಯದ ಒಟ್ಟು ಅಂದಕ್ಕೆ ಭಂಗ ಬಂದಂತಾಗುತ್ತದೆ. ಷೋಡಶಾವನಿಪರೋಳಿಯಲ್ಲಿ 'ಈ ಗುಣಾರ್ಣವಂ' ಶ್ರೇಷ್ಠ ಎಂದು ಹೇಳಿರುವದರಿಂದ ಇಲ್ಲಿಯೂ ಸತ್ಕವಿಗಳೋಳಿಯೋಳ್ 'ಈ ಕವಿತಾಗುಣಾರ್ಣವಂ' ಶ್ರೇಷ್ಠ ಎಂದು ಇರಬೇಕಾಗಿತ್ತು. ಅದ್ದರಿಂದ ಪರಿಷತ್ತಿನ ಪಾಠ ಸ್ವೀಕಾರಾರ್ಹವೆನಿಸುತ್ತದೆ. 'ನೆಗಟ್ತೆವೆತ್ತ ಸತ್ಕವಿಗಳ ಷೋಡಶಾವನಿಪರೋಳಿಯೊಳೀ ಕವಿತಾಗುಣಾರ್ಣವಂ ಕವಿತೆಯೊಳಗ್ಗಳಂ ಗುಣದೊಗ್ಗಳಮೆಲ್ಲಿಯುಮೀ ಗುಣಾರ್ಣವಂ' ಎಂದು ಪದ್ಯದ ಚೆಲುವಿಕೆ ಉಳಿಯುತ್ತದೆ ಪರಿಷತ್ತಿನ ಪಾಠದ ಸ್ವೀಕರಣೆಯಿಂದ.

೧-೧೧, ಈ ಪದ್ಯದಲ್ಲಿ ಕವಿ ತನ್ನ ಪ್ರಬಂಧದ ಬಗ್ಗೆ ಹೇಳಿದ್ದಾನೆ. ಈ ಪದ್ಯದ ಕೊನೆಯ ಪಾದದ 'ಬಿಚ್ಚಟೀಸು' ಎಂಬ ಪದ ಸಮಸ್ಯೆಯನ್ನು ಹುಟ್ಟಿಸುತ್ತದೆ, ಇದಕ್ಕೆ ಪಾಠಾಂತರಗಳೇನೂ ಇಲ್ಲ, ಈ ಪದ 'ಟ'ಕಾರಯುಕ್ತವೋ 'ಳ' ಕಾರಯುಕ್ತವೋ ಎನ್ನುವುದನ್ನು ಶ್ರೀ ಹಂಪನಾ ಅವರು 'ಉಪಾಯನ'ದಲ್ಲಿ ದೀರ್ಘವಾಗಿ ವಿಚಾರಿಸಿದ್ದಾರೆ.[೨] ಸಂಸ್ಕೃತ ಶಬ್ದದ ತದ್ಭವ ರೂಪ ಬಿಚ್ಚಳಿಸು. 'ಬಿಚ್ಚಟೀಸು' ಕನ್ನಡದಲ್ಲಿ ಅಷ್ಟೇ ಅಲ್ಲ ಇತರ ದ್ರಾವಿಡಭಾಷೆಗಳಲ್ಲಿ ಇಲ್ಲ. ಆದ್ದರಿಂದ ಇದು ಬಿಚ್ಚಳಿಸು ಎಂದಿರಬೇಕು. ಜಗನ್ನಾಥ ವಿಜಯ, ವಡ್ಡಾರಾಧನೆ, ಸುಕುಮಾರ ಚರಿತ ಮುಂತಾದವುಗಳಲ್ಲಿ ಬಿಚ್ಚಳಿಸು ಎಂದೇ ಇದೆ. ಇದರ ಅರ್ಥ ಹುರಿದುಂಬಿಸು, ವಿಸ್ತರಿಸು. ಈ ಪದ್ಯದಲ್ಲಿ ಹುರಿದುಂಬಿಸು ಎಂದು ಅರ್ಥವಾಗುತ್ತದೆ. ಇಲ್ಲಿ ಪ್ರಯೋಗವಾದ 'ಬಿಚ್ಚಟೀಸು' ಪದ ತಪ್ಪು, 'ಬಿಚ್ಚಳಿಸು' ಸರಿ.

೧-೧೨. ಅ. ಟಿ. ಪಂಪಭಾರತದಲ್ಲಿ ೧೨ ನೆಯ ಪದ್ಯದ ನಂತರ ಅಡಿಟಿಪ್ಪಣಿಯಲ್ಲಿ ಒಂದು ಪದ್ಯವನ್ನು ಕೊಡಲಾಗಿದೆ. ಸಂಪಾದಕರು ಅದನ್ನು ಇತ್ತೀಚಿನ ಪದ್ಯ ಎಂದು ತಿಳಿದು ಕಾವ್ಯ ಭಾಗದಲ್ಲಿ ಸೇರಿಸಿಲ್ಲ, ಘ ಪ್ರತಿಯಲ್ಲಿ ಹಂಸಪಾದಹಾಕಿಕೊಟ್ಟ ಪದ್ಯವಿದ್ದು, ಪತ್ರವು ಹರಿದು ಹೋಗಿರುವದರಿಂದ ಅದೂ ಸಮಗ್ರವಾಗಿಲ್ಲ. ಆ ಪದ್ಯದಲ್ಲಿ ಭಾರತಕಥೆ ಸಾಹಿತ್ಯರೂಪದಲ್ಲಿ ನಡೆದು ಬಂದುದನ್ನು ಹೇಳಲಾಗಿದೆ. ತಾವು ಎತ್ತಿಕೊಂಡ ಕಥೆಯ ಇಂಥ ಸಂಪ್ರದಾಯವನ್ನು ಹೇಳುವದು ನಮ್ಮ ಕವಿಗಳಲ್ಲಿ ಒಂದು ಸಾಮಾನ್ಯ ಪದ್ಧತಿಯಾಗಿ ಪರಿಣಮಿಸಿದೆ. ಈ ಮಾತಿಗೆ ಚಾವುಂಡರಾಯ ಪುರಾಣದ ಪೀಠಿಕಾ ಪ್ರಕರಣವನ್ನು ನೋಡಬಹುದು. ಮೇಲಾಗಿ ಅಡಿಟಿಪ್ಪಣಿಯಲ್ಲಿ ಕೊಟ್ಟ ಈ ಪದ್ಯದ ಶೈಲಿ ಪಂಪನ ಶೈಲಿಯನ್ನೇ ದಟ್ಟವಾಗಿ ಹೋಲುತ್ತದೆ. ಹೀಗಾಗಿ ಪಂಪವಿರಚಿತವಾಗಿರಬಹುದಾದ ಆ ಪದ್ಯವೂ ಕಾವ್ಯಭಾಗದಲ್ಲಿ ಸೇರಲು ಅರ್ಹವಾದದ್ದು. ಘ ಪ್ರತಿ ಮೂಲಪ್ರತಿಗೆ ಹೆಚ್ಚು ಸಮೀಪದ್ದು ಎಂಬ ವಿಚಾರವೂ ಈ ಅಭಿಪ್ರಾಯಕ್ಕೇ

---

೨. ಬಿಚ್ಚಟೀ(ಳಿ)?ಸು—ಒಂದು ವಿಚಾರ—ಹಂಪನಾ.

ಪುಷ್ಟಿಯನ್ನು ಕೊಡುತ್ತದೆ.

೧-೧೪. ಈ ಪದ್ಯದಲ್ಲಿ ಕವಿ ತಾನು ಗುಣಾರ್ಣವ ಭೂಭುಜನಂ ಕಿರೀಟಿಯೊಳ್ ತಗುಳ್ಚಿ ಕಾವ್ಯ ರಚಿಸಿದ್ದನ್ನು ಹೇಳಿದ್ದಾನೆ. ಈ ಪದ್ಯದ ಎರಡನೆಯ ಪಾದದಲ್ಲಿಯು ಪಾಠ ಸಮಸ್ಯೆಯನ್ನು ಹುಟ್ಟಿಸುತ್ತದೆ. ಪಂ. ಭಾ. ದಲ್ಲಿ 'ಪ್ರೋಲಿಪದೀತ್ರಸುದಾತ್ತ' ಎಂಬ ಪಾಠವನ್ನು ಸ್ವೀಕರಿಸಲಾಗಿದೆ. ಇದು ಅರ್ಥ ದೃಷ್ಟಿಯಿಂದ ಸರಿಯಾದ ಪಾಠವಲ್ಲ, ಇದಕ್ಕೆ ಎರಡು ಪಾಠಾಂತರಗಳಿವೆ. 'ಪೋಲಿಪರೀ' (ಪ), 'ಪೋಲ್ದೆಸದೀತ' (ಖ). ಪರಿಷತ್ತಿನ ಪಾಠವನ್ನು ದೀಪಿಕೆಯಲ್ಲಿ ಸ್ವೀಕರಿಸಲಾಗಿದೆ. ವಿಸ್ತಾರವಾದ ಕೀರ್ತಿರಾಶಿಯನ್ನು ಹೊಂದದವರಿಗೆ ಪೂರ್ವ ಭೂಮಿಪರ ಪದವಿಗಳನ್ನು ಆರೋಪಿಸಿ, ಕವಿಗಳು ಅವರ ನಾಯಕರನ್ನಾಗಿ ಮಾಡುತ್ತಾರೆ. ಆದರೆ ನಾನು ಹಾಗಲ್ಲ ಎಂದು ಪಂಪ ಇಲ್ಲಿ ಹೇಳುತ್ತಾನೆ, ಈ ಅರ್ಥ 'ಪೋಲಿಪರೀ' ಎಂಬ ಪಾಠದಿಂದ ಉಂಟಾಗುವದ ರಿಂದ ಪರಿಷತ್ತಿನ ಪಾಠವೇ ಸ್ವೀಕಾರಾರ್ಹವೆನಿಸುತ್ತದೆ.

೧-೧೯. ಈ ಪದ್ಯದಲ್ಲಿ ತನ್ನ ಆಶ್ರಯದಾತನ ವಂಶಾವಳಿಯನ್ನೂ, ಕೀರ್ತಿಪ್ರತಾಪ ಗಳನ್ನೂ ಕವಿ ವರ್ಣಿಸುತ್ತಾನೆ. ಈ ಪದ್ಯದ ಮೂರನೆಯ ಪಾದದಲ್ಲಿ ಪಾಠಾಂತರ ಸಮಸ್ಯೆ ತಲೆದೋರುವದು. ಪಂ. ಭಾ. ದಲ್ಲಿ 'ಪಡಿವಡೆ' ಎಂಬ ಪಾಠವನ್ನು ಸ್ವೀಕರಿಸ ಲಾಗಿದೆ. ಘ ಪ್ರತಿಯಲ್ಲಿ 'ಪಗೆವಡೆ' ಎಂಬ ಪಾಠವಿದೆ. ಈ ಪಾಠಾಂತರದ ಬಗ್ಗೆ ಹಂಪನಾ ಅವರು 'ಪಂಪಭಾರತದ ಪಾಠಾಂತರಗಳು' ಎಂಬ ಲೇಖನದಲ್ಲಿ ಚರ್ಚಿಸಿ ದ್ದಾರೆ. ಪಂಪನು ಈ ಪದವನ್ನು ಮತ್ತೆಲ್ಲಿಯೂ ಬಳಸಿದಂತೆ ಕಾಣುವದಿಲ್ಲ. ಕನ್ನಡ ದಲ್ಲಿ 'ಪಡಿ' ಪದವನ್ನು ಬಾಗಿಲು ಎಂಬರ್ಥದಲ್ಲಿಯೂ ಬಳಸುತ್ತೇವೆ. ಪಡಿವಡೆ ಎಂಬುದು ಪ್ರತಿ ಸೈನ್ಯವೆಂಬುದರ ತದ್ಭವ. 'ಪಗೆವಡೆ' ಎಂಬ ಪದಕ್ಕೂ ಶತ್ರುಸೈನ್ಯ ವೆಂಬ ಅರ್ಥವೇ ಇದ್ದು ಪಂಪನು ಹಲವು ಸಲ ಅದನ್ನು ಬಳಸಿರುವದು ಕಾಣುತ್ತದೆ. ಆದ್ದರಿಂದ ಘ ಪ್ರತಿಯ 'ಪಗೆವಡೆ' ಎಂಬ ಪಾಠ ಸ್ವೀಕಾರಾರ್ಹವೆನಿಸುತ್ತದೆ.

೧-೨೫ ಅರಿಕೇಸರಿಯ ಪೂರ್ವಜನಾದ ಬದ್ದೆಗರಾಜನ ಪರಾಕ್ರಮವನ್ನೂ, ಮಹಿಮೆಯನ್ನೂ ಈ ಪದ್ಯದಲ್ಲಿ ಹೇಳಲಾಗಿದೆ. ಪಾಠಾಂತರ ಸಮಸ್ಯೆ ಉಂಟಾಗು ವದು 'ಆವರ್ಜಿಸಿದಂ' ಎಂಬಲ್ಲಿ. ೪೨ ಸುಪ್ರಸಿದ್ಧ ಕಾಳಗಗಳಲ್ಲಿ ಬದ್ದೆಗನು ತನ್ನ ಶಕ್ತಿ ಯಿಂದ, ಮುನ್ನುಗ್ಗುವಿಕೆಯಿಂದ ಶತ್ರುರಾಜರು ಚೆಲ್ಲಾಪಿಲ್ಲಿಯಾಗುವಂತೆ ಮಾಡಿ ತನ್ನ ಪರಾಕ್ರಮವನ್ನು ಹೇಳುವಂತೆ ಆವರ್ಜಿಸಿದನಂತೆ. ಪಂ. ಭಾ. ದ ಸಂಪಾದಕರು 'ಆವರ್ಜಿಸಿದಂ' ಎಂಬ ಪದಕ್ಕೆ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ. ಸೆಳೆದುಕೊಂಡನು ಎಂಬುದು ಈ ಪದದ ಅರ್ಥ. ಪದ್ಯದ ಅರ್ಥ ವಿವರಣೆಗೆ ಈ ಪದ ಹೊಂದಿ ಕೊಳ್ಳುವದಿಲ್ಲ. ಆದ್ದರಿಂದಲೇ ಸಂಪಾದಕರು ಪ್ರಶ್ನಾರ್ಥಕ ಚಿಹ್ನೆಯಿಂದ ತಮ್ಮ ಸಂದೇಹವನ್ನು ಸೂಚಿಸಿರುವದು. ಈ ಪದಕ್ಕೆ 'ಆವರ್ತಿಸಿದಂ' ಎಂಬ ಪಾಠಾಂತರವೂ ಇದೆ. 'ಆವರ್ತಿಸಿದಂ' ಎಂದರೆ ವ್ಯಾಪಿಸಿದನು ಎಂದು ಅರ್ಥ. ಈ ಅರ್ಥವೇ ಯೋಗ್ಯ

ವಾಗಿರುವಂತೆ ಕಾಣುತ್ತದೆ. ಆದ್ದರಿಂದ 'ಆವರ್ತಿಸಿದಂ' ಎಂಬ ಪಾಠವೇ ಉಚಿತ ವೆನಿಸುತ್ತದೆ.[೩]

೧–೨೯. ಈ ಪದ್ಯದಲ್ಲಿ ಬದ್ದೆಗನ ದಾನದ ಹಿರಿಮೆಯನ್ನು ವರ್ಣಿಸಲಾಗಿದೆ. ಪಂಪ ಭಾರತದ ಅಡಿಟಿಪ್ಪಣಿಯಲ್ಲಿ, ಈ ಪದ್ಯದ ಜೊತೆಗೆ ಘ ಪ್ರತಿಯಲ್ಲಿ ಹಂಸಪಾದ ಹಾಕಿ ಸೇರಿಸಿರುವ ಇನ್ನೊಂದು ಪದ್ಯವನ್ನು ಕೊಡಲಾಗಿದೆ. ಅಡಿಟಿಪ್ಪಣಿಯಲ್ಲಿ ಕೊಟ್ಟ ಪದ್ಯ ಅಪಪಾಠಗಳಿಂದ ತುಂಬಿಹೋಗಿದೆ. ೨೯ ನೆಯ ಪದ್ಯವೇ ಅಪಪಾಠಗಳಿಂದ ಅ. ಟಿ. ಯಲ್ಲಿ ಕೊಟ್ಟ ಪದ್ಯದ ಸ್ಥಿತಿಗೆ ಇಳಿದಿದೆಯೆಂದು ಅನಿಸುತ್ತದೆ. ದೀಪಿಕೆಯಲ್ಲಿ ಈ ಪದ್ಯದ ಅರ್ಥವನ್ನು ಕೊಟ್ಟಿಲ್ಲ. ಅದರ ಅರ್ಥವನ್ನು ಈರೀತಿ ವಿವರಿಸಬಹುದು— "ಸುರಭಿಯು ದೇವತೆಯೆಂಬ ರಕ್ಷಣೆಯನ್ನು ಹೊಂದಿದ್ದರಿಂದ ಬದ್ದೆಗನ ದಾನದಿಂದ ಹೊರಗುಳಿಯಿತು. ಇಂದ್ರನಿಗೆ ಐರಾವತವೊಂದೇ ವಾಹನವಾಗಿದ್ದದರಿಂದ ಅದನ್ನೂ ಬದ್ದೆಗದಾನ ಮಾಡಲಿಲ್ಲ. ಸೂರ್ಯನಿಗೇದೇ ಮಾಡಿದ ಸಪ್ತಾಶ್ವಗಳನ್ನು ದಾನಮಾಡಿದರೆ ರಥವನ್ನು ನಡೆಸುವದು ಅಸಾಧ್ಯವಾಗುವದೆಂದು ಅವುಗಳನ್ನೂ ದಾನ ಮಾಡಲಿಲ್ಲ. ಹೀಗೆ ಈ ಅಪೂರ್ವ ವಸ್ತುಗಳು ಬದ್ದೆಗನ ದಾನದಿಂದ ಹೊರಗಾದವು."

೧-೩೪. ಈ ಪದ್ಯದಲ್ಲಿ ಕವಿ ನರಸಿಂಹನ ಪರಾಕ್ರಮವನ್ನು ವರ್ಣಿಸಿದ್ದಾನೆ. ಈ ಪದ್ಯದ ಎರಡನೆಯ ಪಾದದಲ್ಲಿ 'ನೆಗಟ್ದು' ಎಂಬ ಪಾಠವನ್ನು ಪಂ. ಭಾ. ದಲ್ಲಿ ಸ್ವೀಕರಿಸಲಾಗಿದೆ. ಡಿ.ಎಲ್.ಎನ್. ಅವರು 'ನೆಗೆದ' ಎಂಬ ಪರಿಷತ್ತಿನ ಪಾಠವನ್ನು ಸ್ವೀಕರಿಸಿದ್ದಾರೆ. 'ನೆಗಟ್ದು' ಎಂಬ ಪಾಠವನ್ನಿಟ್ಟುಕೊಂಡರೆ ಅರ್ಥ ಸ್ಪಷ್ಟವಾಗಿ ಆಗುವ ದಿಲ್ಲ. ನರಸಿಂಹನು ಯುದ್ಧಮಾಡಲು ಪ್ರಸಿದ್ಧವಾದ ರಕ್ತವು ಆಕಾಶಕ್ಕೆ ಚಿಮ್ಮಿತು ಎಂಬ ಅರ್ಥ ಸರಿಯೆನಿಸುವದಿಲ್ಲ. ಆದ್ದರಿಂದ ಡಿ. ಎಲ್. ಎನ್. ಸ್ವೀಕರಿಸಿದ ಪಾಠ ಉಚಿತವಾದದ್ದು.

೧-೩೮. ನರಸಿಂಹನ ಪರಾಕ್ರಮವೇ ಈ ಪದ್ಯದಲ್ಲಿಯೂ ವರ್ಣಿಸಲ್ಪಟ್ಟಿದೆ. ಈ ಪದ್ಯದ ಎರಡನೆಯ ಪಾದದ ಪಾಠ 'ಡಾಳಪ್ರಿಯನೋಳ್' ಎಂಬುದು ಸಮಸ್ಯೆ ಯನ್ನು ಹುಟ್ಟಿಸುವಂಥದು. ಡಿ. ಎಲ್. ಎನ್. ಅವರು ದೀಪಿಕೆಯಲ್ಲಿ 'ಡಾಳಪ್ರಿಯ ನೊಳ್' ಎಂಬುದು ಅಪಪಾಠವೆಂದೂ. ಅದು 'ಡಾಳಪ್ರಿಯದೊಳ್' ಇರಬಹುದೆಂದೂ ಹೇಳಿದ್ದಾರೆ. ಇದಕ್ಕೆ ಆಧಾರವಾಗಿ ವೇಮುಲವಾಡದ ಶಾಸನವನ್ನೂ. ಡಾ. ಭಂಡಾರ್ಕರ್ ಅವರ ಅಭಿಪ್ರಾಯವನ್ನೂ ಇಟ್ಟುಕೊಂಡಿದ್ದಾರೆ. 'ಡಾಳಪ್ರಿಯನೊಳ್' ಎಂಬ ಪಾಠವನ್ನೇ ಇಟ್ಟುಕೊಂಡರೆ ಆ ಹೆಸರಿನ ಒಬ್ಬ ರಾಜ ಇದ್ದಿರಬಹುದೆಂದು ಊಹಿಸಬೇಕಾಗುತ್ತದೆ. ಡಹಳ (=ಚೇದಿ) ಎಂಬ ಮಂಡಲವೊಂದು ಇತ್ತು ಆ ಕಾಲಕ್ಕೆ. ಆ ಮಂಡಳದ ರಾಜನಲ್ಲಿ ತನ್ನ ಖಡ್ಗವನ್ನು ನೆಟ್ಟನು ಎಂದು ಅರ್ಥವಾಗು ತ್ತದೆ. "ಗಂಗಾನದಿಯಲ್ಲಿ ತನ್ನ ಕುದುರೆಗೆ ಮಜ್ಜನಮಾಡಿಸಿ ಸಂಗತಗುಣನಾದ

೩ 'ಪಂಪ ಭಾರತದ ಕೆಲವು ಪಾಠಾಂತರಗಳು'—ಹಂಪನಾ.

ನರಸಿಂಹನು ತನ್ನ ಅಸಿಲತೆಯನ್ನು ಭುಜವಿಜಯಗರ್ವದಿಂದ ಪಾಳೆಪ್ರಿಯನಲ್ಲಿ ಪ್ರಾಣಾಪಹರಣ ಮಾಡುವುದಕ್ಕಾಗಿ ನೆಟ್ಟನು." ಎಂದು ಈ ಪದ್ಯವನ್ನು ಅರ್ಥೈಸಬಹುದು. ಆದ್ದರಿಂದ 'ಪಾಳೆಪ್ರಿಯನೊಳ್' ಎಂಬ ಪಾಠವನ್ನು ಉಚಿತವೆಂದು ಹೇಳಬಹುದು.*

೧-೫೧. ಪಂಪಭಾರತದಲ್ಲಿ ೫೧ ನೆಯ ಪದ್ಯದ ನಂತರ ಒಂದು ವಚನವಿದೆ. ಘ ಪ್ರತಿಯಲ್ಲಿ ಇದನ್ನು 'ಪೃಥ್ವಿ' ಎಂದು ಬರೆದು ಸೇರಿಸಲಾಗಿದೆ. ಆ ವೃತ್ತವನ್ನು ಅಡಿ ಟಿಪ್ಪಣಿಯಲ್ಲಿ ಕೊಡಲಾಗಿದೆ. ಆದರೆ ಈ ವೃತ್ತದ ಶೈಲಿ ಮಾತ್ರ ವಚನದಂತೆಯೇ ಇದೆ. ಪಂ. ಭಾ. ದಲ್ಲಿ ಯಾವ ಪದ್ಯವೂ ಅದೆಂತೆನೆ ಎಂಬ ಪದದಿಂದ ಪ್ರಾರಂಭವಾಗಿಲ್ಲ. ಹಾಗೆಯೇ ಎಲ್ಲ ವಚನಗಳೂ ಅಂತೆ, ಎಂಬುದುಂ, ಅದೆಂತೆನೆ, ಅದೆಂತೆಂದಡೆ ಎಂಬ ಪದಗಳಿಂದ ಪ್ರಾರಂಭವಾಗಿವೆ. ಘ. ಪ್ರತಿ ಪ್ರಾಚೀನವಾದರೂ ಅದರಲ್ಲಿ ತಿದ್ದುಪಡೆಗಳು ಬಹಳವಾಗಿವೆಯಾದ್ದರಿಂದ ಪಂ. ಭಾ. ದಲ್ಲಿ ಇದ್ದಂತೆ ಅದು ವಚನವೇ ಹೊರತು ವೃತ್ತವಾಗಲಾರದು.

೧-೫೩.೫೪. ಪ್ರಕಟಿತ ಪಂಪಭಾರತದಲ್ಲಿ ೫೩ ಮತ್ತು ೫೪ ನೆಯ ಪದ್ಯಗಳನ್ನು ಬೇರೆ ಬೇರೆಯಾಗಿ ಕೊಡಲಾಗಿದೆ. ಘ. ಪ್ರತಿಯಲ್ಲಿ ಮಾತ್ರವೇ ಬೇರೆ ಬೇರೆಯಾಗಿಬರೆಯಲ್ಪಟ್ಟ ಈ ಪದ್ಯಗಳು ಉಳಿದ ಪ್ರತಿಗಳಲ್ಲಿ ಇಲ್ಲ. ಉಳಿದವುಗಳಲ್ಲಿ ೫೩ ನೆಯ ಪದ್ಯದ ಪೂರ್ವಾರ್ಧವನ್ನೂ. ೫೪ ನೆಯ ಪದ್ಯದ ಉತ್ತರಾರ್ಧವನ್ನು ಸೇರಿಸಿ ಒಂದೇ ಪದ್ಯ ಮಾಡಿ ಬರೆಯಲಾಗಿದೆ. ಅವುಗಳಲ್ಲಿ ೫೪ ನೆಯ ಪದ್ಯದ ಮೂರನೆಯ ಪಾದದ ಮೊದಲಲ್ಲಿರುವ 'ಬೆಳೆವುದು' ಎಂಬುದಕ್ಕೆ ಬದಲಾಗಿ 'ವಳಿಗಳೆ' ಎಂದಿದೆ. ಇದಕ್ಕೆಲ್ಲ ಕಾರಣ ಲಿಪಿಕಾರನ ಅನವಧಾನ ಹಾಗೂ ಅಕ್ಷರ ಸಾದೃಶ್ಯ. ೫೩ ನೆಯ ಪದ್ಯದ ಎರಡು ಸಾಲುಗಳನ್ನು ಬರೆದು. ಮೂರನೆಯ ಸಾಲನ್ನು ಪ್ರಾರಂಭಿಸಿದಾಗ ನಂದನಾವಳಿ, ನಂದನವನಾಳಿ ಎಂಬ ಪದಗಳ ಅಕ್ಷರಸಾದೃಶ್ಯದ ಕಾರಣದಿಂದ ಲಿಪಿಕಾರನ ದೃಷ್ಟಿ ಮುಂದಿನ ಪದ್ಯದ ಮೂರನೆಯ ಸಾಲಿಗೆ ಹೋಗಿ ಬಿಟ್ಟಿದೆ. ಒಂದು ಪ್ರತಿಯಲ್ಲಿ ಉಂಟಾದ ಈ ದೋಷ ಅದರ ನಕಲುಪ್ರತಿಗಳಲ್ಲಿ ಸಹಜವಾಗಿ ಉಳಿದು ಬಿಟ್ಟಿದೆ.೪ ಆದ್ದರಿಂದ ೫೩,೫೪ ನೆಯ ಪದ್ಯಗಳನ್ನು ಬೇರೆ ಬೇರೆಯಾಗಿ ಕೊಟ್ಟಿರುವುದು ಹೆಚ್ಚು ಉಚಿತವೆನಿಸುತ್ತದೆ.

೧-೭೪. ಈ ಪದ್ಯದಲ್ಲಿ ಭೀಷ್ಮ ಮೂವರು ಕನ್ಯೆಯರನ್ನು ಗೆದ್ದುತಂದ ವಿಷಯವನ್ನು ಹೇಳಲಾಗಿದೆ, ಈ ಪದ್ಯದ ಎರಡನೆಯ ಪಾದದಲ್ಲಿ 'ಕಾಶಿ ರಾಜಸುತೆರೋಳ್' ಎಂಬ ಪಾಠವನ್ನು ಪಂಪಭಾರತದಲ್ಲಿ ಸ್ವೀಕರಿಸಲಾಗಿದೆ. ದೀಪಿಕೆಯಲ್ಲಿ

---

* ಈ ಅಂಶ ನನಗೆ ಗೊತ್ತಾದುದು ಡಾ. ಎಂ. ಎಂ. ಕಲಬುರ್ಗಿಯವರು ತಮ್ಮ ಪಂಪಭಾರತ ಪುಸ್ತಕದ ಮಾರ್ಜನ್ನಿನಲ್ಲಿ ಬರೆದುಕೊಂಡ ಟಿಪ್ಪಣಿಯಿಂದ.

೪. 'ಗ್ರಂಥ ಸಂಪಾದನ ಶಾಸ್ತ್ರ' –ಡಾ. ಎಮ್. ಎಮ್. ಕಲಬುರ್ಗಿ.

'ಕಾಶಿರಾಜಸುತರೊಳ್' ಎಂಬ ಪಾಠ ಅಂಗೀಕಾರವಾಗಿದೆ. ಮೊದಲನೆಯ ಪಾಠವನ್ನು ಇಟ್ಟುಕೊಂಡರೆ ಅಂಬೆ, ಅಂಬಿಕೆ, ಅಂಬಾಲಿಕೆಯರ ಕಾಶಿಯ ಸಂಬಂಧ ಎಲ್ಲಿಯೂ ಸ್ಪಷ್ಟವಾಗುವದಿಲ್ಲ. ಎರಡನೆಯ ಪಾಠವನ್ನಿಟ್ಟುಕೊಂಡರೆ 'ಕಾಶಿರಾಜನ ಮಕ್ಕಳಲ್ಲಿ ಕೆಲವರು ನೊಂದುವಂತೆ ಕಾದಿ ಆ ಮೂವರು ಕನ್ಯೆಯರನ್ನು ತಂದ' ಎಂದು ಅರ್ಥವಾಗುತ್ತದೆ. ಈ ಅರ್ಥವೂ ಪದ್ಯದ ಒಟ್ಟು ವಿವರಣೆಗೆ ಹೊಂದಿ ಕೊಳ್ಳುವದಿಲ್ಲ. ಕ ಪ್ರತಿಯಲ್ಲಿ ಈ ಪಾಠದ ಬದಲು 'ಕಾಶಿ ರಾಜಪುರದೊಳ್' ಎಂಬ ಪಾಠವೊಂದಿದೆ. ಇದಲ್ಲದೇ ಖ ಪ್ರತಿಯಲ್ಲಿ 'ಕಾದಿರಾಜಪುರದೋಳ್' ಎಂಬ ಒಂದು ಪಾಠವೂ ಇದೆ. ಇವುಗಳಲ್ಲಿ 'ಕಾಶಿ ರಾಜಪುರದೊಳ್' ಎಂಬ ಪಾಠ ಉಚಿತವೆನಿಸುತ್ತದೆ. ಘ ಪ್ರತಿ ಶುದ್ಧವಾದರೂ ಅದರಲ್ಲಿ ತಿದ್ದುಪಡೆಗಳು ಬಹಳ. ಕ ಪ್ರತಿಯ ಪಾಠವನ್ನಿಟ್ಟುಕೊಂಡರೆ 'ಸಕಳ ಕ್ಷತ್ರಿಯ ಮೋಹದಿಂ ನಿಜ ಭುಜ ಪ್ರಾರಂಭದಿಂ ಪೋಗಿ ತಾಗಿ ಕೆಲರ್‌ನೊಂದೊಡೆ ಕಾಶಿ ರಾಜಪುರದೊಳ್ ತನ್ನಂಕ ದೊಂದುಗ್ರ ಸಾಯಕದಿಂ...' ಎಂದು ಅರ್ಥ ಸರಿಯಾಗಿ ಆಗುತ್ತದೆ. ಆದ್ದರಿಂದ ಕ ಪ್ರತಿಯ 'ಕಾಶಿರಾಜಪುರದೊಳ್' ಎಂಬ ಪಾಠ ಸ್ವೀಕಾರಾರ್ಹವೆನಿಸುತ್ತದೆ.

೧-೭೫. ಭೀಷ್ಮ ತಾನು ಮಾಡಿದ ಪ್ರತಿಜ್ಞೆಯನ್ನು ಅಂಬೆಗೆ ತಿಳಿಸುತ್ತಾನೆ. ಈ ಪದ್ಯದ ಎರಡನೆಯ ಪಾದದಲ್ಲಿ 'ಲೋಕಮಱಿದಂತಿರೆ' ಎಂಬ ಪಾಠವನ್ನು ಪಂ. ಭಾ. ದಲ್ಲಿ ಸ್ವೀಕರಿಸಲಾಗಿದೆ. ಈ ಪಾಠ ಅರ್ಥದೃಷ್ಟಿಯಿಂದ ಸರಿಯೆನಿಸುವದಿಲ್ಲ. ದೀಪಿಕೆಯಲ್ಲಿ ಕ, ಖ ಪ್ರತಿಯ 'ಲೋಕಮಱಿವಂತಿರೆ' ಎಂಬ ಪಾಠವನ್ನು ಸ್ವೀಕರಿಸ ಲಾಗಿದೆ. 'ಸಮಸ್ತ ಲೋಕವೂ ತಿಳಿದ ಹಾಗೆ ಪೂಣ್ದೆನು' ಎಂದು ಸರಿಯಾದ ಅರ್ಥ ಉಂಟಾಗುತ್ತದಾದ್ದರಿಂದ ದೀಪಿಕೆಯ, ಕ, ಖ ಪ್ರತಿಯ ಪಾಠ ಉಚಿತವೆನಿಸುತ್ತದೆ.

೭೮ ನೆಯ ಪದ್ಯದ ನಂತರದ ವಚನದಲ್ಲಿ 'ನೀವಿದನೇಕಾಗ್ರಹ' ಎಂಬ ಪಾಠ ವಿದೆ. ಪಂ. ಭಾ. ದಲ್ಲಿ. ಇದಕ್ಕೆ ಪಾಠಾಂತರ– 'ನೀವಿದಕೇಕಾಗ್ರಹ'–(ಕ) ಶ್ರೀ. ಡಿ. ಎಲ್. ಎನ್. ಅವರೂ ಈ ಪಾಠವನ್ನೇ ಸ್ವೀಕರಿಸಿದ್ದಾರೆ. ಭೀಷ್ಮನಿಗೆ ಗುರು ಭಾರ್ಗವ ಅಂಬಿಕೆಯೊಡನೆ ಮದುವೆಯಾಗಲು ಆಗ್ರಹ ಮಾಡುತ್ತಾರೆ. ಆಗ ಭೀಷ್ಮ 'ನೀವಿದ ಕೇಕಾಗ್ರಹ ಗೆಯ್ವಿರಿ' ಎಂದು ಕೇಳುತ್ತಾನೆ. ಪಂ. ಭಾರತದ ಪಾಠದಿಂದ ಈ ಅರ್ಥ ಹೊರಡುವದಿಲ್ಲ. ಆದ್ದರಿಂದ ಕ ಪ್ರತಿಯ, ದೀಪಿಕೆಯಲ್ಲಿ ಸ್ವೀಕರಿಸಿದ 'ನೀವಿದಕೇಕಾ ಗ್ರಹ' ಎಂಬ ಪಾಠ ಸ್ವೀಕಾರಾರ್ಹವೆನಿಸುತ್ತದೆ.

೧-೧೦೮. ಈ ಪದ್ಯದಲ್ಲಿ ಕುಂತಿ, ಮಾದ್ರಿಯರ ವರ್ಣನೆಯಿದೆ. ಇಲ್ಲಿಯ ವರೆಗೂ ಬಿಡಿಸಲಾರದಂಥ ಒಗಟಾಗಿ ಉಳಿದುಕೊಂಡು ಬಂದ 'ನಕ್ಕರವದ್ದಿ' ಎಂಬ ಪಾಠವಿರುವದು ಈ ಪದ್ಯದ ಮೂರನೆಯ ಪಾದದಲ್ಲಿ. ಖ ಪ್ರತಿಯಲ್ಲಿ 'ನಕ್ಕರೆವದ್ದಿ', ಘ ಪ್ರತಿಯಲ್ಲಿ 'ನೆರ್ಕೊರೆವೊದ್ದಿ' ಎಂಬ ಎರಡು ಪಾಠಾಂತರಗಳಿವೆ. ಡಾ. ಡಿ. ಎಲ್.

ಎನ್. ಅವರು 'ನಕ್ಕರವದ್ದಿ' ಪಾಠವನ್ನು ತಿರಸ್ಕರಿಸಿ, ಶಾಂತಿನಾಥನ 'ಸುಕುಮಾರ ಚರಿತೆ'ಯ ೫–೫೧ ನೆಯ ಪದ್ಯದ ಆಧಾರದಿಂದ, ಅಂತಸ್ಸಂಭಾವ್ಯತೆ, ಲೇಖನ ಸಂಭಾವ್ಯತೆ ಇತ್ಯಾದಿಗಳಿಂದ ಬಹುಶಃ ಅದು 'ನೆಕ್ಕೊರೆವೊಟ್ಟೆ' ಇರಬಹುದೆಂದೂ, ಅದರ ಅರ್ಥ ಅನ್ವೇಷಣಾರ್ಹವೆಂದು ಹೇಳಿ ಅದನ್ನು ಅಷ್ಟಕ್ಕೇ ಕೈ ಬಿಟ್ಟಿದ್ದಾರೆ. ಇಂದಿಗೂ ಉತ್ತರಕರ್ನಾಟಕದಲ್ಲಿ 'ಬದ್ದಿ' ಎಂಬ ಪದ ಬಳಕೆಯಲ್ಲಿದ್ದುದು ಕಂಡು ಬರುತ್ತದೆ ಇದನ್ನು 'ಕಿಬ್ಬೊಟ್ಟೆ' ಎಂಬರ್ಥದಲ್ಲಿ ಉಪಯೋಗಿಸಲಾಗುತ್ತದೆ.[೫] 'ಬದ್ದಿಯ ಮೇಲೆ ಸೀರೆ ಬಿಗಿದುಕೋ', 'ಬದ್ದಿ ಮೇಲೆ ಹಮ್ಮಿಣಿ ಕಟ್ಟಿಕೊಂಡು ಡೌಲು ಬಡೀತಾನ' ಎಂಬ ವಾಕ್ಯಗಳಿಂದ ಇದರ ಅರ್ಥ ಸ್ಪಷ್ಟವಾಗಿ ಆಗುತ್ತದೆ. ಡಾ. ಡಿ. ಎಲ್. ಎನ್. ಅವರು ಈ ಪದವನ್ನು ನೆಕ್ಕೊರೆ+ಪಟ್ಟೆ ಎಂದು ಬಿಡಿಸಬಹುದೆಂದಿದ್ದಾರೆ. ಅದಕ್ಕಿಂತಲೂ ನೇಕ್ಕೊರೆ+ಬದ್ದಿ ಎಂದು ಬಿಡಿಸುವದು ಹೆಚ್ಚು ಉಚಿತವೆಂದು ತೋರುತ್ತದೆ. ದೀರ್ಘ ಸ್ವರ ಬರೆಯುವ ರೂಢಿ ಇರಲಿಲ್ಲವಾದ್ದರಿಂದ ಅದು ನೆಕ್ಕೊರೆ ಆಗಿರಬಹುದು ಮತ್ತು ಒ, ಬ ಗಳ ಅಕ್ಷರ ಸಾದೃಶ್ಯದಿಂದ ಬ>ಒ ಆಗಿರಬಹುದೆಂದು ತೋರುತ್ತದೆ. ಬದ್ದಿ ಎಂಬುವದಕ್ಕೆ ಬೇರೆ ಅರ್ಥಗಳು ಇದ್ದರೂ ಕಿಬ್ಬೊಟ್ಟೆ ಎಂಬ ಅರ್ಥ ಈ ಸಂದರ್ಭಕ್ಕೆ ಹೊಂದುತ್ತದೆ. ದೇಸಿಪದವಾದ 'ಬದ್ದಿ'ಯನ್ನೇ ಪಂಪ ಬಳಸಿರುವ ಸಾಧ್ಯತೆ ಹೆಚ್ಚು ಉಂಟು. 'ನೇಕ್ಕೊರೆ ಬದ್ದಿ' ಎಂಬ ಪಾಠವನ್ನು ಸ್ವೀಕರಿಸಿದರೆ 'ಚೆನ್ನಾಗಿ ಕೊರೆದಂಥ ಕಿಬ್ಬೊಟ್ಟೆ' ಎಂದು ಅರ್ಥವಾಗುತ್ತದೆ, ಎದೆ, ಹುಬ್ಬು, ಕಣ್ಣು, ತುಟಿ, ಕೊರಳು, ಮೊಲೆ, ಹೊಟ್ಟೆ, ನಿತಂಬ, ಒಳ್ದೊಡೆ, ಕಿಬ್ಬೊಟ್ಟೆ, ಕಿರುದೊಡೆ ಇವೆಲ್ಲವುಗಳ ವರ್ಣನೆ ಈ ಪದ್ಯದಲ್ಲಿ ಮಾಡಿದಂತಾಗುತ್ತದೆ. ಆದ್ದರಿಂದ 'ನೇಕ್ಕೊರೆ ಬದ್ದಿ' ಎಂಬ ಪಾಠ ಉಚಿತವೆನಿಸುತ್ತದೆ.

೧–೧೪. ಈ ಪದ್ಯದಲ್ಲಿ ಕುಂತಿ ಇಂದ್ರನಿಗೆ ಮಕ್ಕಳನ್ನು ದಯಪಾಲಿಸಲು ಬೇಡಿಕೊಂಡ ವಿಷಯ ಬರುತ್ತದೆ. ಈ ಪದ್ಯದ ಎರಡನೆಯ ಸಾಲಿನಲ್ಲಿ 'ಮಕ್ಕಳ್' ಎಂಬ ಪಾಠವನ್ನು ಪಂ. ಭಾ. ದಲ್ಲಿ ಸ್ವೀಕರಿಸಲಾಗಿದೆ. ಇದಕ್ಕೆ ಬೇರೆ ಪಾಠಾಂತರಗಳು ಇಲ್ಲ. ಅಲ್ಲದೇ ಇದು ಅರ್ಥದೃಷ್ಟಿಯಿಂದಲೂ, ವ್ಯಾಕರಣದೃಷ್ಟಿಯಿಂದಲೂ ತ್ಯಾಜ್ಯ ಪಾಠ ಅಲ್ಲವೇ ಅಲ್ಲ. ಡಿ. ಎಲ್. ಎನ್. ಅವರು ದೀಪಿಕೆಯಲ್ಲಿ ಈ ಪಾಠದ ಬಗ್ಗೆ ದೀರ್ಘವಾಗಿ ಚರ್ಚಿಸಿದ್ದಾರೆ. "ಈ ಪದ್ಯದ ಎರಡನೆಯ ಪಾದಾಂತ್ಯದಲ್ಲಿ ಬರುವ 'ಮಕ್ಕಳ್' ಎಂಬುದು ಗಮನಾರ್ಹ. ಇದನ್ನು ಷಷ್ಠ್ಯರ್ಥದಲ್ಲಿ ಪ್ರಥಮಾ ಪ್ರಯೋಗವೆಂದು ಭಾವಿಸಬಹುದು. ಆದರೂ ಛಂದಸ್ಸಿನ ದೃಷ್ಟಿಯಿಂದ ಒಂದು ಮಾತ್ರೆ ಕಡಿಮೆಯಾಗುತ್ತದೆ; ಷಷ್ಠೀ ದೀರ್ಘವನ್ನಿಟ್ಟು ಮಕ್ಕಳಾ ಎಂದರೆ ಒಂದು ಮಾತ್ರೆ ಅಧಿಕವಾಗುತ್ತದೆ; 'ಮಕ್ಕಳ್ಗೊಸಗೆಯುಂ' ಎಂದು ತಿದ್ದಿದರೆ ಛಂದಸ್ಸು ಸರಿ

೫. ಈ ವಿಷಯವಾಗಿ ನನ್ನೊಂದಿಗೆ ಚರ್ಚೆ ನಡೆಸಿದ ಶ್ರೀ ಬೆಟಗೇರಿ ಕೃಷ್ಣಶರ್ಮ ಅವರಿಗೆ ನಾನು ಕೃತಜ್ಞಳು.

ಯಾಗುತ್ತದೆ, ಆದರೆ ವ್ಯಾಕರಣ ಸರಿಯಾಗುವುದಿಲ್ಲ. (ಶ. ಮ. ದ. ಸೂ. ೭೯.) ಮಕ್ಕಳ್ ಎಂಬುದು ಅನೇಕಾಕ್ಷರಯುಕ್ತವಾಗಿರುವದರಿಂದ ಅದಕ್ಕೆ ಸ್ವರ ಪರವಾದಾಗ ಳ ಕಾರಕ್ಕೆ ದ್ವಿರ್ಭಾವವಿಲ್ಲ. ಇದೊಂದು ಸಣ್ಣ ಸಮಸ್ಯೆ. ಆದರೆ ಪದ್ಯದ ವೃತ್ತಗತಿಯಲ್ಲಿ ಇದು ಅಂತರ್ಹಿತವಾಗುತ್ತದೆ " ಎಂದು ಹೇಳಿ ಇಲ್ಲದ ಸಮಸ್ಯೆಯನ್ನು ಎದುರಿಗೆ ನಿಲ್ಲಿಸಿಕೊಂಡಿದ್ದಾರೆ. ಪದ್ಯದ ಎರಡು ಸಾಲುಗಳನ್ನು ಮಾತ್ರ ಹಾಕಿ ನೋಡಬಹುದು.

U U – | – – | U U U U
ಬೆ ಸ ನೇ ನೇ ಗೆ ಯ್ವು ದೊ ನಿ ನ ।

U U – | – U U | U – U | – — | – — |
ಗೊ ಸೆ ದೇ ನಂ ಕು ಡು ವ ದೆಂ ದೊ ಡೆಂ ದಳ್ ಮ ಕ್ಕ ಳ್ ॥

ಆದ್ದರಿಂದ ದೀಪಿಕೆಯಲ್ಲಿಯ ಚರ್ಚೆ ಅನವಶ್ಯಕವೆನಿಸುತ್ತದೆ. ಇದು ಪಂಪಭಾರತದ ಪ್ರಥಮ ಆಶ್ವಾಸದ ಪಾಠಾಂತರ ಸಮೀಕ್ಷೆ. ●

(ಮುಂದುವರಿಯುವುದು)

# ಸಿಂದಗಿಯ ಪ್ರಾಚೀನ ಶಿಲಾಮೂರ್ತಿಗಳು

ಅ. ಸುಂದರ

ಸಿಂದಗಿ (ಅಕ್ಷಾಂಶ: ೧೬°. ೫೫'. ರೇಖಾಂಶ: ೭೬°. ೧೪'. ೧೫") ಬಿಜಾಪೂರ ಜಿಲ್ಲೆಯಲ್ಲಿ ಒಂದು ತಾಲೂಕು ಕೇಂದ್ರ. ಇದು ಹಿಂದೆ ಸಿಂಧೆ ಎಂಬ ಹೆಸರಿನ ಮರಾಠ ಅಧಿಕಾರಿಯ ಆಡಳಿತಕ್ಕೊಳಪಟ್ಟಿದ್ದರಿಂದ ಸಿಂದಗಿ ಎಂಬ ಹೆಸರು ಇದಕ್ಕೆ ಬಂತೆಂದು ಕೆಲವು ಸ್ಥಳಿಕ ಜನರ ಊಹೆ. ಆದರೆ ಈ ಸ್ಥಳಕ್ಕೆ ಸಂಬಂಧಪಟ್ಟ ೧೨ ನೇ ಶತಮಾನದ ಶಾಸನದಲ್ಲಿ[೧] ಇದಕ್ಕೆ "ಸಿನ್ದಿಕಾಪುರ" ಎಂದು ಹೆಸರಿತ್ತೆಂದು ಆ ಕಾಲದ ಈ ನಗರದ ಬಹು ಸುಂದರ ವರ್ಣನೆಯೊಡನೆ ಹೇಳಿದೆ. ಕಲ್ಯಾಣ ಚಾಲುಕ್ಯರ ೬ ನೇ ವಿಕ್ರಮಾದಿತ್ಯ ಚಕ್ರವರ್ತಿಯ ಮಾಂಡಲಿಕನಾದ ಜಯನ್ತಿಪುರದ ಮನ್ನೆಯ ಸಿಂಗರಸನು ಈ ನಗರವನ್ನು ಆಳುತ್ತಿದ್ದನು. ದಂಡನಾಯಕನಾದ ಸೋಮರಸನು ಈ ಊರಲ್ಲಿ ಕಟ್ಟಿಸಿದ ಮೂಲಸ್ಥಾನ ದೇವರ ದೇವಾಲಯಕ್ಕೆ ೪೬ ನೇ ಚಾಲುಕ್ಯ ವಿಕ್ರಮ ವರ್ಷ ಶಾರ್ವರಿ ಸಂವತ್ಸರ, ಅಶ್ವಯುಜ, ಅಮವಾಸ್ಯೆ ಸೋಮವಾರ ಸೂರ್ಯಗ್ರಹಣದಂದು (ಅಂದರೆ ೨೪ ಅಕ್ಟೋಬರ್ ೧೧೨೦ ಕ್ರಿ.ಶ.) ಭೂದಾನ ಮಾಡಿದ್ದು ಈ ಶಾಸನದ ಮುಖ್ಯ ವಿಷಯ.

ಈಗ ಈ ಊರಿನ ದಕ್ಷಿಣ ಭಾಗದ ಹೊರಬಯಲಿನಲ್ಲಿರುವ ಮರಗಳ ತೋಪಿನಲ್ಲಿ ಸಂಗಮೇಶ್ವರ ಎಂಬ ಒಂದು ದೇವಾಲಯವಿದೆ. ಇದರಲ್ಲಿ ಅಲ್ಲಲ್ಲಿ ಅಳಿದುಳಿದ ಗೋಡೆಗಳ ಹೊರಮೈ, ಸಭಾಮಂಟಪದಲ್ಲಿಯ ದ್ರಾವಿಡ ವಿಮಾನ ಹಾಗೂ ರೇಖಾನಾಗರ ಪ್ರಾಸಾದ ಶೈಲಿಗಳ ರಚನೆಯಲ್ಲಿರುವ ದೇವಕೋಷ್ಠಗಳು ಮುಂತಾದವುಗಳನ್ನು ನೋಡಿದರೆ ಮೂಲತಃ ಇದು ೧೨ ನೇ ಶತಮಾನದಾಗಿದ್ದು ಕಾಲಾಂತರದಲ್ಲಿ ಆಗಾಗ್ಗೆ ಜೀರ್ಣೋದ್ಧಾರವಾಗಿದೆಯೆಂದು ಮತ್ತು ಇದಕ್ಕೆ ಹೊಸ ಭಾಗಗಳನ್ನು ಸೇರಿಸಿ ಈಗಿನ ವಿಸ್ತಾರಕ್ಕೆ ತರಲಾಗಿದೆಯೆಂದು ತೋರುವುದು. ಈಗ ದೇವಾಲಯದ ಮುಂದೆ ಪ್ರಾಯಶಃ ವಿಜಯನಗರ ಮತ್ತು ಅನಂತರ ಕಾಲದ ಒಂದು ಕಲ್ಲುಮಂಟಪವು ಮತ್ತು ಸುತ್ತಲೂ ಎತ್ತರದ ಸರಳವಾದ ಬೃಹತ್ ಪ್ರಾಕಾರವಿದೆ. ಪ್ರಾಕಾರದ ಉತ್ತರಭಾಗದಲ್ಲಿ ಮಹಾದ್ವಾರವಿದೆ. ಪೂರ್ವ ಮತ್ತು ಪಶ್ಚಿಮ ಭಾಗಗಳ ಒಳಬದಿಯಲ್ಲಿ ಸರಳ

೧. **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್**, ಸಂಪುಟ ೨೦, ಶಾಸನ ಸಂಖ್ಯೆ ೮೦. ಪುಟಗಳು ೯೯–೧೦೧.

ವಾದ ಸಣ್ಣ ಸಣ್ಣ ಗುಡಿಗಳಿವೆ. ಪ್ರಾಯಶಃ ಈ ದೇವಾಲಯವು ಮೇಲೆ ಹೇಳಿದ ಶಾಸನದ ಮೂಲಸ್ಥಾನ ದೇವಾಲಯ ಆಗಿದ್ದಿರಬಹುದು.

ಈ ದೇವಾಲಯವು ಮೊದಲಿನಿಂದಲೂ ಶೈವದೇವಾಲಯವೆಂದು ತೋರುವುದು. ಏಕೆಂದರೆ ಪಶ್ಚಿಮ ಪ್ರಾಕಾರದಲ್ಲಿರುವ ಭೌರಮ್ಮನ ಗುಡಿಯ ಎಡಮಗ್ಗುಲಲ್ಲಿ ಒಂದು ಚೆಲುವಾದ, ತೇಜೋಮಯವಾದ, ಭವ್ಯವಾದ ಕಪ್ಪು ಶಿಲೆಯ ಲಿಂಗವಿದೆ. ಲಿಂಗದ ಮೇಲ್ಭಾಗ (ಶಿವನ ಭಾಗ) ದುಂಡಾಗಿದ್ದು ಪೀಠದ ಹಂತದಿಂದ ಅಷ್ಟಕೋನ (ವಿಷ್ಣು ಭಾಗ) ವಾಗಿದೆ. ಉಳಿದ ಭಾಗ (ಬ್ರಹ್ಮ ಭಾಗ, ಸಾಮಾನ್ಯ ಚೌಕೋನವಾಗಿರುತ್ತದೆ) ಪೀಠದೊಳಗೆ ಇದೆ. ಪೀಠದ ಹಂತದಿಂದ ಇದರ ಎತ್ತರ ೪೫ ಸೆ. ಮಿ. ಮತ್ತು ವ್ಯಾಸ ೧.೧೬ ಮಿ. ಇದರ ಮೇಲೆ ಸುಂದರವಾಗಿ ಬ್ರಹ್ಮಸೂತ್ರವನ್ನು ಬಿಡಿಸಲಾಗಿದೆ.

ಇದರ ಪೀಠ ಮಾಟವಾಗಿ ತಿದ್ದಿದ ಅಡ್ಡ ಮಡಿಕೆಗಳುಳ್ಳದ್ದಾಗಿ ಚೌಕೋನವಾಗಿದೆ. ಮುಕ್ಕಾಲು ಪಾಲು ಭೂಮಿಯಲ್ಲಿ ಹುಗಿದು ಹೋಗಿದೆ.

ಈ ಲಿಂಗದ ಆಕಾರ ಮತ್ತು ಕೆತ್ತನೆಯ ಲಕ್ಷಣಗಳಿಂದ ಇದು ೧೨ನೇ ಶತಮಾನದ್ದೆಂದು ಹೇಳಬಹುದು.

ಇದರ ಸಮೀಪದಲ್ಲಿ ಇದೇ ತರಹದ ಒಂದು ಕರಿ ಶಿಲೆಯ ಸಣ್ಣ ಲಿಂಗವಿದೆ.

ಸಂಗಮೇಶ್ವರ ದೇವಾಲಯದ ಸುಮಾರು ½ ಕಿ. ಮಿ. ದಕ್ಷಿಣಕ್ಕೆ ಒಂದು ಹೊಲದಲ್ಲಿ, ಸುಮಾರು ೧೫ ವರ್ಷಗಳ ಹಿಂದೆ (೧೯೫೭–೫೮) ಗುಂಡಿಯನ್ನು ತೋಡಿದಾಗ ಮನೋಹರವಾದ ಭಗ್ನ ಭೈರವನ ಮೂರ್ತಿ ಸಿಕ್ಕಿತು. ಸುಮಾರು ೧⅓ ಮಿ. ಎತ್ತರ, ತ್ರಿಭಂಗಿಯಲ್ಲಿದೆ. ಎಡಪಾದ ಎಡಗಡೆಗೆ ತಿರುಗಿಸಿಟ್ಟಿದೆ. ಚತುರ್ಭುಜಗಳಿವೆ. ಕೆಳ ಬಲಗೈಯಲ್ಲಿರುವ ವಸ್ತು ಒಡೆದಿದೆ. ಮೇಲಿನ ಕೈಗಳಲ್ಲಿ ಡಮರು, ತ್ರಿಶೂಲ. ಕೆಳ ಎಡ ಅಂಗೈಯಲ್ಲಿ ಪಾನ ಪಾತ್ರೆಯಿದ್ದು ಅದು ಬೀಳದ ಹಾಗೆ ಮಧ್ಯದ ಬೆರಳುಗಳು ಹಿಡಿದಿವೆ. ತರ್ಜನಿ ಬೆರಳು ಒಬ್ಬ ರಾಕ್ಷಸನ ರುಂಡವನ್ನು ಅದರ ತಲೆಗೂದಲಿನಿಂದ ಹಿಡಿದಿದೆ. ಜಟಾಮುಕುಟವಿದೆ. ವರ್ತುಳಾಕಾರದ ದೊಡ್ಡ ಕಿವಿಯಾಭರಣಗಳು, ಎರಡು ಸರಗಳು, ತೋಳ್ಬಂದಿ, ಕೈಗಡಗ, ಸೊಂಟಕೆ, ಮಣಿಸರ ಇವೇ ಮೊದಲಾದ ಆಭರಣಗಳನ್ನು ಕೆತ್ತಲಾಗಿವೆ. ಅಲ್ಲದೆ ಮೊಣಕಾಲಿನಿಂದ ಸ್ವಲ್ಪ ಕೆಳಗೆ ಬರುವಂಥ ದೊಡ್ಡ ರುಂಡಮಾಲೆ ಮತ್ತು ಎರಡು ತೊಡೆಗಳನ್ನು ಸುತ್ತಿಕೊಂಡು ಗಂಟು ಹಾಕಿದ ಸರ್ಪ.

ಎಡಬದಿಯಲ್ಲಿ ಒಂದು ನಾಯಿ ಹಿಂಗಾಲಿನ ಮೇಲೆ ನಿಂತು ಭೈರವನ ಎಡಗೈಯಲ್ಲಿರುವ ರುಂಡದ ಮಾಂಸವನ್ನು ತಿನ್ನಲು ಹವಣಿಸುತ್ತಿದೆ ಮತ್ತು ಒಂದು ಕೊಂಡಿಚೇಳು ಇದೆ.

ನಿಂತ ಭಂಗಿ, ಎಡಪಾದ ಎಡಕ್ಕೆ ತಿರುಗಿಸಿರುವುದು, ಪಾನಪಾತ್ರೆ ಮತ್ತು ರುಂಡವನ್ನು ಹಿಡಿದಿರುವ ರೀತಿ ಬಹಳ ನೈಜವಾಗಿದೆ. ದೈಹಿಕ ಅಳತೆ ಮತ್ತು ಸೌಷ್ಠವತೆ ಪ್ರಮಾಣಬದ್ಧವಾಗಿದ್ದು ಮನೋಹರವಾಗಿದೆ. ಪ್ರಾಯಶಃ ೧೨–೧೩ನೇ ಶತಮಾನದ್ದಿರಬೇಕು.

ಈ ಊರಿನ ನೈರುತ್ಯ ಭಾಗದಲ್ಲಿರುವ ರಟ್ಟಿಲಿಂಗನ ಗುಡಿಯ ಬಾಗಿಲ ಬಳಿಯಲ್ಲಿ ಒಂದು ದುರ್ಗಾ ಮೂರ್ತಿಯಿದೆ. ಎತ್ತರ ಸುಮಾರು ೮೦ ಸೆ. ಮಿ; ಅಗಲ ೬೦ ಸೆ.ಮಿ. ಪೀಠದ ಮೇಲೆ ಕುಳಿತ ಭಂಗಿಯಲ್ಲಿದೆ. ಪೀಠದ ಬಲ ಬದಿಗೆ ಬಲಗಾಲು ಇಳಿಬಿಟ್ಟು ಎಡಗಾಲು ಮಡಚಿ ಪೀಠದ ಮೇಲಿದೆ. ನಾಲ್ಕು ಕೈಗಳು. ಕೆಳಗಿನ ಕೈಗಳು ತೊಡೆಗಳ ಮೇಲೆ ಇರಿಸಿವೆ. ಕೈಗಳಲ್ಲಿ ಕ್ರಮವಾಗಿ ಬಲ ಭಾಗದ ಕೆಳ ಹಸ್ತದಿಂದ ನೆಟ್ಟಗೆ ಹಿಡಿದ ಕತ್ತಿ (ಮುರಿದುಹೋಗಿದೆ). ತ್ರಿಶೂಲ, ಡಮರು ಮತ್ತು ಪಾನಪಾತ್ರೆ ಇವೆ. ಕಿರೀಟ ಮಕುಟ, ಸಣ್ಣದಾದ ಕಿವಿಯೋಲೆ, ಮಣಿಸರ, ಸುತ್ತು ತೋಳ್ಬಂದಿ, ಬಳೆಗಳು ದೇವಿಯ ಆಭರಣಗಳು. ಜೊತೆಗೆ ಯಜ್ಞೋಪವಿತದ ಹಾಗೆ ರುಂಡಮಾಲೆಯಿದೆ. ತಲೆಯ ಹಿಂದೆ ಪ್ರಭಾಮಂಡಲವಿದೆ. ವಸ್ತ್ರವನ್ನು ಕಚ್ಚೆಹಾಕಿ ಉಟ್ಟಿರುವ ಹಾಗಿದೆ. ಪ್ರಮಾಣ ಬದ್ಧವಾದ ಅಚ್ಚುಕಟ್ಟಾದ ಮೈಕಟ್ಟು. ಶರೀರದ ರೇಖಾವಿನ್ಯಾಸ ಆಕರ್ಷಕವಾಗಿದೆ. ಪೀಠದ ಮುಂಭಾಗದಲ್ಲಿ ದೇವಿಯ ವಾಹನ ನಾಯಿಯ ಉಬ್ಬು ಚಿತ್ರವಿದೆ. ಇದರ ಕಾಲಮಾನ ಕ್ರಿ. ಶ. ೧೩ ನೇ ಶತಮಾನ.

ಗುಡಿಯೊಳಗಿನ ಸೋಮಸೂತ್ರವುಳ್ಳ ಕರಿಶಿಲೆಯ ಲಿಂಗವು ಇದೇ ಕಾಲದ್ದೇ.

ಈ ಊರಿನ ಹೊಸತೋಟದಲ್ಲಿರುವ ಹೆಚ್ಚು ಕಡಿಮೆ ಒಂದೇ ತರಹವಿರುವ ಮಹಾಕಾಳಿಯ ಎರಡು ಮೂರ್ತಿ (೪೫×೨೫ ಸೆ. ಮಿ.) ಗಳಿವೆ.

"ಪಡಶೆಟ್ಟರ ಗಂಗಮ್ಮ"ನ ಮನೆಯಲ್ಲಿ ಗಜಾನನ, ವಿಷ್ಣು, ಮಹಿಷಾಸುರ ಮರ್ಧಿನಿ, ನಾಗರಾಜ ಮತ್ತು ನಾಗನ ಮೂರ್ತಿಗಳಿವೆ. ಮಹಿಷಾಸುರನ ಮರ್ಧಿನಿಯು ಗಮನಾರ್ಹ. ನೀಳ ಮನೋಹರ ಶರೀರ. ಎಂಟು ಕೈಗಳು. ಅವುಗಳಲ್ಲಿ ಕ್ರಮವಾಗಿ ಬಲಗಡೆ ಕೆಳ ಹಸ್ತದಿಂದ ತ್ರಿಶೂಲ, ಕತ್ತಿ, ಚಕ್ರ, ಅಗ್ನಿ, ಶಂಖ, ಬಿಲ್ಲು, ಢಾಲು ಇವೆ. ಕೆಳಗಿನ ಎಡ ಹಸ್ತವು ಕೋಣದ ತಲೆಯನ್ನು ಹಿಡಿದಿದೆ. ಎಡಗಾಲು ಅದರ ಬೆನ್ನನ್ನು ಅದುಮಿದೆ. ತ್ರಿಶೂಲವು ಇದರ ಕತ್ತನ್ನು ಇರಿದಿದೆ. ಕತ್ತರಿಸಿದ ಭಾಗದಲ್ಲಿ ಮಹಿಷಾಸುರನ ತಲೆ ಕಾಣಿಸುತ್ತಿದೆ. ಬಲಭಾಗದಲ್ಲಿ ಅವಳ ವಾಹನ ಸಿಂಹವಿದೆ. ಇದನ್ನು ಅಷ್ಟಾಗಿ ಚೆನ್ನಾಗಿ ಕೆತ್ತಿಲ್ಲ. ಕಾಲ ಪ್ರಾಯಶಃ ೧೨–೧೩ ನೇ ಶತಮಾನ.

ಇವಲ್ಲದೆ, ಇದೇ ಕಾಲದ್ದೆನ್ನಬಹುದಾದ ಕುಸುರಿನ ಕೆತ್ತನೆಯುಳ್ಳ ದೇವಾಲಯದ ಬಾಗಿಲು ಚೌಕಟ್ಟನ್ನು ಈ ಊರಿನ ಹರಿತೋಟದಲ್ಲಿರುವ ಹನುಮಂತನ ಗುಡಿಯ ಬಾಗಿಲಿಗೆ ಸೇರಿಸಿದೆ. ಒಳಗಡೆ ಒಂದು ಬದಿಯಲ್ಲಿ ಭಗ್ನವಾದ ಸಣ್ಣ ಮಹಾಕಾಳಿಯ ಮೂರ್ತಿಯಿದೆ.

ಈಶಾನ್ಯ ಭಾಗದಲ್ಲಿರುವ ಲಕ್ಕಮ್ಮನ ಗುಡಿಯ ಎದುರಿನಲ್ಲಿ ಅಡ್ಡಾದಿಡ್ಡಿಯಾಗಿ ಒಡೆದ ವಿಷ್ಣುವಿನ ಮೂರ್ತಿಯಿದೆ. ನಾಲ್ಕು ಕೈಗಳು. ಎಡ ಮೇಲಿನ ಹಸ್ತದಲ್ಲಿ ಅಪರೂಪವಾಗಿ ಸರ್ಪವಿದೆ.[೨]

---

೨. ಎಡ ಕೆಳ ಹಸ್ತದಲ್ಲಿ ಸರ್ಪವನ್ನು ಹಿಡಿದಿರುವ (ಹುಪರಸಹ್ಲಿದ) ವಿಷ್ಣುವಿನ ಮೂರ್ತಿ ಬಾದಾಮಿ ಚಾಲುಕ್ಯ ಶಿಲ್ಪದಲ್ಲಿ ಅಪರೂಪವಾಗಿದೆ.

ಹೀಗೆಯೆ ೧೨–೧೩ ನೇ ಶತಮಾನದ ದೇವಾಲಯದ ವಾಸ್ತುಶಿಲ್ಪ ಲಕ್ಷಣಗಳುಳ್ಳ ಬಾಗಿಲು ಚೌಕಟ್ಟುಗಳು, ಕಂಬಗಳು ಮುಂತಾದವುಗಳನ್ನು ಅಲ್ಲಿ ಇಲ್ಲಿ ಈಗಿನ ಗುಡಿಗಳಲ್ಲಿ ನೋಡಸಿಗುವವು.

## ಪ್ರಾಕಾರದಲ್ಲಿಯ ವಿಜಯನಗರ ಕಾಲದ ಶಿಲಾಮೂರ್ತಿಗಳು

ಸಂಗಮೇಶ್ವರ ದೇವಾಲಯದ ಪ್ರಾಕಾರದಲ್ಲಿ ಕುತೂಹಲಕಾರಿಯಾದ ಸುಮಾರು ೨೦ ಶೈವ ಹಾಗು ಶಕ್ತಿಯ, ವಿವಿಧ ಲಿಂಗಗಳು. ಶೈವ–ಶಾಕ್ತ ಸಂಪ್ರದಾಯಗಳ ಯೋಗಿಗಳ, ಯೋಗಿನಿಯ, ಶೈವ ಉಪಾಸಕರ, ಭಕ್ತರ ಮೂರ್ತಿಗಳಿವೆ.[೨೮] ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಸಂಪ್ರದಾಯಗಳ ವಿವಿಧ ಶಿಲಾಮೂರ್ತಿಗಳು ಒಂದೆಡೆಯಲ್ಲಿರುವಂಥ ಸ್ಥಳ ಉತ್ತರ ಕರ್ನಾಟಕದಲ್ಲಿ ಬೇರೆ ಎಲ್ಲಿಯೂ ತಿಳಿದುಬಂದಿಲ್ಲ. ಆದುದರಿಂದ ಅಪರೂಪದ ಈ ಶಿಲಾಮೂರ್ತಿಗಳ ವಿವೇಚನೆ ಹೆಚ್ಚಾಗಿ ಇಲ್ಲಿ ಮಾಡಲಾಗಿದೆ.

ಈ ಮೂರ್ತಿಗಳನ್ನು ಒಟ್ಟು ನಾಲ್ಕು ಪಂಗಡಗಳನ್ನಾಗಿ ವಿಂಗಡಿಸಬಹುದು :

೧. ಶಿವಲಿಂಗಗಳು
೨. ಭೈರವನ ಮೂರ್ತಿಗಳು
೩. ದೇವಿಯ ಮೂರ್ತಿಗಳು
೪. ಯೋಗಿಗಳ ಮತ್ತು ಯೋಗಿನಿಯ ಮೂರ್ತಿಗಳು.
೫. ಉಪಾಸಕರ ಮತ್ತು ಭಕ್ತರ ಮೂರ್ತಿಗಳು.

### ೧. ಶಿವಲಿಂಗಗಳು

i) ಭೌರಮ್ಮ ಗುಡಿಯ ಹಿಂಬದಿಯಲ್ಲಿ ಒಂದು ಉದ್ದನೆಯ ಪೀಠದ ಮೇಲೆ ಲಿಂಗಗಳ ಒಂದು ಸಾಲು ಇದೆ (ಚಿತ್ರ ೧: 1 ). ಈ ಸಾಲಿನಲ್ಲಿ ಒಂದೇ ತರಹದ ಸಣ್ಣದಾದ ೩೬ ಲಿಂಗಗಳಿವೆ. ಮೇಲ್ಭಾಗ ಸಮತಲವಾಗಿದ್ದು. ಅಂಚಿನಲ್ಲಿ ರುದ್ರಾಕ್ಷಿ ಸರದಿಂದ ಅಲಂಕರಿಸಲ್ಪಟ್ಟಿದೆ. ಇವುಗಳಲ್ಲಿ ೬ ಲಿಂಗಗಳು ಒಡೆದು ಹೋಗಿವೆ. ಪೀಠವು ೭. ೮೦ ಮಿ. ಉದ್ದ, ೪೫ ಸೆ. ಮಿ. ಅಗಲ. ಎಂಟು ಬಿಡಿಕಲ್ಲುಗಳಲ್ಲಿ ಮಾಡಿ ಜೋಡಿಸಿದ್ದಾಗಿದೆ. ಇವರ ಒಂದು ಬದಿ ಪ್ರಾಕಾರದ ಗೋಡೆಯಲ್ಲಿ ಸೇರಿಹೋಗಿದೆ.

ii) ಈ ಗುಡಿಯ ಎಡಭಾಗದ ತೋಟದಲ್ಲಿ ಗಿಡ. ಬಳ್ಳಿ. ಕಸಗಳ ಮಧ್ಯದಲ್ಲಿ ಎರಡು ಗಮನಾರ್ಹ ಲಿಂಗಗಳಿವೆ. ಒಂದರ ಪೀಠ ಮತ್ತು ಲಿಂಗ (ಚಿತ್ರ ೨: I) ಒಂದೇ ಕಲ್ಲಿನಲ್ಲಿ ಮಾಡಲಾಗಿದೆ. ಜಲಧಾರೆ ಸೇರಿ ಪೀಠವು ೯೫×೫೮ ಸೆ. ಮಿ. ಉದ್ದವಿದ್ದು ಲಿಂಗವು ಸುಮಾರು ೪೦ ಸೆ. ಮಿ. ವ್ಯಾಸವುಳ್ಳದ್ದಾಗಿ ಮತ್ತು ೧೩ ಸೆ. ಮಿ. ಎತ್ತರವಾಗಿ ಗೋಲಾಗಿದೆ. ಲಿಂಗದ ಕೆಳಮೈಯ ಮೇಲೆ ಸಮಾನಾಂತರದಲ್ಲಿ ೬ ಸುತ್ತು ವೃತ್ತಗಳು. ಮೇಲ್ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಅರಳಿದ ಕಮಲದ ಹಾಗೆ

೨೮. ಕನ್ನಡ ಸಂಶೋಧನ ಸಂಸ್ಥೆಯು ತನ್ನ ಪ್ರಾಗ್ರೆಸ್ ರಿಪೋರ್ಟ್ಸ್. ೧೯೫೩–೫೭ ರ ವರದಿಯನ್ನು ಪುಟ ೧೫ ರಲ್ಲಿ ಈ ಮೂರ್ತಿಗಳ ಉಲ್ಲೇಖವಿದೆ.



1. ಸಾಲು ಲಿಂಗಗಳು




2. ಭೈರವ (ನಿಂತ ಭಂಗಿ)



3. ಭೈರವ (ಕುಳಿತ ಭಂಗಿ)



1. ಚಿತ್ರದ ಶಿವಲಿಂಗ



2. ಸರ್ಪಭೂಷಿತ ಶಿವಲಿಂಗ

ಇರುವ ಉಬ್ಬು ಚಿತ್ರಗಳಿವೆ. ಒಂದೇ ಕಲ್ಲಿನಲ್ಲಿ ಕೆತ್ತನೆ ಮತ್ತು ಉಬ್ಬು ಚಿತ್ರಗಳ ಅಲಂಕರಣ ಈ ಲಿಂಗದ ವೈಶಿಷ್ಟ್ಯ.

iii) ಇನ್ನೊಂದು ಇವರ ಹತ್ತಿರದಲ್ಲಿದೆ (ಚಿತ್ರ ೨: 2). ಇದರ ಪೀಠ ಮತ್ತು ಲಿಂಗ ಬೇರೆ ಬೇರೆಯಾಗಿವೆ. ಲಿಂಗವು ದುಂಡಾಗಿದ್ದು ಮೇಲ್ಭಾಗ ಏಕಪ್ರಕಾರವಾಗಿ ಸಮತಲವಾಗಿದೆ. ಇದರ ಮೈಮೇಲೆ, ಮುಂಭಾಗದಲ್ಲಿ ಸ್ವಲ್ಪ ಸ್ಥಳ ಬಿಟ್ಟು, ಸಮಾನಾಂತರವಲ್ಲಿ ಲಂಬವಾಗಿ ೯ ರೇಖೆಗಳನ್ನು ಅಡ್ಡಲಾಗಿ ೧೧ ರೇಖೆಗಳನ್ನು ಕೊರೆಯಲಾಗಿದೆ. ಲಂಬ ಮತ್ತು ಅಡ್ಡ ರೇಖೆಗಳು ಒಂದಕ್ಕೊಂದು ಅಡ್ಡಲಾಗಿ ಛೇದಿಸುವುದರಿಂದ ೪೨೯ ಚದುರಗಳುಂಟಾಗಿವೆ. ಪ್ರಾಯಶಃ ಪ್ರತಿಯೊಂದು ಚದುರವು ಒಂದೊಂದು ಲಿಂಗದ ಸಂಕೇತವೆನೋ[೩]? ಮುಂಭಾಗದಲ್ಲಿ ಸುಮಾರು ೩ ಸೆ. ಮಿ. ಅಗಲ ೧ ಸೆ. ಮಿ. ಆಳವಷ್ಟು ಲಿಂಗದುದ್ದಕ್ಕೂ ಸಮತಲವಾಗಿ ತಗ್ಗು ಮಾಡಲಾಗಿದೆ. ಪೀಠದ ಹಂತದಲ್ಲಿ ಲಿಂಗದ ಸುತ್ತಲೂ ಸರ್ಪ ಸುತ್ತುಹಾಕಿ ಮುಂಭಾಗದ ತಗ್ಗಿನ ಮುಂದೆ ತನ್ನ ಹೆಡೆಯನ್ನಿಟ್ಟುಕೊಂಡಿದೆ. ಈ ಎಲ್ಲ ಲಕ್ಷಣಗಳು ಲಿಂಗದ ವೈಶಿಷ್ಟ್ಯವಾಗಿದೆ. ಇದರ ವ್ಯಾಸ ಸುಮಾರು ೩೫ ಸೆ. ಮಿ. ಎತ್ತರ ೨೦ ಸೆ. ಮಿ.

**೨. ಭೈರವನ ಮೂರ್ತಿಗಳು**

i) ಹೆಬ್ಬಾಗಿಲ ಬಳಿ ಉತ್ತರ ಭಾಗದ ಪ್ರಾಕಾರದ ಗೋಡೆಗೆ ಆನಿಸಿಟ್ಟ ಭೈರವನ ನಗ್ನ ಮೂರ್ತಿ (೮೦ ಸೆ. ಮಿ. ಎತ್ತರ; ೫೫ ಸೆ. ಮಿ. ಅಗಲ. ಚಿತ್ರ ೧; 3) ಕುಳಿತ ಭಂಗಿಯಲ್ಲಿದೆ. ಮಡಚಿದ ಬಲಗಾಲು ನೆಟ್ಟಗಿಟ್ಟು ಎಡಗಾಲು ಅಡ್ಡಲಾಗಿ ಪೀಠದ ಮೇಲಿದೆ. ನಾಲ್ಕು ಕೈಗಳು, ಕೆಳಗಿನ ಮತ್ತು ಮೇಲಿನ ಬಲ ಎಡ ಕೈಗಳಲ್ಲಿ ಕ್ರಮವಾಗಿ ನೆಟ್ಟಗೆ ಹಿಡಿದ ಖಡ್ಗ, ಡಮರು ಮತ್ತು ಪಾನಪಾತ್ರ. ತ್ರಿಶೂಲಗಳಿವೆ. ಕೂದಲು ಹಿಂದಕ್ಕೆ ಬಾಚಿ ಮೇಲಕ್ಕೆತ್ತಿ ಕಮಾನಿನ ಹಾಗೆ ಕಟ್ಟಿದೆ. ಕಾಲ್ಗಡಗ. ಸೊಂಟಕ್ಕೆ ಗೆಜ್ಜೆಪಟ್ಟಿ. ಯಜ್ಞೋಪವಿತ, ತೋಳ್ಬಂದಿ, ಕೈಬಳೆ ಆಭರಣಗಳಾಗಿವೆ. ರುಂಡಮಾಲೆ ಯಜ್ಞೋಪವಿತ ರೀತಿಯಲ್ಲಿದ್ದು ಹೊಕ್ಕಳಿನತನಕ ಉದ್ದವಿದೆ. ಪ್ರಾಯಶಃ ೧೩–೧೪ ನೇ ಶತಮಾನದ್ದೆಂದು ತೋರುವುದು.

ii) ಪ್ರಾಕಾರದ ದಕ್ಷಿಣ ಗೋಡೆಗೆ ನಿಲ್ಲಿಸಿಟ್ಟಿರುವ ಭೈರವಮೂರ್ತಿ (೧.೪೩ ಮಿ. ಎತ್ತರ; ೭೦ ಸೆ. ಮಿ. ಅಗಲ. ಚಿತ್ರ ೧; 2) ನಗ್ನವಾಗಿದ್ದು ತಕ್ಕಮಟ್ಟಿಗೆ ಸಮಭಂಗದಲ್ಲಿ ಸೆಟೆದು ನಿಂತಿದ್ದಾನೆ. ಎರಡು ಪಾದಗಳ ಮಧ್ಯೆ ಸ್ವಲ್ಪ ಹೆಚ್ಚಿನ ಅಂತರವಿದೆ. ನಡವು ಎದ್ದು ಕಾಣುವಷ್ಟು ಸಣ್ಣದಿದೆ. ಕಂಠ ಮತ್ತು ಕಿಬ್ಬೊಟ್ಟೆಯ ಮೇಲೆ ಮಡಿಕೆ

---

೩. ಹೀಗೆ ಲಿಂಗದ ಮೇಲೆ ರೇಖೆಗಳನ್ನು ಅವುಗಳಿಂದ ರೇಖಾಲಿಂಗಗಳನ್ನು ತೋರಿಸಿದ ಲಿಂಗವೊಂದು ಕಾರಟಗಿ (ಗಂಗಾವತಿ ತಾ. ರಾಯಚೂರು ಜಿ.) ಯಲ್ಲಿದೆ. ನೋಡಿ : ಸುಂದರ. ಅ; ೧೯೭೩: "ಗಂಗಾವತಿ ತಾಲೂಕಿನ ಪ್ರಾಚ್ಯವಸ್ತುಗಳು", **ಕರ್ನಾಟಕ ಭಾರತಿ,** ಸಂಪುಟ ೬, ಸಂಚಿಕೆ ೧ ಪು. ೭೫.

ಗಳಿವೆ. ಗಲ್ಲ ತುಟಿಗಳು ಚೆನ್ನಾಗಿ ತಿದ್ದಿವೆ. ನಾಲ್ಕು ಕೈಗಳು. ಎಡಭಾಗದ ಕೈಗಳು ಮತ್ತು ಕೆಳ ಬಲಗೈ ಮುರಿದು ಹೋಗಿವೆ. ಬಲಭಾಗದ ಮೇಲಿನ ಕೈಯಲ್ಲಿ ಡಮರು ಇದೆ. ಕೂದಲನ್ನು ಹಿಂದಕ್ಕೆ ಬಾಚಿ ಮೇಲೆತ್ತಿ ಕಮಾನಿನ ಹಾಗೆ ಕಟ್ಟಲ್ಪಟ್ಟಿದೆ. ವಕ್ಷಸ್ಥಲದವರೆಗೆ ಬರುವಂಥ ಮೂರೆಳೆ ಸರವನ್ನು ಮತ್ತು ಮೊಣಕಾಲಿನವರೆಗೂ ಯಜ್ಞೋಪವೀತದ ರೀತಿ ಇಳಿಬಿದ್ದ ರುಂಡಮಾಲೆಯನ್ನು ಧರಿಸಿವೆ. ಕಾಲಿಗೆ, ಪಾದತ್ರಾಣವಿಲ್ಲ. ಎಡಭಾಗದಲ್ಲಿ ಒಂದು ನಾಯಿ ತನ್ನ ಹಿಂಗಾಲಿನ ಮೇಲೆ ನಿಂತು ಭೈರವನ ಕೆಳ ಎಡಗೈಯಲ್ಲಿರುವುದನ್ನು ತಿನ್ನಲು ಪ್ರಯತ್ನಿಸುತ್ತಿರುವ ಹಾಗೆ ಇದೆ. ಇದರ ತಲೆ ಒಡೆದು ಹೋಗಿದೆ. ಈ ಮೂರ್ತಿಯ ಅಂಗಾಂಗಗಳು, ಕೆತ್ತನೆ, ನಿಂತ ಭಂಗಿ ಮತ್ತು ರುಂಡಮಾಲೆ ಧರಿಸಿದ ರೀತಿ ಅನುಲಕ್ಷಿಸಿ, ಇದು ಸುಮಾರು ೧೫ ನೇ ಶತಮಾನದ್ದೆಂದು ತೋರುವುದು.

## ೩. ದೇವಿ ಮೂರ್ತಿಗಳು

### 1. ಮಹಾಕಾಳಿ

i) ಉತ್ತರ ಬದಿಯ ಪ್ರಾಕಾರಕ್ಕೆ ಅತುಕೊಂಡು ಮಹಾಕಾಳಿಯ ಎರಡು ಮೂರ್ತಿಗಳಿವೆ. ಎರಡು ಸಮಭಂಗದಲ್ಲಿವೆ. ನಾಲ್ಕು ಹಸ್ತಗಳಿದ್ದು ಅವುಗಳಲ್ಲಿ ಕ್ರಮವಾಗಿ ಬಲಗಡೆ ಕೆಳಗಿನಿಂದ ನೆಟ್ಟಗೆ ಹಿಡಿದ ಕತ್ತಿ, ಡಮರು, ತ್ರಿಶೂಲಗಳಿವೆ. ಕೆಳ ಎಡಗೈ ಒಡೆದು ಹೋಗಿದೆ. ಒಂದರಲ್ಲಿ (೧.೨೮ ಮಿ × ೫೮ ಸೆ.ಮಿ. ಚಿತ್ರ ೩ ; 2 ) ತಲೆಗೂದಲನ್ನು ಹಿಂದಕ್ಕೆ ಬಾಚಿ ಮೇಲಕ್ಕೆ ಪಟ್ಟಿಪಟ್ಟಿಯಾಗಿ ಎತ್ತಿ ಕಮಾನಿನ ಹಾಗೆ ಕಟ್ಟಿದೆ. ಈ ಕೇಶಾಲಂಕಾರದ ವೈಶಿಷ್ಟ್ಯವನ್ನು ಸಹಜವಾಗಿ ತೋರಿಸಿದೆ. ಗಾಲಿಗಳಂಥ ಕಿವಿಯೋಲೆ, ಕಂಠಾಭರಣ, ಸರ, ಕೈಬಳೆ ಮಿತವಾಗಿ ಮೂರ್ತಿಯನ್ನು ಅಲಂಕರಿಸಿವೆ. ಇದರ ಉಡಿಗೆ ಗಮನಾರ್ಹ. ಸೀರೆಯನ್ನು ಮುಂದೆ ನೆರಿಗೆ ಬರುವ ಹಾಗೆ ಉಟ್ಟು, ಸೆರಗನ್ನು ಮುಂದೆ ಅಡ್ಡವಾಗಿ ತಂದು ಸೊಂಟದ ಹಿಂಬದಿಗೆ ಸಿಕ್ಕಿಸಿದ ಹಾಗೆ ಇದೆ. ಸೀರೆಯ ಬುಡ ಪಾದದಿಂದ ಸ್ವಲ್ಪ ಮೇಲಕ್ಕೆ ಇದೆ. ನಡುವಿನಿಂದ ಕತ್ತಿನ ವರೆಗೆ ಅಂದರೆ ಮುಂಡದ ಭಾಗ ದುಂಡು ಶಿಲ್ಪದಲ್ಲಿದೆ. ಉಳಿದ ಭಾಗ ಉಬ್ಬು ಶಿಲ್ಪ.

(ii) ಮತ್ತೊಂದರ (೧.೫೦ ಮಿ × ೭೫ ಸೆ.ಮಿ. ಚಿತ್ರ ೩:।) ಕೇಶಾಲಂಕಾರ ಜೈತಲೆ ಬಾಚಿಕೊಂಡ ಹಾಗಿದೆ. ಮೇಲಿನ ಮೂರ್ತಿಯಲ್ಲಿಯ ಹಾಗೆ ಇದರ ಆಭರಣಗಳು ಸ್ವಲ್ಪ ಹೆಚ್ಚು ಕಡಿಮೆ ಅದೇ ತರಹದ್ದೆ. ಇದರ ವಸ್ತ್ರಾಲಂಕಾರವು ಬೇರೆ ವಿಧವಾಗಿದ್ದು ವೈಶಿಷ್ಟ್ಯವಾಗಿದೆ. ನಡುವಿನಿಂದ ಮುಂದೆ ಇಳಿಜಾರಾಗಿ ಹೊಕ್ಕಳಿಂದ ಕೆಳಕ್ಕೆ ಕಟ್ಟಿದ, ತುಂಬು ನೆರಿಗೆಯಿಂದ ಕೂಡಿದ ಲಂಗ ಮೊಣಕಾಲಿನಿಂದ ಸ್ವಲ್ಪ ಕೆಳಗಿನ ತನಕ ಇದೆ. ಹೆಚ್ಚು ಕಡಿಮೆ ಪೂರ್ತಿ ದುಂಡು ಶಿಲ್ಪದಲ್ಲಿದೆ. ಎರಡೂ ಮೂರ್ತಿಗಳ ಕಾಲುಗಳು ಬೋಳಾಗಿವೆ. ಕಣ್ಣುಗಳು ದೊಡ್ಡದಾಗಿ ಅರಳಿಸಿದ ಹಾಗೆ ಇವೆ. ನಿಂತಿರುವ



1. ಮಹಾಕಾಳಿ



2. ಮಹಾಕಾಳಿ




3. ಮಹಾಲಕ್ಷ್ಮಿ



←1

2
↓





← 3

4→



1, 2, 3, ಯೋಗಿಗಳು.

4. ಯೋಗಿನಿ

ಶೈಲಿ, ವಸ್ತುಗಳನ್ನು ಹಿಡಿದಿರುವ ರೀತಿ ಗಡುಸಾಗಿದ್ದರೂ ದೇಹವಿನ್ಯಾಸ ಪ್ರಮಾಣ ಬದ್ಧವಾಗಿ ಮನೋಹರವಾಗಿ ಒಡೆದೆದ್ದು ತೋರುವುದು.

(iii) ಪೂರ್ವದ ಬದಿಯ ಗೋಡೆಗೆ ಸೇರಿಸಿ ಕಟ್ಟಿದ ಒಂದು ಗುಡಿಯಲ್ಲಿ ಅತ್ಯಂತ ದೊಡ್ಡದಾದ ಭವ್ಯ ಮಹಾಕಾಳಿ ಮೂರ್ತಿಯಿದೆ. ಸುಮಾರು ೧.೭೫ ಮಿ. ಎತ್ತರ; ೮೫ ಸೆ.ಮಿ. ಅಗಲ. ಅಂಗಾತ ಮಲಗಿದ ಅಪಸ್ಮಾರನ ಎದೆಯನ್ನು ಮೆಟ್ಟಿ ನಿಂತಿದೆ. ಅಪರೂಪವಾಗಿ ಆರು ಕೈಗಳಿವೆ. ಅತ್ಯಂತ ಕೆಳಗಿನ ಬಲಗೈ ಮುರಿದು ಹೋಗಿದೆ. ಉಳಿದ ಹಸ್ತಗಳಲ್ಲಿ ಕ್ರಮವಾಗಿ ಬಲಗಡೆಯಿಂದ, ಕತ್ತಿ, ಡಮರು, ಬಾಣ ಬಿಲ್ಲು ಮತ್ತು ತ್ರಿಶೂಲ. ತಲೆಯ ಮೇಲೆ ಉದ್ದ ಪಟ್ಟಿಕೆಯ ಶಿಖರಾಕಾರದ ಕಿರೀಟ ಮಕುಟ. ನೆರಿಗೆಯುಳ್ಳ ಲಂಗದ ಉಡಿಗೆ, ನಿಲುವಿಗೆ ತಕ್ಕಂತೆ ದೇಹ ದಾರ್ಢ್ಯತೆ. ರುಂಡ ಶಿಲ್ಪದಲ್ಲಿದೆ. ಸರಳ ಪ್ರಭಾವಳಿ ಇಂಥ ದೃಢಕಾಯದ ಅಪರಿಮಿತ ಶಕ್ತಿಯ ತುಳಿತಕ್ಕೆ ಸಿಕ್ಕಿ ಅಪ್ಪಳಿಸಿದ ಹಾಗಿದೆ ಅಪಸ್ಮಾರ. ಕಿರೀಟವನ್ನು ಧರಿಸಿದ್ದಾನೆ. ಕತ್ತಿ ಡಾಲು ಅವನ ಕೈಯಲ್ಲಿವೆ. ಮೇಲಕ್ಕೆತ್ತಿದ ಕೈಯಲ್ಲಿ ಕತ್ತಿ ಅಡ್ಡಲಾಗಿ ಹಾಗೆ ಇದೆ. ಬಲಗಾಲು ಮಡಿಚಿದೆ. ಒಟ್ಟಿನಲ್ಲಿ ಶಕ್ತಿಹೀನನಾಗಿ ಬಿದ್ದಿರುವುದು ಸಹಜವಾಗಿದೆ.

(iv) ಭೌರಮ್ಮನ ಗುಡಿಯ ದಕ್ಷಿಣ, ಪಶ್ಚಿಮ ಮತ್ತು ಉತ್ತರ ಗೋಡೆಗಳಲ್ಲಿಯ ಹೊರಬದಿಯ ದೇವಕೋಷ್ಠಗಳಲ್ಲಿ ಎರಡು ಮೇಲಿನ ತರಹದ ಮಹಾಕಾಳಿಯು ಮತ್ತು ಒಂದು ಮಹಾಲಕ್ಷ್ಮಿಯ ಮೂರ್ತಿಗಳಿವೆ. ಭೌರಮ್ಮನ ಗುಡಿಯ ವಾಸ್ತು ಶಿಲ್ಪವನ್ನು ಗಮನಿಸಿದಾಗ, ಅಲ್ಲಲ್ಲಿ ಬಿದ್ದಿದ್ದ ಮೂರ್ತಿಗಳನ್ನು ಈ ಗುಡಿಯನ್ನು ಕಟ್ಟುವಾಗ ಸೇರಿಸಿ ಕಟ್ಟಿರುವುದು ಸ್ಪಷ್ಟ.

ಮಹಾಕಾಳಿಯ ಮೂರ್ತಿಗಳ ಶಿಲ್ಪದ ಮಾದರಿಯನ್ನು ಮೇಲೆ ಹೇಳಿದ ೧೩ ನೇ ಶತಮಾನದ ದುರ್ಗಾ ಮಹಾಕಾಳಿಯ[೪] ಶಿಲ್ಪಕ್ಕೆ ಹೋಲಿಸಿದರೆ, ಭಂಗಿಯಲ್ಲಿ, ಆಭರಣಗಳ ಮತ್ತು ಉಡುಪುಗಳ ತರಹಗಳಲ್ಲಿ ಮತ್ತು ಧರಿಸಿದ ರೀತಿಗಳಲ್ಲಿ, ದೇಹ ವಿನ್ಯಾಸಗಳಲ್ಲಿ ಸ್ಪಷ್ಟ ವ್ಯತ್ಯಾಸಗಳಿವೆ. ಅಲ್ಲದೆ, ಮೇಲಿನ ಹಸ್ತಗಳಲ್ಲಿರುವ ಡಮರು ತ್ರಿಶೂಲಗಳು ಅದಲು ಬದಲಾಗಿವೆ. ಈ ಮೂರ್ತಿಶಿಲ್ಪದಲ್ಲಿ ರುಂಡಮಾಲೆ ಮತ್ತು ವಾಹನವಿಲ್ಲ. ಆದುದರಿಂದ ಈ ವ್ಯತ್ಯಾಸಗಳು ಕೇವಲ ಕಾಲಾನುಕ್ರಮದಲ್ಲಿ ಆಗುವ ಬದಲಾವಣೆಗಳಿಗನುಗುಣವಾಗಿದೆಯೆಂದಷ್ಟೆಯಲ್ಲದೆ ಬೇರೆ ಬೇರೆ ಧಾರ್ಮಿಕ ಪಂಥಗಳನ್ನು ಸೂಚಿಸುತ್ತವೆಯೆಂದು ತೋರುವುದು.

## ೨. ಮಹಾಲಕ್ಷ್ಮಿ

ಮಹಾಕಾಳಿಯ ಮೂರ್ತಿಶಿಲ್ಪದ ಸಂಪ್ರದಾಯಕ್ಕೆ ಸೇರಿದ ಮಹಾಲಕ್ಷ್ಮಿ ಮೂರ್ತಿ (೧.೪೫ ಮಿ. × ೭೦ ಸೆ.ಮಿ. ಚಿತ್ರ ೩:3) ಸಮಭಂಗದಲ್ಲಿದೆ. ನಾಲ್ಕು ಕೈಗಳು ಕೆಳ ಬಲ

೪. ಈ ಕಾಲದ ಮಹಾಕಾಳಿಯ ಮೂರ್ತಿಗಳು ನಿಂತ ಭಂಗಿಯಲ್ಲಿರುತ್ತವೆ. ಭೀಕರ ಸ್ವರೂಪ. ಸಾಮಾನ್ಯವಾಗಿ ತ್ರಿಭಂಗಿ ಅಥವಾ ನಾಟ್ಯ (ಅತಿ) ಭಂಗಿಯಲ್ಲಿರುತ್ತವೆ.

ಹಸ್ತ ಮುರಿದು ಹೋಗಿದೆ. ಉಳಿದ ಕೈಗಳಲ್ಲಿ ಕ್ರಮವಾಗಿ ಶಂಖ, ಚಕ್ರ ಮತ್ತು ಕಲಶವಿದೆ. ಉಟ್ಟ ವಸ್ತ್ರ ಮುಂದೆ ನೆರಿಗೆ, ಕತ್ತರಿಪಟ್ಟಿ, ಅಡ್ಡಪಟ್ಟಿ ಬರುವ ಹಾಗೆ ಮತ್ತು ಅದರ ಸೆರಗು ಎದೆಯ ಮೇಲಿಂದ ಎಡ ಭುಜದ ಮೇಲೆ ಹಾದು ಹೋಗಿ ಹಿಂದಕ್ಕೆ ಇಳಿ ಬಿದ್ದ ಹಾಗೆ ಇದೆ. ಸೊಂಟದ ಎರಡು ಬದಿಗಳಲ್ಲಿ ನೆರಿಗೆ ಪಟ್ಟಿಯು ಜೋತಾಡುತ್ತಿದೆ. ಅಡ್ಡಮಡಿಕೆಯುಳ್ಳ ಕಿರೀಟಮಕುಟ, ಗಾಲಿಯಂಥ ಕಿವಿಯೋಲೆ, ಕಂಠಾಭರಣ, ಸ್ತನಹಾರ, ಕೈಗಡಗ, ಬಳೆಗಳು, ಕಾಲ್ಗಡಗ, ನೂಪುರಗಳು ದೇವಿಯನ್ನು ಅಲಂಕರಿಸಿವೆ. ಆಭರಣದ ಹೆಚ್ಚಳ ಮತ್ತು ವಸ್ತ್ರಾಲಂಕಾರ ಲಕ್ಷ್ಮಿಗೆ ಉಚಿತ. ದೇಹ ವಿನ್ಯಾಸ ದಾರ್ಢ್ಯತೆಯನ್ನು ತೋರಿಸಿದರೂ ಎತ್ತರಕ್ಕೆ ತಕ್ಕಂತೆ ಇಲ್ಲ. ನಿಲುವಿನಲ್ಲಿ ಅಷ್ಟಾಗಿ ಸಹಜತೆ ಬಂದಿಲ್ಲ.

## ೪. ಯೋಗಿಗಳು ಮತ್ತು ಯೋಗಿನಿ

(i) ಪ್ರಾಕಾರದ ಮಹಾದ್ವಾರದ ಬಳಿ ಒಂದೇ ಕಲ್ಲಿನಲ್ಲಿ ಕೆತ್ತಿದ ಒಂದೇ ತರಹದ ಮೂರು ಯೋಗಿಗಳ ಉಬ್ಬು ಚಿತ್ರವಿದೆ. (೧.೧೫ ಮಿ. x ೭೦ ಸೆ.ಮಿ. ಚಿತ್ರ ೪;1). ಪ್ರತಿಯೊಬ್ಬನು ನಿಂತ ಭಂಗಿಯಲ್ಲಿದ್ದಾನೆ. ಜಟೆ. ಉದ್ದನೆಯ ಚೂಪು ಹುರಿ ಮಿಸೆ, ಗಡ್ಡ ಬಿಟ್ಟಿದ್ದಾನೆ. ಬಲಗೈ ಮುರಿದು ಹೋಗಿದೆ. ಎಡಗೈಯಲ್ಲಿ ಕಮಂಡಲ ವಿದೆ. ಮುಂದೆ ನೆರಿಗೆ ಮತ್ತು ಮೊಣಕಾಲಿನ ವರೆಗೆ ಬರುವ ಹಾಗೆ ಧೋತ್ರ ಉಟ್ಟಿದ್ದಾನೆ. ಕಂಠದಲ್ಲಿ ರುದ್ರಾಕ್ಷಿಮಾಲೆಯಿದೆ. ಎಡಗೈ ಮಣಿಗಂಟಿಗೆ ಕಡಗವೊ. ರುದ್ರಾಕ್ಷಿ ಕಟ್ಟೊ ಇದೆ. ಈ ಚಿತ್ರಪಟ್ಟಿಯ ಎರಡೂ ಬದಿಗಳಲ್ಲಿ ಒಡೆದು ಹೋದ ಗುರುತು ಗಳಿವೆ. ಅಂದರೆ ಮೂಲತಃ ಇದು ಇನ್ನೂ ಉದ್ದವಿದ್ದು ಯೋಗಿಗಳ ಚಿತ್ರಗಳಿಂದ ಕೂಡಿತ್ತು. ಈಗ ಇರುವುದು ಇದರ ಒಂದು ಭಾಗ ಮಾತ್ರ.

(ii) ಮತ್ತೊಂದು ಕಡೆಯಲ್ಲಿ ಒಂದೇ ತೆರನಾದ ಒಂದು ಸಾಲಿನಲ್ಲಿ ನಿಂತ ಎಂಟು ಯೋಗಿಗಳ ಉಬ್ಬು ಚಿತ್ರವಿದೆ. (೧.೫೦ಮಿ, x ೬೦ ಸೆ.ಮಿ. ಪೀಠ ಬಿಟ್ಟು ಚಿತ್ರ. ೪:೨) ಮೇಲೆ ಹೇಳಿದವರ ಹಾಗೆ ಇದ್ದಾರೆ. ಆದರೆ ತಲೆಯ ಮೇಲೆ ಪ್ರಾಯಶಃ ಕೂದಲನ್ನು ಚಪ್ಪಟೆ ಮತ್ತು ದುಂಡಾಗಿ ಕಟ್ಟಲಾಗಿದೆ. ಎಡಗಡೆಯಿಂದ ಮೊದಲನೆಯವನು ಉಳಿದವರಿಗಿಂತ ಸ್ವಲ್ಪ ಕುಳ್ಳ.

(iii) ದಕ್ಷಿಣ ಪ್ರಾಕಾರದ ಗೋಡೆಗೆ ಆನಿಸಿಟ್ಟ ಒಂದು ದೊಡ್ಡ ಯೋಗಿಯ ಮೂರ್ತಿಯಿದೆ (೧ ೭೦ ಮಿ. ಎತ್ತರ, ೬೦ ಸೆ.ಮಿ ಅಗಲ ಚಿತ್ರ ೪:3). ಮೊಣಕಾಲಿನ ಬಳಿ ಅಡ್ಡವಾಗಿ ಒಡೆದು ಎರಡು ತುಂಡುಗಳಾಗಿ ಒಂದರ ಪಕ್ಕ ಮತ್ತೊಂದು ಬಿದ್ದಿವೆ. ಕುತ್ತಿಗೆಯ ಬಳಿಯೂ ಅಡ್ಡಲಾಗಿ ತುಂಡಾಗಿದೆ. ಬಲಗೈ ಪೂರ್ತಿ, ಎಡಗೈಯ ಹಸ್ತ ಮತ್ತು ಅದರಲ್ಲಿ ಹಿಡಿದಿರುವ ವಸ್ತು ಅರ್ಧ ಒಡೆದಿದೆ. ಗುಂಗುರು ಗುಂಗುರಾಗಿ ಹೆಣೆದ ತಲೆಗೂದಲು, ಉದ್ದನೆಯ ಚೂಪಾದ ಹುರಿಮಿಸೆ, ಚೂಪನೆಯ ಉದ್ದ ಗಡ್ಡ ವಿದೆ. ಇವನ ಉಡಿಗೆಯೆಂದರೆ ಕೇವಲ ಲಂಗೋಟಿ. ತೋಳಿಗೆ ಎರಡು ಸುತ್ತಿನ ಸರಳ

ಆಭರಣ. ಎಡಗೈಯಲ್ಲಿ ಹಿಡಿದಿರುವ ವಸ್ತು ಸ್ವಲ್ಪ ಒಡೆದಿರುವದರಿಂದ ಸ್ಪಷ್ಟವಾಗಿಲ್ಲ. ತಲೆಬುರುಡೆಯು ಹಾಗಿದೆ. ಒಟ್ಟಿನಲ್ಲಿ ಇವನ ದೃಢಕಾಯ, ಜಟೆ, ಮೀಸೆ, ಗಡ್ಡ, ಅರಳಿದ ಕಣ್ಣು, ಸರಳ ಉಡಿಗೆ, ತನ್ನ ಸಂಪ್ರದಾಯಲ್ಲಿ ಇವನ ಕಟ್ಟಾದ ನಿಷ್ಠೆ ಮತ್ತು ಶಕ್ತಿ ಎದ್ದು ಕಾಣುತ್ತದೆ. ದರ್ಶನದಿಂದ ಭಯ ಭಕ್ತಿಯನ್ನುಂಟುಮಾಡುವ ಹಾಗಿದೆ.

iv) ಇವರ ಅನತಿ ದೂರದಲ್ಲಿ ಒಂದು ನಗ್ನ ಯೋಗಿನಿಯ ಉಬ್ಬು ಚಿತ್ರವಿದೆ; (೧. ೪೩ ಮಿ. × ೭೦ ಸೆ. ಮಿ. ಚಿತ್ರ ೪; 4 ). ಸ್ವಲ್ಪ ಎಡಕ್ಕೆ ವಾಲಿ ನಿಂತಿದ್ದಾಳೆ. ಎಡಗೈ ಮಗ್ಗಲಿನಿಂದ ಸ್ವಲ್ಪ ದೂರದಲ್ಲಿ ಇಳಿಬಿಟ್ಟ ದೊಡ್ಡ ಸರ್ಪವನ್ನು ಹಿಡಿದಿದ್ದಾಳೆ. ಬಲಗೈ ಮುರಿದು ಹೋಗಿದೆ. ಕುತ್ತಿಗೆಗೆ ಸರ, ಕೈಬಳೆ, ಕಾಲ್ಗಡಗ ಮತ್ತು ಎತ್ತರದ ಪಾದುಕೆಗಳನ್ನು ಧರಿಸಿದ್ದಾಳೆ. ಬಲ ನಡುವಿನಿಂದ ಹೊಕ್ಕಳಿನ ಮೇಲೆ ಎಡ ಸೊಂಟದ ಮೇಲೆ ಓರೆಯಾಗಿ ಹಾದುಹೋಗುವ ಹಾಗೆ ಒಂದು ಕಟ್ಟು ಇದೆ. ಮೇಲಿನ ಯೋಗಿಯ ಹಾಗೆ ತಲೆಯ ಕೂದಲನ್ನು ಗುಂಗುರು ಗುಂಗುರು ಮಾಡಿ ಹಿಂದೆ ಇಳಿ ಬಿಟ್ಟಿದೆ. ತಲೆಯಮೇಲೆ ಅಡ್ಡ ಮಡಿಕೆ ಪೀಠವುಳ್ಳ ಲಿಂಗವಿದೆ. ನಿಲುವಿಗೆ ತಕ್ಕಂತೆ ಅಂಗಸೌಷ್ಟವತೆ ಮನೋಹರವಾಗಿದೆ. ಆದರೆ ಕೊಳಿಮೊಟ್ಟೆಯಾಕೃತಿ ಮುಖ್ಯ ಕೂಡಿದ ಹುಬ್ಬುಗಳು, ಅರಳಿದ ದೊಡ್ಡ ಕಣ್ಣುಗಳು, ಮುಕ್ಕು ಚೆಲುವನ್ನು ಸ್ವಲ್ಪ ಮಾಡಿದೆ. ಪ್ರಾಕಾರದಲ್ಲಿಯ ಮಹಾಕಾಳಿಗಳ ಮೂರ್ತಿಗಳ ಮತ್ತು ಯೋಗಿನಿಯ ದೇಹವಿನ್ಯಾಸ ಮತ್ತು ಇವುಗಳ ಹಾಗು ಯೋಗಿಗಳ ಕಣ್ಣುಗಳು, ತಲೆಗೂದಲನ್ನು ಹೆಣೆದಿರುವ ರೀತಿ; ಇವೆಲ್ಲವನ್ನೂ ನೋಡಿದರೆ ಇವುಗಳೆಲ್ಲ ಒಂದೇ ಕಾಲದ್ದೆಂದು ಹೇಳಲಡ್ಡಿಯಿಲ್ಲ.

**೫. ಉಪಾಸಕರು ಮತ್ತು ಭಕ್ತರು:**

ಯೋಗಿ ಮತ್ತು ಯೋಗಿನಿಯ ಮೂರ್ತಿ ಶಿಲ್ಪದ ಬಳಿಯಲ್ಲಿ ಜನಸಾಮಾನ್ಯ ಭಕ್ತರುಗಳ ಧಾರ್ಮಿಕ ಅನುಯಾಯಿಗಳ ಮೂರು ಮೂರ್ತಿ ಶಿಲ್ಪಗಳಿವೆ.

**ಉಪಾಸಕರು :**

i) ಒಂದು ಅರಳಿ ಮರದ ಕೆಳಗೆ ಅವರ ಬಲಬದಿಯಲ್ಲಿ ಗಂಡನು ಎಡಬದಿಯಲ್ಲಿ ಹೆಂಡತಿಯು ನಿಂತಿರುವ ಉಬ್ಬು ಚಿತ್ರ (೯೮ × ೬೫ ಸೆ. ಮಿ. ಚಿತ್ರ ೬) ಸುಂದರ ವಾಗಿದೆ. ಇಬ್ಬರೂ ಭಕ್ತಿಯಿಂದ ತಮ್ಮ ಎಡ ಅಂಗೈಯಲ್ಲಿ ಲಿಂಗವನ್ನಿಟ್ಟು ಅದನ್ನು ಬಲ ಅಂಗೈಯಿಂದ ಅರೆ ಮುಚ್ಚಿದ್ದಾರೆ. ಗಂಡನು ರುದ್ರಾಕ್ಷಿ ಮಾಲೆಯನ್ನು ತಲೆಗೆ, ಕಂಠದಲ್ಲಿ, ಮಣಿಗಂಟಿನಲ್ಲಿ ಧರಿಸಿದ್ದಾನೆ. ಮುಂದೆ ನೆರಿಗೆ ಮತ್ತು ಕತ್ತರಿಪಟ್ಟಿ ಬರುವ ಹಾಗೆ ಮೊಣಕಾಲಿನ ವರೆಗೆ ಧೋತರ ಉಟ್ಟಿದ್ದಾನೆ. ಹೆಂಡತಿಯು ಒಪ್ಪಾಗಿ ತಲೆ ಬಾಚಿ ತುರುಬು ಹಾಕಿದ್ದಾಳೆ. ಗಾಲಿಯಂಥ ಕಿವಿಯೋಲೆ, ಕಂಠಹಾರ ಮತ್ತು ಕೈಬಳೆಗಳನ್ನು ಧರಿಸಿದ್ದಾಳೆ. ಸೀರೆಯನ್ನು ಮೊಣಕಾಲಿನಿಂದ ಕೆಳಗೆ, ಮುಂದೆ ನೆರಿಗೆ ಮತ್ತು ಓರೆ ಪಟ್ಟಿ ಬರುವ ಹಾಗೆ, ಸೆರಗು ಎದೆಯ ಮೇಲಿಂದ ಬಲ ಭುಜದಿಂದ

ಹಿಂದೆ ತೊಡೆಯ ತನಕ ಇಳಿ ಬೀಳುವ ಹಾಗೆ, ಉಟ್ಟಿದ್ದಾಳೆ. ಈ ದಂಪತಿಗಳು ತಾತ್ವಿಕವಾಗಿ ಜ್ಞಾನಸಂಕೇತವಾದ ಅರಳಿಮರದ ಕೆಳಗೆ, ಕೈಯಲ್ಲಿ ಲಿಂಗವನ್ನು ಇಬ್ಬರೂ ಹಿಡಿದು ನಿಂತಿದ್ದು ಮತ್ತು ತಲೆಗೂದಲನ್ನು ಕಟ್ಟಿರುವ ರೀತಿಯನ್ನು, ರುದ್ರಾಕ್ಷಿ ಮಾಲೆಯನ್ನು ಧರಿಸಿರುವ ರೀತಿಯನ್ನು ನೋಡಿದರೆ, ಇವರು (ವೀರ) ಶೈವ ಧರ್ಮದ ಉಪಾಸಕರೆಂದು ತೋರುವುದು.

(ii) ದುಂಡು ಶಿಲ್ಪದಲ್ಲಿರುವ ಮತ್ತೊಂದು ಮೂರ್ತಿಯು ಒಬ್ಬ ಉಪಾಸಕನ ದೆಂದು (ಚಿತ್ರ ೫;2) ಕಾಣುವುದು. ಪದ್ಮಾಸನದಲ್ಲಿ ಕುಳಿತು ಕೈಮುಗಿದುಕೊಂಡು ಧ್ಯಾನ ಮಾಡುತ್ತಿರುವಂತೆ ಇದೆ. ತಲೆಯ ಭಾಗ ಒಡೆದು ಹೋಗಿದೆ. ಕುತ್ತಿಗೆಗೆ ತೋಳು ಮತ್ತು ಮಣಿಗಂಟಿಗೆ ರುದ್ರಾಕ್ಷಿ ಸರಗಳನ್ನು ಕಟ್ಟಲಾಗಿದೆ.

**ಭಕ್ತರುಗಳು :**

(iii) ಒಂದು, ದುಂಡುಶಿಲ್ಪದ ಸ್ತ್ರೀವಿಗ್ರಹ (ಚಿತ್ರ ೫:3) ಸಮಭಂಗದಲ್ಲಿರುವ ಇವಳು ತನ್ನ ಎಡ ಹಸ್ತವನ್ನು ತನ್ನ ಎಡ ಪಕ್ಕದಲ್ಲಿ ನಿಂತಿರುವ ಸೇವಕಿಯಾದ ಒಬ್ಬ ಕುಬ್ಜ ಸ್ತ್ರೀಯ ತಲೆಯ ಮೇಲೆ ಇಟ್ಟಿದ್ದಾಳೆ. ಬಲಗೈ ಮುರಿದು ಹೋಗಿದೆ. ಮುಂದೆ ಅಡ್ಡ ಪಟ್ಟಿ, ನೆರಿಗೆ ಬರುವ ಹಾಗೆ ಸೀರೆಯ ಉಡಿಗೆ. ಕತ್ತಿನ ಬಳಿ ಅಡ್ಡವಾಗಿ ಒಡೆದಿದೆ. ಕಿರೀಟ ಮಕುಟ, ಕಂಠಾಭರಣ, ಸ್ತನಹಾರ ಧರಿಸಿದ್ದಾಳೆ. ಕುಬ್ಜ ಸ್ತ್ರೀಯ ಉಡುಪು, ಆಭರಣ (ಕಿರೀಟ ಮಕುಟ ಬಿಟ್ಟು) ಹೀಗೆಯೇ ಇದೆ. ಜೊತೆಗೆ ಕಾಲ್ಗಡಗವನ್ನು ಧರಿಸಿದ್ದಾಳೆ. ಪ್ರಾಯಶಃ ರಾಜ ಮನೆತನದವರಿರಬೇಕು. ಎತ್ತರ ಹಾಗು ನೀಳವಾದ ನಿಲುವುಳ್ಳ ದೇಹವಿನ್ಯಾಸ ಚಲುವಾಗಿದೆ.

(iv) ಮತ್ತೊಂದು, ಪ್ರಾಕಾರದ ಗೋಡೆಗೆ ಸೇರಿಸಿ ಇಟ್ಟ ಭಕ್ತನ ಮೂರ್ತಿ (೬೨×೩೦ ಸೆ.ಮಿ. ಚಿತ್ರ ೫:4). ಕೈಮುಗಿದು ನೆಟ್ಟಗೆ ನಿಂತಿದ್ದಾನೆ. ಕಿವಿಯೋಲೆ, ಎದೆಹಾರ, ಕೈಕಡಗ ಮತ್ತು ಕಾಲ್ಗಡಗ ಧರಿಸಿದ್ದಾನೆ. ಇವನ ಉಡುಪು ಸರಳವಾಗಿದೆ. ಮೊಣಕಾಲಿನವರೆಗೆ ಧೋತ್ರವಿದೆ; ಎಡಗಡೆ ಸ್ವಲ್ಪ ಹೆಚ್ಚು ಇಳಿಬಿದ್ದಿದೆ. ತಲೆಯ ಕೂದಲು ಮೇಲೆ ಸ್ವಲ್ಪ ಗಂಟು ಬರುವ ಹಾಗೆ ಕಟ್ಟಿದೆ. ಮುಖದಲ್ಲಿ ಸರಳ ನಮ್ರ ಭಾವ ಮೂಡಿದೆ. ಉಬ್ಬು ಶಿಲ್ಪದಲ್ಲಿದೆ.

ಇವೆಲ್ಲವೂ ಸುಮಾರು ಕ್ರಿ.ಶ. ೧೪–೧೬ ಶತಮಾನದವುಗಳೆಂದು ಕಾಣುವುದು. ಮೂರ್ತಿಶಿಲ್ಪದ ತುಲನಾತ್ಮಕ ದೃಷ್ಟಿಯಿಂದ, ಮೊದಲನೆ ಮೂರು ಮೂರ್ತಿಗಳು ಪ್ರಾಯಶಃ ೧೫–೧೬ ನೇ ಶತಮಾನದ್ದಾಗಿ ಭಕ್ತನ ಮೂರ್ತಿ ಇವುಗಳಿಗಿಂತ ಸ್ವಲ್ಪ ನಂತರದ್ದೆನ್ನಬಹುದು.

ಇವಲ್ಲದೆ ವಿಜಯನಗರ ಕಾಲದ್ದೆನ್ನಬಹುದಾದ ನರಸಿಂಹ, ನಾಗರಾಣಿ ಮತ್ತು ನಾಗರಾಜನ ಮೂರ್ತಿಗಳು; ಸಂಗಮೇಶ್ವರನ ಗುಡಿಯ ಸಮೀಪದಲ್ಲಿ ಪದ್ಮರಾಜನ ಗುಡಿಯಲ್ಲಿ ಹನುಮಂತ ಮತ್ತು ವೇಣುಗೋಪಾಲ ಕೃಷ್ಣನ ಮೂರ್ತಿಗಳಿವೆ.



1. ನಾಗರಾಣಿ



2. ಉಪಾಸಕ



3. ರಾಜಮನೆತನದ ಭಕ್ತೆ



4. ಒಬ್ಬ ಭಕ್ತ



ಶೈವ ದಂಪತಿಗಳು ಕೈಗಳಲ್ಲಿ ಲಿಂಗವನ್ನು ಹಿಡಿದುಕೊಂಡು
ಅಶ್ವತ್ಥಮರದ ಕೆಳಗೆ ನಿಂತಿರುವುದು

(ಕೃಪೆ: ಡಾ. ಎಂ. ಎಂ. ಕಲಬುರ್ಗಿ)

ನರಸಿಂಹನ ಮೂರ್ತಿ (೧.೫೦ ಮಿ.×೯೦ ಸೆ. ಮಿ.) ಸಮಭಂಗದಲ್ಲಿದೆ. ಅವನ ನಾಲ್ಕು ಕೈಗಳಲ್ಲಿ ಕ್ರಮವಾಗಿ ಬಲಭಾಗದ ಕೆಳಗಿನಿಂದ ಕತ್ತಿ, ಶಂಖ, ಚಕ್ರ ಮತ್ತು ಬಿಲ್ಲುಬಾಣ ಇವೆ. ತಲೆಯ ಹಿಂದೆ ಪ್ರಭಾಮಂಡಲವಿದೆ.

ನಾಗರಾಣಿಯ (೧.೧೦ಮಿ.×೪೦ಸೆ. ಮಿ. ಚಿತ್ರ ೫;೧) ಮೂರ್ತಿಶಿಲ್ಪ ತುಂಬ ಸೊಗಸಾಗಿದೆ, ಮೇಲರ್ಧ ಸ್ತ್ರೀಯಾಕೃತಿ ಎಷ್ಟು ಚಲುವಾಗಿದೆಯೋ, ನೀಳವಾಗಿದೆಯೋ, ಅಷ್ಟೇ ಕೆಳಗಿನ ಅರ್ಧ ಹಲವು ಇರಿಕೆ ಹಾಕದ ಹಾವಿನ ಮೈ ಭವ್ಯ ಹಾಗು ಭಯಂಕರ ವಾಗಿದೆ. ಸೂಕ್ಷ್ಮಕುಸುರಿನ ಕೆತ್ತನೆಯುಳ್ಳ ತ್ರಿಕೋಣಾಕೃತಿಯ ಕಿರೀಟ, ಗಾಲಿಯಂಥ ಕಿವಿಯೋಲೆ, ಎದೆ ಮತ್ತು ಸ್ತನಹಾರಗಳು, ತೊಟ್ಟಿರುವ ಆಭರಣಗಳು. ಒಂದು ಗಮನಾರ್ಹ ಅಂಶವೆಂದರೆ ಸ್ತನಗಳ ಕೆಳಭಾಗದಲ್ಲಿ (ಅವುಗಳ ಮಧ್ಯದಲ್ಲಿ ಬಾಲ, ಹೆಡೆ ಬರುವ ಹಾಗೆ) ಒಂದು ಸಣ್ಣ ಹಾವು ಎದೆಗೆ ಸುತ್ತು ಹಾಕಿದೆ. ಪ್ರಾಯಶಃ ತಾಯ್ತನದ ಸಂಕೇತವೇನೋ ? ಎರಡು ಕೈಗಳು ಮುರಿದು ಹೋಗಿವೆ. ಹೊಟ್ಟೆಯ ಮುಂಭಾಗ ಒಡೆದಿದೆ. ಪ್ರಾಯಶಃ ಎರಡು ಕೈಗಳಲ್ಲಿ ಏನೋ ಹಿಡಿದುಕೊಂಡಿದ್ದಿರಬೇಕು.

ನಾಗರಾಜನ ಮೂರ್ತಿಗಳು ಸಾಮಾನ್ಯವಾಗಿ ಅನೇಕ ಕಡೆಗಳಲ್ಲಿವೆ. ಇಂಥ ಮೂರ್ತಿಗಳಲ್ಲಿ ನಾಗರಾಣಿ ಸಹಿತ ನಾಗರಾಜನನ್ನು ಬಿಡಿಸಿರುತ್ತೆ. ಆದರೆ ಪ್ರತ್ಯೇಕ ಮೇಲೆ ಹೇಳಿದ ತರಹ ನಾಗರಾಣಿಯ ಮೂರ್ತಿ ವಿಜಯನಗರ ಕಾಲದ ಹಿಂದೆ ಅಪರೂಪ.

ಕೃಷ್ಣನ ಮೂರ್ತಿಯು (೯೦×೭೦ಸೆ.ಮಿ.) ಸಮಭಂಗದಲ್ಲಿದೆ. ಒಂದು ತುದಿ ಯಲ್ಲಿ ಕುಚ್ಚುಳ್ಳ ಕೊಳಲನ್ನು ಊದುತ್ತಿರುವ ಹಾಗೆ ಮತ್ತು ಬಲಭಾಗದಲ್ಲಿ ಒಂದು ಆಕಳು ಎಡಭಾಗದಲ್ಲಿ ಗೋಪಾಲಕನು ಆಲಿಸುತ್ತಿರುವ ಹಾಗೆ ಇದೆ. ಇವನ ಕಿರೀಟದ ಮುಂಭಾಗದಲ್ಲಿ ಸಣ್ಣ ಲಿಂಗವನ್ನು ಮೂಡಿಸಿದೆ.[೫] ಇದು ನಿಜವಾಗಿಯೂ ಅಪೂರ್ವ. ಪ್ರಾಯಶಃ ಈ ಪ್ರದೇಶದಲ್ಲಿ ಶ್ರೀ ವೈಷ್ಣವ ಧರ್ಮದ ಮೇಲಿನ ಶೈವಧರ್ಮದ ಪ್ರಭಾವದ ಸಂಕೇತವಿರಬಹುದು.

**ವಿವೇಚನೆ :**

ಮೇಲಿನ ವಿವರಣೆಯಿಂದ. ಸಿಂದಗಿಯಲ್ಲಿ ಮೂರ್ತಿಶಿಲ್ಪಗಳು ಹೆಚ್ಚಿನ ಪ್ರಮಾಣ ದಲ್ಲಿವೆ ಎಂಬುದು ಸ್ಪಷ್ಟ ನಿಜ, ಕರ್ನಾಟಕದ ಅನೇಕ ಕಡೆಗಳಲ್ಲಿ ಈ ರೀತಿ ಇದೆ. ಅಂಥ ಸ್ಥಳಗಳಲ್ಲಿ ಸಿಂದಗಿಯೂ ಒಂದು. ಆದರೆ, ಸಿಂದಗಿಯ ಮೂರ್ತಿಸಂಕಲನದಲ್ಲಿ ಕೆಲವೊಂದು ವಿಶಿಷ್ಟ ಧಾರ್ಮಿಕ ಅಂಶಗಳಿವೆ.

---

೫. ಹನ್ನೆರಡು ವರ್ಷಗಳ ಹಿಂದೆ ಈ ಮೂರ್ತಿಗಳನ್ನು ನೋಡಿ ಟಿಪ್ಪಣಿಗಳನ್ನು ಮಾಡಿಕೊಂಡಿದ್ದೆ. ಆದರೂ ಕಿರೀಟದ ಮೇಲೆ ಇರುವ ಚಿಹ್ನೆ ಲಿಂಗವೇ ಎಂಬುದನ್ನು ಮತ್ತೊಮ್ಮೆ ಸ್ಪಷ್ಟವಾಗಿ ನೋಡಿ ಖಚಿತ ಮಾಡಿಕೊಳ್ಳಬೇಕೆಂದು ಈಗ ನನಗನ್ನಿಸುತ್ತಿದೆ.

೧. ಶಾಸನ ಹಾಗೂ ಸಂಗಮೇಶ್ವರ ದೇವಾಲಯದ ಮೂಲ ಭಾಗಗಳು, ಅಲ್ಲಲ್ಲಿ ಕಂಡುಬಂದ ದೇವಾಲಯದ ಬಾಗಿಲು ಚೌಕಟ್ಟು, ಶಿವಲಿಂಗಗಳು ಮತ್ತು ಇವುಗಳ ಸಮಕಾಲೀನದ ವಿಷ್ಣು, ಮಹಿಷಾಸುರ ಮರ್ಧಿನಿ, ಭೈರವ, ದುರ್ಗೆ, ನಾಗರಾಜ ಮೂರ್ತಿಗಳ ಆಧಾರದ ಮೇಲೆ, ರಾಜಾಶ್ರಯದಲ್ಲಿದ್ದ ಹಿರಿಯ ಅಧಿಕಾರಿಗಳ ಪ್ರೋತ್ಸಾಹದಿಂದ ೧೨ ನೆಯ ಶತಮಾನದಲ್ಲಿ ಇಲ್ಲಿ ಒಂದು ಶೈವ ದೇವಾಲಯವು ಸ್ಥಾಪನೆಯಾಗಿ, ಅದು ಒಂದೆರಡುನೂರು ವರ್ಷಗಳವರೆಗೆ ಉತ್ತಮ ಸ್ಥಿತಿಯಲ್ಲಿತ್ತೆಂದು ಹೇಳಬಹುದು. ಆದರೂ ಆ ಸಮಯದಲ್ಲಿ, ಈ ಪ್ರದೇಶದಲ್ಲಿಯ ಜನರು ತಮ್ಮ ತಮ್ಮ ಶ್ರದ್ಧೆಗಳಿಗನುಗುಣವಾಗಿ ಪ್ರಾಚೀನ ಪುರಾಣಗಳಲ್ಲಿಯ ಸಂಪ್ರದಾಯದಂತೆ, ಶೈವ, ವೈಷ್ಣವ, ಮತ್ತು ಶಾಕ್ತ ದೇವರುಗಳನ್ನು ಪೂಜಿಸುತ್ತಿದ್ದರು. ಇದು ಆ ಕಾಲದಲ್ಲಿ ಎಲ್ಲೆಡೆಗಳಲ್ಲಿ ಜನಸಾಮಾನ್ಯ ಧರ್ಮವಾಗಿತ್ತು.

೨. ಕ್ರಮೇಣ ಅಂದರೆ ಕಲ್ಯಾಣ ಚಾಲುಕ್ಯರ ಆಳಿಕೆ ಕೊನೆಗೊಂಡಮೇಲೆ, ಈ ಶೈವ ದೇವಾಲಯವು ರಾಜಾಶ್ರಯವಿಲ್ಲದೆ ದುಃಸ್ಥಿತಿಗೆ ಬಂತೆಂದು ತೋರುವುದು. ಆದರೆ ಪೂರ್ಣ ಹಾಳಾಗಲಿಲ್ಲ.

೩. ವಿಜಯನಗರ ಸಾಮ್ರಾಜ್ಯ ಕಾಲದ ಆದಿಭಾಗದಲ್ಲಿ ಈ ಧಾರ್ಮಿಕ ಸ್ಥಳ ಮತ್ತೆ ಊರ್ಜಿತ ಸ್ಥಿತಿಗೆ ಬಂತೆಂದು ತೋರುವುದು. ಈ ಕಾಲದಲ್ಲಿ ದೇವಾಲಯವು ಜೀರ್ಣೋದ್ಧಾರವಾಯಿತು. ಮತ್ತು ಹೊಸದಾಗಿ ಹಲವು ದೇವರ ಮೂರ್ತಿಗಳನ್ನು ಸ್ಥಾಪಿಸಲಾಯಿತು. ಈ ಮೂರ್ತಿಗಳಲ್ಲಿಯೇ ಸಿಂದಗಿಯ ಧಾರ್ಮಿಕ ವೈಶಿಷ್ಟ್ಯ ಅಡಗಿದೆ. ಇವುಗಳಲ್ಲಿ ಭೈರವಿ, ಭೈರವನ ಮತ್ತು ಯೋಗಿಗಳು, ಯೋಗಿನಿಯ ಮೂರ್ತಿಯ ಸಂಖ್ಯೆ ಹೆಚ್ಚಿವೆ. ವಿಜಯನಗರ ಸಾಮ್ರಾಜ್ಯದ ಸಂಗಮರ ಆಳ್ವಿಕೆಯಲ್ಲಿ ಪ್ರಚಲಿತ ವಿದ್ದ ಬೌದ್ಧ, ಜೈನ, ವೈಷ್ಣವ ಮತ್ತು ಶೈವ ಧರ್ಮಗಳಲ್ಲಿ ಕೊನೆಯದು ಪ್ರಬಲವಾಗಿತ್ತೆಂದು ಶಾಸನಗಳ ಆಧಾರದಿಂದ೬ ಹೇಳಬಹುದು. ಈ ಶೈವ ಧರ್ಮದ ಒಂದು ಪಂಥ ಕಾಳಾಮುಖರು ೧೫ ನೆಯ ಶತಮಾನದ ವರೆಗೂ ಹೆಚ್ಚು ಪ್ರಭಾವಶಾಲಿಗಳಾಗಿದ್ದರು. ಇವರ ಮುಖ್ಯ ಗುರುಗಳಾದ ಕಾಶೀವಿಲಾಸ ಕ್ರಿಯಾಶಕ್ತಿಯು ಎರಡನೇ ಹರಿಹರನ ಮನೆ ಗುರುವಾಗಿದ್ದರು. ಅಲ್ಲದೆ, ಮೊದಲನೆಯ ದೇವರಾಯ, ಹಾಗೂ ಮಾಧವ ಮಂತ್ರಿ, ಮುದ್ದಣ್ಣ ದಂಡೇಶ ಮುಂತಾದ ಮಂತ್ರಿಗಳು, ಆರಗದ ರಾಜ್ಯಪಾಲ ವಿಠ್ಠಣ್ಣ ಒಡೆಯರು, ಇವರ ಅನುಯಾಯಿಗಳಾಗಿದ್ದರು.

ಕಾಳಾಮುಖರು ಕಟ್ಟಾ ಶೈವಧರ್ಮಿಗಳು ಮತ್ತು ಉದ್ದಾಮ ಪಂಡಿತರು. ಶಿವನ ಹಾಗು ಶಕ್ತಿಯ, ಭೈರವ, ಮತ್ತು ಮಹಾಕಾಳಿಯ ಅವತಾರಗಳ ನಿಷ್ಠಾವಂತ

---

೬. **ವಿಜಯನಗರ ಸೆಕ್ಸೆಂಟಿನರಿ ಕಮೆಮೊರೆಶನ್ ಸಂಪುಟ,** ೧೯೩೬ ಪುಟಗಳು ೪೩-೪೪.

ಆರಾಧಕರು. ಇವರ ಪೂಜಾವಿಧಾನ ಮತ್ತು ಧಾರ್ಮಿಕ ಜೀವನ[೭] ಸಾಮಾನ್ಯ ಜನರಿಗೆ ಕಠಿಣ ಹಾಗು ಹಿಡಿಸುವುದಿಲ್ಲ. ಇಂದ್ರಿಯ ನಿಗ್ರಹವನ್ನು ಸಾಧಿಸಿದವನಿಗೆ ಮಾತ್ರ ಇವರ ಮಾರ್ಗ ಸರಿಹೋಗುತ್ತೆ.

ಈ ಸಂದರ್ಭದಲ್ಲಿ, ಮೇಲಿನ ವಿಷಯಗಳನ್ನು ಸಮನ್ವಯ ಮಾಡಿದಾಗ, ಸಿಂದಗಿಯ ವಿಜಯನಗರ ಕಾಲದ ಭೈರವ. ಮಹಾಕಾಳಿ ಮತ್ತು ಯೋಗಿಗಳ, ಯೋಗಿನಿಯ ಮೂರ್ತಿಗಳು ಕಾಳಾಮುಖ ಶೈವಧರ್ಮ ಸಂಪ್ರದಾಯಕ್ಕೆ ಸೇರಿದ್ದೆಂಬುದು ನಿಸ್ಸಂದೇಹ. ಯೋಗಿಗಳ, ಯೋಗಿನಿಯ ಮೂರ್ತಿಗಳು ಕಾಳಾಮುಖರಾಗಿದ್ದಿರಬೇಕು. ಮೂರ್ತಿಗಳ ಸಂಖ್ಯೆಯನ್ನು ನೋಡಿದರೆ ಈ ಯೋಗಿಗಳ ಸಂಖ್ಯೆ ಸ್ವಲ್ಪ ದೊಡ್ಡ ಪ್ರಮಾಣದಲ್ಲಿತ್ತೆಂದು ಹೇಳಬಹುದು. ಪ್ರಾಯಶಃ ಹೀನ ಸ್ಥಿತಿಯಲ್ಲಿದ್ದ ಶೈವ ದೇವಾಲಯವು ಇವರ ಧಾರ್ಮಿಕ ಕೇಂದ್ರವಾಗಿ ಮತ್ತೆ ಊರ್ಜಿತಗೊಂಡಿತು.

ಈ ಸಂಪ್ರದಾಯದಲ್ಲಿ ಮಹಾಕಾಳಿ ಮೂರ್ತಿಗಳ ಜೊತೆಗೆ ಮಹಾಲಕ್ಷ್ಮಿಯ ಮೂರ್ತಿಯನ್ನು ಸೇರಿಸಿದ್ದು ತಕ್ಷಣ ಅನುಚಿತವಾಗಿ ಕಾಣಬಹುದು. ಮಾರ್ಕಂಡೇಯ ಪುರಾಣದಲ್ಲಿಯ ದೇವಿಯ ಮಹಾತ್ಮೆಯಲ್ಲಿ ಹೇಳಿದಹಾಗೆ ಸರ್ವಶಕ್ತಳಾದ ಮಹಾಲಕ್ಷ್ಮಿ[೮] ಎಲ್ಲದಕ್ಕೂ ಮೂಲ. ಮಹಾಕಾಳಿ ಮೊದಲಾದ ಎಲ್ಲ ದೇವಿಯರು ಈ ಮಹಾಲಕ್ಷ್ಮಿಯ ಅವತಾರಗಳೇ. ಪ್ರಾಯಶಃ ಈ ಪೌರಾಣಿಕ ಶಾಕ್ತಧರ್ಮ ಸುಮಾರು ೧೪–೧೫ ನೇ ಶತಮಾನದಲ್ಲಿ ಕಾಳಾಮುಖ ಸಂಪ್ರದಾಯದ ಮೇಲೆ ಸ್ವಲ್ಪ ಮಟ್ಟಿಗೆ ಪ್ರಭಾವ ಬೀರಿರಬಹುದು.

೪. ಈ ಶೈವ ಪಂಥದ ಜೊತೆಗೆ, ಪುರಾಣೋಕ್ತ ಶೈವ, ವೈಷ್ಣವ ಶಾಕ್ತ ಸಂಪ್ರದಾಯಗಳು ಜನಸಾಮಾನ್ಯರಲ್ಲಿ ಪ್ರಚಲಿತವಿತ್ತು. ವಿವಿಧ ರೀತಿಯ ಶಿವಲಿಂಗಗಳು, ಯೋಗಿನ ತಲೆಯ ಮೇಲೆ ಮತ್ತು ವೇಣುಗೋಪಾಲ ಕೃಷ್ಣನ ಕಿರೀಟದ ಮೇಲೆ ಮೂಡಿಸಿದ ಲಿಂಗ ಮತ್ತು ಉಪಾಸಕ ದಂಪತಿಗಳ ಕೈಯಲ್ಲಿ ಲಿಂಗವಿರುವುದನ್ನು ನೋಡಿದರೆ, ಶೈವಧರ್ಮ ಹೆಚ್ಚು ಜನಪ್ರಿಯವಾಗಿತ್ತೆಂದು ಅಲ್ಲದೆ ಪ್ರಭಾವಶಾಲಿಯಾಗಿತ್ತೆಂದು ತೋರುವುದು.

ಸಂಗಮ ವಂಶದ ನಂತರ ಆಳಿದ ವಿಜಯನಗರ ಅರಸರುಗಳು ವೈಷ್ಣವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹಕೊಡುತ್ತಿದ್ದ ಕಾಲದಲ್ಲಿ ಸಿಂದಗಿಯಲ್ಲಿ ಈ ಧರ್ಮದ ಪ್ರಭಾವ ವೇಣುಗೋಪಾಲಕೃಷ್ಣ, ನರಸಿಂಹನ ಮೂರ್ತಿಗಳಲ್ಲಿ ಕಾಣಬಹುದು.

---

೭. **ಕಲೆಕ್ಟೆಡ್ ವರ್ಕ್ಸ ಆಫ್ ಸರ್ ಆರ್. ಜಿ. ಭಂಡಾರ್‌ಕರ್**, ಸಂಪುಟ. ೪ ೧೯೨೯, ಪುಣೆ, ಪುಟಗಳು ೧೮೧–೮೨ ಮತ್ತು ೨೦೬.

೮. ಎಲಿಮೆಂಟ್ಸ್ ಆಫ್ ಹಿಂದು ಐಕನಾಗ್ರಫಿ, ಸಂಪುಟ ೧, ಭಾಗ ೨, ೧೯೬೮ (ಎರಡನೇ ಆವೃತ್ತಿ) ಪುಟಗಳು ೩೩೬–೩೩೭.

೫. ಒಟ್ಟಿನಲ್ಲಿ ಸಿಂದಗಿ ಪ್ರದೇಶದ ಧಾರ್ಮಿಕ ಇತಿಹಾಸದಲ್ಲಿ ಕಾಳಾಮುಖಿ ಪಂಥದ ಪ್ರಭಾವ, ಸ್ಥಾನ ಮತ್ತು ಶಕ್ತಿ ಆರಾಧನೆ ವಿಶಿಷ್ಟವಾದುದು ಮತ್ತು ಮಹತ್ವದ್ದು ಏಕೆಂದರೆ ಕಲ್ಯಾಣ ಚಾಲುಕ್ಯರ ಮತ್ತು ವಿಜಯನಗರ ಕಾಲದ ಪುರಾಣೋಕ್ತ ಶೈವ, ವೈಷ್ಣವ ಮತ್ತು ಶಾಕ್ತ ಸಂಪ್ರದಾಯದ ದೇವಾಲಯಗಳು ಕುರುಹುಗಳು, ಕರ್ನಾಟಕ ಏಕೆ ದಕ್ಷಿಣ ಭಾರತದಲ್ಲೆಲ್ಲ ನೂರಾರು ಸ್ಥಳಗಳಲ್ಲಿ ದೊರೆತಿವೆ. ಆದರೆ ಕಾಳಾಮುಖಿ ಶೈವ ಪಂಥದ ಕೇಂದ್ರಗಳು ಮತ್ತು ಕುರುಹುಗಳಿರುವ ಸ್ಥಳಗಳು ಕೆಲವೇ ಇವೆ. ಕರ್ನಾಟಕದಲ್ಲಿ ವಿದ್ಯಾಸಂಸ್ಥೆಗಳಾಗಿದ್ದ ಅಗ್ರಹಾರಗಳಲ್ಲಿ ಹೆಚ್ಚಾಗಿ ಪಾಂಡಿತ್ಯಕ್ಕೆ ಹೆಸರುವಾಸಿಯಾಗಿದ್ದ ಈ ಕಾಳಾಮುಖಿರು ಇರುತ್ತಿದ್ದರು. ಆದರೆ ಇವರ ಪಾಂಡಿತ್ಯ ಹಿರಿಮೆ ಮತ್ತು ಕೇಂದ್ರಗಳು ಹೆಚ್ಚಾಗಿ ಶಾಸನಗಳಿಂದ ತಿಳಿದಿದೆ. ಅಲ್ಲೊಂದು ಇಲ್ಲೊಂದು ಮೂರ್ತಿಶಿಲ್ಪ-ಗಳಿವೆ. ಆದರೆ ನನಗೆ ಇದುವರೆಗೂ ತಿಳಿದಮಟ್ಟಿಗೆ ಮೂರ್ತಿಶಿಲ್ಪದ ಬಾಹುಳ್ಯದಿಂದ ಕಾಳಾಮುಖರ ಕೇಂದ್ರ ಮತ್ತು ಧರ್ಮ ತಿಳಿಸುವಂಥಹ ಸ್ಥಳವೆಂದರೆ ಸಿಂದಗಿಯೊಂದೆ. ಆದುದರಿಂದ ಸಿಂದಗಿ ಒಂದು ಇತಿಹಾಸ ಮಹತ್ವ ಸ್ಥಳ.*

* ಈ ಊರಿನಲ್ಲಿಯ ಪುರಾತತ್ವ ಶೋಧನೆಯಲ್ಲಿ ನನಗೆ ಇಲ್ಲಿಯ ಪೋಲಿಸ್, ಮುಲ್ಕಿ ಪಾಟೀಲರು ತಲಾಟಿಯವರು, ಊರಿನ ಜನರು. ಹೆಚ್ಚಾಗಿ ಓಲೆಕಾರರು ತುಂಬ ಸಹಾಯ ಮಾಡಿದ್ದಾರೆ. ಚಿತ್ರ ೬ ರ ನನ್ನ ಪೋಟೋ ಪ್ರತಿಗಿಂತಲೂ ಡಾ. ಎಂ ಎಂ. ಕಲ್ಬುರ್ಗಿಯವರಲ್ಲಿದ್ದ ಪ್ರತಿ ಉತ್ತಮವಿದ್ದುದರಿಂದ ನನ್ನ ಕೋರಿಕೆಯ ಮೇಲೆ ಅವರು ಅವನ್ನು ಈ ಲೇಖನಕ್ಕೆ ಕೊಟ್ಟು ಉಪಕಾರಮಾಡಿದ್ದಾರೆ. ಶ್ರೀ ಕಡಕೋಳರು ನನ್ನ ಹಸ್ತಪ್ರತಿಯ ಉತ್ತರ ಭಾಗವನ್ನು ಚೆನ್ನಾಗಿ ಪ್ರತಿ ಮಾಡಿಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

# ಒರೆಗಲ್ಲು

**೨೦+ ಗಜೇಶ್ವರ ಮಸಣಯ್ಯ :**

ಗಜೇಶ್ವರ ಮಸಣಯ್ಯನೊಬ್ಬ ವೀರಶೈವ ಇತಿಹಾಸದಲ್ಲಿ ಸುಪ್ರಸಿದ್ಧ ಶರಣ. ಸುಮಾರು ೬೦ ವಚನಗಳನ್ನು ಬರೆದ ಈತನ ಮುದ್ರಿಕೆ. "ಮಹಾಲಿಂಗ ಗಜೇಶ್ವರಾ".[೧] ಶಾಸನವೊಂದರ ಸಹಾಯದಿಂದ ಈ ಹೆಸರು ಮತ್ತು ಮುದ್ರಿಕೆಗಳ ಮೂಲಪಾಠವನ್ನು ನಿರ್ಣಯಿಸಿಕೊಡುವ ಪ್ರಯತ್ನ ಈ ಲೇಖನ.

ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲೂಕಿನ ಹಿರೇಹಳ್ಳಿ (ಪ್ರಾಚೀನ ಹೆಸರು ಗೊಟ್ಟಿಗಡಿ) ಗ್ರಾಮದಲ್ಲಿ ಗಜೇಶ್ವರ ಹೆಸರಿನ ಒಂದು ದೇವಾಲಯವಿದೆ. ಇದರ ಮುಂದೆನಿಂತಿರುವ ಶಾಸನವೊಂದರ ಪ್ರಕಾರ ಈ ದೇವರ ಮೂಲ ಹೆಸರು ಅಂಗ-ಜೇಶ್ವರ.[೨] ಈ ಪದವನ್ನು ನೋಡುವಷ್ಟರಲ್ಲಿ ಶರಣ ಗಜೇಶಮಸಣಯ್ಯನ ನಿಜ ಹೆಸರು ಅಂಗಜೇಶಮಸಣಯ್ಯ ಇರಬಹುದೇ? ಎಂಬ ಕುತೂಹಲ ಮೂಡಿ ನಿಲ್ಲುತ್ತದೆ. ಈ ಕುತೂಹಲವನ್ನು ಒರೆಗೆ ಹಚ್ಚಿ ಕೆಳಗಿನ ನಿರ್ಣಯಕ್ಕೆ ಬರಬಹುದು.

೧. ಅಪರಿಚಿತ ಪದಗಳನ್ನು ಪರಿಚಿತ ರೂಪಕ್ಕೆ ತಿರುಗಿಸಿಕೊಳ್ಳುವುದು ಮನುಷ್ಯನ ಸ್ವಭಾವ. ಉದಾ: "ಕೊಳನ ತಡಿಯುಲೊಂದು ಹೊಜಸು ಕುಳ್ಳಿರ್ದಡೇನು ಕಳಹಂಸಿಯಾಗಬಲ್ಲುದೆ"? (ಹೊಲಸು)[೩]. "ನಡೆವರೆಡಹದೆ ಬರುಬರೆಡಹುವರೆ? (ಬರೆವ).[೪] ಇದೇರೀತಿ ಶಾಸನೋಕ್ತ ಅಂಗಜೇಶ ಜನತೆಯ ಬಾಯಿತಪ್ಪಿನಿಂದ ಗಜೇಶವಾದಂತೆ, ಅಂಗಜೇಶಮಸಣಯ್ಯ ಎಂಬುದು ಗಜೇಶಮಸಣಯ್ಯ ಎಂದಾಗಿರಬಹುದು.

೨. ಈಗ ಸಿಗುವ ಗಜೇಶಮಸಣಯ್ಯನ ಮುದ್ರಿಕೆ "ಮಹಾಲಿಂಗ ಗಜೇಶ್ವರಾ". ಇದರ ಮೂಲರೂಪ "ಮಹಾಲಿಂಗಂಗಜೇಶ್ವರಾ" ಇರಬಹುದು. ಲಿಪಿಕಾರರು ಇದನ್ನು "ಮಹಾಲಿಂಗಂ+ಗಜೇಶ್ವರಾ" ಎಂದು ಅನ್ಯಥಾಜ್ಞಾನದಿಂದ ಬಿಡಿಸಿ ಓದಿದ ಇಲ್ಲವೆ "ಮಹಾಲಿಂಗ[ಂ]ಗಜೇಶ್ವರಾ" ಎಂಬಲ್ಲಿಯ ಬಿಂದುವನ್ನು ಕೈಬಿಟ್ಟ ಕಾರಣ "ಮಹಾ-ಲಿಂಗ ಗಜೇಶ್ವರಾ" ಎಂಬ ಮುದ್ರಿಕೆ ರೂಢಗೊಂಡಿರಬೇಕು.

---

೧. ಕನ್ನಡ ಅಧ್ಯಯನ ಪೀಠದಿಂದ ಪ್ರಕಟವಾಗಲಿರುವ 'ಸಕಲ ಪುರಾತನರ ವಚನಗಳು' ಭಾಗ ೨ ರಲ್ಲಿ ಈತನ ೬೦ ವಚನಗಳಿವೆ.

೨. Karnatak inscriptions Vol.IV No. 10.

೩. ಬಸವಣ್ಣನವರ ವಚನಗಳು ೯೮.

೪. ಹರಿಶ್ಚಂದ್ರಕಾವ್ಯ.

೩. ಶರಣ ಮತ್ತು ಶಿವ ಇವರ ಸಂಬಂಧ ಸತಿ–ಪತಿ ಭಾವದ್ದು. ಪ್ರತಿಯೊಬ್ಬ ಶರಣನಲ್ಲಿ ಕೆಲವು ವಚನಗಳು ಮಾತ್ರ ಈ ಭಾವದಿಂದ ಕೂಡಿದ್ದರೆ ಗಜೇಶಮಸಣಯ್ಯನ ಎಲ್ಲ ವಚನಗಳೂ ಸತಿಸಹಜ ಭಾವ—ಭಾಷೆಯಿಂದ ಮೂಡಿಬಂದಿವೆ. ಉದಾಹರಣೆಗೆ

ತಮ್ಮ ತಮ್ಮ ಗಂಡರು ಚೆಲುವರೆಂದು
ಕೊಂಡಾಡುವ ಹೆಣ್ಣುಗಳು ಪುಣ್ಯಜೀವಿಗಳವ್ವಾ
ನಾ ನಮ್ಮ ನಲ್ಲನೆಂಥವನೆಂದಱಿಯೆನವ್ವಾ
ಮಹಾಲಿಂಗ ಗಜೇಶ್ವರದೇವ ನಿಱಿಯ ಸೆಱಗ
ಸಡಿಲಿಸಿದೊಡೆ ನಾನೇನೆಂದಱಿಯೆನವ್ವಾ

ಎಂಬ ವಚನವನ್ನು ನೋಡಬಹುದು. ಹೀಗೆ ಇವನ ಎಲ್ಲ ವಚನಗಳಲ್ಲಿಯೂ ಶಿವಕಾಮವ್ಯಾಮೋಹ ತುಂಬಿತುಳುಕುತ್ತದೆ. ಇದರಿಂದ ಈತನ ಮುದ್ರಿಕೆ ಅಂಗಜೇಶ್ವರ (ಶಿವ ಅರ್ಥದ ಕಾಮ)ವೆಂದು ಇನ್ನೂ ಸ್ಪಷ್ಟವಾಗುತ್ತದೆ.

ಹಾಗಾದರೆ ಶರಣ ಮಸಣಯ್ಯ ಈ ಶಾಸನೋಕ್ತ ಅಂಗಜೇಶ್ವರನ ಭಕ್ತನೇ? ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಹೀಗೆ ಉತ್ತರಿಸಬಹುದು.

೧. ಶಾಸನೋಕ್ತ ಅಂಗಜೇಶ್ವರದೇವರ ಪ್ರತಿಷ್ಠಾಪನೆಯ ಕಾಲ ಕ್ರಿ. ಶ. ೧೧೨೧. ಇದರಿಂದ ಕಲ್ಯಾಣದ ಆಂದೋಲನೆಯಲ್ಲಿ ಬಾಳಿದ ಮಸಣಯ್ಯನ ಕಾಲಕ್ಕೆ ವ್ಯತ್ಯಯ ಬರುವುದಿಲ್ಲ.

೨. ಮಸಣಯ್ಯನ ಊರು ಕರಜಗಿ ಎಂದು ವೀರಶೈವ ಪುರಾಣಗಳು ಹೇಳುತ್ತವೆ. ಕರಜಗಿ (ಸ್ಟೇಶನ್) ಹೆಸರಿನ ಗ್ರಾಮವೊಂದು ಹಿರೇಹಳ್ಳಿಗೆ ಸಮೀಪವಾಗಿ ೨೨ ಮೈಲು ಅಂತರದಲ್ಲಿದೆ.[೫]

೩. ಪ್ರಭುದೇವ, ಮಹಾದೇವಿ ಮೊದಲಾದ ಶರಣರು ಬನವಸೆ ಪ್ರಾಂತಕ್ಕೆ ಸಂಬಂಧಿಸಿದವರಾದುದರಿಂದ ಮಸಣಯ್ಯನೂ ಇದೇ ಬನವಸೆ ೧೨೦೦೦ ಕ್ಕೆ ಸಂಬಂಧಿಸಿದ ಗೊಟ್ಟಿಗಡಿ (ಈಗಿನ ಹೆಸರು ಹಿರೇಹಳ್ಳಿ)ಯ ಅಂಗಜೇಶ್ವರನ ಭಕ್ತನಾಗಿರಲು ಸಾಧ್ಯವಿದೆ.

ಒಟ್ಟಿನಲ್ಲಿ ಈತನ ಹೆಸರು ಗಜೇಶ ಮಸಣಯ್ಯವಲ್ಲ; ಅಂಗಜೇಶ ಮಸಣಯ್ಯ. ಮುದ್ರಿಕೆ 'ಮಹಾಲಿಂಗ ಗಜೇಶ್ವರಾ' ಅಲ್ಲ; "ಮಹಾಲಿಂಗಂಗಜೇಶ್ವರಾ". ಬಹುಶಃ ಈತನು ಧಾರವಾಡ ಜಿಲ್ಲೆಯ ಹಿರೇಹಳ್ಳಿ ಗ್ರಾಮದ ಅಂಗಜೇಶ ದೇವನ ಭಕ್ತನಾಗಿರಬಹುದು,

---

೫. ಅಕ್ಕಲಕೋಟ ತಾಲೂಕಿನಲ್ಲಿ ಕರಜಗಿ ಹೆಸರಿನ ಒಂದು ಗ್ರಾಮವಿದೆ, ಅಲ್ಲಿ ಶ್ರೀಸಿದ್ಧಗಜೇಶ್ವರ ಹೆಸರಿನ ದೇವಾಲಯವಿದೆಯೆಂದು Karnatak inscriptions Vol- II- No, 12. A. D, 1114 ರಿಂದ ತಿಳಿದು ಬರುತ್ತದೆ. ಈ ಎರಡೂ ಗ್ರಾಮಗಳ ಶಾಸನ ಶಿಲ್ಪಗಳನ್ನು ಪರೀಕ್ಷಿಸಿ ಮಸಣಯ್ಯನ ಗ್ರಾಮವನ್ನು ಖಚಿತಗೊಳಿಸಿಕೊಳ್ಳಲು ಅವಕಾಶವಿದೆ.

**ಶಾಸನದಲ್ಲಿ ಮದನತಿಲಕದ ಪದ್ಯ:**

ಚಂದ್ರರಾಜನ ಮದನತಿಲಕ ೧೧ ನೆಯ ಶತಮಾನದ ಒಂದು ಶಾಸ್ತ್ರಗ್ರಂಥ. ಈ ಕೃತಿಯ ಪ್ರಥಮ ಅಧಿಕಾರದಲ್ಲಿ ಆಶ್ರಯದಾತನಾದ ಮಾಂಡಲಿಕ ರೇಚಭೂಪನ ಪ್ರಭು ಕಲ್ಯಾಣ ಚಾಲುಕ್ಯಚಕ್ರವರ್ತಿ ಜಯಸಿಂಹನ ಉಲ್ಲೇಖಬರುತ್ತದೆ. ಮದನತಿಲಕದ ಸಂಪಾದಕರಾದ ಶ್ರೀ ಪಂಚಮುಖಿಯವರು ಈ ಜಯಸಿಂಹನ ಬಗ್ಗೆ ವಿವೇಚಿಸುತ್ತ "ಚಾಳುಕ್ಯ ವಂಶಾವಳಿಯಲ್ಲಿ ಇಬ್ಬರು ಜಯಸಿಂಹದೇವರು ರಾಜ್ಯಭಾರ ಮಾಡಿದರು. ಒಬ್ಬನು ೧೧ ನೆಯ ಶತಮಾನದಲ್ಲಿ (ಕ್ರಿ. ಶ. ೧೦೧೪–೧೦೪೨) ಆಳಿದನು; ಇನ್ನೊಬ್ಬನು ಪೆರ್ಮಾಜಗದೇಕಮಲ್ಲನೆಂಬ ಹೆಸರಿನಿಂದ ೧೨ ನೆಯ ಶತಮಾನದಲ್ಲಿ (ಕ್ರಿ. ಶ. ೧೧೩೮–೧೧೫೧) ರಾಜ್ಯಭಾರ ಮಾಡಿದನು. ಪ್ರಕೃತ ರೇಚಿಗನ ಪ್ರಭು ಜಯಸಿಂಹನು ೧೧ ನೆಯ ಶತಮಾನದವನಿರಬೇಕು".[೧] ಎಂದು ತೀರ್ಮಾನಿಸಿದ್ದಾರೆ. ಇವನನ್ನು ಕುರಿತು ಒಂದು ಪದ್ಯ ಮದನತಿಲಕದಲ್ಲಿ ಹೀಗಿದೆ.

ಚೋಳಕುಲ ವಿಲಯಕಾಲಂ
ಕಾಳಾಮುಖ ಪ್ರಾಹಿತೋದ್ಧತಾಹಿತಮಾಳಂ॥
ಮಾಳವರಾಜಕ ಶೂಲಂ।
ಶೂಲಾಯುಧ ಚರಣಕಮಲಭೃಂಗಂ ಸಿಂಗಂ॥[೨]

ಇದೇ ಪದ್ಯ ವಿಜಾಪುರ ಜಿಲ್ಲೆಯ ತಾಲೂಕ ಸ್ಥಳವಾದ ಸಿಂದಗಿಯ ಶಾಸನದಲ್ಲಿ ಕಂಡುಬರುತ್ತದೆ. ಇದು ಕಲ್ಯಾಣ ಚಾಲುಕ್ಯಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಹುಟ್ಟಿದ ಶಾಸನ. ಇದರ ಕಾಲ ಕ್ರಿ. ಶ. ೧೧೨೦. ಇಲ್ಲಿ ಚಕ್ರವರ್ತಿ ವಿಕ್ರಮಾದಿತ್ಯದೇವ ಮತ್ತು ಆತನ ಮಗ ಜಯಕರ್ಣದೇವರ ಪ್ರಶಸ್ತಿಗಳ ತರುವಾಯ ಮಹಾಮಂಡಲೇಶ್ವರ ಸೆಳರವಂಶದ ಸಿಂಗರಸನ ವಿಷಯ ಬರುತ್ತದೆ. ಈತನನ್ನು ಕುರಿತ ಹಲವು ಪದ್ಯಗಳಲ್ಲಿ

ಚೋೞಕುೞವಿೞಯಕಾೞಂ।
ಕಳಾಮುಖ ಪ್ರಾಹಿತೋದ್ಧತಾಹಿತಮಾೞಂ ॥
ಮಾೞವರಾಜಕ ಸೂೞಂ।
ಸೂೞಿಯುವ ಚೆರಣಕಮೞಃ ಭೃಂಗಂ ಸಿಂಗ॥[೩]

ಎಂಬುದೂ ಒಂದು. ಇದು ಮೇಲೆ ಹೇಳಿದ ಮದನತಿಲಕದ ಪದ್ಯವೇ ಆಗಿದೆ. ಆದರೆ ಅದು ಚಕ್ರವರ್ತಿ ವಿಕ್ರಮಾದಿತ್ಯನ ಅಜ್ಜ ಜಯಸಿಂಹನಿಗೆ ಸಂಬಧಿಸಿದ್ದರೆ, ಇದು

---

೧. ಮದನತಿಲಕ ಮುನ್ನುಡಿ ೧೫–೧೬
೨. ಮದನತಿಲಕ. ೧–೫
೩. S II XX–80 ಈ ಶಾಸನ ಈಗ ಬಿಜಾಪೂರ ಮ್ಯೂಜಿಯಂದಲ್ಲಿದೆ.

ವಿಕ್ರಮಾದಿತ್ಯನ ಮಾಂಡಲಿಕ ಸೆಳರ ಸಿಂಗನೃಪನಿಗೆ ಸಂಬಂಧಿಸಿದೆ. ಇವರಿಂದ ಕೆಳಗಿನ ಅಭಿಪ್ರಾಯಗಳು ವ್ಯಕ್ತವಾಗುತ್ತವೆ.

೧. ಇದು ಮೂಲತಃ ಮದನತಿಲಕದ ಪದ್ಯವಾಗಿದ್ದರೆ, ಚಂದ್ರರಾಜ ಬಾಳಿದುದು ಈ ಶಾಸನ ಕಾಲವಾದ ಕ್ರಿ.ಶ. ೧೧೨೦ ಕ್ಕೆ ಮೊದಲು ಆಳಿದ ಮೊದಲನೆಯ ಜಯಸಿಂಹನ ಕಾಲದಲ್ಲಿಯೇ ಹೊರತು ಎರಡನೆಯ ಜಯಸಿಂಹನ ಕಾಲದಲ್ಲಲ್ಲ.

೨. ಈ ಪದ್ಯ ಮೊದಲು ತಲೆದೋರಿದುದು ಕಾವ್ಯದಲ್ಲಿ, ಆ ಮೇಲೆ ಶಾಸನದಲ್ಲಿ.

೩. ಈ ಶಾಸನಕವಿ ಮದನತಿಲಕದಿಂದಲೇ ಈ ಪದ್ಯವನ್ನೆತ್ತಿಕೊಂಡಿರಬಹುದು, ಇಲ್ಲವೆ ಆ ಕಾಲಕ್ಕಾಗಲೇ ಇದು ಶಾಸನಪದ್ಯವಾಗಿ ಬಳಕೆಗೊಂಡಿರಬಹುದು.

೪. ೭೫ ವರ್ಷಗಳ ಅವಧಿಯಲ್ಲಿ ಇದು ಗಮನಾರ್ಹ ಭಿನ್ನಪಾಠಗಳಿಗೆ ಗುರಿಯಾಗಿದೆ. ●

—ಎಂ. ಎಂ. ಕಲಬುರ್ಗಿ

**ಬಾದುಬ್ಬೆ :**

ಗೋವೆಯ ಕದಂಬ ಮಹಾಮಂಡಳೇಶ್ವರ ಇಮ್ಮಡಿ ಜಟ್ಟಯ್ಯನ ಶಾಸನದಲ್ಲಿ[೧] 'ಎಡಹಳ್ಳಿ ಗಾಲಯ್ಯ[ನಣು]ಗ ಮಾರಯ್ಯ ಮಾಡಿಸಿದಂ ಕನ್ನಲೆಯಲು ಬಾದುಬ್ಬೆಯುಂ' ಎಂಬ ಉಲ್ಲೇಖ ಬರುತ್ತದೆ. ಕನ್ನಲೆ ಕಲಘಟಗಿ ತಾಲೂಕಿನ ಒಂದು ಚಿಕ್ಕಗ್ರಾಮ; ಈಗಿನ ಕಂದಲಿ. ಶಾಸನದ ಕಾಲ ಸುಮಾರು ಕ್ರಿ. ಶ. ೧೦೫೦. ಈ ಶಾಸನದ ಸಮೀಪ ಬಾದುಬ್ಬೆಯ ಪ್ರತಿಮೆ ಇದೆ. ಹೀಗೆಯೇ ಹಾನಗಲ್ಲ ತಾಲೂಕಿನ ಬಾಳೂರ ಗ್ರಾಮದ ಶಾಸನದಲ್ಲಿ[೨] 'ಬಮ್ಮರ್ಗಾವುಂಡ ಬಾ[ದುಂ]ಬೆಯ ಪ್ರತಿಷ್ಠೆಯ ಮಾಡಿಸಿದ' ಎಂಬ ಉಲ್ಲೇಖ ಬಂದಿದೆ. ಇದರ ಕಾಲ ಕ್ರಿ. ಶ. ೧೧೧೭. ಈ ಶಾಸನ ಬಾದುಂಬೆಯ ಪ್ರತಿಮೆಯ ಕೆಳಭಾಗದಲ್ಲಿ ಬರೆಯಲ್ಪಟ್ಟಿದೆ. ಈ ಪ್ರತಿಮಾಚಿತ್ರವನ್ನು ಪ್ರಕಟಿಸಿ ಬಾದುಬ್ಬೆಯ ಬಗ್ಗೆ ವಿವೇಚಿಸುವುದು ಈ ಲೇಖನದ ಉದ್ದೇಶ.

ಶಾಸನಗಳಲ್ಲಿ ಬಾದುಬ್ಬೆಯ ಉಲ್ಲೇಖಗಳು ಕ್ರಿ. ಶ. ೮೭೨ ರಿಂದ ಬರುತ್ತವೆ.[೩] ಡಾ. ಪಿ. ಬಿ. ದೇಸಾಯಿಯವರು ತಮ್ಮ 'ದವನದ ಹುಣ್ಣಿವೆ' ಲೇಖದಲ್ಲಿ, ಪ್ರೊ. ಡಿ. ಎಲ್. ನರಸಿಂಹಾಚಾರ್‌ರು ತಮ್ಮ 'ಶಬ್ದವಿಹಾರ' ಕೃತಿಯಲ್ಲಿ ಮತ್ತು ಡಾ. ಚಿದಾನಂದಮೂರ್ತಿಯವರು ತಮ್ಮ 'ಸಂಶೋಧನತರಂಗ' ಕೃತಿಯಲ್ಲಿ ಈ ದೇವತೆಯ ಬಗ್ಗೆ ಶಾಸನಸ್ಥ ಮತ್ತು ಗ್ರಂಥಸ್ಥ ಉಲ್ಲೇಖಗಳನ್ನು ಸಂಗ್ರಹಿಸಿದ್ದಾರೆ.

---

೧. The Kadambas of Goa and Their Inscriptions—Unpubliished Thesis–Dr. R. N. Gurav. No. 3. P. 522.

೨. K. I. Vol. V. No. 94, p. 292.

೩. ಶಬ್ದವಿಹಾರ- ಪ್ರೊ. ಡಿ. ಎಲ್. ನರಸಿಂಹಾಚಾರ್. ಪು. ೮೨.



ಬಾದುಚ್ಚೆ

ಈ ದೇವತೆಯ ಸ್ವರೂಪ ಮತ್ತು ಬಾದುಬ್ಬೆ ಶಬ್ದದ ವ್ಯುತ್ಪತ್ತಿ ಬಗ್ಗೆ ಬರೆಯುತ್ತ ಡಾ. ಪಿ. ಬಿ. ದೇಸಾಯಿಯವರು ಈ ದೇವತೆ ವಸಂತಾಂಬೆ ಇರಬಹುದೆಂದು ಶಂಕಿಸಿದರೆ.[೪] ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರು ಭದ್ರಾಂಬಾ ಇರಬಹುದೆಂದು ಊಹಿಸಿದ್ದಾರೆ.[೫] ಈ ವಿಚಾರಗಳು ಸಾಕಷ್ಟು ಗ್ರಾಹ್ಯವೆನಿಸದ ಮೂಲಕ ಡಾ. ಚಿದಾನಂದ ಮೂರ್ತಿಯವರು ಬಾದುಬ್ಬೆ ಮೂಲತಃ ಬಸದಬ್ಬೆಯಾಗಿರಬಹುದೆಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಆದರೆ ವಸದಬ್ಬೆ = ಬಾದುಬ್ಬೆ ಈ ಸಮೀಕರಣಕ್ಕೆ ಉಂಟಾವ ತೊಂದರೆಗಳನ್ನೂ ಡಾ. ಚಿದಾನಂದಮೂರ್ತಿಯವರು ಮುಕ್ತಮನಸ್ಸಿನಿಂದ ಹೇಳಿದ್ದಾರೆ.[೬]

ಬಾದುಬ್ಬೆಯ ಅರ್ಥ ತಿಳಿದುಕೊಳ್ಳಲಿಕ್ಕೆ ನಾವು ಆ ಶಬ್ದದ ಪಾಠಾಂತರಗಳನ್ನು ಗಮನಿಸಬಹುದು. ಬಾದುಬ್ಬೆಗೆ ಬಾಡುಬ್ಬೆಯೆಂದು ಒಂದು ಪಾಠವಿದ್ದುದು ಸಮ್ಯಕ್ ಪರೀಕ್ಷೆಯಲ್ಲಿ ಕಂಡುಬರುತ್ತದೆ.[೭] ತಮ್ಮ ಹೊಲ ಹೆಚ್ಚು ಬೆಳೆಯಲಿ ಎಂದು ರೈತರು 'ಬಾಡುಬ್ಬೆ'ಗೆ ಹರಿಸಿಕೊಳ್ಳುತ್ತಿದ್ದ ಸಂಪ್ರದಾಯವನ್ನು ಬ್ರಹ್ಮಶಿವ ಇಲ್ಲಿ ಹೇಳುತ್ತಾನೆ.[೮] ಈ ಬಾಡುಬ್ಬೆಯೇ ಮೂಲಪಾಠವಾಗಿರಬಹುದು. ಬಾಡುಬ್ಬೆ ಎಂಬುದು 'ಬಾಡ' ಮತ್ತು 'ಅಬ್ಬೆ' ಈ ಎರಡು ಶಬ್ದಗಳ ಸಮಸ್ತಪದ. ಬಾಡ ಶಬ್ದಕ್ಕೆ ಗ್ರಾಮ ಎಂದರ್ಥ; ಅಬ್ಬೆ ಶಬ್ದಕ್ಕೆ ತಾಯಿಯೆಂದು ಅರ್ಥ. ಇದರಿಂದ ಬಾಡುಬ್ಬೆಯ ಅರ್ಥ ಗ್ರಾಮದೇವತೆಯೆಂದು ವಿಶದವಾಗುತ್ತದೆ. ಬಾದುಬ್ಬೆ ನಮ್ಮ ಪ್ರಾಚೀನ ಗ್ರಾಮ ದೇವತೆಯಾಗಿರಬಹುದೆಂದು ಡಾ. ಪಿ. ಬಿ. ದೇಸಾಯಿಯವರು ಊಹಿಸಿದುದನ್ನು ಇಲ್ಲಿ ನೆನೆಯಬಹುದು.[೯]

ಬಾಡುಬ್ಬೆಯಿಂದ ಬಾದುಬ್ಬೆ ರೂಪುಗೊಳ್ಳುವುದು ಸಹಜ. ಇಂಥ ಇನ್ನೊಂದು ಶಬ್ದವನ್ನು ಇಲ್ಲಿ ಗಮನಿಸಬಹುದು. ಕರ್ನಾಟಕದ ಹಳೆಯ ಅರಸುಮನೆತನಗಳಲ್ಲಿ ಒಂದಾದ ಕದಂಬವಂಶದ ಮೂಲ ಶಬ್ದ ಕಡಂಬವೆಂದು ಅನೇಕ ಶಾಸನಗಳು ಹೇಳುತ್ತವೆ. ಅದು ಸಂಸ್ಕೃತೀಕರಣ ಹೊಂದಿ ಕದಂಬವಾಗಿರಬಹುದೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಇದೇ ರೀತಿ ಬಾಡುಬ್ಬೆ ಹೋಗಿ ಬಾದುಬ್ಬೆಯಾಗಿರಬಹುದು. ಲಿಪಿ ಸಾದೃಶ್ಯವೂ ಇದಕ್ಕೆ ಕಾರಣವಾಗಿರಬಹುದು. ಈ ಬಾದುಬ್ಬೆ ಮುಂದೆ ಭಾಷಾಶಾಸ್ತ್ರದ

---

೪. ಪ್ರ. ಕ. ೩೨-೪, ಪು. ೮೧-೮೨.

೫. ಶಬ್ದವಿಹಾರ

೬. ಸಂಶೋಧನ ತರಂಗ, ಪು. ೧೩೬–೧೩೯.

೭. 'ಡ' ಮತ್ತು 'ದ' ಅಕ್ಷರಗಳಲ್ಲಿಯ ವ್ಯತ್ಯಾಸವು ಕೆಲವು ಶಾಸನಗಳಲ್ಲಿ ಅಷ್ಟೇನು ಸ್ಪಷ್ಟವಾಗಿ ಕಂಡು ಬರುವುದಿಲ್ಲ. ಬಾದುಬ್ಬೆ ಮತ್ತು ಬಾದುಂಬೆ ಶಬ್ದಗಳು ಬರುವ ಶಾಸನಗಳನ್ನು ಪರೀಕ್ಷಿಸಿ ನೋಡಿದರೆ ಅಲ್ಲಿ ಬಾಡುಬ್ಬೆ ಎಂದು ಓದಲೂ ಸಾಧ್ಯವಿದೆ.

೮. ಸಂಶೋಧನತರಂಗ, ಪು. ೧೩೬

೯. ಪ್ರ. ಕ. ೩೨-೪, ಪು. ೮೧

ತತ್ವದ ಪ್ರಕಾರ ಒತ್ತು ಕಳೆದುಕೊಂಡು ಬಿಂದು ಗಳಿಸಿರಬಹುದು. ಆದರೆ ಬಾಡ+ಅಬ್ಬೆ= ಬಾಡಬ್ಬೆಯಾಗಬೇಕೇ ಹೊರತು ಬಾಡುಬ್ಬೆಯಾಗಲು ಕಾರಣವೇನು ? ಎಂಬ ಸಂದೇಹ ಉಳಿಯುವುದೆಂಬುದನ್ನು ಇಲ್ಲಿ ಒಪ್ಪಿಕೊಳ್ಳುತ್ತೇವೆ.

ಬಾದುಬ್ಬೆ ಯಾವ ದೇವತೆಯೆಂಬುದು ಆ ದೇವತೆಯ ಪ್ರತಿಮಾ ಚಿತ್ರದಿಂದ ತಿಳಿಯುವಂತಿದೆ. ದೇವತೆಯ ಮೂರ್ತಿ ಪದ್ಮಾಸನದಲ್ಲಿದ್ದು ಚತುರ್ಬಾಹುಯುಕ್ತ ವಾಗಿದೆ. ಎರಡೂ ಪಾರ್ಶ್ವದಲ್ಲಿ ಗಜಗಳಿದ್ದು ಸೊಂಡೆಯಲ್ಲಿ ಕುಂಭ ಹಿಡಿದು ದೇವ ತೆಯ ಮೇಲೆ ಕ್ಷೀರಧಾರೆ ಬಿಡುತ್ತಿವೆ. ಈ ಚಿತ್ರದಿಂದ ಇದು ಗಜಲಕ್ಷ್ಮಿಯೆಂದು ಕರೆಯಲು ಮನಸ್ಸಾಗುತ್ತದೆ. ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ಸೀಮೆ ಲಕ್ಕವ್ವ ಎಂಬ ದೇವತೆಯ ಗುಡಿ, ಗ್ರಾಮದ ಹೊಲಗಳ ಸೀಮೆಯ ಮೇಲೆ ಕಂಡುಬರುತ್ತದೆ. ಅದೇ ಪ್ರಕಾರ ಪ್ರಸ್ತುತ ದೇವತೆಯು ಗ್ರಾಮದ ನಿವೇಶನದ ಸೀಮೆಯ ಮೇಲಿನ ಲಕ್ಕವ್ವ (ಲಕ್ಷ್ಮಿ=ಗಜಲಕ್ಷ್ಮಿ) ಆಗಿರಬಹುದೆ? ●

ಆರ್. ಎನ್. ಗುರವ

# ಗ್ರಂಥಾವಲೋಕನ

**ಪತ್ರಪುಷ್ಪ :** ಪುಟಗಳು : ೪೦+೧೮೭. ಬೆಲೆ ರೂ. ೫-೦೦. ಪ್ರಕಾಶಕರು : ಶ್ರೀ ಎಂ. ಪಿ. ಜಾಲಿ ಅವರ ಷಷ್ಟ್ಯಬ್ದಿ ಸಮಾರಂಭ. ರಾಯಚೂರ.

ಶಿಕ್ಷಣ ಇಲಾಖೆಯಲ್ಲಿ ಮನಮುಟ್ಟಿ ಸೇವೆ ಸಲ್ಲಿಸಿದವರಲ್ಲಿ ಶ್ರೀ ಎಂ.ಪಿ. ಜಾಲಿಯವರು ಒಬ್ಬರು. ಅವರು ಆ ಕ್ಷೇತ್ರದಲ್ಲಿ ಡೆಪುಟಿ ಡೈರೆಕ್ಟರ್‌ರವರೆಗಿನ ವಿವಿಧ ಹಂತಗಳನ್ನೇರಿ ನಿವೃತ್ತರಾದವರು. ತಮ್ಮ ಕರ್ತವ್ಯನಿಷ್ಠೆ, ಪ್ರಾಮಾಣಿಕತನ, ಋಜುತೆ ಹಾಗು ಶುದ್ಧ ಚಾರಿತ್ರಗಳಿಂದ ಆ ಕ್ಷೇತ್ರವನ್ನು ಹಸನುಗೊಳಿಸಲು ಪ್ರಯತ್ನಿಸಿದವರು. ಅವರ ಆ ಅಪೂರ್ವ ಸೇವೆಯ ಸ್ಮರಣಾರ್ಥ ಅವರ ಷಷ್ಟ್ಯಬ್ದಿ ಪೂರ್ತಿಸಮಾರಂಭದಂದು ಹಲವು ಗ್ರಂಥಗಳು ಮೈದಳೆದವು. ಅವುಗಳಲ್ಲಿ ಪತ್ರಪುಷ್ಪ (ಸಂ. ಗುರುಬಸವಯ್ಯ ಹಿರೇಮಠ, ಪರ್ವತಯ್ಯ ಶಿವಪುರ–ರಾಯಚೂರು) ಕರ್ಮಯೋಗಿ (ಸಂ. ಮೋಹನ ಚಂದ (ಶಿರಗಿ, ಕೊಪ್ಪಳ)ಗಳನ್ನು ಹೆಸರಿಸಬಹುದು. ಈ ರೀತಿ ಹಲವು ಹತ್ತು ಎಡೆ ಒಬ್ಬ ವ್ಯಕ್ತಿಗೆ ಸನ್ಮಾನ, ಸಮಾರಂಭಗಳು ಜರಗುವುದರೊಂದಿಗೆ ಹಲವು ಸ್ಮರಣ ಸಂಚಿಕೆಗಳು ಹೊರಬಂದಿರುವುದು ಆ ಹಿರಿಯವ್ಯಕ್ತಿಯ ಮೇಲ್ಮೆಯ ದ್ಯೋತಕ.

ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸುವವರಿಗೆ ಶ್ರೀ ಎಂ.ಪಿ. ಜಾಲಿಯವರು ದಾರಿದೀಪವಾಗಿರುವರು. ಅವರನ್ನು ಕುರಿತಿರುವ ಪ್ರಸ್ತುತ 'ಪತ್ರಪುಷ್ಪ' ಗ್ರಂಥ ಸಂಪಾದಕರ ಆಶಯದಂತೆ 'ಶಿಕ್ಷಣ ವಿದ್ಯಾರ್ಥಿಗಳಿಗೆ ಒಂದು ಉತ್ತಮ ಆಧಾರಗ್ರಂಥ'ವಾಗಿದೆ. ಅದರಲ್ಲಿ ಎರಡು ಭಾಗಗಳಿವೆ. ಜಾಲಿಯವರ ಜೀವನ, ವ್ಯಕ್ತಿತ್ವಕ್ಕೆ ಸಂಬಂಧಿಸಿದ ಲೇಖನಗಳ, ಕವನಗಳ ಭಾಗ ಪತ್ರವೆಂದೂ, ಶಿಕ್ಷಣ ಕ್ಷೇತ್ರವನ್ನು ಕುರಿತು ಬರೆದ ಲೇಖನಗಳ ಭಾಗ ಪುಷ್ಪವೆಂದೂ ಹೆಸರುಪಡೆದಿದೆ. ಸರಸ್ವತಿಯ ಆರಾಧನೆಯಲ್ಲಿ ಈ ಪತ್ರ–ಪುಷ್ಪಗಳೆರಡರ ಪಾತ್ರವು ಪ್ರಾಮುಖ್ಯ. ಅಂತೆಯೇ ಹೆಸರೂ ಔಚಿತ್ಯಪೂರ್ಣ.

'ಪತ್ರ'ಭಾಗದಲ್ಲಿ ಶ್ರೀ ಜಾಲಿಯವರನ್ನು ಹತ್ತಿರದಲ್ಲಿ ನಿಂತುನೋಡಿ, ಆಕರ್ಷಿತರಾಗಿ ಅವರ ತುಂಬು ಜೀವನವನ್ನು ಸುಂದರವಾಗಿ, ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ ಶ್ರೀ ಲಿಂಗಣ್ಣ ಸತ್ಯಂಪೇಟೆಯವರು. ಇಲ್ಲಿ ಜಾಲಿಯವರ ಇಡೀ ಜೀವನದ ಸಕೃದ್ದರ್ಶನವಾಗಿದೆ. ಅವರ ಬಾಲ್ಯ, ಗೃಹಸ್ಥ, ವೈಯಕ್ತಿಕ, ಆಡಳಿತದ, ಜೀವನದ ವಿವಿಧ ಮಜಲುಗಳಲ್ಲಿ ಕಂಡುಬಂದ ಬೇರೆಬೇರೆ ಜನರ ಪ್ರಭಾವ, ಪರಿಣಾಮಗಳನ್ನು ಹೃದಯಂಗಮವಾಗಿ ಚಿತ್ರಿಸಲಾಗಿದೆ. 'ಶ್ರೀ ಮೃತ್ಯುಂಜಯಪ್ಪಗಳ ಸತ್ಯಶುದ್ಧ ಬದುಕಿನಿಂದ ಬೋಧೆಯಿಂದ ನಿರ್ಮಲವಾಗಿದ್ದ ಈ ಜೀವ, ಶ್ರೀ ಪಾವಟೆಯವರ ಶಿಸ್ತು, ದಕ್ಷತೆ ಹಾಗೂ ನಿಷ್ಪಕ್ಷಪಾತ

ಗುಣಧರ್ಮಗಳನ್ನು ಹೀರಿ ಇಷ್ಟೊಂದು ನಿರ್ಮಲವಾಯಿತು' (ಪು.೧೫). ಎಂದು ಹೇಳಿರುವಲ್ಲಿ ಜಾಲಿಯವರ ವ್ಯಕ್ತಿತ್ವದ ಕೆನೆಯೇ ಮೂಡಿ ಬಂದಿದೆ. ಅದನ್ನೇ ಶ್ರೀ ಎಸ್. ಡಿ. ಇಂಚಲರವರು 'ಒರೆಗೆ ನಿಂತಿಹ ಬದುಕು' ಎಂಬ ಪದ್ಯದಲ್ಲಿ 'ಮೃದು ಹೃದಯ ಸದುವಿನಯ. ಸರಸಸಜ್ಜನಿಕೆಯು, ಭಾವಸಂಗಮದಲ್ಲಿ ನಿತ್ಯಮಿಂದು, ಹೃದಯ ದೊಲವಿನ ಸವಿಯ ಸರ್ವರಿಗು ಉಣಬಡಿಸಿ, ಜನಮನದಿ ಮಂಡಿಸಿದ ಲೋಕಬಂಧು' ಎಂದು ಸುಂದರವಾಗಿ ಕಡೆದಿಟ್ಟಿದ್ದಾರೆ. ಶ್ರೀಯುತ ಶಾಂತರಸವರು ಶರಣರ ಸೂಳ್ನುಡಿ ಗಳಿಂದ ಜಾಲಿಯವರ ಜೀವನವನ್ನು ಒರೆಗೆ ಹಚ್ಚಿ ನೋಡಿದ್ದಾರೆ. 'ಶ್ರೇಷ್ಠ ವ್ಯಕ್ತಿತ್ವ ಸರ್ವತ್ರ ಪೂಜೆಗೊಳ್ಳುತ್ತದೆ" ಎಂದು ಬಿ. ಮಹದೇವಪ್ಪನವರು ಜಾಲಿಯವರ ಸನ್ಮಾನ ಸಮಾರಂಭಗಳನ್ನು ಕುರಿತು ಆಡಿರುವ ಮಾತು ಸೊಗಸಾಗಿದೆ. 'ಹೂ ಆರತಿ' ಎಂಬ ಪದ್ಯ ಭಾಗದಲ್ಲಿ ಜಾಲಿಯವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ತೋರುವ ಎ.ಕೆ. ರಾಮೇಶ್ವರ ಮೊದಲಾದವರು ಬರೆದ ಸಣ್ಣಸಣ್ಣ ಪದ್ಯಗಳಿವೆ.

ಈ ಗ್ರಂಥದ ಹಿರಿಮೆ ಅಡಗಿರುವುದು 'ಪುಷ್ಪ'ಎಂಬ ಭಾಗದಲ್ಲಿ. 'ಶಿಕ್ಷಣ ಎನ್ನು ವದು ಒಂದು ರಾಷ್ಟ್ರದ ಜನಾಂಗದ ಭವಿಷ್ಯ ನಿರ್ಮಿಸುವ ಶಕ್ತಿ' ಎಂದು ತಿಳಿದು ಆ ಭವಿಷ್ಯ ವನ್ನು ರೂಪಿಸುವಲ್ಲಿ ಪ್ರಯತ್ನಪಟ್ಟ ಹಲವರ ಅಭಿಪ್ರಾಯಗಳು ಇಲ್ಲಿ ಲೇಖನಗಳ ರೂಪದಾಳಿವೆ. ಸಿಂಪಿಲಿಂಗಣ್ಣ, ಎಸ್.ವಿ. ಜೇವೂರ್. ಮ. ಗು. ಹಂದ್ರಾಳ್. ಮಿರ್ಜಿ ಅಣ್ಣಾರಾಯ ಮೊದಲಾದವರು ಈ ಲೇಖಕಮಾಲೆಯಲ್ಲಿದ್ದಾರೆ ಎಂದರೆ ಆ ಲೇಖನ ಗಳ ಮೌಲ್ಯಗಳ ಬಗ್ಗೆ ಸಂಶಯವೇ ಇಲ್ಲ. ಅವರವರ ಅನುಭವಗಳನ್ನು ಹಿಂಡಿ ತೆಗೆದು ಪಾಕಗೊಳಿಸಿದಂತಿವೆ ಇಲ್ಲಿಯ ಲೇಖನಗಳು.

ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು, ಶಿಕ್ಷಣಪದ್ಧತಿ ಈ ಚತುಸ್ತಂಭದ ಮೇಲೆ ಶಿಕ್ಷಣಸೌಧ ನಿಂತಿದೆ. ಅವುಗಳಲ್ಲಿ ಒಂದೊಂದರ ಲೋಪದೋಷ. ಹಿರಿಮೆ ಗರಿಮೆಗಳನ್ನು ಕುರಿತು ಇಲ್ಲಿಯ ಲೇಖಕರು ಪಟ್ಟಿರುವ ಅಭಿಪ್ರಾಯ ಅವರವರ ಅನುಭವದ ಆಳದಿಂದ ಎತ್ತಿ ತೆಗೆದ ಮುತ್ತುಗಳಂತಿವೆ. ಅವುಗಳಲ್ಲಿ ಕೆಲವನ್ನು ಹೀಗೆ ಸಂಗ್ರಹಿಸಬಹುದು. 'ವಿದ್ಯಾರ್ಥಿಗಳಲ್ಲಿ ಮನೆಮಾಡಿಕೊಂಡಿರುವ ಸೋಮಾರಿತನ ಅವರನ್ನಿಂದು ಕರ್ತವ್ಯ ಬಾಹಿರರನ್ನಾಗಿ ಮಾಡಿದೆ" (ಪು. ೮೨.) "ಅವರು ಜ್ಞಾನಿಗಳಾಗದಿದ್ದರೆ ಹೋಗಲಿ. ಶೀಲಸಂಸ್ಕೃತಿಯುಳ್ಳವರಾದರೂ ಆಗಬೇಡವೇ ? ಮನುಷ್ಯರಾದರೂ ಆಗಬೇಡವೇ?" (ಪಾಲಕರು) ಮಕ್ಕಳ ಕಿರಿಕಿರಿಯನ್ನು ತಪ್ಪಿಸಿಕೊಳ್ಳಲು ಶಾಲೆಗೆ ಕಳಿಸದೆ ಮಕ್ಕಳ ಅಭ್ಯು ದಯದಲ್ಲಿ ಪಾಲುಗೊಳ್ಳಬೇಕು." (ಪು.೫೪). "ವಿದ್ಯಾರ್ಥಿಗಳ ಇಂದಿನ ಈ ಅಶಾಂತ ಪರಿಸ್ಥಿತಿಗೆ ಶಿಕ್ಷಕರೇ ಕಾರಣ" (ಪು. ೧೧೭.) "ಸರ್ವರಿಂದ ಅವಮಾನಿತನಾಗಿದ್ದ ಮಂಥ ರೆಯ ಪರಿಸ್ಥಿತಿಯಾಗಿದೆ ಇಂದಿನ ಶಿಕ್ಷಕನದು" (ಪುಟ. ೧೭೭). "ಶಿಕ್ಷಕ ಶೀಲ ಸಂಸ್ಕೃತಿ ಪಾಂಡಿತ್ಯದ ಕೆನೆಯಾಗಿರಬೇಕು" (ಪು. ೮೭). "ದೋಷಪೂರ್ಣ ಶಿಕ್ಷಣ ಕೊಡುವದಕ್ಕೆ ದೋಷಪೂರ್ಣ ಪಠ್ಯಪುಸ್ತಕಗಳೇ ಕಾರಣ" (ಪು. ೧). "ಕವಿತೆಯ ಮುಖ ನೋಡಿ ಪಠ್ಯಪುಸ್ತಕದಲ್ಲಿ ಸೇರಬೇಕಲ್ಲದೆ ಕವಿಯ ಮುಖ ನೋಡಿ ಅಲ್ಲ" (ಪು. ೭).

'ಶಿಕ್ಷಣಕ್ಕೆ ಸರಕಾರ ಎಲ್ಲ ಸೌಲಭ್ಯಕೊಡಲಿ. ಆದರೆ ಉಚ್ಚ ಶಿಕ್ಷಣವನ್ನು ಸಾರ್ವತ್ರಿಕವಾಗಿ ಮಾಡದಿರಲಿ' (ಪು. ೮೮). ಇಲ್ಲಿಯ ಪ್ರತಿಯೊಂದು ಮಾತಿನಲ್ಲೂ ಶಿಕ್ಷಣದ ಮಟ್ಟವನ್ನು ಮೇಲಕ್ಕೆತ್ತಬೇಕೆಂಬ ಅಂತಃಕರಣದ ಕರೆ ಎದ್ದು ಕಾಣುತ್ತಿದೆ. ಶಿಕ್ಷಣವನ್ನು ನಿಜವಾಗಿಯೂ ಪರಿಣಾಮಕಾರಿಯಾಗಿ ಮಾಡುವ ಕಳಕಳಿ ಸರಕಾರಕ್ಕೆ ಶಿಕ್ಷಣ ಪ್ರೇಮಿಗಳಿಗೆ ಇದ್ದರೆ ಅಂಥವರು ಇಲ್ಲಿಯ ಸೂಚಿಸಲಾದ ಅಭಿಪ್ರಾಯಗಳ ಚಿಂತನ ಮಂಥನ ಮಾಡಲಿ. ಅಲ್ಲಿಯ ಸಲಹೆಗಳನ್ನು ಪ್ರಯೋಗದಲ್ಲಿ ತರಲಿ. ಅಂದಾಗ ಮಾತ್ರ ಶಿಕ್ಷಣದಲ್ಲಿ ನಿಜವಾದ ಸುಧಾರಣೆಯಾದೀತು.

ಹೀಗೆ ಈ ಗ್ರಂಥ ಹಲವು ವಿದಧ ಬೆಲೆಯನ್ನೊಳಗೊಂಡಿದೆ. ಆದರೆ ಅಲ್ಲಲ್ಲಿ ಮುದ್ರಣದೋಷಗಳೂ ಅಲ್ಲಲ್ಲಿ ಉಳಿದಿವೆ. ಆದರೂ ಅವು ಗೌಣ. ಒಟ್ಟಾರೆ ಒಬ್ಬ ಒಳ್ಳೆಯ ಶಿಕ್ಷಣವೇತ್ತನಿಗೆ ಅರ್ಪಿಸಲಾದ ಒಂದು ಉನ್ನತ ಮಟ್ಟದ ಕೃತಿ ಇದೆಂದು ಹೇಳಬಹುದು.

**ಬಸವ ಪೂರ್ವಯುಗದ ಶರಣರು :** ಪುಟ : I–IX+೧೫+೧-೧೧೬
ಬೆಲೆ : ಮೂರು ರೂಪಾಯಿ ಐವತ್ತು ಪೈಸೆ. ಪ್ರ : ಸತ್ಯಸ್ನೇಹ ಪ್ರಕಾಶನ ರಾಯಚೂರ.

ರಾಯಚೂರು ಜಿಲ್ಲೆಯ ಸಾಹಿತ್ಯದ ಶಕ್ತಿಯಾಗಿ ನಿಂತಿರುವ ಶ್ರೀಯುತ ಶಾಂತರಸರವರು. ಕನ್ನಡ ಸಾಹಿತ್ಯದಲ್ಲಿ ಕಳಕಳಿಯಿಂದ ಸೇವೆಸಲ್ಲಿಸುತ್ತಿರುವವರಲ್ಲಿ ಒಬ್ಬರು. ಅವರ ಆ ಸೇವೆಯ ಪ್ರತಿಫಲವಾಗಿ ಈಗಾಗಲೆ ನಂಜುನೊರೆವಾಲು, ಮಾನಸಗಳ್ಳಿ, ಬಹುರೂಪ ಮೊದಲಾದ ಪುಸ್ತಕಗಳು ಬೆಳಕುಕಂಡಿವೆ. ಪ್ರಸ್ತುತ 'ಬಸವಪೂರ್ವಯುಗದ ಶರಣರು' ಗ್ರಂಥವು ಹೆಸರೆ ಹೇಳುವಂತೆ ಬಸವಣ್ಣನವರಿಗಿಂತ ಪೂರ್ವದಲ್ಲಿ ಬೆಳಗಿಹೋದ ಶಿವಶರಣರನ್ನು ಕುರಿತು ಬರೆಯಲಾದ ಗ್ರಂಥವಾಗಿದೆ. ಪ್ರಸ್ತಾವನೆಯಲ್ಲಿ ಲೇಖಕರು ಲಿಂಗವಂತ ಅಥವಾ ವೀರಶೈವಧರ್ಮ ಎಷ್ಟು ಹಿಂದಿನದು? ಎಂದು ಜನ್ಮ ತಳೆಯಿತು? ಇವರ ಸ್ಥಾಪಕರಾರು? ಮುಂತಾದ ಪ್ರಶ್ನೆಗಳನ್ನು ಎತ್ತಿಕೊಂಡು ವಿವೇಚಿಸಲು ಪ್ರಯತ್ನಿಸಿದ್ದಾರೆ. ಆ ವನದಲ್ಲಿ ವಿಹರಿಸಿ ಸತ್ಯವನ್ನು ಕಂಡ ಶೋಧಕರ ಮಾತುಗಳನ್ನು ಸಂಗ್ರಹಿಸಿ ಒಟ್ಟಿನಲ್ಲಿ 'ವೀರಶೈವಕ್ಕೆ ಹೊಸ ತಿರುವು ಬಂದುದು ದೇವರದಾಸಿಮಯ್ಯನಿಂದ ಎಂದು ಒಪ್ಪಿಕೊಳ್ಳಬಹುದು' (ಪು. ೧೨.) ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ದೇವರ ದಾಸಿಮಯ್ಯನು ತನ್ನ ಕೆಲವು ವಚನಗಳಲ್ಲಿ ತನಗಿಂತ ಪೂರ್ವದ ಕೆಲವು ವಚನಕಾರರನ್ನು ನೆನೆದಿದ್ದಾನೆ. ವೀರಶೈವ ಮತಸ್ಥಾಪನೆಯಲ್ಲಿ ಅವರ ಪಾತ್ರವೇನಿತ್ತು ಎಂದು ಹೇಳಲು ಖಚಿತ್ತ ಆಧಾರಗಳಿಲ್ಲ. ಸಧ್ಯದ ಮಟ್ಟಿಗೆ ಶಾಂತರಸರವರ ಅಭಿಪ್ರಾಯವನ್ನೇ ಒಪ್ಪಿಕೊಳ್ಳಬಹುದು.

ಶಾಂತರಸರವರು "ಬಸವಪೂರ್ವಯುಗದಲ್ಲಿ ನಾನುಕಂಡುದು ಮೂವತ್ತೊಂಬತ್ತು ಶರಣ–ಶರಣೆಯರನ್ನು" (ಲೇಖಕನ ಮಾತು) ಎಂದು ಅಭಿಪ್ರಾಯಪಟ್ಟಿದ್ದಾರೆ. ಅವರಲ್ಲಿ ಪ್ರಸ್ತುತ ಗ್ರಂಥವು, ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ, ಢಕ್ಕೆಯ ಮಾರಯ್ಯ,

ಮೊದಲಾದ ಹನ್ನೊಂದು ಜನರ ಚರಿತ್ರೆಯನ್ನೊಳಗೊಂಡಿದೆ. ಉಳಿದ ಶರಣರ ಚರಿತ್ರೆಯನ್ನು ಎರಡನೆಯ ಭಾಗದಲ್ಲಿ ಹೊರತರುವ ಯೋಜನೆಯನ್ನೂ ಇಟ್ಟುಕೊಂಡಿದ್ದಾರೆ. ಸಧ್ಯದ ಗ್ರಂಥದಲ್ಲಿ ದೇವರ ದಾಸಿಮಯ್ಯ, ದುಗ್ಗಳೆ, ಸಗ್ಗಲೆಯರೆಲ್ಲ ಒಂದೇ ಕಾಲಕ್ಕೆ ಸಂಬಂಧಿಸಿದವರು. ದಾಸಿಮಾಯ್ಯನ ಸುತ್ತ ಅವರ ಚರಿತ್ರೆ ಹೆಣೆದುಕೊಂಡಿರುವುದು. ಅವರ ಚರಿತ್ರೆ ಇಲ್ಲಿ ಬೇರೆ ಬೇರೆಯಾಗಿ ಬಂದಿದೆಯಾದ್ದರಿಂದ ವಿಷಯದ ಪುನರುಕ್ತಿ ದೋಷಕ್ಕೆ ಎಡೆಯುಂಟಾಗಿದೆ. ಇಲ್ಲಿ ಉಕ್ತನಾದ ಮತ್ತೊಬ್ಬ ಶರಣ ಕೊಂಡಗುಳಿ ಕೇಶಿರಾಜ. ಆತನ ಬಗೆಗೆ ಸಾಕಷ್ಟು ವಾದವಿವಾದವಿದ್ದು ಕೆಲವರು ಆತನು ಬಿಜಾಪುರ ಜಿಲ್ಲೆಗೆ ಸೇರಿದವನೆಂದೂ, ಇನ್ನು ಕೆಲವರು ಆತನು ಗುಲ್ಬರ್ಗಾ ಜಿಲ್ಲೆಗೆ ಸೇರಿದವನೆಂದೂ ಅಭಿಪ್ರಾಯಪಟ್ಟಿದ್ದಾರೆ. ಪ್ರಸ್ತುತ ಲೇಖಕರು ಎರಡನೆಯ ವಾದವನ್ನೇ ಒಪ್ಪಿದ್ದಾರೆ. ಆದರೆ ಈಗಾಗಲೇ ಈತನು ಬಿಜಾಪುರ ಜಿಲ್ಲೆಯ ಕೊಂಡಗುಳಿಯವನೆಂದು ನಿರ್ಧಾರವಾಗಿರುವುದರಿಂದ ಈ ಬಗೆಗೆ ಮತ್ತೆ ಸಂದೇಹಪಡುವುದು ಉಚಿತವೆನಿಸುವುದಿಲ್ಲ. ಆ ಆ ಶರಣರ ಜೀವನ ಚರಿತ್ರೆಯನ್ನು ಪ್ರತಿಪಾದಿಸುವಾಗ ಅವರಿಗೆ ಸಂಬಂಧಿಸಿದ ಕಾವ್ಯ, ವಚನ, ಶಾಸನ ಆಧಾರಗಳನ್ನು ಒದಗಿಸುತ್ತಿದ್ದಾರೆ. ಕೆಲವೆಡೆ ಚರಿತ್ರೆಯನ್ನು ಮಾತ್ರ ಹೇಳಿ, ತರುವಾಯ ಶಾಸನಗಳನ್ನು ಬೇರೆಡೆಗೆ ಕೊಡಲಾಗಿದೆ. (ಉದಾ: ದೇವರ ದಾಸಿಮಯ್ಯ). ಇಲ್ಲಿ ಆ ಆ ಕಥೆಗಳೊಂದಿಗೆ ಶಾಸನನಾಧಾರಗಳನ್ನು ಹೇಳುತ್ತ ಬಂದಿದ್ದರೆ ಹೇಳುವ ಮಾತಿಗ ಇನ್ನಷ್ಟು ತೂಕ ಉಂಟಾಗಬಹುದಿತ್ತು. ಕೆಲವು ಸಲ ಹಿರಿಯರ ಹೇಳಿಕೆಯ ಮೇಲೆಯೇ ತಮ್ಮ ಅಭಿಪ್ರಾಯಗಳನ್ನು ತೇಲಿಸಿಕೊಂಡು ಹೋಗಲಾಗಿದೆ. ಉದಾ: 'ಶಂಕರ ದಾಸಿಮಯ್ಯನ ಊರಾದ ಸ್ಕಂದಶಿಲೆಯೇ(ಕಂದಗಲ್ಲು)ಈತನ ಊರೆಂದು ಲಿಂ.ಡಾ. ಹಳಕಟ್ಟಿಯವರು ಅಭಿಪ್ರಾಯ ಪಡುತ್ತಾರೆ' (ಪು.೨೬.) ಇಲ್ಲಿ ಡಾ. ಹಳಕಟ್ಟಿಯವರು ಈ ರೀತಿ ಅಭಿಪ್ರಾಯಪಡಲು ಕಾರಣಗಳೇನು? ಆ ಅಭಿಪ್ರಾಯಕ್ಕೆ ಇರುವ ಸಾಧಕ ಬಾಧಕಗಳೇನು? ಎಂಬುವನ್ನು ಸ್ವಲ್ಪ ವಿಚಾರಿಸಿದ್ದರೆ ಚೆನ್ನಾಗಿತ್ತು.

ಈ ಕೆಲವು ಲೋಪದೋಷಗಳನ್ನು ಬಿಟ್ಟರೆ ಶ್ರೀ ಶಾಂತರಸರವರ ಶೈಲಿ ಮನಂಬುಗುಮಂಥದಿದೆ. ವಿಷಯವನ್ನು ಒಳಹೊಕ್ಕು ನೋಡುವ ಜಿಜ್ಞಾಸೆ ಅವರಲ್ಲಿ ಸಾಕಷ್ಟು ಇದೆ. ಉದಾಹರಣೆಗಾಗಿ: ಬಾರಕೋಲಿನಿಂದ ಮೈಗೆ ಹೊಡೆದುಕೊಳ್ಳುವ ಕಾಯಕ "ಬುರುಬುರು ಸಂಕಲಮ್ಮ' 'ದುರಗ ಮುರಗಿ' ಇವು ಒಂದು ರೀತಿಯ ಜನಪದ ಕಲೆಗಳು" (ಪು. ೩೩). "ಛಕ್ಕೆಯಮಾರಯ್ಯ...ಶರಣ ಧರ್ಮದ ಉಸಿರಿತ್ತು. ಸುಜ್ಞಾನದ ಹೊದಿಕೆ ಹೊದಿಸಿ, ಸದಾಚಾರದ ಜೀವಕಳೆ ತುಂಬಿ ಈ ಕೀಳ್ಮಟ್ಟದ ಕಲೆಯನ್ನು ಲಿಂಗಪೂಜೆಯ ಸಮನಾಗಿ ಮಾಡಿದ" (ಪು. ೩೩).

ಹೀಗೆ ರಾಯಚೂರಿನಂಥ ಹಿಂದುಳಿದ ಪ್ರದೇಶದಲ್ಲಿ ನಿಂತು ಇಂಥ ಸಂಶೋಧನಾತ್ಮಕ ಕೃತಿಗಳನ್ನು ರಚನೆಮಾಡುತ್ತಿರುವ ಶ್ರೀ ಶಾಂತರಸರವರ ಪ್ರಯತ್ನ ಶ್ಲಾಘನೀಯವೇ ಸರಿ. ಅಲ್ಲಲ್ಲಿ ಅಕ್ಷರದೋಷಗಳಿದ್ದರೂ ಗೌಣವಾದುವು.

—ಬಿ. ವ್ಹಿ. ಶಿರೂರ

**ಜಾನಪದ ನರಗುಂದ :** (ಗೀತ ಸಂಗ್ರಹ) ಪುಟಗಳು i-xi ೧-೧೫೪ ಸಂಪಾದಕರು : ಎ. ಎಸ್. ಹೂಗಾರ ಬಿ.ಎ;ಬಿ.ಎಡ್. ಬಾಬಾಸಾಹೇಬ ಗ್ರಂಥ ಪ್ರಕಾಶನ ನರಗುಂದ. ಮೊದಲ ಮುದ್ರಣ, ಯುಗಾದಿ ೪-೪-೧೯೭೩.

ಕನ್ನಡ ಜಾನಪದ ಸಾಹಿತ್ಯ ಹಾಗೂ ಸಂಗ್ರಹದ ಬಗೆಗೆ ಆಸಕ್ತಿ ಈಗ ಸಾಹಿತ್ಯಜ್ಞರಲ್ಲಿ ಮೂಡಿ ನಿಂತಿದೆ. ಕರ್ನಾಟಕದ ನಾನಾ ಭಾಗಗಳಲ್ಲಿ ಈ ಕಾರ್ಯ ನಡೆದಿದೆ. ನರಗುಂದದವರೆ ಆದ ಶ್ರೀ ಎ. ಎಸ್. ಹೂಗಾರ ಅವರು ಈ ಮೊದಲು 'ಕ್ರಾಂತಿ ವೀರ ಬಾಬಾಸಾಹೇಬ' ಎಂಬ ಕಿರು ಜಾನಪದ ಗೀತ ಸಂಗ್ರಹವನ್ನು ಹೊರತಂದಿದ್ದಾರೆ. 'ಜಾನಪದ ನರಗುಂದ' ಅವರ ಎರಡನೆಯ ಜಾನಪದ ಗೀತ ಸಂಗ್ರಹವಾಗಿದೆ. ಈ ಸಂಗ್ರಹದಲ್ಲಿ ನಾಲ್ವತ್ತು ನಾಲ್ಕು ಗೀತೆಗಳಿವೆ; ಆದರೆ ಎಲ್ಲವೂ ಜಾನಪದ ಗೀತೆಗಳಲ್ಲ. ಪ್ರಮುಖ ಜಾನಪದ ಗೀತೆಗಳಾದ ಲಾವಣಿಗಳೇ ಒಟ್ಟು ಹದಿನೈದು ಇವೆ. ಅವುಗಳನ್ನು ಕ್ರಮಬದ್ಧವಾಗಿ ಸಂಪಾದನೆ ಮಾಡಲಾಗಿಲ್ಲ. ಈ ಹದಿನೈದಂ ಲಾವಣಿಗಳಲ್ಲಿ ಎರಡು ಲಾವಣಿ ಸಖಿ ಪದಗಳುಂಟು. ಒಂದು ಗಂಗಾತನಯ ಅಪ್ಪಣ್ಣ ಬಸಹಟ್ಟಿ ಲಾವಣಿಕವಿ ರಚಿಸಿದ "ಲಾವಣಿ ಸಕಿಪದ" ಇನ್ನೊಂದಂ ಕವಿ ಹನುಮಂತ ನರಗುಂದ "ಲಾವಣಿ ಸಖೀಪದ" ಲಾವಣಿ ಸಖಿ, ಸಕೀ–ಸಖೀ ಇವುಗಳಲ್ಲಿ ನಾವು ಶುದ್ಧರೂಪ ಯಾವುದು ಎಂಬುದನ್ನು ತಿಳಿಯಬೇಕಾದರೆ 'ಸಖಿ' ಅನ್ನುವ ಪದವೇ ಶುದ್ಧವಾದುದು ಎಂಬುದು ತಿಳಿಯದೆ ಹೋಗಿದೆ. ಬಳಿಕ ತೊಗಲಿನ ಮಹಿಮೆ ಲಾವಣಿ, ಕಲಿಯುಗದಾಟ ಲಾವಣಿ, ಚದುರಗ ಚದುರಿ ದೊರಕಲಿಲ್ಲ ಲಾವಣಿ, ವಿರಹಿಣಿಯಕರೆ ಲಾವಣಿ, ಕೃಷ್ಣಾರ್ಜುನ ಕಾಳಗ ಲಾವಣಿ, ಇವೆಲ್ಲ ಲಾವಣಿಗಳ ವಸ್ತುಗಳು ನರಗುಂದಕ್ಕೆ ಸಂಬಂಧಪಟ್ಟವುಗಳಲ್ಲ. ಈ ಲಾವಣಿಯ ರಚನೆಕಾರರಲ್ಲಿ ಹಾಗೂ ಹಾಡುಗಾರರಲ್ಲಿ ಒಬ್ಬಿಬ್ಬರು ನರಗುಂದದಲ್ಲಿ ವಾಸವಾದಂತಿದೆ. ಕೃಷ್ಣಾರ್ಜನ ಕಾಳಗ ಲಾವಣಿಯನ್ನು ರಚಿಸಿದ ಕವಿ ಬೆನಕೊಪ್ಪನಾಗಲಿ, ಹಾಡಿದ ಗದ್ದಗಿ ಚನ್ನಪ್ಪನಾಗಲಿ ಇವರುಗಳೇ ಅಲ್ಲಿ ವಾಸವಾಗಿದ್ದಂತೆ ತೋರುವುದು. 'ನರಗುಂದದ ನರವೀರ' ಲಾವಣಿಯು ಬಾಬಾಸಾಹೇಬರ ವೀರತನವನ್ನು ತೋರುವ ಲಾವಣಿಯಾಗಿದೆ.

'ಕ್ರಾಂತಿವೀರ ಬಾಬಾಸಾಹೇಬ' ಸಂಗ್ರಹದ ಲಾವಣಿ 'ಜಾನಪದ ನರಗುಂದ' ಸಂಗ್ರಹದಲ್ಲಿ 'ಕ್ರಾಂತಿ ವೀರ ಬಾಬಾಸಾಹೇಬ ಲಾವಣಿ'ಯಾಗಿ ಮೂಡಿದೆ. ಇವೆರಡೂ ಹಾಡಿನ ವಸ್ತುಗಳಲ್ಲಿ, ಧಾಟಿಯಲ್ಲಿ ಪ್ರಾರಂಭದಲ್ಲಿ ಒಂದೇ ಆಗಿವೆ. ಕ್ರಾಂತಿವೀರ ಬಾಬಾಸಾಹೇಬ ಸಂಗ್ರಹದಲ್ಲಿರುವ ಈ ಲಾವಣಿಯನ್ನು ಶ್ರೀ ದ. ಲ. ಕೆರೂರ ಸಂಗ್ರಹಿಸಿದ್ದಾರೆ. ಜಾನಪದ ನರಗುಂದದಲ್ಲಿ ಈ ಲಾವಣಿ ಸ್ವಲ್ಪ ಸಂಸ್ಕಾರದಿಂದ ಸುಧಾರಿಸಿಕೊಂಡಿದೆ. ಬಾಬಾಸಾಹೇಬರನ್ನು ಹಿಡಿಯದೆ ತಮ್ಮ ಮಾನ ಹೋಗುವದೆಂದು ಬದಲಿ ಹಿಡಿದ ತಂದ ಮನುಷ್ಯನೇ ಬಾಬಾಸಾಹೇಬನೆಂದು ಸುಮ್ಮನಾಗಿ ಅವನನ್ನೇ ಗಲ್ಲಿಗೇರಿಸುತ್ತಾರೆ. ಈ ಸಾಲುಗಳು ಹೀಗಿವೆ.

**ಇಳುವು :** ಬಾಬಾಸಾಹೇಬಂತ ಬ್ಯಾರೆ ಯಾರನ್ನೋ
ಗಲ್ಲಿಗೇರಿಸಿ ಕೆಲಸಾ ಮುಗಿಸಿದಾರೋ ।
ತಿಳಿಯದ ಜನಗಳ ಕಣ್ಣಿಗೆ ಇಂಗಪಚ್ಚಿ
ಮಂಕಬೂದಿ ತೂರಿ ಮಳ್ಳುಮಾಡಿದಾರೋ ।

ಈ ಸಾಲುಗಳು ನೈಜ ಸಂಗತಿಗಳನ್ನು ಚಿತ್ರಿಸಿವೆ. ನೈಜತೆಯನ್ನು ಸೂಸುವುದೇ ಲಾವಣಿಯ ಗುಣಗಳಲ್ಲೊಂದಾಗಿದೆ.

'ಹಾಳಾದ ನರಗುಂದ' ಪದವನ್ನು ಯಾವ ತರಹದ ಜಾನಪದ ಗೀತವೆಂಬುದನ್ನು ಹೇಳದೆ ಹೋಗಿದ್ದಾರೆ. ಈ ಹಾಡನ್ನು ವೃತ್ತಿಗಾಯಕರಾದ ಗೊಂದಲಿಗರು ಹಾಡುತ್ತಾರೆ. ಈ ಹಾಡಿನಲ್ಲಿ ವಿವರಣೆ ಇದೆ. 'ನರಗುಂದ ಇಂಗ್ರಜಾ ತಗೊಂಡ ಮಂಗಳವಾರ ದಿನಾ' ಎಂದು ಕಾಲವನ್ನು ಸೂಚಿಸುವ ಪಲ್ಲವಿಯೇ ಹಾಡಾಗಿದೆ. ಈ ಹಾಡನ್ನು ಗೊಂದಲಿಗರ ಹಾಡೆಂದು ಕರೆದರೂ ಸರಿ. ಈ ಹಾಡು ಲಾವಣಿಯ ಛಾಯೆಯಿಂದ ಕೂಡಿಕೊಂಡಿದೆ.

ಇನ್ನುಳಿದ ಲಾವಣಿಗಳೆಲ್ಲ ನರಗುಂದದ ಐತಿಹಾಸಿಕ ಗರ್ಭವುಳ್ಳವುಗಳಾಗಿವೆ.

ನರಗುಂದ (ಶಿಲಾಶಾಸನಗಳಿಂದ) ಮತ್ತು ಶ್ರೀ ವೆಂಕಟೇಶ ದಂಡಕ ಜಾನಪದ ಗೀತೆಗಳಲ್ಲ. ಆದರೂ ನರಗುಂದದ ಮಹತ್ವವನ್ನರಿಯುತ್ತವೆ. 'ನರಗುಂದದ ನವರಾತ್ರಿಯ ವೈಭವ'ವು ದುಂದುಮೆಯ ಧಾಟಿಯನ್ನು ಪಡೆದಿದೆ. ನರಗುಂದದ ವರ್ಣನೆಯು ವೈಭವಯುತವಾಗಿದೆ. ಅದರಂತೆ 'ನರಗುಂದದ ಗೌರಿಹುಣ್ಣಿವೆ' ಸಾಂಗತ್ಯವನ್ನು ತಾಳಿದೆ. ವೆಂಕಟೇಶ ಉರುಟಣೆ ಹಾಡು ದ್ವಿಪದಗಳಲ್ಲಿ, ನರಗುಂದದ ಜಾತ್ರೆ ಓಯಲಾಟದ ಹಾಡುಗಳಲ್ಲಿ, ನರಗುಂದದ ಚನ್ನಬಸವ ಶಿವಯೋಗಿಗಳು ಹೆಜ್ಜೆಮೇಳ ಪದಗಳಲ್ಲಿ ನರಗುಂದದ ಸಂಗಳ ಮಠದ ಶ್ರೀಗಳು ತ್ರಿಪದಿಗಳಲ್ಲಿ, ನರಗುಂದದ ಹೋರಾಟ ಕೋಲುಪದಗಳಲ್ಲಿ. ನರಗುಂದದ ಬಾಬಣ್ಣಾ ಹಂತಿ ಪದಗಳಲ್ಲಿ, ನರಗುಂದದ ಪತನ ಜೀಸುಕ್ಷೀನ ಪದಗಳಲ್ಲಿ ನರಗುಂದದ ದಾರುಣ ಚಿತ್ರಣ ಗರತಿಯ ಹಾಡುಗಳಲ್ಲಿ ಇವುಗಳನ್ನು ಸುರಮ್ಯವಾಗಿ ಸಂಕಲನ ಮಾಡಲಾಗಿದೆ.

'ಏಲೀಜ ಮಾಲ್‌ಶಾ'ರಿವಾಯತ್ ಹಾಡು ನರಗುಂದ "ಸತ್ಯ ಶರಣರ ಲೀಲಿ ಸಾರತೈತಿ" ಇನ್ನೊಂದು ಈ ಸಂಗ್ರಹದಲ್ಲಿ ಇರುವ ರಿವಾಯತ್ ಹಾಡು 'ಸೊಸಿ–ಅತ್ತಿ ಕವನ' ಸತ್ವಯುತವಾದ ಕಥನ ಕವನವಾದರೂ ಕಥೆ ನರಗುಂದದ್ದಲ್ಲ. ಉಳಿದ ಏಕದಾರಿ ಪದಗಳು ಭಕ್ತಿಮಯವಾದ ಹಾಡುಗಳಾಗಿವೆ.

ಸಂಗ್ರಹದಲ್ಲಿ ಶ್ರೀ ವೆಂಕಟೇಶ್ವರ, ನರಗುಂದ ಮಠಗಳ, ಶ್ರೀಗಳ, ಬಾಬಾಸಾಹೇಬರ ಪುತ್ಥಳಿ, ಕತ್ತಲಗದ್ದಿಗೆ. ಕೆಂಪಗಸೆ. ನರಗುಂದದ ಇಡೀ ನೋಟ ಮುಂತಾದ ಚಿತ್ರಗಳು ಸಂಗ್ರಹದಲ್ಲಿ ಬಂದಿವೆ.

ಇಡಿಯಾಗಿ ಜಾನಪದ ನರಗುಂದವನ್ನು ಅಭ್ಯಸಿಸಿದ ಮೇಲೆ ನರಗುಂದದ ಆಧು

ನಿಕ ಮತ್ತು ಐತಿಹಾಸಿಕ ಸತ್ಯಗಳು ಮನದಾಳದಲ್ಲಿ ಮೂಡಿನಿಲ್ಲುತ್ತವೆ. ಈ ಸಾಹಸ ಶ್ರೀ ಹೂಗಾರರಿಂದಾದುದು ಕನ್ನಡ ಜಾನಪದ ರಾಶಿಗೆ ಒಂದು ತೆನೆ ಎಂದು ಹೇಳಬೇಕಷ್ಟೆ.

ಶ್ರೀ ಹೂಗಾರರು ಪ್ರಿನ್ಸಿಪಾಲ, ಎಲ್. ಪಂಚಾಕ್ಷರಿಯವರಿಂದ. ಡಾ. ವ್ಹಿ. ಎಸ್. ಪಾಟೀಲರಿಂದ, ಶ್ರೀ ಎನ್. ಗುರುಮೂರ್ತಿಯವರಿಂದ ಹೊಗಳಿಸಿಕೊಂಡ ಹೂವಾಗಿದ್ದಾರೆ. ಮೇಲಾಗಿ ಜಾನಪದ ತಜ್ಞರೂ ವರಕವಿಗಳೂ ಆದ ಶ್ರೀ ಬೆಟಗೇರಿ ಕೃಷ್ಣಶರ್ಮರು ಈ ಸಂಗ್ರಹಕ್ಕೆ ಮುನ್ನುಡಿಯನ್ನು ಬರೆದು. 'ಜಾನಪದ ಕನ್ನಡ ಕೆಚ್ಚು ಚಲ್ವಂ'ಗಳನ್ನು ಸೂಸಿದ್ದಾರೆ. ಮುನ್ನುಡಿಯು ಬಹುಮಹತ್ವ ಪೂರ್ಣಾಂಶಗಳಿಂದೊಡಗೂಡಿದೆ.

—ನಿಂಗಣ್ಣ ಸಣ್ಣಕ್ಕಿ

**ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು :** ಡಾ|| ದ. ರಾ. ಬೇಂದ್ರೆ ಎಂ. ಎ; ಡಿ. ಲಿಟ್. ಪ್ರಕಾಶಕರು : ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಬೆಲೆ : ರೂ ೩, ಪುಟ : ೮೧.

"ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು" ಇದು ವಸ್ತುತಃ ಸಾಹಿತ್ಯ ವಿಮರ್ಶನದ ಗ್ರಂಥವಲ್ಲ. ಕಾವ್ಯಗಳಲ್ಲಿ ಶಿಲ್ಪಿತವಾದ ಮಹೋನ್ನತ ಪಾತ್ರಗಳ ಕೆಲವು ಪೈಲುಗಳನ್ನು ಬೆಳಗಿ ತೋರಿಸುವ, ವಿಮರ್ಶಕರಿಗೆ ಈ ಹಿಂದೆಯೇ ಪರಿ–ಚಿತವಿದ್ದ ಈ ನಾಯಕ ರತ್ನಗಳನ್ನು ವಿಶಿಷ್ಟ ಕೋನದಲ್ಲಿ ಎತ್ತಿ ಪ್ರತಿಭೆಯ ಕ್ರಾಂತ ಕಿರಣವನ್ನು ಚೆಲ್ಲಿ ಅವುಗಳ ಛವಿ–ಛಾಯೆಗಳನ್ನು ತೋರಿಸಿ ಒಂದು ರೀತಿ ವಿಧಾಯಕ ಪುನರ್ವಿಮರ್ಶೆ ಮಾಡಲು ನೆರವಾಗುವ ಪ್ರಯತ್ನವಿದು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯ ವಿಶೇಷ ವ್ಯಾಸಂಗ ವಿಸ್ತರಣೋಪನ್ಯಾಸಗಳ ಸಂಕಲನ. ಉಪನ್ಯಾಸಕರು ಡಾ. ದ. ರಾ. ಬೇಂದ್ರೆ.

"ಮಾತು ಕೃತಿಯಾದೀತು ಮೌನ ಶ್ರುತಿಯಾದಾಗ" ಎನ್ನುವುದು ಅವರ ವಾಣಿ. ಆದರೆ ಅದು ಅಂದತ್ತ ಮಾತೇ ಶ್ರುತಿಯಾದಾಗ ಅದರ ಕೃತಿ ಯಾವ ಆಕೃತಿ ಪಡೆದೀತು ? ಇದಕ್ಕೆ ಈ ಕೃತಿಯೇ ಉತ್ತರ.

ರತ್ನಾಕರ ವರ್ಣಿಯ ಭರತ. ಚಾಮರಸನ ಪ್ರಭುದೇವ, ಲಕ್ಷ್ಮೀಶನ ಶ್ರೀಕೃಷ್ಣ, ಮತ್ತು ಶ್ರೀ ಕುವೆಂಪು ಅವರ ಅಭಿನವ ರಾವಣ ಈ ನಾಲ್ಕು ನಾಯಕ ಪಾತ್ರಗಳೆಂಬ ನಾಲ್ಕು ಜಪಮಣಿಗಳ ಮಾಲೆ ಇದು. ಇಲ್ಲಿ ಜಪಿಸಿದ್ದು ಕನ್ನಡದ ರಸಗಾಯಿತ್ರಿ ಸೂಕ್ತ, "ನನ್ನದು ಈ ಕನ್ನಡ ನಾಡು" ಕವಿ ಬಾಳಬೇಕೋ ವಿಮರ್ಶೆ ತಾಳಬೇಕು. ಎಂಬ ಸೂತ್ರದಲ್ಲಿ ಈ ಮಣಿಗಳನ್ನು ಪೋಣಿಸಿದ್ದಾಗಿದೆ. ಇಲ್ಲಿಯ ವಿಮರ್ಶೆ ತಾಳಿಕೆ

ಯದು. "ನನ್ನ ವಿಮರ್ಶೆಯ ಸಮ್ಯಗತ್ವ, ಕೃತ್ಸ್ನತೆ, ಚತುರಸ್ರ ರೀತಿ ಈ ಬಗೆಯ ದಾಗಿದೆ"ಯೆಂದು ಈ ವಿಮರ್ಶಕ ಪರಕವಿಯ ವಿಜ್ಞಾಪನೆ.

ಒಬ್ಬ ವಿದ್ವಾಂಸ ಇನ್ನೊಬ್ಬ ವಿದ್ವಾಂಸನ ಪರಿಶ್ರಮವನ್ನು ತಿಳಿಯಬಲ್ಲನೆನ್ನುತ್ತಾರೆ. ಆದರೆ ಆತ ಕೊನೆಗೂ ಬರಿ ಪರಿಶ್ರಮವನ್ನಷ್ಟೆ ತಿಳಿಯಬಲ್ಲ. ಕವಿ ಕಾವ್ಯ ರಚಿಸಿದರೆ ಪಂಡಿತನೆ ಅವರ ರಸವನ್ನು ತಿಳಿಯಬಲ್ಲ ಎಂದೂ ಅನ್ನುವದುಂಟು. ಆದರೆ ಇಲ್ಲಿ ಒಬ್ಬ ಪರಕವಿ ಇತರ ಪರಕವಿಗಳ ರಸ ವಿಮರ್ಶೆಗೆ ಅಣಿಯಾಗಿದ್ದಾನೆ. ಈ ಕವಿಯು ಮಹಾ ಪಂಡಿತನೂ ಅಹುದು. ಕಳ್ಳನ ಹೆಜ್ಜೆ ಕಳ್ಳನೇ ಬಲ್ಲನಂತೆ, ಕವಿಯ ಹೆಜ್ಜೆ ಕವಿಯೇ ಬಲ್ಲ.

ಈ ಒಂದೊಂದು ನಾಯಕ ಪಾತ್ರದಲ್ಲಿಯೂ ಬೇಂದ್ರೆಯವರು ಬಾಳಿನ ಮೂಲ ಮೂಲ್ಯಗಳು ಮೂರ್ತೀಭವಿಸಿದ್ದನ್ನು ಕಾಣಿಸಿದ್ದಾರೆ–ಅದೂ ಕವಿಯ ಕ್ರಾಂತದರ್ಶನ ದಿಂದ. ವಿಮರ್ಶಕನ ಅನ್ವಯ ವ್ಯತಿರೇಕಗಳ ಕಾಗುಣಿತ ಗಣಿತದಿಂದ ಅಲ್ಲ. ಇಹ–ದಲ್ಲಿದ್ದೇ ಭವವನ್ನು ಗೆದ್ದವರು. ಲೌಕಿಕರಿಗೆ ಆದರ್ಶ ಪುರುಷರು. ರತ್ನಾಕರನ ಭರತನು ಅಂಥವನು. ಸಂಪೂರ್ಣ ಸಮ್ಯಕ್ ಪುರುಷನು. ಇಲ್ಲಿ ಬೇಂದ್ರೆ ಸಾಹಿತ್ಯದ ಹೊಸ ವ್ಯಾಖ್ಯೆಯೊಂದನ್ನು "ಆಖ್ಯಾನದೊಡಗೂಡಿ ವಿವರಿಸಿ"ದ್ದಾರೆ. "ಇಹಕ್ಕೂ ಪರಕ್ಕೂ ಈ ಸಾಂಗತ್ಯವೇ ಸಾಹಿತ್ಯ. ಇಂಥ ವ್ಯಾಖ್ಯೆ ಅವರ ಮಾತಿನಲ್ಲಿಯೆ ಹೇಳುವದಾದರೆ, "ಜ್ಯೋತಿಯಲಿ ಜಾತಿಯೆ ಹೂತು ಪರಿಮಳಿಸುವೊಲು". ಉಪನ್ಯಾಸಗಳುದ್ದಕ್ಕೂ ಇಂಥ ಕೋಲ್ಮಿಂಚು ಮತ್ತೆ ಮತ್ತೆ ಝುಗಿಝುಗಿಸುತ್ತ ಲೋಕವನ್ನು ಬೆಳಗುತ್ತಿರುವಾಗಲಿ ಲೌಕಿಕ ಕಣ್ಣಿಗೆ ಕತ್ತಲೆ ಕವಿಸುತ್ತವೆ !

ಜೈನರ ತ್ಯಾಗ, ಶೈವರ ಯೋಗ. ವೈಷ್ಣವರ ಭೋಗ ಇವುಗಳ ಅಪೂರ್ವ ಸಂಗಮದಿಂದುಂಟಾದ ಅದ್ಭುತ ರಸಾಯನವೆ ಭರತೇಶ ವೈಭವವೆಂದು ಈ ಕವಿ ವಿಮರ್ಶಕ ತೋರಿಸುತ್ತಾರೆ. ಈ ನಾಯಕರ ಬಗೆಗೆ ಮಾತನಾಡುವಾಗ ಅವರವರ ಧರ್ಮದ ಬಗೆಗೆ ಈ ಲೇಖಕ ಮಾತನಾಡುವದಿಲ್ಲ. ಇಲ್ಲಿ ಅದು ನಾಯಕ ವ್ಯಕ್ತಿಗಿಂತ ಅವರ ತತ್ವವನ್ನು ಆವಿಷ್ಕರಿಸುವದೇ ಬೇಂದ್ರೆಯವರಿಗೆ ಮುಖ್ಯ ಮಾತು. ಅಲ್ಲಮ ಐತಿಹಾಸಿಕ ವ್ಯಕ್ತಿ. ಉಳಿದ ಮೂವರು ಕಾದಂಬರಿಗಳಲ್ಲಿಯ ನಾಯಕರಂತಿದ್ದಾರೆ. ಆದರೆ ಈ ನಾಲ್ಕು ಚರಿತ್ರಗಳು ಲೇಖಕನ ದೃಷ್ಟಿಯಲ್ಲಿ ಒಂದೇ ಸಮಸ್ಯೆಯ ಇತ್ಯ–ರ್ಥದ ಚತುರ್ಮುಖಗಳು.

ಈ ಸಮಸ್ಯೆ ಯಾವದು? ಅದು ಅಹಂಕಾರದ ಸಮಸ್ಯೆ. Ego, Fgoism,Ego mania-ಅಹಂಕಾರವೆಂದರೇನು? ಅದರ ವಿಮೋಚನೆ ಹೇಗೆ? ಎಂಬ ವಿಚಾರವನ್ನು ಈ ನಾಲ್ಕು ಮಹಾಕವಿಗಳು ವಿಭಿನ್ನಯುಗಗಳಲ್ಲಿ ನಿಂತು ವಿಭಿನ್ನ ಧ್ವನಿಯಲ್ಲಿಯೂ ಅಭಿನ್ನವಾಗಿ ಸಾರುತ್ತಿದ್ದಾರೆ. ಈ ನಾಯಕ ಪಾತ್ರಗಳು ಅದನ್ನೇ ಸಾರಿ ಸಾರಿ ಹೇಳು ತ್ತವೆ. ಭರತ ನಿರಹಂಕಾರಿ. ಪ್ರಭುದೇವ ನಿರಹಂಕಾರ ಸುಜ್ಞಾನಿಗಳ ಶಿಶು. ಪರಿತಪಿ ಸುವವರಿಗೆ ಉದ್ಧಾರ, ಅಹಂಕಾರದಿಂದ ಉಬ್ಬಿದವರಿಗೆ ಮಾರ್ಗದರ್ಶನ. ಅಲ್ಲಮ

ಚರಿತ್ರೆಯ ದರ್ಶನ. ಭರತನ ವಿಭೂತಿಗಿಂತ ಅಲ್ಲಮನ ವಿಭೂತಿಮತ್ತ್ವ ಈ ತನ್ನ ಶುದ್ಧ ಐತಿಹಾಸಿಕತೆಯಿಂದ ನಿರತಿಯಶವಾಗಿ ತೋರುವದೆಂದು ಬೇಂದ್ರೆಯವರ ಸಾತಿಶಯವಾದ ತೀರ್ಮಾನ.

ಇನ್ನು ಭರತೇಶ ವೈಭವದ ಭರತದಿಗ್ವಿಜಯದಲ್ಲಿ ಭರತನ ಪಾತ್ರವೇ ಪ್ರಮುಖ. ಭಕ್ತಸಂದರ್ಶನ ದಿಗ್ವಿಜಯದ ಪ್ರಭುಲಿಂಗಲೀಲೆಯಲ್ಲಿ ಅಲ್ಲಮನ ಪಾತ್ರವೇ ಪ್ರಮುಖ. ಆದರೆ ಲಕ್ಷ್ಮೀಶನ ಜೈಮಿನಿ ಭಾರತದ ಅಶ್ವಮೇಧ ದಿಗ್ವಿಜಯದಲ್ಲಿ ? ಪ್ರಮುಖ ಪಾತ್ರ ಧರ್ಮನದು. ಆದರೂ "ಪುಣ್ಯಮಿದು ಶ್ರೀಕೃಷ್ಣ ಚರಿತಾಮೃತಂ"– ಲಕ್ಷ್ಮೀಪತಿಯ ಕಾವ್ಯ ರಚನೆ, ಎಂಬ ಉಕ್ತಿಯಿಂದ ಇಲ್ಲಿ ಶ್ರೀ ಕೃಷ್ಣನದೆ ಪ್ರಮುಖ ಪಾತ್ರವೆಂದು ಬೇಂದ್ರೆ ಅಂಬೋಣ. ಏಕೆಂದರೆ, ಶ್ರೀಕೃಷ್ಣನಿಲ್ಲದೆ ಸಂಧಿಯೇ ಇಲ್ಲ ಜೈಮಿನಿ ಭಾರತದಲ್ಲಿ. ಇಲ್ಲಿ ಕ್ಷಾತ್ರ ಮತ್ತು ಭಕ್ತಿಗಳ ಸಮನ್ವಯ–ಕೃಷ್ಣನಿಗೆ ಇದಿರಾಗುವ ಎಲ್ಲ ಕ್ಷತ್ರಿಯ ರಾಜರೂ ಅವನ ಪರಮ ಭಕ್ತರು. ಕೃಷ್ಣನಲ್ಲಿಯೂ ಅಹಂಕಾರವಿಲ್ಲ. ಇಷ್ಟೇ ಅಲ್ಲ, ಅಹಂಕಾರ ಕಂಡರೆ ಅವನಿಗೆ ಕೆಂಡದಷ್ಟು ಕೋಪ. ಭಕ್ತರ ಮುಂದೆ ಆತ ಅಹಂಕಾರ ಗಲಿತನಾಗುತ್ತಾನೆ–"ತನ್ನ ಸೇವಿಪರ್ಗಳ ಸೇವಕನೆಂಬುದಂ ತೋರುತ". ಅಹಂಕಾರಿಯ ಮನಸ್ಸು ಎಂದಾದರೂ ಕರಗಲು ಸಾಧ್ಯವೇ ?

ಒಟ್ಟಾರೆ ಈ ಮೂರು ಚರಿತ್ರೆಗಳ ವಿಮರ್ಶೆಯಲ್ಲಿ ಚಾತುರ್ಯದ ವಿಶೇಷತೆಯೇ ಚಾರುತ್ವದ ಅಪೂರ್ವತೆ. ಬೇರೆ ಬೇರೆ ಕಾಲಮಾನ ಪರಿಸ್ಥಿತಿಯಲ್ಲಿ ಆವಿರ್ಭವಿಸಿದ ಕಾವ್ಯ ಪ್ರತಿಭೆಯ ಆವಿಷ್ಕಾರಗಳಲ್ಲಿ ಒಂದೇ ತತ್ವದ ಜಾಡನ್ನು ಬೇಂದ್ರೆ ಕಂಡಿದ್ದು ಅವರ ಪ್ರತಿಭೆಯೂ ಅದೇ ಪಾತಳಿಯಲ್ಲಿ ವ್ಯವಹರಿಸುವದೆಂಬುದರ ದ್ಯೋತಕ.

ಈ ಪ್ರತಿಭೆಯು ಕುವೆಂಪು ನಿರ್ಮಿಸಿದ ರಾವಣನ ರಹಸ್ಯವನ್ನು ಉದ್ಘಾಟಿಸುವದರಲ್ಲಿ ಅದ್ಭುತವಾಗಿ ವ್ಯಕ್ತವಾಗಿದೆ. ಒಬ್ಬ ವರಕವಿಯ ವಿದ್ಯೆಯನ್ನು ಇನ್ನೊಬ್ಬ ಸಮಕಾಲೀನ ವರಕವಿ ತೆರೆದು ತೋರಿಸುವ ಅಪೂರ್ವ ಪರ್ವವಿದು–ಬೇಂದ್ರೆ ಕುವೆಂಪು ರಾವಣನ ದರ್ಶನ ನಮಗೆ ಮಾಡಿಸುವದು. "ರಾಮಾಯಣ ದರ್ಶನ"ದಲ್ಲಿ ರಾಮನ ಬಾಣವು ರಾವಣನ ಹೃದಯವನ್ನು ಭೇದಿಸಿದಂತೆ ಈ ನಾಯಕರತ್ನಗಳ ದರ್ಶನದಲ್ಲಿ ಬೇಂದ್ರೆ ಪುಟ್ಟಪ್ಪರ ಕಾವ್ಯ ಪ್ರತಿಭೆಯ ಅಂತರಂಗವನ್ನು ಭೇದಿಸಿ ಹೊರಗೆಡಹಿದ್ದಾರೆ. ಇದು ಅವರ ಸಮ್ಯಕ್ ವಿಮರ್ಶಾ ವಿಚಕ್ಷಣತೆಗೆ ಒಂದು ಸಂದೋಹಕವಾದ ಸಾಕ್ಷಿ.

ಬೇಂದ್ರೆಯವರ ಮತದಂತೆ 'ಶ್ರೀ ರಾಮಾಯಣ ದರ್ಶನ' ರಾವಣ ದರ್ಶನವಲ್ಲ. ಇಲ್ಲಿ ಪ್ರತಿನಾಯಕ ರಾವಣನ ಉದಾತ್ತೀಕರಣದ ಕಲ್ಪನೆಗೆ ಎಡೆ ಇಲ್ಲ. ರಾವಣನ ಅಹಂಕಾರದ ಪದರು ಪದರು ಬಿಚ್ಚಿ ತೋರಿಸಿ ಅವನ ಹೃದಯ ಪರಿವರ್ತನವನ್ನು ಕಾಣಿಸುವದೇ ಈ ಕಾವ್ಯದ ದರ್ಶನವಾಗಿದೆ. ಎಂಬುದನ್ನು ಬೇಂದ್ರೆ ಪದರು ಪದರಾಗಿ ಬಿಚ್ಚಿ ತೋರಿಸಿದ್ದಾರೆ.

ಕೊನೆಗೂ ರಾಮಾಯಣವಾದದ್ದೇ ರಾವಣನಿಂದ ವಿಶೇಷತಃ ಅದರ ಉತ್ತರಾರ್ಧ. ರಾವಣನಿಂದಲೇ ರಾಮನ ಸತ್ವ ಕ್ರಿಯಾಸಿದ್ಧಿ ವ್ಯಕ್ತಿತ್ವ ಎಲ್ಲ ಲೋಕಕ್ಕೆ ಪ್ರಕಟ

ಪಾಯಿತು. ಈ ರಾವಣನ ಹೃದಯ ಪರಿವರ್ತನೆ ಕುವೆಂಪು ಅವರ ದರ್ಶನಸಿದ್ಧಿ. ಸೀತೆಯನ್ನು ಅಪಹರಿಸುವವರೆಗಿನ ಕಾಮೋದ್ವೇಗ ಇಳಿದು ಅಳಿದು, ಅವಳಲ್ಲಿ ಮಾತೃತ್ವ ದೇವತ್ವಗಳನ್ನು ಕಾಣುವಂತೆ ಆತ ಮಾರ್ಪಡುವನು. ಮಂಡೋದರಿಯಲ್ಲಿ ತನ್ನ ಈ ಮಾರ್ಪಾಟದ ಮುರುಕವನ್ನು ತೋಡಿಕೊಳ್ಳುವನು.

ಕುವೆಂಪು ಕಾವ್ಯದ ಮಹೋನ್ನತಿ ಯಾವದು? ದಶಾನನನ ಸ್ವಪ್ನಸಿದ್ಧಿ, ರಾವಣ ನಿಗೆ ಲಂಕಾಲಕ್ಷ್ಮಿಯ ದರ್ಶನ, ಅವಳಿಂದ ವರದಾನ: ಪುನರ್ಜನ್ಮದಲ್ಲಿ ರಾವಣ ರಾಮನ ಗೆಲ್ಲುವನು. ಸೀತೆ ಆಲಿಂಗಿಸುವಳು, ಚುಂಬಿಸುವಳು, ಎದೆಗೊತ್ತುವಳು ಅಂದರೆ ರಾವಣ ಕುಂಬಕರ್ಣರೇ ಮುಂದೆ ಸೀತೆಯಲ್ಲಿ ಲವಕುಶರಾಗಿ ಹುಟ್ಟುವರೆಂಬ ಕಣಸೊಂದು ಈ ಕನಸಿನಲ್ಲಿ ಕುವೆಂಪುಗಳ ರಾವಣ ಕಾಣುತ್ತಾನೆ. ಸ್ವಪ್ನದರ್ಶನದಲ್ಲಿ ಈ ಜನ್ಮದಲ್ಲಿ ಆಗದ ಬಿಡುಗಡೆ, ಕಾಮಾಹಂಕಾರಗಳಿಂದ ವಿಮೋಚನೆ, ಪುರುಜನ್ಮದಲ್ಲಿ ಆಯಿತು. "ಭವಾಂತರವಿಲ್ಲದೆ ಭಾವಾಂತರವಿಲ್ಲ" ಅದಕ್ಕಾಗಿ ರಾವಣನ ಆತ್ಮಸಮರ್ಪಣೆ ರಾಮನ ಆತ್ಮದಲ್ಲಿ ಅಡಗಿದ ರಾವಣನ ಚಿತ್ರ ಅತ್ಯಂತ ಹೃದಯಸ್ಪರ್ಶಿ. ಅದರ ಈ ವಿಮರ್ಶೆಯೂ ಅಷ್ಟೇ ಪಾರದರ್ಶಿ.

ಈ ಬಗೆಯ ವಿಮರ್ಶೆಯಲ್ಲಿ ಬೇಂದ್ರೆ ಇಹಪರ ಸಂಬಂಧವನ್ನು ಹೇಳುವದೇ ಸಾಹಿತ್ಯದ ಕಾರ್ಯವೆಂಬ ತತ್ವವನ್ನ ತಳಹದಿಗೆ ಇಟ್ಟುಕೊಂಡಿದ್ದಾರೆ. ನಾಲ್ಕೂ ಕವಿಗಳು ಅಹಂಕಾರ ನಿರಹಂಕಾರದ ಪ್ರಶ್ನೆಯನ್ನೆ ತಮ್ಮತಮ್ಮ ಪರಿಯಲ್ಲಿ ಪರಿಶೀಲಿಸಿ ದ್ದಾಗಿ ತೋರಿಸಿ ಅವರು ತಮ್ಮ ಚತುರಸ್ರ ರೀತಿಯ ವಿಮರ್ಶಾ ವೈಖರಿಯನ್ನು ಕಾಣಿ ಸಿದ್ದಾರೆ.

ಜತೆಗೆ ಕುವೆಂಪುಗಳ ಬಗಗೆ ಒಂದು ಸಾಮಾನ್ಯ ಭ್ರಮೆಯ ನಿರಸನ ಮಾಡಿದ್ದು ಸಾಹಿತ್ತಿಕ ವೈಚಾರಿಕತೆಯ ಪ್ರಾಮಾಣಿಕತೆಗೆ ದೊಡ್ಡ ಕಾಣಿಕೆ. 'ಶೂದ್ರ ತಪಸ್ವಿ' 'ಜಲಗಾರ' 'ಬೆರಳಿಗೆ ಕೊರಳ್' ಇತ್ಯಾದಿ ಕೃತಿ ರಚಿಸಿದ ಕವಿ ಏನೇನೋ ಸಂಪ್ರ ದಾಯ ವಿರುದ್ಧ ಬರೆಯುತ್ತಿದ್ದಾರೆ—ಎಂಬ ಭಾವ ಸ್ಥಿರವಾಗಿ ಕುವೆಂಪು ದುರಂತ ರಾವಣನನ್ನು ಶ್ರೀ ರಾಮಾಯಣ ದರ್ಶನದಲ್ಲಿ ಚಿತ್ರಿಸಿದ್ದಾರೆಂಬುದು ತಪ್ಪು ಕಲ್ಪನೆ. ವಾಲ್ಮೀಕಿಯ ರಾವಣ, ಜೈನ ಕವಿಗಳ ರಾವಣ, ಬಿ. ಎಂ. ಶ್ರೀಯವರ ರಾವಣರಂತೆ ಕುವೆಂಪು ರಾವಣನೂ ಬೇರೆಯೇ. ರಾವಣನು ಸಣ್ಣ ತಪ್ಪಿಗಾಗಿ ದೊಡ್ಡ ಪ್ರಾಯ ಶ್ಚಿತ್ತವನ್ನು ಪಡೆದು ಸರ್ವರ ಕರುಣೆಗೆ, ಅಂತೆಯೆ, ಅಭಿಮಾನಕ್ಕೆ ಪಾತ್ರನಾಗಬೇಕಾದ ನಾಯಕನಲ್ಲ ಇಲ್ಲಿ ಯಾವ ದುರಂತವೂ ಕರುಣೆಗೆ ಶರಣು ಹೋಗುವದಿಲ್ಲ.

ಬೇಂದ್ರೆಯವರ ಮತದಂತೆ ಕುವೆಂಪು ತಮ್ಮ ದರ್ಶನಕ್ಕೆತಗಲುವಂತೆ ಪಾತ್ರ ರಚನೆ ಬದಲಾಯಿಸಿದ್ದಾರೆ. ವಾಲ್ಮೀಕಿಯ ಕಥೆ. ಅರವಿಂದರ ಕಾವ್ಯಾಭ್ಯಾಸ ತತ್ವ ಜ್ಞಾನಗಳು ಪೋಷಕವಾಗಿದ್ದು, ಕುವೆಂಪು ಅವರ ಸ್ವತಂತ್ರ ಪ್ರಜ್ಞೆಯಿಂದ ಈ ಬೃಹತ್ ಕಾವ್ಯದ ಮಹಾದರ್ಶನ ಸೃಷ್ಟಿಯಾಗಿದೆ-ಎಂಬುದನ್ನು ಸುಸ್ಪಷ್ಟವಾಗಿ ಪ್ರತಿ ಪಾದಿಸಿದ್ದೇ ಈ ಉಪನ್ಯಾಸ ಸಂಕಲನದ ವಿಶಿಷ್ಟತೆ ಮತ್ತು ವೈಚಾರಿಕ ಮೌಲ್ಯ.

ಆದರೆ ಇಲ್ಲಿ ಒಂದು ಜಿಜ್ಞಾಸೆ–ಅಥವಾ ಶಂಕೆ. ಬೇಂದ್ರೆಯವರ ಉಜ್ಜ್ವಲ ಪ್ರತಿಭಾವಿನ್ಯಾಸ ವಾಗ್ವಿಲಾಸಗಳ ಹಾಸುಬೀಸಿನಲ್ಲಿ ಸೆರೆಯಾದ ನಮ್ಮ ಚಕಿತಚಿತ್ತ ಆ ಸಂಮೋಹನದಿಂದ ಹೊರಬಂದಾಗ ಒಂದೆರಡು ಕಡೆಗೆ ಮೊಸರಲ್ಲಿ ಹರಳುಸಿಕ್ಕಂತೆ ಅಸ್ವಸ್ಥವಾಗುತ್ತದೆ. ಲಕ್ಷ್ಮೀಶನ ಭಕ್ತಿ ಏನೇ ಇರಲಿ, ಆತ ಶ್ರೀ ಕೃಷ್ಣನನ್ನೇ ತನ್ನ, ಕಾವ್ಯದ ಕೇಂದ್ರ ವ್ಯಕ್ತಿಯಾಗಿ ತಾನೇನೋ ಭಾವಿಸಿ ಇರಲಿ ಬಿಡಲಿ, ಜೈಮಿನಿ ಭಾರತದ ಹಲವಾರು ಆಖ್ಯಾನಗಳಿಗೆ ಅಲ್ಲಲ್ಲಿ ಪ್ರತಿನಾಯಕರು ಬೇರೆ ಅದರೂ ಅರ್ಜುನನೇ ನಾಯಕನೆನ್ನಬೇಕು. ಅರ್ಜುನನ ಬೆನ್ನಿಗೆ ಶ್ರೀಕೃಷ್ಣ ಒಂದು ಆಧಾರಶಕ್ತಿಯಾಗಿ ನಿಂತಿರ ಬಹುದು. ಇನ್ನು ಆ ಕಾವ್ಯದಲ್ಲಿ ಬಂದ ಒಂದೊಂದು ಕಥೆಯನ್ನು ಬಿಡಿಯಾಗಿ ಸವಿದರೆ ಅಲ್ಲಲ್ಲಿಯ ಸುಧನ್ವ. ಬಭ್ರುವಾಹನರಂಥ ಪಾತ್ರಗಳೇ ನಾಯಕರಾಗಿ ಅರ್ಜುನನೇ ಪ್ರತಿ ನಾಯಕನಾಗಿರುವಂತೆ ಭಾಸವಾಗುವದು. ಈ ಕಾವ್ಯಕ್ಕೆ ಕೃಷ್ಣನೇ ನಾಯಕ ರತ್ನನೆಂದರೆ ಮಹಾಭಾರತಕ್ಕೆ ಭೀಷ್ಮನೇ ನಾಯಕನೆನ್ನಬಾರದೇಕೆ ? ಇಲ್ಲಿ ನಾಯಕತ್ವದ ವ್ಯಾಖ್ಯೆಯೇನು ? ಭರತ ಅಲ್ಲಮ ರಾವಣರಂತೆ ಕೃಷ್ಣ ಪ್ರತ್ಯಕ್ಷ ಕಾವ್ಯದ ಸಂವಿಧಾನಕದಲ್ಲಿ ನಾಯಕ ರತ್ನನಾಗಿ ನಿಲ್ಲುವನೇ ?

"ಶಾಕುಂತಲ"ದಲ್ಲಿ ಇಂದ್ರನ ಪಾತ್ರವನ್ನು ಸಂವಿಧಾನಕದುದ್ದಕ್ಕೂ ಕಂಡು ಕಾಣಿಸಿದ ಬೇಂದ್ರೆಯವರ ಕ್ರಾಂತ ದೃಷ್ಟಿಗೆ ಜೈಮಿನಿ ಭಾರತದಲ್ಲಿ ಕೃಷ್ಣನೇ ನಾಯಕ ಪಾತ್ರನಾಗಿ ಕಾಣಿಸಿಕೊಂಡದ್ದು ಸೋಜಿಗವಲ್ಲ. ಒಂದು ತಥ್ಯ (Conciept) ದ ಭೃಂಗದ ಬೆನ್ನೇರಿ ಹೊರಟು ಕವಿ ಕಾಣದ್ದನ್ನೂ ಈ ವಿಮರ್ಶಕ ಕವಿ ಕಾಣು ತ್ತಾನೆ. ಭಗವದ್ಗೀತೆಯ ವಿರಾಟ್ ಪುರುಷನ ಬಾಯಿಯಲ್ಲಿ ವ್ಯಾಸನೂ ಕಾಣಿಸದ ಅಭಿಮನ್ಯುವಧೆಯನ್ನು ಬೇಂದ್ರೆ ಕಂಡಿದ್ದಾರೆ ! ಅಹಂಕಾರ ನಿರಹಂಕಾರದ ಸಮಸ್ಯೆಯ ವಿನ್ಯಾಸವನ್ನೂ ವಿಸ್ತರಿಸಲು ಹೊರಟಾಗ ನಾಲ್ಕೂ ಕಾವ್ಯಗಳ ಕೇಂದ್ರ ಕಲ್ಪನೆಗಳು ಅದಕ್ಕೆ ಹೊಂದಿಸಿ ಕಾಣಿಸುವ ಚತುರಸ್ರರೀತಿಯ ಚತುರತೆಯನ್ನು ಬೇಂದ್ರೆಯವರು ಪ್ರಕಟಿಸಿದ್ದು ಅವರಿಗೆ ಸ್ವಭಾವ ಸಹಜವೇ. ಆದರೆ ವಿಮರ್ಶಕನ ಇಷ್ಟವೇ ಕವಿಯ ಉದ್ದಿಷ್ಟವಿರಬಹುದೇ ?

ಇನ್ನೊಂದು ವಿಚಾರ: ರಾವಣನ ಹೃದಯ ಪರಿವರ್ತನೆ-ಅದನ್ನೊಳಗೊಂಡ ಅವನ ಸ್ವಪ್ನದರ್ಶನ ತುಂಬ ಮೌಲಿಕ, ಮಾರ್ಮಿಕ. ಆದರೆ ಔಚಿತ್ಯದ ತತ್ವಕ್ಕೆ ಅನುಸಾರವಾಗಿ ಈ ಎಲ್ಲ ವಿನ್ಯಾಸದ ಮರ್ಮವೇನು? ರಾವಣ–ಕುಂಭಕರ್ಣರು ಸೀತೆಯ ಹೊಟ್ಟೆಯಲ್ಲಿ ಲವ–ಕುಶರಾಗಿ ಹುಟ್ಟಿ ಬಂದರೆಂಬುದಾಗಿ ಚಿತ್ರಿಸಿದಾಗ ಅದೊಂದು ಚಮತ್ಕಾರ ಕೌತುಕವಾಗಿ ಅನಿಸುವದು. ಆದರೆ ಇಲ್ಲಿ ಕುಂಭಕರ್ಣ ಕುಶನಾಗುವದೇಕೆ ? ಅವನು ಸೀತೆಯ ಕುರಿತು ಯಾವ ಅಪೇಕ್ಷೆ–ಆಕಾಂಕ್ಷೆ ಇಟ್ಟುಕೊಂಡವನು ? ಅವನಿಗೇಕೆ ಈ ವಿಕಾರಿ ಪುನರ್ಜನ್ಮ ?

ಅಲ್ಲದೆ ರಾವಣನಿಗೂ ಈ ಪುನರ್ಜನ್ಮ ಶಾಪವೋ ವರವೋ ? ಸೀತೆಯು ಅಪ್ಪಿ ಮುದ್ದಾಡಬೇಕೆಂಬ ಅವನ ಆಸೆಗೆ ಈ ಬರಿ ಪೂರೈಕೆ ನ್ಯಾಯವೇ ?

ಸಾಧುವೇ ? ಭವಾಂತರದಲ್ಲಿ ಪೂರ್ವ ವಿಸ್ಮೃತಿ ಇರುವದಾದರೆ ಲವನಾಗಿ ಸೀತೆಯ ತೋಳ ತೆಕ್ಕೆಯಲ್ಲಿರುವದು ರಾವಣನಿಗೆ ಯಾವ ಇಚ್ಛಾಪೂರ್ತಿಯೂ ಅಲ್ಲ. ಇನ್ನು ಲವನಾದಾಗಲೂ ಹಿಂದಿನ ಜನ್ಮದ ನೆನಪು ಇದ್ದಿರುವದಾದರೆ ಲವನು ಭೋಗಿಸುವದೊಂದು ವಿಕಾರಿ ವಾತ್ಸಲ್ಯ. ಮತ್ತು ರಾವಣನ ಸಂತೃಕೆಯು ಮುಟ್ಟಿಗೆಇದು ಸೀತೆಯ ಶೀಲಹನನ. ಉಭಯ ಪಕ್ಷಕ್ಕೂ ಈ ಭವಾಂತರ ಭಾವಾಂತರಗಳಲ್ಲಿ ಯಾವ ಔಚಿತ್ಯವೂ ಇಲ್ಲ.—ಕುಂಭಕರ್ಣನಿಗೆ ಅಪ್ರಸ್ತುತ. ರಾವಣನಿಗೆ ಅಪ್ರಶಸ್ತ ! ಒಟ್ಟಾರೆ ಈ ಕವಿಕಲ್ಪನೆ ಎಷ್ಟೇ ಕುತೂಹಲ ಕೆರಳಿಸುವುದಾದರೂ ಅನೌಚಿತ್ಯದ ಒಂದು ವ್ಯಾಯಾಮ. ಆದರೆ ಬೇಂದ್ರೆ ಈ ದೃಷ್ಟಿಯಿಂದ ಇದನ್ನು ವಿಮರ್ಶಿಸಲು ಹೊರಡಲೇ ಇಲ್ಲ.

ಆದಾಗ್ಯೂ ಕುವೆಂಪು ಕಾವ್ಯದ ಒಂದು ಅಂಶದ ಬಗೆಗೆ ಬೇಂದ್ರೆಯವರ ಸಮೀಕ್ಷೆಗೆ ಒಂದು ಚಾರಿತ್ರಿಕ ಮಹತ್ವ ಇದ್ದೇ ಇದೆ. ಈ ಗ್ರಂಥದ ಕೊನೆಯ ಪರಿಚ್ಛೇದ ಗದ್ಯ ಕಾವ್ಯದಂತಿದೆ. ತುಂಬ ಸಾಂಕೇತಿಕ ಸಂಭಾರದಿಂದ ತುಂಬಿದೆ. ಕಾವ್ಯ, ತತ್ವ, ಭಕ್ತಿ ಅನುಭಾವ, ಸಮಕಾಲೀನ ಪರಿಸರ, ಆತ್ಮಕಥನದ ಅಂಶ, ಸ್ಥಲನಾಮಸಂಕೇತ—ಎಲ್ಲವೂ ಬೆರೆತು ಎರಕವಾಗಿ ಪಾಕಗೊಂಡು ಒಂದು ಅಪೂರ್ವ ದರ್ಶನಧ್ವನಿಯನ್ನು ಒಡಮೂಡಿಸಿದೆ. ಬೇಂದ್ರೆಯವರ ಸ್ವಚ್ಛಂದ ಸುಂದರವೂ, ಬಂಧವಿರದ ಬಂಧುರವೂ ಆದ ಧ್ವನಿನಿಬಿಡ ಗದ್ಯಶೈಲಿಗೆ ಈ ಕೃತಿ ಉತ್ಕೃಷ್ಟ ಉದಾಹರಣೆ. ಈ ಗುಣಾತಿಶಯದಿಂದಲೇ ಈ ಗ್ರಂಥದ ಬಹುಭಾಗ ಅನುವಾದಕ್ಕೆ ಒಗ್ಗುವಂತಿಲ್ಲ. ಇದು ಗುಣವೋ ದೋಷವೋ ಹೇಳುವಂತಿಲ್ಲ. "ವಿಚಾರಮಂಜರಿ", "ಸಾಹಿತ್ಯ ಸಂಶೋಧನೆ" ಮುಂತಾದ ಕೃತಿಗಳ ನಂತರ ಕೆಲವು ದಶಕಗಳ ಮೇಲೆ ಈ ಗ್ರಂಥವು ಬೇಂದ್ರೆಯವರ ವಜ್ರಸೂಚಿ ಗದ್ಯಕ್ಕೆ ಹೊಸ ಪರಿಚಾಯಕವಾಗಿ ಬಂದಿದೆ. ಅವುಗಳಿಗಿಂತ ಇದು ಹೆಚ್ಚು ಸುಗಮ—ಮೂಲತಃ ಉಪನ್ಯಾಸಗಳಾಗಿದ್ದರಿಂದ. ಆದರೂ ಇವುಗಳ ಹಿಂದಿನ ಪಾಂಡಿತ್ಯ ಪ್ರಜ್ಞೆ ವಿದ್ಯುಚ್ಛಕ್ತಿ ಹಿಂದಿನ ತನ್ನ ಯಾವ ಸತ್ವವನ್ನು ಹುರಿ ಹರಿತಗಳನ್ನೂ ಕಳೆದುಕೊಂಡಿಲ್ಲ.

—ಗೌರೀಶ ಕಾಯ್ಕಿಣಿ

# ಸಾದರ ಸ್ವೀಕಾರ

೧. **ನಮ್ಮ ಹಳ್ಳಿಯ ಕಥೆಗಳು** (ಜಾನಪದ ಸಂಗ್ರಹ) :
ಸಂ: ಕೆ. ವಿರುಪಾಕ್ಷಗೌಡ ಮತ್ತು ಕಲ್ಲೇಶ ಇಟ್ಟಿಗಿ; ಪ್ರ. ಶ್ರೀ ಕೊಟ್ಟೂರೇಶ ಪ್ರಕಾಶನ. ಪೋ: ಬಾಚಿಗೊಂನಡಹಳ್ಳಿ, ಹಗರಿಬೊಮ್ಮನಹಳ್ಳಿ, (ಬಳ್ಳಾರಿ: ಜಿ); ಪುಟ: ೯೧; ಬೆಲೆ: ಎರಡು ರೂಪಾಯಿ; ೧೯೭೩.

೨. **ಅಕ್ಷಯ ನಿಧಿ** (ವಿಮರ್ಶಾತ್ಮಕ ಪ್ರಬಂಧ ಸಂಗ್ರಹ) ;
ಲೇ: ಜಿ. ಆರ್. ಬ್ಯಾಕೋಡ; ಪ್ರಕಾಶಕರು: ಅರವಿಂದ ಪ್ರಕಾಶನ, ವಿಜಾಪುರ; ಪುಟ: iv + ೧೫೪; ಬೆಲೆ: ಐದು ರೂಪಾಯಿ: ೧೯೭೨.

೩. **ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು** (ಭಾಗ : ೧) :
ಲೇ: ಕೃಷ್ಣನಾಯಕ್; ಪ್ರಕಾಶಕರು: .ಕೆ. ಸಿ. ಶಿವಪ್ಪ, ಕೊ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧; ಪುಟ: XI + ೪೯೦; ಬೆಲೆ: ಏಳು ರೂಪಾಯಿ; ೧೯೭೧ .

೪. **ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು** (ಭಾಗ : ೨) :
ಲೇ: ಟಿ. ಎಸ್. ವಿಜಯಪ್ಪ; ಪ್ರ: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧; ಪುಟ: viii + ೨೪೦; ಬೆಲೆ: ನಾಲ್ಕೂವರೆ ರೂಪಾಯಿ; ೧೯೭೧.

೫. **ಭ್ರಮರ** (ಕವನ ಸಂಕಲನ):
ಲೇ: ಸಂಗಮೇಶ ಬಿರಾದಾರ; ಪ್ರ: ಸಾವಿತ್ರೀಪ್ರಕಾಶನ, ತುಂಗಳ, ತಾ. ಜಮಖಂಡಿ, ಜಿ. ಬಿಜಾಪುರ; ಪುಟ: vi + ೭೪ ; ಬೆಲೆ: ಎರಡು ರೂಪಾಯಿ ಇಪ್ಪತ್ತೈದುಪೈಸೆ; ೧೯೬೯.

೬. **ಸಿಂದಿ ಬನದಲ್ಲಿ ಸಿಕ್ಕವಳು** (ಕಾದಂಬರಿ) :
ಲೇ: ಸುಬ್ಬಣ್ಣ ಅಂಬೆಸಂಗೆ; ಪುಟ: ೬೯. ಬೆಲೆ: ಒಂದೂವರೆ ರೂಪಾಯಿ; ೧೯೭೨.

೭. **ಮಾರಿ – ಮಹೇಶ್ವರಿ** :
ಸಂ: ಕೊ. ಪ. ವಿಶ್ವನಾಥ್ ಮತ್ತು ಕೆ. ಎಸ್. ಲಿಂಗಣ್ಣ ; ಪ್ರ: ದೇವಿ ಪ್ರಕಾಶನ, ಗೌರಸಮುದ್ರ, ತಾ. ಚಳ್ಳಕೆರೆ, ಜಿ: ಚಿತ್ರದುರ್ಗ: ಬೆಲೆ: ಎರಡು ರೂಪಾಯಿ ಇಪ್ಪತ್ತೈದು ಪೈಸೆ; ಪುಟ: ೩೫ : ೧೯೭೨.

೮. **ಕೃಷಿ** (ಕವನ ಸಂಕಲನ) :
ಲೇ: ಗೋವಿಂದರಾಜು; ಪ್ರ: ಶ್ರೀವತ್ಸ ಪ್ರಕಾಶನ, ಬೆಂಗಳೂರು: ಪುಟ: ೫೦ : ಬೆಲೆ: ಮೂರು ರೂಪಾಯಿ, ೧೯೭೩.

# ಸಂಪಾದಕೀಯ

ಇದು ಕರ್ನಾಟಕ ಭಾರತಿಯ ಆರನೆಯ ವರ್ಷದ ಎರಡನೆಯ ಸಂಚಿಕೆ. ಲೇಖಕರ ಆಶೋತ್ತರಗಳ ಎತ್ತರದಲ್ಲಿ ನಡೆದು ಬರುತ್ತಿರುವ 'ಭಾರತಿ'ಯ ಶ್ರೇಯಸ್ಸಿಗೆ ಕಾರಣ ಇದರ ಲೇಖಕರು ಮತ್ತು ಓದುಗರು. ರಾಜ್ಯದ ನಾಮಕರಣಮಹೋತ್ಸವದ ಶುಭ ಪ್ರಸಂಗದಲ್ಲಿ ತನ್ನ ಈ ಬಳಗಕ್ಕೆ 'ಭಾರತಿ' ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

### 'ಕರ್ನಾಟಕ' ನಾಮಕರಣ

ಮಹಾರಾಷ್ಟ್ರ, ತೆಲುಗು, ತಮಿಳು, ಕೇರಳ ರಾಜ್ಯಗಳಲ್ಲಿ; ಹತ್ತಾರು ಸಂಸ್ಥಾನಿಕರ ವಶದಲ್ಲಿ ಒಡೆದುಹೋಗಿದ್ದ ತಮ್ಮ ನಾಡು, ೧೯೫೬ ನವ್ಹೆಂಬರ್ ೧ ರಂದು ಏಕೀಕರಣ ಗೊಂಡಿತು; ಆದರೆ ನಾಡಿನ ನಿಜನಾಮವಾದ 'ಕರ್ನಾಟಕ'ವನ್ನು ಕೈಬಿಟ್ಟು 'ಮೈಸೂರು' ಎಂದು ಹೆಸರಿಟ್ಟರು. ಇದರಿಂದ 'ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ' ಎಂಬ ಸ್ಥಿತಿ ಪ್ರಾಪ್ತವಾಗಲು, ಕನ್ನಡ ಕುಲಕೋಟಿ ನಾಡಿನ ಪುನರ್ನಾಮಕರಣಕ್ಕೆ ಹೋರಾಟ ನಡೆಸಿ ೧೭ ವರ್ಷಗಳ ತರುವಾಯ ಜಯಗಳಿಸಿತು. ಇದೇ ನವ್ಹಂಬರ ೧ ರಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ನಾಡಿಗೆ 'ಕರ್ನಾಟಕ' ಎಂದು ನಾಮಕರಣ ಮಾಡಿ ನಾಡಿನ ಚರಿತ್ರೆಯಲ್ಲಿ ಒಂದು ಐತಿಹಾಸಿಕ ಘಟನೆಯನ್ನು ಸ್ಥಾಪಿಸಿದರು; ಕನ್ನಡಿಗರ ಅಂತರಂಗದ ಅಭೀಪ್ಸೆಯನ್ನು ಈಡೇರಿಸಿದರು. ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ, ಬೆಂಬಲಿಸಿದ ನಾಯಕವ್ಯಕ್ತಿಗಳಿಗೆ 'ಕರ್ನಾಟಕ ಭಾರತಿ' ಅಭಿನಂದನೆಗಳನ್ನು ಸಲ್ಲಿಸುತ್ತದೆ.

### ನೂತನ ಕುಲಪತಿಗಳಿಗೆ ಸ್ವಾಗತ

ಶ್ರೀಮತಿ ಜಯಲಕ್ಷ್ಮಮ್ಮಣ್ಣಿ ಅವರು ಕೆಲವುದಿನಗಳ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡರು. ವಿದ್ವತ್ತು, ಕಾರ್ಯತತ್ಪರತೆ, ಔದಾರ್ಯಗಳಿಗೆ ಹೆಸರಾದ ಮಾನ್ಯ ಕುಲಪತಿಗಳ ಅಧಿಕಾರಾವಧಿಯಲ್ಲಿ ನಮ್ಮ ವಿಶ್ವವಿದ್ಯಾಲಯ ಉತ್ತರೋತ್ತರ ಬೆಳೆಯುವುದೆಂಬ ಭರವಸೆ ನಮಗಿದೆ. ಅವರಿಗೆ ಅಂಥ ರಚನಾತ್ಮಕಶಕ್ತಿಯನ್ನು ದೇವರು ದಯಪಾಲಿಸಲೆಂದು ಹಾರೈಸಿ 'ಭಾರತಿ' ಹೃತ್ಪೂರ್ವಕ ಸ್ವಾಗತ ಕೋರುತ್ತದೆ.

### ಡಾ. ಕಾರಂತ, ಶ್ರೀಮತಿ ಹಾನಗಲ್ಲ ಅವರಿಗೆ ಗೌರವ

ಕಡಲತೀರದ ಭಾರ್ಗವ ಶ್ರೀ ಶಿವರಾಮ ಕಾರಂತ ಕನ್ನಡದ ಒಂದು ಮಹಾ ಸಂಪತ್ತು. ಅವರು ಕನ್ನಡಕ್ಕೆ ಮಾಡಿದ ಕಾರ್ಯಗಳು ನೂರುನೂರು; ಅವರಿಗೆ ಸಂದ ಪುರಸ್ಕಾರಗಳೂ ನೂರುನೂರು. ಈ ಪುರಸ್ಕಾರಗಳಿಗೆ ಕಳಸವಿಟ್ಟಂತೆ ಸಂಗೀತ ನಾಟಕ ಅಕಾಡೆಮಿ ಈ ವರ್ಷದ ಫೆಲೋಶಿಪ್ ಗೌರವನೀಡಿ ತನ್ನ ಗೌರವವನ್ನು ಹೆಚ್ಚಿಸಿ

ಕೊಂಡಿದೆ. ಕಾರಂತರಿಗೆ ಇದಕ್ಕಿಂತ ಘನಗೌರವಗಳು ಪ್ರಾಪ್ತವಾಗಲಿ ಎಂದು 'ಭಾರತಿ' ಹಾರೈಸುತ್ತದೆ.

ಕರ್ನಾಟಕದ ಸಂಗೀತಕಲಾವಿದರಲ್ಲಿ ಶ್ರೀಮತಿ ಗಂಗೂಬಾಯಿ ಹಾನಗಲ್ಲ ಒಬ್ಬರು. ಪಿತ್ರಾರ್ಜಿತ, ಸ್ವಾರ್ಜಿತ ಸಂಗೀತಕಲೆಯ ಮಹಾನಿಧಿಯಾದ ಇಂಥವರಿಂದ ನಮ್ಮ ನಾಡಿಗೆ ಒಂದು ಹೆಸರು. ಈ ಕಲಾಸಂಪತ್ತನ್ನು ಗುರುತಿಸಿ ನಮ್ಮ ಕೇಂದ್ರಸರಕಾರ ಪದ್ಮಭೂಷಣ ಪ್ರಶಸ್ತನೀಡಿದ ಕೆಲವೇ ದಿನಗಳ ತರುವಾಯ ಅವರಿಗೆ ಸಂಗೀತ ನಾಟಕ ಅಕಾಡೆಮಿ ಈ ವರ್ಷದ ಗೌರವ ನೀಡಿದೆ. ಇಂಥ ನೂರು ಗೌರವಗಳು ಶ್ರೀಮತಿ ಹಾನಗಲ್ಲ ಅವರಿಗೆ ಲಭಿಸಲಿ ಎಂದು 'ಭಾರತಿ' ಹಾರೈಸಿ ಅವರನ್ನು ಅಭಿವಂದಿಸುತ್ತದೆ.

## ಸಿದ್ಧವನಹಳ್ಳಿ ಕೃಷ್ಣಶರ್ಮ ಮತ್ತು ತಾತಾಚಾರ್ಯ ಶರ್ಮರ ನಿಧನ

ಹಿರಿಯ ತಲೆಮಾರಿನ ಕನ್ನಡ ಸಾಹಿತಿಗಳಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರದು ಎದ್ದುಕಾಣುವ ಹೆಸರು. ಗಾಂಧೀಜಿಯವರ ಪರಮ ಆರಾಧಕರಾಗಿ ಕರ್ನಾಟಕದಲ್ಲಿ ಗಾಂಧೀಸಾಹಿತ್ಯಕ್ಕೆ ಒಂದು ಉಚಿತಸ್ಥಾನವನ್ನು ಒದಗಿಸಿಕೊಟ್ಟ ಇವರ ಗ್ರಂಥಸಾಹಿತ್ಯ ಪತ್ರಿಕಾಸಾಹಿತ್ಯ ಕನ್ನಡಕ್ಕೇ ಅಪಾರನಿಧಿಯಾಗಿವೆ. ಇಂಥ ವಿದ್ವಾಂಸರ ನಿಧನದಿಂದ ನಮ್ಮ ನಾಡು ಶೋಕದಲ್ಲಿ ಮುಳುಗಿದೆ. 'ಭಾರತಿ' ಈ ಹಿರಿಯ ಜೀವಿಯ ಆತ್ಮಕ್ಕೆ ಶಾಂತಿ ಕೋರುತ್ತದೆ.

ಪತ್ರಿಕೋದ್ಯಮದ ಭೀಷ್ಮಾಚಾರ್ಯ ಎನಿಸಿದ ಟಿ. ಟಿ. ಶರ್ಮ ಅವರು ಕೆಲವು ದಿನಗಳ ಹಿಂದೆ ನಿಧನರಾದುದು ಕನ್ನಡಲೋಕಕ್ಕೆ ತುಂಬಲಾರದ ಹಾನಿಯಾಗಿ ಪರಿಣಮಿಸಿದೆ. ಶಾಸನ, ಸಾಹಿತ್ಯ, ಪತ್ರಿಕೋದ್ಯಮಗಳಲ್ಲಿ ಸಿಂಹಸಾಹಸ ಮೆರೆದ ಶ್ರೀ ಶರ್ಮರ ಸೇವೆ ಅಮೋಘವಾದುದು. ಇವರ ಮರಣದುಃಖದಲ್ಲಿ ಪಾಲುಗಾರಳಾಗಿ 'ಭಾರತಿ' ಈ ಕನ್ನಡ ಸುಪುತ್ರನ ಆತ್ಮಕ್ಕೆ ಶಾಂತಿ ಕೋರುತ್ತದೆ.

## ರಾಜ್ಯೋತ್ಸವ ಸನ್ಮಾನ

ನವ್ಹಂಬರ ೧, ನಮ್ಮ ರಾಜ್ಯೋತ್ಸವ ದಿನ. ಈ ಪು. ಪ್ರಸಂಗದಂದು ನಾಡಿನ ಏಳ್ಗೆಗೆ ದುಡಿದ ಹಿರಿಯ ವ್ಯಕ್ತಿಗಳನ್ನು ಗೌರವಿಸುವ ಸತ್ಪರಂಪರೆಯನ್ನು ನಮ್ಮ ರಾಜ್ಯಸರಕಾರ ಪ್ರತಿವರ್ಷ ನಡೆಸಿಕೊಂಡು ಬರುತ್ತಲಿದೆ. ಈ ವರ್ಷ ಇಂಥ ಪುರಸ್ಕಾರಕ್ಕೆ ಪಾತ್ರರಾದವರು, ಸರ್ವಶ್ರೀ ಶಿವಪ್ಪ ರೇವಣಪ್ಪ ಗಾಣಿಗೇರ (ಕೃಷಿಕ್ಷೇತ್ರ). ಡಾ. ಟಿ. ಮಾಣಿಕ್ಯಮ್ ಮತ್ತು ಡಾ. ಬೆಂಜಮಿನ ಐಸಾಕ. (ವೈದ್ಯಕೀಯ ಕ್ಷೇತ್ರ), ಅನಂತ ಸುಬ್ಬರಾವ್ (ಕನ್ನಡ ಟೈಪರೈಟರ ಕೀ ಬೋರ್ಡ ತಯಾರಕರು). ಬಿ. ಪಿ, ಮಲ್ಲರಾಜ ಅರಸ (ಸರಕಾರಿ ಮುದ್ರಣಾಲಯದ ಡೈರೆಕ್ಟರ), ಜಿ. ಪಿ. ಶಿವರಾಮ (ಶಿಕ್ಷಣಶಾಖೆ ನಿವೃತ್ತ ಜಾಯಿಂಟ ಡೈರೆಕ್ಟರ), ಶ್ರೀಮತಿ ನೀಲಮ್ಮ ಕಡಾಂಬಿ (ಸಂಗೀತ), ಆರ್. ಎಸ್. ನಾಯುಡು (ಕಲಾವಿದ), ರಾಜಕುಮಾರ (ಚಲನಚಿತ್ರ ನಟ).

ಚಿಕ್ಕ ಹನುಮಂತಯ್ಯ. ಕುಸ್ತಿ ಬಸಪ್ಪ, ಎ. ಆರ್. ನಾಯುಡು ಹಿಂದಿನ ಎಂ. ಎಲ್. ಸಿ. ಮತ್ತು ಎ. ಅತ್ತಾರ ಅಬ್ಬಾಸ ಸೇಠ (ಸಮಾಜ ಸೇವಕರು), ಪಿ. ಎಲ್. ಬಂಕಾಪುರ ಮತ್ತು ಎಚ್. ಶ್ರೀಕಂಠಯ್ಯ (ಪತ್ರಿಕೋದ್ಯಮ), ಬಸವರಾಜ ಕಟ್ಟೀಮನಿ (ಸಾಹಿತಿ), ಬಾಳಪ್ಪ ಏಣಗಿ (ನಾಟಕ ಕಲಾವಿದರು), ಎಂ. ಜಿ. ವಿಜಯಸಾರಥಿ (ಕ್ರೀಡಾಕ್ಷೇತ್ರ), ಬೆಂಗಳೂರು ಡಿವಿಜನ್ ಅಸಿಸ್ಟಂಟ್ ಕಮಿಶನರ ನರೇಂದ್ರ ಸಿಂಗ, ಬೆಂಗಳೂರು ದಕ್ಷಿಣ ತಾಲೂಕಿನ ಬಿ. ಡಿ. ಓ. ಎಂ. ಮುದ್ದುಭೈರಪ್ಪ ಮತ್ತು ತಹಶೀಲದಾರ್ ಎಂ. ನಂಜುಂಡಯ್ಯ– ಇವರೆಲ್ಲರಿಗೆ 'ಭಾರತಿ' ಅಭಿವಂದನೆಗಳನ್ನು ಅರ್ಪಿಸುತ್ತದೆ.

# ಲೇಖಕರ ಪರಿಚಯ

೧. **ಪ್ರೊ. ಸೋಮಶೇಖರ ಇಮ್ರಾಪೂರ :**
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ., ಧಾರವಾಡ.

೨. **ಪ್ರೊ. ಕಣವಿ ಮಹಾದೇವ :**
ಕನ್ನಡ ಅಧ್ಯಾಪಕರು, ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಗುಳೇದಗುಡ್ಡ

೩. **ಕು. ಸುಧಾ ಹಾವನೂರ :**
ಕ್ವಾಲಿಟಿ ಪ್ರಿಂಟರ್ಸ್, ಧಾರವಾಡ.

೪. **ಶ್ರೀ ಲಿಂಗಣ್ಣ ಸತ್ಯಂಪೇಟೆ :**
ಸುರಪುರ, ಜಿ. ಕಲಬುರ್ಗಿ.

೫. **ಡಾ. ಧನ್ಯಕುಮಾರ ಇಜಾರಿ :**
ಶ್ರೀ ಅಶೋಕ ಕ್ಲಿನಿಕ್, ಬೋಗಾರ ಗಲ್ಲಿ, ಹುಬ್ಬಳ್ಳಿ.

೬. **ಶ್ರೀ ವಿಷ್ಣು ಸುತ :**
ಹೆಡ್ ಮಾಸ್ಟರ್, ಹೈಸ್ಕೂಲ್, ಅಳ್ನಾವರ, (ಧಾರವಾಡ ಜಿ.)

೭. **ಪ್ರೊ. ಬಿ. ವ್ಹಿ. ಗುಂಜೆಟ್ಟಿ :**
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೮. **ಶ್ರೀ ಯು. ಕೃಷ್ಣಶರ್ಮ :**
೧. ಶ್ರೀ ಸುಬ್ರಹ್ಮಣ್ಯಸ್ವಾಮಿ ಮಂದಿರಂ, ವಿಶ್ವೇಶ್ವರಪುರಂ, ಬೆಂಗಳೂರು-೪.

೯. **ಶ್ರೀ ಆರ್. ಆರ್. ಹೆಗಡೆ :**
ಪೋ : ಅರೇಅಂಗಡಿ ; ತಾ. ಹೊನ್ನಾವರ, (ಉ. ಕ.).

೧೦. **ಶ್ರೀಮತಿ ಶಶಿಕಲಾ ಮೋಳದಿ :**
ಕನ್ನಡ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೧೧. **ಶ್ರೀ ಸು. ರುದ್ರಮೂರ್ತಿ :**
ಕನ್ನಡ ಅಧ್ಯಾಪಕರು, ಶ್ರೀ ರೇಣುಕಾಚಾರ್ಯ ಸಂಜೆ ಕಾಲೇಜು, ಬೆಂಗಳೂರು-೯.

೧೨. **ಪ್ರೊ. ಕೆ. ಜಿ. ವಸಂತ ಮಾಧವ :**
ಇತಿಹಾಸ ಅಧ್ಯಾಪಕರು, ವಿಜಯ ಕಾಲೇಜು, ಮೂಲ್ಕಿ (ದ. ಕ.)

೧೩. **ಶ್ರೀ ದೊಡ್ಡಬಾಣಗೆರೆ ಪ್ರಕಾಶಮೂರ್ತಿ :**
ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಚಿತ್ರದುರ್ಗ.

೧೪. **ಪ್ರೊ. ವಿಲ್ಯಂ ಮಾಡ್ತಾ :**
ಭಾಷಾಶಾಸ್ತ್ರ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.

೧೫. **ಪ್ರಿ. ಬಿ. ಆರ್. ಸುರಪುರ :**
ಪ್ರಿನ್ಸಿಪಾಲರು, ಸರಕಾರಿ ಕಾಲೇಜ, ಸಿಂಧನೂರ.

೧೬. **ಪ್ರೊ. ಎನ್. ಪ್ರಭುಸ್ವಾಮಿ :**
ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವ-ವಿದ್ಯಾನಿಲಯ, ಮೈಸೂರು.

೧೭. **ಪ್ರೊ. ಬಸವರಾಜ ಮುಲಶೆಟ್ಟಿ :**
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ.

೧೮. **ಪ್ರೊ. ಗುರುಲಿಂಗ ಕಾಪಸೆ :**
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೧೯. **ಶ್ರೀ ಎಸ್. ಶಿವಕುಮಾರ :**
ಸಹಾಯಕ ಸಂಶೋಧಕರು, ಇತಿಹಾಸ ವಿಭಾಗ, ಕ.ವಿ.ವಿ., ಧಾರವಾಡ.

೨೦. **ಕು. ಹೇಮಲತಾ ಪದಕಿ :**
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ., ಧಾರವಾಡ.

೨೧. **ಡಾ. ಅ. ಸುಂದರ :**
ರೀಡರರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಭಾಗ, ಕ.ವಿ.ವಿ., ಧಾರವಾಡ.

೨೨. **ಡಾ. ಎಂ. ಎಂ. ಕಲಬುರ್ಗಿ :**
ರೀಡರರು, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.

೨೩. **ಡಾ. ಗುರವ, ಆರ್. ಎನ್. :**
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ , ಧಾರವಾಡ.

೨೪. **ಡಾ. ಬಿ. ವ್ಹಿ. ಶಿರೂರ :**
ಕನ್ನಡ ಅಧ್ಯಾಪಕರು, ಶ್ರೀ ಅನ್ನದಾನೇಶ್ವರ ಆರ್ಟ್ಸ್ ಕಾಲೇಜು, ನರೇಗಲ್ಲ (ಧಾರವಾಡ ಜಿ.)

೨೫. **ನಿಂಗಣ್ಣ ಸಣ್ಣಕ್ಕಿ :**
ಹೈಸ್ಕೂಲ ಶಿಕ್ಷಕರು, ಗೋಕರ್ಣ.

೨೬. **ಶ್ರೀ ಗೌರೀಶ ಕಾಯ್ಕಿಣಿ :**
ನಿವೃತ್ತ ಹೈಸ್ಕೂಲ ಶಿಕ್ಷಕರು, ಗೋಕರ್ಣ.

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ

## ಇತ್ತೀಚಿನ ಪ್ರಕಟನೆಗಳು

---

**ಉಪನ್ಯಾಸ ಗ್ರಂಥಮಾಲೆ :** ಪ್ರತಿಯೊಂದರ ಬೆಲೆ ೨೫ ಪೈಸೆ

ಹಿಂದೂ ವಿವಾಹ ಪದ್ಧತಿ —ಎಚ್. ಬಿ. ಮಾಳಿ

ಈಶ್ವರ ಮತ್ತು ಅನಿಷ್ಟ —ಎನ್. ಜಿ. ಮಹಾದೇವಪ್ಪ

ಮೂಲವ್ಯಾಧಿ —ಸ. ಜ. ನಾಗಲೋಟಿಮಠ

ಜಗದ್ವಿಖ್ಯಾತ ಭಾರತೀಯ ವಿಜ್ಞಾನಿಗಳು —ಗೋಪಾಲ ಆಶ್ರಿತ

**ಕಮೀಶನ್ನಿನ ವಿವರ :**

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

**ಪಠ್ಯಪುಸ್ತಕಗಳು** (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :

೧೦೦ ಕ್ಕೆ ೧೫ ರಂತೆ

ರೂ. ೨೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ ಕ್ಕೆ ೨೦ ರಂತೆ

**ಇತರ ಎಲ್ಲ ಪ್ರಕಟನೆಗಳು** (ಪಠ್ಯಪುಸ್ತಕ ನಿರ್ದೇಶನಾಲಯದ ಪ್ರಕಟನೆಗಳು ಹಾಗು ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ ರೂ.ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ

೧೦೦ ಕ್ಕೆ ೨೫ ರಂತೆ

೫,೦೦೦ ರೂ ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ಕ್ಕೆ ೩೩ ೧/೩ ರಂತೆ

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ್ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಮೌಲ್ಯದ ಪುಸ್ತಕಗಳನ್ನು ಕೊಳ್ಳುವವರಿಗೆ ೧೦೦ ಕ್ಕೆ ೩೩ ೧/೩ ದಂತೆ ಕಮೀಶನ್ ಕೊಡಲಾಗುವದು.

* * * * *

## ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ — ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

## ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲಾ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

(ಹಣವನ್ನು ಮನಿಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩

---